ಶುಕ್ರವಾರ, ಸೆಪ್ಟೆಂಬರ್ 6, 2024 | ₹ 7.00

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

prajavani.net | prajavani | prajavani | prajavani

ನೃತ್ಯ
ಶಿಕ್ಷಕರ ದಿನಾಚರಣೆ ಅಂಗವಾಗಿ ನವದೆಹಲಿಯಲ್ಲಿ ಗುರುವಾರ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಿದ್ಯಾರ್ಥಿನಿಯರು ನೃತ್ಯ ಪ್ರದರ್ಶಿಸಿದರು

ಜಲಸಂಪನ್ಮೂಲ ಇಲಾಖೆ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

ಕರುನಾಡಿನ ಮಹತ್ವಾಕಾಂಕ್ಷೆಯ ಎತ್ತಿನಹೊಳೆ ಸಮಗ್ರ ಕುಡಿಯುವ ನೀರು ಪೂರೈಕೆ ಯೋಜನೆಯ ಮೊದಲನೇ ಹಂತವು ಸನ್ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಸಿದ್ದರಾಮಯ್ಯ**ರವರು ಹಾಗೂ ಸನ್ಮಾನ್ಯ ಉಪಮುಖ್ಯಮಂತ್ರಿಗಳಾದ **ಶ್ರೀ ಡಿ.ಕೆ. ಶಿವಕುಮಾರ್** ರವರಿಂದ

ಲೋಕಾರ್ಪಣೆ

ದಿನಾಂಕ : 06-09-2024 ಶುಕ್ರವಾರ, **ಮಧ್ಯಾಹ್ನ 12.00** ಗಂಟೆಗೆ

ಸ್ಥಳ : **ಹೆಬ್ಬನಹಳ್ಳಿ** (ವಿತರಣಾ ತೊಟ್ಟಿ-4), ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ

ಎತ್ತಿನಹೊಳೆ ಯೋಜನೆಯ ವಿವರಗಳು

ಪರಿಷ್ಕೃತ ಅಂದಾಜು ಮೊತ್ತ	2024ರ ಜುಲೈ ಅಂತ್ಯಕ್ಕೆ ವೆಚ್ಚ	ಯೋಜನೆ ಒಟ್ಟು ನೀರಿನ ಪ್ರಮಾಣ
₹ 23,251.66 ಕೋಟಿ	₹ 16,076.71 ಕೋಟಿ	24.01 ಟಿ.ಎಂ.ಸಿ.
ಕುಡಿಯುವ ನೀರಿನ ಹಂಚಿಕೆ	ಕೆರೆಗಳನ್ನು ತುಂಬಿಸಲು	ಕೆರೆಗಳ ಸಂಖ್ಯೆ
14.056 ಟಿ.ಎಂ.ಸಿ.	9.953 ಟಿ.ಎಂ.ಸಿ.	527 ಕೆರೆಗಳು

ಫಲಾನುಭವಿ ಜಿಲ್ಲೆಗಳು	ಯಾರಿಗೆಲ್ಲ ಅನುಕೂಲ
ಚಿಕ್ಕಮಗಳೂರು, ಹಾಸನ, ತುಮಕೂರು ಬೆಂಗಳೂರು ಗ್ರಾಮಾಂತರ, ರಾಮನಗರ ಚಿಕ್ಕಬಳ್ಳಾಪುರ ಮತ್ತು ಕೋಲಾರ	7 ಜಿಲ್ಲೆಗಳ 29 ತಾಲ್ಲೂಕುಗಳಲ್ಲಿ ಬರುವ 6657 ಗ್ರಾಮಗಳು ಹಾಗೂ 38 ಪಟ್ಟಣ ಪ್ರದೇಶಗಳಲ್ಲಿನ 75 ಲಕ್ಷ ಜನರಿಗೆ

ಘನ ಉಪಸ್ಥಿತಿ

ಶ್ರೀ ಡಾ. ಜಿ. ಪರಮೇಶ್ವರ, ಮಾನ್ಯ ಗೃಹ ಮತ್ತು ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರು | **ಶ್ರೀ ಕೆ.ಜೆ. ಜಾರ್ಜ್**, ಮಾನ್ಯ ಇಂಧನ ಮತ್ತು ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವರು | **ಶ್ರೀ ಕೆ.ಎನ್. ರಾಜಣ್ಣ**, ಮಾನ್ಯ ಸಹಕಾರಿ ಮತ್ತು ಹಾಸನ ಜಿಲ್ಲಾ ಉಸ್ತುವಾರಿ ಸಚಿವರು | **ಶ್ರೀ ರಾಮಲಿಂಗಾ ರೆಡ್ಡಿ**, ಮಾನ್ಯ ಸಾರಿಗೆ, ಮುಜರಾಯಿ ಮತ್ತು ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರು | **ಶ್ರೀ ಕೆ.ಎಚ್. ಮುನಿಯಪ್ಪ**, ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವರು

ಶ್ರೀ ಎನ್. ಚಲುವರಾಯಸ್ವಾಮಿ, ಮಾನ್ಯ ಕೃಷಿ ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು | **ಶ್ರೀ ಕೃಷ್ಣ ಭೈರೇಗೌಡ**, ಮಾನ್ಯ ಕಂದಾಯ ಸಚಿವರು | **ಶ್ರೀ ಎನ್. ಎಸ್. ಬೋಸರಾಜು**, ಮಾನ್ಯ ಸಣ್ಣ ನೀರಾವರಿ ಮತ್ತು ಕೊಡಗು ಜಿಲ್ಲಾ ಉಸ್ತುವಾರಿ ಸಚಿವರು | **ಶ್ರೀ ಡಾ. ಎಂ.ಸಿ. ಸುಧಾಕರ್**, ಮಾನ್ಯ ಉನ್ನತ ಶಿಕ್ಷಣ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವರು | **ಶ್ರೀ ಭೈರತಿ ಸುರೇಶ್**, ಮಾನ್ಯ ನಗರಾಭಿವೃದ್ಧಿ ಮತ್ತು ಕೋಲಾರ ಜಿಲ್ಲಾ ಉಸ್ತುವಾರಿ ಸಚಿವರು

ಮುಖ್ಯ ಅತಿಥಿಗಳು

ಶ್ರೀ ಶ್ರೇಯಸ್ ಪಟೇಲ್, ಸಂಸದರು, ಹಾಸನ ಲೋಕಸಭಾ ಕ್ಷೇತ್ರ

ಅಧ್ಯಕ್ಷತೆ

ಶ್ರೀ ಎಸ್. ಮಂಜುನಾಥ್ (ಸಿಮೆಂಟ್ ಮಂಜು), ಶಾಸಕರು, ಸಕಲೇಶಪುರ ವಿಧಾನಸಭೆ ಕ್ಷೇತ್ರ

ಸಮಸ್ತ ನಾಗರಿಕರು ಬನ್ನಿ, ಗಂಗಾಮಾತೆಯನ್ನು ನಿಮ್ಮ ಮನೆಗೆ ಬರಮಾಡಿಕೊಳ್ಳಿ.

ವಿಧಾನಸೌಧದಲ್ಲಿ ನಡೆದ ರಾಜ್ಯಮಟ್ಟದ ಶಿಕ್ಷಕರ ದಿನಾಚರಣೆ • ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನೆ

ಶಿಕ್ಷಕರೇ ಕರ್ಮಸಿದ್ಧಾಂತ ನಂಬಿದರೆ ಹೇಗೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣೆಬರಹ, ಕರ್ಮ ಸಿದ್ಧಾಂತವನ್ನು ಶಿಕ್ಷಕರೇ ನಂಬಿದರೆ ಮನುಷ್ಯ-ಮನುಷ್ಯನನ್ನು ಪ್ರೀತಿಸುವ ಮನೋಭಾವದ ವಿದ್ಯಾರ್ಥಿಗಳನ್ನು ರೂಪಿಸಲು ಹೇಗೆ ಸಾಧ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ವಿಧಾನಸೌಧದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಸವಾದಿ ಶರಣರು ಎಂಟು ಶತಮಾನಗಳ ಹಿಂದೆಯೇ ಕರ್ಮ ಸಿದ್ಧಾಂತ ತಿರಸ್ಕರಿಸಿದ್ದರು. ಶಿಕ್ಷಕ ಸಮೂಹ ಅಂತಹ ಸಿದ್ಧಾಂತ ನಂಬುವುದು ಅಪಾಯಕಾರಿ. ವಿಜ್ಞಾನ ವಿಷಯ ಓದಿದ ವಿದ್ಯಾರ್ಥಿಗಳೇ ಮೌಢ್ಯಕ್ಕೆ ಜೋತು ಬೀಳುವುದೂ ವಿಪರ್ಯಾಸ. ಶಿಕ್ಷಣ ಪಡೆದವರೇ ಜಾತಿ ತಾರತಮ್ಯ ಮಾಡಿದರೆ, ಅವರು ಪಡೆದ ಶಿಕ್ಷಣಕ್ಕೆ ಅರ್ಥ ಇರುವುದಿಲ್ಲ ಎಂದರು.

ಮಾನವೀಯತೆ, ಸ್ವತಂತ್ರ ಚಿಂತನೆ, ವೈಜ್ಞಾನಿಕ ಹಾಗೂ ಜಾತ್ಯತೀತ ಮನೋಭಾವದ ವ್ಯಕ್ತಿತ್ವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು. ಆಗ ದೇಶದ ಭವಿಷ್ಯ ತಾನಾಗಿಯೇ ರೂಪುಗೊಳುತ್ತದೆ. ಈ ಕೆಲಸ ಶಿಕ್ಷಕರ ಮೂಲಭೂತ ಜವಾಬ್ದಾರಿಯೂ ಆಗಿದೆ ಎಂದು ಹೇಳಿದರು.

ಎಲ್ಲರಿಗೂ ಶಿಕ್ಷಣ ಸಿಗದಂತೆ ತಡೆಯುತ್ತಿದ್ದ ಕಾಲ ಅಂತ್ಯಗೊಂಡಿದೆ. ಈಗ ಪ್ರತಿಯೊಬ್ಬರಿಗೂ ಶಿಕ್ಷಣ ಕಡ್ಡಾಯವಾಗಿದೆ. ಶಿಕ್ಷಕ ಎಂಬುದು ವೃತ್ತಿಯಲ್ಲ, ಅದು ಸಾಮಾಜಿಕ ಜವಾಬ್ದಾರಿ. ಆಕಸ್ಮಿಕವಾಗಿ ಶಿಕ್ಷಕ ವೃತ್ತಿಗೆ ಬಂದವರಿಗಿಂತ, ಶಿಕ್ಷಕ ವೃತ್ತಿಯನ್ನು ಆಯ್ಕೆ ಮಾಡಿಕೊಂಡವರ ಬಗ್ಗೆ ಹೆಮ್ಮೆ ಎನಿಸುತ್ತದೆ. ಸಾವಿತ್ರಿಬಾಯಿ ಫುಲೆ, ಸರ್ವಪಲ್ಲಿ ರಾಧಾಕೃಷ್ಣನ್ ಅವರ ಆದರ್ಶಗಳು ಇಡೀ ಶಿಕ್ಷಕ ಸಮುದಾಯಕ್ಕೆ ಮಾದರಿಯಾಗಬೇಕು ಎಂದರು.

ಪ್ರಾಥಮಿಕ ಶಾಲೆಯ 20 ಶಿಕ್ಷಕರು, ಪ್ರೌಢಶಾಲೆಯ 11 ಶಿಕ್ಷಕರು, ಪಿಯು ಕಾಲೇಜಿನ ಎಂಟು ಉಪನ್ಯಾಸಕರು ಹಾಗೂ ಒಬ್ಬ ಪ್ರಾಂಶುಪಾಲರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ ನೀಡಿ, ಗೌರವಿಸಲಾಯಿತು.

ಶಾಸಕರಾದ ಬಿ.ಪಿ. ಹರೀಶ್, ಎನ್.ಎಚ್. ಕೋನರಡ್ಡಿ, ವಿಧಾನ ಪರಿಷತ್ ಸದಸ್ಯರಾದ ರಾಮೋಜಿ ಗೌಡ, ಸುಧಾಮ್‌ದಾಸ್, ಡಿ.ಟಿ. ಶ್ರೀನಿವಾಸ್, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸಿದ್ದಬಸಪ್ಪ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನುಗ್ಗಲಿ ಉಪಸ್ಥಿತರಿದ್ದರು. ಶಾಸಕ ರಿಜ್ವಾನ್ ಅರ್ಷದ್ ಅಧ್ಯಕ್ಷತೆ ವಹಿಸಿದ್ದರು.

ವಿಧಾನಸೌಧದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಶಿಕ್ಷಕರಾದ (ಎಡದಿಂದ ಬಲಕ್ಕೆ) ಪದ್ಮಶ್ರೀ ಸುರೇಶ ರೂಗೆ, ಮಲ್ಲಿಕಾರ್ಜುನ ಎಸ್. ಸಿರಸಿಗಿ, ಬಿ. ಅರುಣ್ ಕುಮಾರ್, ಕೆ.ಎಸ್. ಮಧುಸೂದನ್, ಅಸ್ಮಾ ಇಸ್ಮಾಯಿಲ್ ನದಾಫ, ಕೆ. ಯಮುನಾ, ಜಮೀರ ಅಬ್ದುಲ್ ಗಫಾರಸಾಬ ರಿತ್ತಿ, ಜಿ. ರಂಗನಾಥ, ಸುಶೀಲಮ್ಮ, ಎಸ್.ವಿ. ರಮೇಶ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಿದರು. ಪುಟ್ಟಣ್ಣ, ಡಾ.ಎಂ.ಸಿ. ಸುಧಾಕರ್, ಎಸ್. ಮಧು ಬಂಗಾರಪ್ಪ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಕ್ರಿಯಾಶೀಲ ತಾರೆಯರ ತಂಡ ಕಟ್ಟಿಕೊಂಡು ನಲಿಕಲಿ ಪರಿಣಾಮಕಾರಿ ಅನುಷ್ಠಾನ, ಮಕ್ಕಳಿಗೆ ಅಗತ್ಯ ಸಾಮಗ್ರಿ ಲಭ್ಯವಾಗುವಂತೆ ಮಾಡಿದ್ದರ ಫಲವಾಗಿ ಪ್ರಶಸ್ತಿ ಸಂದಿದೆ

ಭಾಗೀರಥಿ, ಪ್ರಶಸ್ತಿ ಪುರಸ್ಕೃತ ಪ್ರಾಥಮಿಕ ಶಾಲಾ ಶಿಕ್ಷಕಿ.

ಸರ್ಕಾರಿ ಶಾಲೆಯ ಅಭಿವೃದ್ಧಿಗೆ ದಾನಿಗಳಿಂದ ₹1.20 ಕೋಟಿ ನೆರವು ಕೊಡಿಸಲು ಯತ್ನಿಸಿದ್ದೆ. 50ಕ್ಕೂ ಹೆಚ್ಚು ರಾಷ್ಟ್ರಗಳ ಒಂದು ಲಕ್ಷಕ್ಕೂ ಹೆಚ್ಚು ಅನಿವಾಸಿಗಳಿಗೆ ಕನ್ನಡ ಕಲಿಸಿರುವೆ

ಆರ್.ಡಿ. ರವೀಂದ್ರ, ಪ್ರಶಸ್ತಿ ಪುರಸ್ಕೃತ ಪ್ರೌಢಶಾಲಾ ಶಿಕ್ಷಕ.

ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣ ಆರಂಭಿಸಿದ 40 ದಿನಗಳಲ್ಲಿ 40 ಸಾವಿರ ಮಕ್ಕಳು ಪ್ರವೇಶ ಪಡೆದಿದ್ದಾರೆ. ಈ ನಿರ್ಧಾರ ಸರ್ಕಾರಿ ಶಾಲೆಗಳ ಬಲವರ್ಧನೆಗೆ ಸಹಕಾರಿಯಾಗಲಿದೆ

ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ

‘ಡಿಸೆಂಬರ್ ಒಳಗೆ ಪ್ರಾಂಶುಪಾಲರ ನೇಮಕ’

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ 310 ಪ್ರಾಂಶುಪಾಲರಿಗೆ ಡಿಸೆಂಬರ್ ಒಳಗೆ ನೇಮಕಾತಿ ಆದೇಶ ನೀಡಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಹೇಳಿದರು.

ಪ್ರಾಂಶುಪಾಲರ ನೇಮಕಾತಿಗೆ ಈಗಾಗಲೇ ನೇರ ಪರೀಕ್ಷೆ ನಡೆದಿದ್ದು, ಫಲಿತಾಂಶವೂ ಪ್ರಕಟವಾಗಿದೆ. ದಾಖಲೆಗಳ ಪರಿಶೀಲನಾ ಕಾರ್ಯ ನಡೆಯುತ್ತಿದೆ. ಎರಡು ತಿಂಗಳ ಒಳಗೆ ಎಲ್ಲ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲಾಗುವುದು. ಹಾಗೆಯೇ, 1,242 ಸಹಾಯಕ ಪ್ರಾಧ್ಯಾಪಕರ ನೇಮಕಾತಿಯ ಅಂತಿಮ ಅಧಿಸೂಚನೆ ಹೊರಡಿಸಲಾಗಿದ್ದು, ಸ್ಥಳ ನಿಯುಕ್ತಿ ಆದೇಶ ನೀಡಲಾಗುವುದು ಎಂದರು.

ರಾಜ್ಯದ ಅನುದಾನಿತ ಪ್ರಥಮದರ್ಜೆ ಕಾಲೇಜುಗಳಲ್ಲಿ 2020ಕ್ಕೂ ಹಿಂದೆ ಖಾಲಿಯಾಗಿದ್ದ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಭರ್ತಿಗೆ ಅನುಮತಿ ನೀಡಲಾಗುವುದು ಎಂದರು.

ಸುದ್ದಿ 2 ನಿಮಿಷ

ಸುಪ್ರೀಂ ಕೋರ್ಟ್‌ಗೆ ಯತ್ನಾಳ ಅರ್ಜಿ

ನವದೆಹಲಿ: ಆದಾಯ ಮೀರಿದ ಆಸ್ತಿ ಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಈ ಹಿಂದಿನ ಬಿಜೆಪಿ ಸರ್ಕಾರ ಸಿಬಿಐ ತನಿಖೆಗೆ ನೀಡಿದ್ದ ಅನುಮತಿಯನ್ನು ಹಿಂಪಡೆದಿದ್ದ ಕಾಂಗ್ರೆಸ್ ನೇತೃತ್ವದ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ್ದಾರೆ.

ಯತ್ನಾಳ ಹಾಗೂ ಸಿಬಿಐ ಸಲ್ಲಿಸಿದ್ದ ಅರ್ಜಿಗಳನ್ನು ಹೈಕೋರ್ಟ್ ಕಳೆದ ವಾರ ವಜಾಗೊಳಿಸಿತ್ತು. ‘ಕೇಂದ್ರ ಸರ್ಕಾರವು ಎಲ್ಲಿಯವರೆಗೆ ರಾಜ್ಯವೊಂದರಲ್ಲಿ ಸಿಬಿಐ ಅನ್ನು ಕಾರ್ಯನಿರ್ವಹಣೆಗೆ ಹಚ್ಚಬಹುದು ಎಂಬುದು ಕಾನೂನಿನ ವಿಚಾರಕ್ಕೆ ಒಳಪಟ್ಟಿದೆ. ಈ ಪ್ರಕರಣದಲ್ಲಿನ ಕಾನೂನಿನ ವಿಚಾರಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವ್ಯಾಪ್ತಿಗೆ ಸಂಬಂಧಿಸಿವೆ. ಈ ಪ್ರಕರಣದಲ್ಲಿ ರಾಜ್ಯ ಸರ್ಕಾರ ಮತ್ತು ಸಿಬಿಐ ನಡುವೆ ಸಂಘರ್ಷ ಇದ್ದು ಪ್ರಕರಣವನ್ನು ಸಂವಿಧಾನದ 131ನೇ ವಿಧಿಯಡಿ ಸುಪ್ರೀಂ ಕೋರ್ಟ್ ನಿರ್ಧರಿಸುವುದೇ ಸೂಕ್ತ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಶಿವಕುಮಾರ್ ಅವರು ಈಗಾಗಲೇ ಸುಪ್ರೀಂ ಕೋರ್ಟ್‌ಗೆ ಕೇವಿಯೆಟ್ ಸಲ್ಲಿಸಿದ್ದಾರೆ.

ಆದಾಯ ಮೀರಿ ಆಸ್ತಿ ಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಈ ಹಿಂದಿನ ಬಿಜೆಪಿ ಸರ್ಕಾರ ಡಿ.ಕೆ.ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ 2019ರ ಸೆಪ್ಟೆಂಬರ್ 25ರಂದು ಅನುಮತಿ ನೀಡಿತ್ತು. ಈ ಅನುಮತಿಯನ್ನು ಈಗಿನ ಕಾಂಗ್ರೆಸ್ ಸರ್ಕಾರ 2023ರ ನವೆಂಬರ್ 23ರಂದು ಹಿಂಪಡೆದಿತ್ತು. ನಂತರ 2023ರ ಡಿಸೆಂಬರ್ 28ರಂದು ಲೋಕಾಯುಕ್ತ ತನಿಖೆಗೆ ವಹಿಸಿತ್ತು.

ಯತ್ನಾಳ ಕಾರ್ಖಾನೆಗೆ ಅನುಮತಿ ಪ್ರಶ್ನಿಸಿ ಸುಪ್ರೀಂನಲ್ಲಿ ಮೇಲ್ಮನವಿ

ನವದೆಹಲಿ: ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾಲಿಕತ್ವದ ಸಕ್ಕರೆ ಕಾರ್ಖಾನೆ ತೆರೆಯಲು ಹೈಕೋರ್ಟ್ ಅನುಮತಿ ನೀಡಿರುವುದನ್ನು ಪ್ರಶ್ನಿಸಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದೆ.

ಎಥೆನಾಲ್ ಉತ್ಪಾದನೆ ವಿಚಾರವಾಗಿ ನಿಯಮ ಉಲ್ಲಂಘನೆ ಆರೋಪದಲ್ಲಿ ಕಲಬುರಗಿ ಜಿಲ್ಲೆಯ ಚಿಂಚೋಳಿಯ ಸಿದ್ದಸಿರಿ ಸಕ್ಕರೆ ಕಾರ್ಖಾನೆ ಮುಚ್ಚುವಂತೆ ಮಂಡಳಿ ನೋಟಿಸ್ ನೀಡಿತ್ತು. ನೋಟಿಸ್ ಪ್ರಶ್ನಿಸಿ ಯತ್ನಾಳ ಹೈಕೋರ್ಟ್ ಮೊರೆ ಹೋಗಿದ್ದರು. ವಿಚಾರಣೆ ನಡೆಸಿದ ಕೋರ್ಟ್ ಕಾರ್ಖಾನೆ ತೆರೆಯಲು ಅನುಮತಿ ನೀಡಿತ್ತು. ‘ಕಾರ್ಖಾನೆಯು ಎಲ್ಲ ನಿಯಮಗಳನ್ನು ಉಲ್ಲಂಘಿಸಿದೆ’ ಎಂದು ಮಂಡಳಿಯು ಅರ್ಜಿಯಲ್ಲಿ ದೂರಿದೆ.

‘ಕಾಸ್ಟಿಂಗ್ ಕೌಚ್ ಪ್ರಕರಣ ಕಂಡುಬಂದರೆ ಕಠಿಣ ಕ್ರಮ’

ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ; ದೇಶದಲ್ಲಿ ಕಮಿಟಿ ರಚಿಸಲು ಸೌಮ್ಯಾ ರೆಡ್ಡಿ ಆಗ್ರಹ

ಪ್ರಜಾವಾಣಿ ವಾರ್ತೆ

ಲಕ್ಷ್ಮೀ ಹೆಬ್ಬಾಳಕರ

ಬೆಂಗಳೂರು: ‘ಕನ್ನಡ ಚಿತ್ರ ರಂಗದಲ್ಲಿ ಕಾಸ್ಟಿಂಗ್ ಕೌಚ್‌ನಂಥ ಪ್ರಕರಣಗಳು ಕಂಡುಬಂದರೆ, ಸರ್ಕಾರ ಕಠಿಣ ಕ್ರಮಕೈಗೊಳ್ಳಲಿದೆ’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ’ಆ ರೀತಿ ಏನಾದರೂ ಆಗಿದ್ದರೆ ಕ್ರಮ ತೆಗೆದುಕೊಳ್ಳಲಾಗುವುದು. ಮಹಿಳೆಯರ ರಕ್ಷಣೆಯೇ ನಮಗೆ ಮುಖ್ಯ’ ಎಂದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಆ ವಿಚಾರದ ಬಗ್ಗೆ ಭರವಸೆ ನೀಡಿದ್ದಾರೆ. ಮಹಿಳೆಯರ ರಕ್ಷಣೆಗೆ ಸರ್ಕಾರ ಸದಾ ಬದ್ಧ’ ಎಂದರು.

ಇಡೀ ದೇಶದಲ್ಲಿ ಕಮಿಟಿ ಮಾಡಬೇಕು: ‘ರಾಜ್ಯದಲ್ಲಿ ಮಾತ್ರವಲ್ಲ ಇಡೀ ದೇಶದಲ್ಲಿ ಹೇಮಾ ಕಮಿಟಿ ಮಾದರಿಯಲ್ಲಿ ಕಮಿಟಿ ಮಾಡಬೇಕು’ ಎಂದು ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯಾ ರೆಡ್ಡಿ ಹೇಳಿದರು.

‘ಹೇಮಾ ಕಮಿಟಿ ಬಗ್ಗೆ ಸಾಕಷ್ಟು ಚರ್ಚೆಯಾಗುತ್ತಿದೆ. ದೇಶದಲ್ಲಿ ಶೇ 50ರಷ್ಟು ಮಹಿಳೆಯರಿದ್ದೇವೆ. ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿವೆ. ಇದನ್ನು ಮೊದಲು ನಿಲ್ಲಿಸಬೇಕು’ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ‘ಫೈರ್’ ನಿಯೋಗವು ಗುರುವಾರ ಭೇಟಿ ಮಾಡಿ ಮನವಿ ಸಲ್ಲಿಸಿತು

ಹೇಮಾ ಸಮಿತಿ ವರದಿ: ಪ್ರಕರಣಗಳ ವಿಚಾರಣೆಗೆ ವಿಶೇಷ ಪೀಠ ಸ್ಥಾಪನೆ

ಕೊಚ್ಚಿ (ಪಿಟಿಐ): ಹೇಮಾ ಸಮಿತಿ ವರದಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಗೆ ಐವರು ನ್ಯಾಯಮೂರ್ತಿಗಳ ವಿಶೇಷ ಪೀಠ ರಚಿಸುವುದಾಗಿ ಕೇರಳ ಹೈಕೋರ್ಟ್ ಗುರುವಾರ ತಿಳಿಸಿದೆ.

ಸಮಿತಿಯ ವರದಿ ಬಿಡುಗಡೆಗೆ ಹೈಕೋರ್ಟ್‌ನ ಏಕ ಸದಸ್ಯ ಪೀಠ ನೀಡಿದ ತೀರ್ಪನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಮೇಲ್ಮನವಿ ಅರ್ಜಿಯ ವಿಚಾರಣೆ ವೇಳೆ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಎ. ಮುಹಮ್ಮದ್ ಮುಸ್ತಾಕ್ ಮತ್ತು ನ್ಯಾಯಮೂರ್ತಿ ಎಸ್. ಮನು ಅವರ ಪೀಠವು ಈ ಕುರಿತು ಮೌಖಿಕವಾಗಿ ತಿಳಿಸಿತು. ವಿಶೇಷ ಪೀಠದಲ್ಲಿ ಮಹಿಳಾ ನ್ಯಾಯಮೂರ್ತಿಯೊಬ್ಬರು ಇರಲಿದ್ದಾರೆ ಎಂದು ಪೀಠ ತಿಳಿಸಿರುವುದಾಗಿ ಅರ್ಜಿದಾರರ ಪರ ವಕೀಲರು ಹೇಳಿದ್ದಾರೆ.

ಸಮಿತಿಯ ವರದಿಯನ್ನು ಸಾರ್ವಜನಿಕರ ಮುಂದಿಡಲು ರಾಜ್ಯ ಮಾಹಿತಿ ಆಯೋಗ ನೀಡಿದ್ದ ಅನುಮತಿಯನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಏಕ ಸದಸ್ಯ ಪೀಠವು ಆಗಸ್ಟ್ 13ರಂದು ವಜಾಗೊಳಿಸುವ ಮೂಲಕ, ವರದಿ ಬಿಡುಗಡೆಗೆ ಅನುಮತಿಸಿತ್ತು.

ರಾಜ್ಯ ಮಾಹಿತಿ ಆಯೋಗ ಜುಲೈ 5ರಂದು ನೀಡಿದ್ದ ಆದೇಶವನ್ನು ಪ್ರಶ್ನಿಸಿ ಸಿನಿಮಾ ನಿರ್ಮಾಪಕ ಸಾಜಿಮೋನ್ ಪರಾಯಿಲ್ ಅವರು ಸಲ್ಲಿಸಿದ್ದ ಅರ್ಜಿಯನ್ನು ಏಕ ಸದಸ್ಯ ಪೀಠ ವಜಾಗೊಳಿಸಿತ್ತು.

ಸಮಿತಿ ರಚನೆ: ಮುಖ್ಯಮಂತ್ರಿಗೆ ನಿಯೋಗ ಮನವಿ

‘ಕನ್ನಡ ಚಿತ್ರೋದ್ಯಮದಲ್ಲಿ ಕಲಾವಿದೆಯರು ಎದುರಿಸುತ್ತಿರುವ ಲೈಂಗಿಕ ದೌರ್ಜನ್ಯ ಪ್ರಕರಣಗಳ ಅಧ್ಯಯನ ಮಾಡಿ ವರದಿ ಸಲ್ಲಿಸಲು ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಸಮಿತಿ ರಚಿಸಬೇಕು’ ಎಂದು ಆಗ್ರಹಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ‘ಫಿಲ್ಮ್ ಇಂಡಸ್ಟ್ರಿ ಫಾರ್ ರೈಟ್ಸ್ ಆ್ಯಂಡ್ ಇಕ್ವಾಲಿಟಿ (ಫೈರ್)’ ನಿಯೋಗ ಗುರುವಾರ ಭೇಟಿ ಮಾಡಿ ಮನವಿ ಸಲ್ಲಿಸಿದೆ.

ಮುಖ್ಯಮಂತ್ರಿಯನ್ನು ಸರ್ಕಾರಿ ನಿವಾಸ ‘ಕಾವೇರಿ’ಯಲ್ಲಿ ಭೇಟಿ ಮಾಡಿದ ನಟ ಚೇತನ್, ನಟಿಯರಾದ ಶ್ರುತಿ ಹರಿಹರನ್, ನೀತು ಶೆಟ್ಟಿ, ಸಾಮಾಜಿಕ ಕಾರ್ಯಕರ್ತೆ ವಿಜಯಮ್ಮ ಮತ್ತಿತರರಿದ್ದ ನಿಯೋಗ ‘ಕೇರಳದಲ್ಲಿ ರಚಿಸಿದ್ದ ನ್ಯಾಯಮೂರ್ತಿ ಹೇಮಾ ಸಮಿತಿ ಮಾದರಿಯಲ್ಲಿ ಕರ್ನಾಟದಲ್ಲೂ ರಚಿಸಬೇಕು’ ಎಂದು ಕೋರಿದೆ.

ನಟಿ ಸಂಜನಾ ಅವರು ವಿಧಾನಸೌಧದ ಕಚೇರಿಯಲ್ಲಿ ಮುಖ್ಯಮಂತ್ರಿಯನ್ನು ಪ್ರತ್ಯೇಕವಾಗಿ ಭೇಟಿ ಮಾಡಿ, ಸಮಿತಿ ರಚಿಸುವಂತೆ ಮನವಿ ಸಲ್ಲಿಸಿದರು.

153 ಮಂದಿ ಸಹಿ ಮಾಡಿರುವ ಪತ್ರವನ್ನು ಫೈರ್ ಸಂಘಟನೆ ಬುಧವಾರವೇ ರಾಜ್ಯ ಸರ್ಕಾರಕ್ಕೆ ನೀಡಿತ್ತು. ನಿಯೋಗದ ಮನವಿಗೆ ಮುಖ್ಯಮಂತ್ರಿ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ತಿಳಿದುಬಂದಿದೆ.

‘ರಾಜಕೀಯ ಪಕ್ಷಗಳೂ ದೂರು ಸಮಿತಿ ರಚಿಸಲಿ’

ಮಂಗಳೂರು: ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ತಡೆಗಟ್ಟಲು ಸಿನಿಮಾ ಉದ್ಯಮದಲ್ಲಿ ಮಾತ್ರವಲ್ಲ, ರಾಜಕೀಯ ಪಕ್ಷಗಳೂ ಆಂತರಿಕ ದೂರು ಸಮಿತಿ ರಚಿಸಬೇಕು ಎಂದು ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷೆ ಸಿ. ಮಂಜುಳಾ ಹೇಳಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜಕೀಯ ಪಕ್ಷಗಳು ಬೆಳೆದಂತೆ ಎಲ್ಲ ರೀತಿಯ ಜನರು ಬಂದು ಸೇರುತ್ತಾರೆ. ಪಕ್ಷದಲ್ಲಿ ದುಡಿಯುವ ಆಸೆಯಿಂದ ರಾಜಕಾರಣಕ್ಕೆ ಬರುವ ಮಹಿಳೆಯರು ಲೈಂಗಿಕ ಶೋಷಣೆಗೆ ಒಳಗಾದರೆ ಬಹಿರಂಗವಾಗಿ ಪ್ರತಿರೋಧಿಸಬೇಕು, ಇಲ್ಲವಾದಲ್ಲಿ ತಮಗೆ ತಾವೇ ಅನ್ಯಾಯ ಮಾಡಿಕೊಂಡಂತೆ ಆಗುತ್ತದೆ’ ಎಂದರು.

‘ಮಹಿಳೆಯರಿಗೆ ಕಿರುಕುಳ ನೀಡುವ ವ್ಯಕ್ತಿಗಳು ಇದ್ದಲ್ಲಿ, ಅಂತಹವರನ್ನು ಪಕ್ಷದಿಂದ ಹೊರಹಾಕಬೇಕು. ನಮ್ಮ ಪಕ್ಷದಲ್ಲಿ ಅಂತಹ ಸಂದರ್ಭ ಬಂದಲ್ಲಿ ನಾನು ಖಂಡಿತವಾಗಿಯೂ ಪಕ್ಷಕ್ಕೆ ಶಿಫಾರಸು ಮಾಡುತ್ತೇನೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸಿ. ಮಂಜುಳಾ

ಸಿನಿಮಾ ಉದ್ಯಮ ಕೂಡ ಕೆಲಸ ಸ್ಥಳ ಆಗಿರುವುದರಿಂದ, ಕೆಲಸದ ಸ್ಥಳದಲ್ಲಿ ಮಹಿಳೆಯರ ಲೈಂಗಿಕ ಕಿರುಕುಳ ತಡೆ ಸಮಿತಿ ರಚನೆ ಮಾಡಬೇಕು. ಲೈಂಗಿಕ ಕಿರುಕುಳ ಸೇರಿದಂತೆ ಉದ್ಯಮದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಅಧ್ಯಯನಕ್ಕೆ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಸಮಿತಿ ರಚಿಸುವಂತೆ ಕಲಾವಿದರು ಇಟ್ಟಿರುವ ಬೇಡಿಕೆಗೆ ಇನ್ನೂ ಹೆಚ್ಚು ಕಲಾವಿದರು ಸಹಿ ಮಾಡಬೇಕು. ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಯ ನಿಗಾದಲ್ಲಿ ನಿವೃತ್ತ ನ್ಯಾಯಾಧೀಶರ ನೇತೃತ್ವದ ಸಮಿತಿ ತನಿಖೆಯನ್ನು ನಡೆಸಬೇಕು ಎಂದು ಹೇಳಿದರು.

ಅರ್ಧವಾರ್ಷಿಕ ಪರೀಕ್ಷೆಗೂ ‘ಬೋರ್ಡ್’ ಪ್ರಶ್ನೆಪತ್ರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಅರ್ಧವಾರ್ಷಿಕ ಪರೀಕ್ಷೆಗೂ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯೇ ಏಕರೂಪದ ಪ್ರಶ್ನೆಪತ್ರಿಕೆಗಳನ್ನು ಪೂರೈಸಲಿದೆ.

ಮಂಡಳಿಯೇ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿ, ಪರೀಕ್ಷೆಯ ಒಂದು ದಿನ ಮೊದಲು ಆಯಾ ಶಾಲೆಗಳ ಮುಖ್ಯ ಶಿಕ್ಷಕರ ಇ-ಮೇಲ್‌ಗೆ (ಶಾಲಾ ಲಾಗಿನ್) ಕಳುಹಿಸಲಿದೆ. ಡೌನ್‌ಲೋಡ್ ಮಾಡಿಕೊಂಡು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ನಕಲುಪ್ರತಿಗಳನ್ನು ತೆಗೆದುಕೊಳ್ಳಬೇಕು. ಪರೀಕ್ಷಾ ಸಮಯಕ್ಕೆ ಸರಿಯಾಗಿ ವಿದ್ಯಾರ್ಥಿಗಳಿಗೆ ನೀಡಬೇಕು. ಈ ಎಲ್ಲ ಹೊಣೆಗಾರಿಕೆಯನ್ನು ಮುಖ್ಯಶಿಕ್ಷಕರು ನಿಭಾಯಿಸಬೇಕು ಎಂದು ಸೂಚಿಸಲಾಗಿದೆ.

ಪ್ರತಿ ವಿಷಯದಲ್ಲಿ ಐದು ಮಾದರಿ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಲಾಗುತ್ತದೆ. ಎಲ್ಲ ಮಾದರಿ ಪ್ರಶ್ನೆಪತ್ರಿಕೆಗಳೂ ಮಂಡಳಿಯ ವೆಬ್‌ಸೈಟ್‌ನ ಲಭ್ಯವಿರುತ್ತವೆ. ಅರ್ಧವಾರ್ಷಿಕ ಪರೀಕ್ಷೆ ಜೊತೆಗೆ ಎರಡು ಪೂರ್ವ ಸಿದ್ಧತಾ ಪರೀಕ್ಷೆಗಳಿಗೂ ಮಂಡಳಿಯೇ ಪ್ರಶ್ನೆಪತ್ರಿಕೆಗಳನ್ನು ಪೂರೈಸಲಿದೆ. ಘಟಕ ಪರೀಕ್ಷೆಗಳಿಗೆ ಪ್ರಶ್ನೆಪತ್ರಿಕೆ ಸಿದ್ಧಪಡಿಸುವ ಹೊಣೆಗಾರಿಕೆಯನ್ನು ಆಯಾ ಜಿಲ್ಲೆಗಳ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳಿಗೆ ನೀಡಲಾಗಿದೆ.

ಪೋಷಕರಿಗೆ ಬರಲಿವೆ ಎಚ್ಚರಿಸುವ ಕರೆ: ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಮನೆಗೆ ಹೋದ ನಂತರ ಅವರ ನಿತ್ಯದ ಅಭ್ಯಾಸದ ಮೇಲೆ ನಿಗಾವಹಿಸಲು ಶಿಕ್ಷಣ ಇಲಾಖೆ ಸೂಚಿಸಿದ್ದು, ಆಯಾ ಶಾಲೆಗಳ ಶಿಕ್ಷಕರು ಬೆಳಿಗ್ಗೆ ಮತ್ತು ಸಂಜೆ ವಿದ್ಯಾರ್ಥಿಗಳ ಪೋಷಕರ ಮೊಬೈಲ್‌ಗೆ ಕರೆ ಮಾಡಿ ಮಾಹಿತಿ ಪಡೆಯಲಿದ್ದಾರೆ.

₹22 ಕೋಟಿ ಮರಳಿಸಿದ ಎಸ್‌ಬಿಐ, ಪಿಎನ್‌ಬಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಶ್ಚಿತ ಠೇವಣಿಗಳಿಗೆ ಸಂಬಂಧಿಸಿದಂತೆ ಹಲವು ವರ್ಷಗಳಿಂದ ಪರಿಹಾರ ಒದಗಿಸದೇ ಇದ್ದ ಎಸ್‌ಬಿಐ ಮತ್ತು ಪಿಎನ್‌ಬಿ ಜತೆಗಿನ ವ್ಯವಹಾರವನ್ನು ಸ್ಥಗಿತಗೊಳಿಸಲು ರಾಜ್ಯ ಸರ್ಕಾರ ಆದೇಶಿಸಿದ ಕೆಲವೇ ದಿನಗಳಲ್ಲಿ ಎರಡೂ ಬ್ಯಾಂಕ್‌ಗಳು, ಸರ್ಕಾರದ ವಿವಿಧ ನಿಗಮಗಳಿಗೆ ₹22 ಕೋಟಿಯನ್ನು ವಾಪಸ್ ಮಾಡಿವೆ.

ಈ ಬ್ಯಾಂಕ್‌ಗಳ ಜತೆಗೆ ವ್ಯವಹಾರ ನಿಲ್ಲಿಸಿ ಎಂದು ಹೊರಡಿಸಿದ್ದ ಆದೇಶವನ್ನು ರಾಜ್ಯ ಸರ್ಕಾರ ವಾಪಸ್ ಪಡೆದಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು 2011ರಲ್ಲಿ ಪಿಎನ್‌ಬಿಯ ರಾಜಾಜಿನಗರ ಶಾಖೆಯಲ್ಲಿ ₹25 ಕೋಟಿ ನಿಶ್ಚಿತ ಠೇವಣಿ ಇರಿಸಿತ್ತು. ಅವಧಿ ಮುಗಿದ ನಂತರ ಬ್ಯಾಂಕ್ ₹13 ಕೋಟಿಯನ್ನಷ್ಟೇ ಮರಳಿಸಿತ್ತು. ಇದೇ ರೀತಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 2013ರಲ್ಲಿ ಎಸ್‌ಬಿಐನ (ಆಗ ಎಸ್‌ಬಿಎಂ) ಅವೆನ್ಯೂ ರಸ್ತೆ ಶಾಖೆಯಲ್ಲಿ ₹10 ಕೋಟಿ ನಿಶ್ಚಿತ ಠೇವಣಿ ಇರಿಸಿತ್ತು. ಆದರೆ ಅವಧಿ ಮುಗಿದ ನಂತರ ಎಸ್‌ಬಿಐ ಹಣ ಮರಳಿಸಿರಲಿಲ್ಲ.

ಬ್ಯಾಂಕ್‌ಗಳ ಈ ನಿಲುವುಗಳನ್ನು ಖಂಡಿಸಿ ಆರ್ಥಿಕ ಇಲಾಖೆಯು ಇದೇ ಆಗಸ್ಟ್ 14ರಂದು ಸುತ್ತೋಲೆ ಹೊರಡಿಸಿ, ‘ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ ಶಿಫಾರಸಿನಂತೆ ಎರಡೂ ಬ್ಯಾಂಕ್‌ಗಳಲ್ಲಿರುವ ಖಾತೆಗಳನ್ನು ಸ್ಥಗಿತಗೊಳಿಸಿ, ಹೂಡಿಕೆಗಳನ್ನು ಹಿಂಪಡೆಯಬೇಕು. ಭವಿಷ್ಯದಲ್ಲಿಯೂ ಈ ಬ್ಯಾಂಕ್‌ಗಳಲ್ಲಿ ಯಾವುದೇ ರೀತಿಯ ಠೇವಣಿ/ಹೂಡಿಕೆಗಳನ್ನು ಮಾಡಬಾರದು’ ಎಂದು ಎಲ್ಲ ಇಲಾಖೆಗಳು, ನಿಗಮಗಳು, ಅಧೀನ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳಿಗೆ ಆದೇಶಿಸಿತ್ತು.

ಪಿಎಸ್‌ಐ ಅನುಮಾನಾಸ್ಪದ ಸಾವು ವರದಿ ಕೇಳಿದ ಗೃಹ ಸಚಿವಾಲಯ

ಪ್ರಜಾವಾಣಿ ವಾರ್ತೆ

ಪರಶುರಾಮ್

ನವದೆಹಲಿ: ಯಾದಗಿರಿ ನಗರ ಠಾಣೆಯ ಪಿಎಸ್‌ಐ ಪರಶುರಾಮ್ ಅನುಮಾನಾಸ್ಪದ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ ವರದಿ ಸಲ್ಲಿಸುವಂತೆ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರಿಗೆ ಕೇಂದ್ರ ಗೃಹ ಸಚಿವಾಲಯ ಪತ್ರ ಬರೆದಿದೆ.

ಈ ಪ್ರಕರಣದ ತನಿಖೆಯನ್ನು ಸಿಬಿಐ ಮೂಲಕ ನಡೆಸಬೇಕು ಎಂದು ಆಗ್ರಹಿಸಿ ಕೇಂದ್ರ ಸಣ್ಣ, ಮಧ್ಯಮ ಕೈಗಾರಿಕೆ ಖಾತೆಯ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಕಳೆದ ತಿಂಗಳು ಪತ್ರ ಬರೆದಿದ್ದರು.

‘ಪಿಎಸ್‌ಐ ಸಾವಿಗೆ ಯಾದಗಿರಿ ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರು, ಪುತ್ರ ಪಂಪನಗೌಡ ಅವರು ಹಣಕ್ಕೆ ಬೇಡಿಕೆ ಇಟ್ಟಿರುವುದೇ ಕಾರಣ. ಪರಶುರಾಮ್ ಅವರು 7 ತಿಂಗಳಿಂದ ನಗರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಅವರನ್ನು ಮತ್ತೆ ಸೆನ್ ಠಾಣೆಗೆ ವರ್ಗಾವಣೆ ಮಾಡಿ ನಗರ ಠಾಣೆಯಲ್ಲಿ ಮುಂದುವರಿಯಲು ₹30 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು.

ಈ ಪ್ರಕರಣದಲ್ಲಿ ಬಹು ಆಯಾಮಗಳು ಇವೆ. ಜತೆಗೆ, ಪೊಲೀಸರು ಕಾಟಾಚಾರಕ್ಕೆ ಪ್ರಕರಣ ದಾಖಲಿಸಿದ್ದಾರೆ. ಈ ಪ್ರಕರಣದ ಸಮಗ್ರ ತನಿಖೆ ನಡೆಸಲು ಸಿಬಿಐಗೆ ವಹಿಸುವುದೇ ಸೂಕ್ತ’ ಎಂದು ಅವರು ಪತ್ರದಲ್ಲಿ ಹೇಳಿದ್ದರು.

ಗೋವಾ–ತಮ್ನಾರ್ ವಿದ್ಯುತ್ ಮಾರ್ಗದ ಯೋಜನೆಯ ಸಹಕಾರಕ್ಕೆ ಮನವಿ

ಮುಖ್ಯಮಂತ್ರಿಗೆ ಪ್ರಧಾನಿ ಮೋದಿ ಪತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಗೋವಾ- ತಮ್ನಾರ್ 400 ಕೆ.ವಿ. ವಿದ್ಯುತ್ ಮಾರ್ಗದ ಯೋಜನೆಗೆ ಸಹಕಾರ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ಈ ಯೋಜನೆಗೆ ಕರ್ನಾಟಕದ 435 ಎಕರೆ ಅರಣ್ಯ ಒದಗಿಸುವ ಪ್ರಸ್ತಾವನೆಗೆ ಒಪ್ಪಿಗೆ ನೀಡಲು ಅರಣ್ಯ ಇಲಾಖೆಯ ಅಧಿಕಾರಿಗಳು ಮಾಡಿದ್ದ ಶಿಫಾರಸಿಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಮಾರ್ಚ್‌ನಲ್ಲಿ ತಡೆ ಒಡ್ಡಿದ್ದರು.

ಧಾರವಾಡದ ನರೇಂದ್ರದಿಂದ ಗೋವಾಕ್ಕೆ 400 ಕೆ.ವಿ. ಸಾಮರ್ಥ್ಯದ ವಿದ್ಯುತ್ ಮಾರ್ಗ ನಿರ್ಮಿಸಲು ಮುಂದಾಗಿರುವ ‘ಗೋವಾ ತಮ್ನಾರ್ ಟ್ರಾನ್ಸ್‌ಮಿಷನ್ ಪ್ರಾಜೆಕ್ಟ್ ಲಿಮಿಟೆಡ್’, ಅರಣ್ಯವನ್ನು ಅರಣ್ಯೇತರ ಉದ್ದೇಶಕ್ಕೆ ಬಳಸಲು ಒಪ್ಪಿಗೆ ನೀಡುವಂತೆ ಪ್ರಸ್ತಾವ ಸಲ್ಲಿಸಿತ್ತು. ಈ ಯೋಜನೆಗೆ ಗೋವಾದ ಭಗವಾನ್ ಮಹಾವೀರ ವನ್ಯಜೀವಿ ಧಾಮದ 27 ಹೆಕ್ಟೇರ್ ಅರಣ್ಯ ಬಳಕೆಗೆ ಒಪ್ಪಿಗೆ ಕೇಳಿತ್ತು. ಈ ಪ್ರಸ್ತಾವಕ್ಕೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯ 79ನೇ ಸಭೆಯಲ್ಲಿ ಷರತ್ತುಬದ್ಧ ಒಪ್ಪಿಗೆ ನೀಡಲಾಗಿತ್ತು.

ಛತ್ತೀಸಗಢದ ತಮ್ನಾರ್‌ನಿಂದ ಗೋವಾಕ್ಕೆ ವಿದ್ಯುತ್ ಸರಬರಾಜು ಮಾಡುವ ಯೋಜನೆ ಇದಾಗಿದೆ. ಈ ಮಾರ್ಗ ಕರ್ನಾಟಕದ ಮೂಲಕ ಹಾದು ಹೋಗುತ್ತದೆ. ಈ ಹಾದಿಯಲ್ಲಿ ಈಗಾಗಲೇ 400 ಕೆ.ವಿ.ಯ ಮಾರ್ಗ ಇದೆ. ‘ಇದು ರಾಷ್ಟ್ರೀಯ ಪ್ರಾಮುಖ್ಯತೆಯ ಯೋಜನೆ. ಇದು ರಾಷ್ಟ್ರೀಯ ಗ್ರಿಡ್ ಅಭಿವೃದ್ಧಿಯ ಭಾಗ. ಈ ಯೋಜನೆಯ ಅನುಷ್ಠಾನಕ್ಕೆ ಸಹಕಾರ ನೀಡಬೇಕು’ ಎಂದು ಪ್ರಧಾನಿಯವರು ಪತ್ರದಲ್ಲಿ ಮನವಿ ಮಾಡಿದ್ದಾರೆ.

‘ಉದ್ದೇಶಿತ ವಿದ್ಯುತ್ ಮಾರ್ಗವು ದಾಂಡೇಲಿ ಆನೆ ಕಾರಿಡಾರ್, ಭೀಮಗಡ ಅಭಯಾರಣ್ಯದ ಪರಿಸರ ಸೂಕ್ಷ್ಮವಲಯ, ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಪರಿಸರ ಸೂಕ್ಷ್ಮವಲಯ ಹಾಗೂ ದಾಂಡೇಲಿ ಅಭಯಾರಣ್ಯಗಳ ಮೂಲಕ ಹಾದುಹೋಗಲಿದೆ. ದೊಡ್ಡ ಪ್ರಮಾಣದಲ್ಲಿ ಕಾಡು ನಾಶವಾಗಲಿದೆ’ ಎಂದು ಪರಿಸರ ಕಾರ್ಯಕರ್ತರು ರಾಜ್ಯ ಹಾಗೂ ಕೇಂದ್ರ ಅರಣ್ಯ ಸಚಿವಾಲಯಕ್ಕೆ ಈ ಹಿಂದೆಯೇ ಪತ್ರ ಬರೆದಿದ್ದಾರೆ.

‘ಹೆಚ್ಚುವರಿ ವಿದ್ಯುತ್ ಮಾರ್ಗ ನಿರ್ಮಾಣದ ಸಂದರ್ಭದಲ್ಲಿ ಕರ್ನಾಟಕದಲ್ಲಿ 1 ಲಕ್ಷ ಮರಗಳನ್ನು ಕಡಿಯಲು ಪ್ರಸ್ತಾಪಿಸಲಾಗಿತ್ತು. ಪರಿಷ್ಕೃತ ಪ್ರಸ್ತಾಪದ ಪ್ರಕಾರ, 13 ಸಾವಿರ ಮರಗಳ ಹನನ ಮಾಡಲಾಗುತ್ತಿದೆ ಎಂದು ಯೋಜನಾ ಸಂಸ್ಥೆ ಹೇಳಿಕೊಂಡಿದೆ. ಈ ಬಗ್ಗೆ ಈಶ್ವರ ಖಂಡ್ರೆ ಅವರು ಅಧಿಕಾರಿಗಳಿಂದ ಮಾಹಿತಿ ಕೇಳಿದ್ದಾರೆ. ಕೇಂದ್ರ ಸರ್ಕಾರ ಒತ್ತಡ ಹೇರಿದ್ದರಿಂದ ರಾಜ್ಯ ಸರ್ಕಾರ ಸಹಕಾರ ನೀಡುವುದು ಅನಿವಾರ್ಯ’ ಎಂದು ಮೂಲಗಳು ತಿಳಿಸಿವೆ.

ದುಷ್ಕರ್ಮಿಗಳು ಹೊರಗೆ ಎಸೆದಿದ್ದ ಅನಾರೋಗ್ಯ ಪೀಡಿತ ಪತಿ ಸಾವು

ಆಂಬುಲೆನ್ಸ್‌ನಲ್ಲಿ ಮಹಿಳೆ ಅತ್ಯಾಚಾರ ಯತ್ನ

ಪ್ರಜಾವಾಣಿ ವಾರ್ತೆ

ಲಖನೌ: ಅನಾರೋಗ್ಯ ಪೀಡಿತ ಪತಿಯನ್ನು ಆಸ್ಪತ್ರೆಯಿಂದ ಮನೆಗೆ ಕರೆದುಕೊಂಡು ಹೋಗುತ್ತಿದ್ದ ಮಹಿಳೆಗೆ ದುಷ್ಕರ್ಮಿಗಳು ಆಂಬುಲೆನ್ಸ್‌ನಲ್ಲಿ ಲೈಂಗಿಕ ಕಿರುಕುಳ ನೀಡಿ, ಅತ್ಯಾಚಾರಕ್ಕೆ ಯತ್ನಿಸಿದ್ದಾರೆ. ನಂತರ, ಪತಿಗೆ ಅಳವಡಿಸಿದ್ದ ಆಮ್ಲಜನಕ ಪೂರೈಕೆ ವ್ಯವಸ್ಥೆ ತೆಗೆದು, ಆತನನ್ನು ವಾಹನದಿಂದ ಎಸೆದ ಆಘಾತಕಾರಿ ಘಟನೆ ಉತ್ತರ ಪ್ರದೇಶದ ಬಸ್ತಿ ಜಿಲ್ಲೆಯಲ್ಲಿ ನಡೆದಿದೆ.

ಮಹಿಳೆ ಪ್ರತಿರೋಧ ಒಡ್ಡಿದ್ದರಿಂದ, ದುಷ್ಕರ್ಮಿಗಳು ಆಕೆಯನ್ನು ಮತ್ತು ಆಕೆಯ ತಮ್ಮನನ್ನು ಕೂಡ ಆಂಬುಲೆನ್ಸ್‌ನಿಂದ ಹೊರಗೆ ದೂಡಿದ್ದಾರೆ.

ತೀವ್ರ ಅಸ್ವಸ್ಥಗೊಂಡಿದ್ದ ಪತಿಯನ್ನು ಮಹಿಳೆ ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಆದರೆ, ಕೆಲ ಹೊತ್ತಿನ ನಂತರ ಪತಿ ಮೃತಪಟ್ಟಿದ್ದಾರೆ.

ಈ ಭೀಕರ ಘಟನೆ ಶನಿವಾರ ನಡೆದಿದೆ. ಲಖನೌ ಪೊಲೀಸರಿಗೆ ಮಹಿಳೆ ಈ ಸಂಬಂಧ ಬುಧವಾರ ದೂರು ನೀಡಿದ ಬಳಿಕ ಗೊತ್ತಾಗಿದೆ.

‘ಜಿಲ್ಲೆಯ ಬನ್ಸಿ ಗ್ರಾಮದ ಮಹಿಳೆ, ಪತಿಯನ್ನು ಲಖನೌದ ಖಾಸಗಿ ಆಸ್ಪತ್ರೆಯಲ್ಲಿ ಕಳೆದ ತಿಂಗಳು ದಾಖಲಿಸಿದ್ದಳು. ಹಣದ ಕೊರತೆ ಎದುರಾದ ನಂತರ, ಪತಿಯನ್ನು ಮನೆಗೆ ಕಳುಹಿಸುವಂತೆ ವೈದ್ಯರಲ್ಲಿ ಮನವಿ ಮಾಡಿದ್ದಳು’ ಎಂದು ಪೊಲೀಸರು ತಿಳಿಸಿದ್ದಾರೆ.

ಶನಿವಾರ ಸಂಜೆ ಪತಿ ಹಾಗೂ ತಮ್ಮನೊಂದಿಗೆ ಮಹಿಳೆ ತನ್ನ ಗ್ರಾಮದತ್ತ ತೆರಳುತ್ತಿದ್ದಾಗ ಈ ಘಟನೆ ಸಂಭವಿಸಿದೆ’ ಎಂದು ಹೇಳಿದ್ದಾರೆ.

‘ಚಾಲಕ ಹಾಗೂ ಆತನ ಸ್ನೇಹಿತ ಮಹಿಳೆಯೊಂದಿಗೆ ಅಸಭ್ಯವಾಗಿ ವರ್ತಿಸಿದ್ದಲ್ಲದೇ, ಆಕೆ ಮೇಲೆ ಅತ್ಯಾಚಾರ ಎಸಗಲು ಯತ್ನಿಸಿದ್ದರು’ ಎಂದು ಮೂಲಗಳು ಹೇಳಿವೆ.

ಮಹಿಳೆ ಮೇಲೆ ಅತ್ಯಾಚಾರವೆಸಗಲು ವಿಫಲರಾದ ನಂತರ, ಅವರಿಬ್ಬರು ಆಕೆ ಮತ್ತು ಆಕೆಯ ತಮ್ಮನನ್ನು ವಾಹನದಿಂದ ಹೊರಗೆ ತಳ್ಳಿದ್ದಾರೆ. ನಂತರ, ಪತಿಗೆ ಅಳವಡಿಸಿದ್ದ ಆಮ್ಲಜನಕ ಪೂರೈಸುವ ವ್ಯವಸ್ಥೆಯನ್ನು ಕಿತ್ತು ಹಾಕಿ, ಆತನನ್ನು ಆಂಬುಲೆನ್ಸ್‌ನಿಂದ ಹೊರಗೆ ಎಸೆದು, ಸ್ಥಳದಿಂದ ದುಷ್ಕರ್ಮಿಗಳು ಪರಾರಿಯಾಗಿದ್ದಾರೆ ಎಂದು ಮೂಲಗಳು ಹೇಳಿವೆ.

ವಕೀಲೆಯ ವಿರೂಪಗೊಂಡಿದ್ದ ಶವ ಪತ್ತೆ

ಉತ್ತರ ಪ್ರದೇಶದ ಕಾಸ್‌ಗಂಜ್ ಜಿಲ್ಲೆಯ ಕಾಲುವೆಯೊಂದರಲ್ಲಿ, ವಕೀಲೆಯೊಬ್ಬರ ವಿರೂಪಗೊಂಡಿದ್ದ ಮೃತದೇಹ ಪತ್ತೆಯಾಗಿದೆ. ಆಕೆಯ ಗುರುತು ಪತ್ತೆ ಹಚ್ಚುವುದನ್ನು ತಡೆಯುವುದಕ್ಕಾಗಿ ಮುಖವನ್ನು ವಿರೂಪಗೊಳಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

‘ಪತ್ನಿಯನ್ನು ಅಪಹರಿಸಿ, ಕೊಲೆ ಮಾಡಲಾಗಿದೆ. ನಂತರ ದೇಹವನ್ನು ಕಾಲುವೆಯಲ್ಲಿ ಎಸೆಯಲಾಗಿದೆ’ ಎಂದು ವಕೀಲೆಯ ಪತಿ ಆರೋಪಿಸಿದ್ದಾರೆ.

ವಕೀಲೆಯ ಕುಟುಂಬಕ್ಕೆ ₹ 1 ಕೋಟಿ ಪರಿಹಾರ ನೀಡುವಂತೆ ಆಗ್ರಹಿಸಿ, ವಕೀಲರು ಪ್ರತಿಭಟನೆ ನಡೆಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದಾರೆ.

ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಿಮತ

ಬಯಲು ಸೀಮೆ ‘ಬರಡು ನೆಲಕ್ಕೆ ಜೀವಜಲ

ಪ್ರಜಾವಾಣಿ ವಾರ್ತೆ

ಶಿವಕುಮಾರ್

ಬೆಂಗಳೂರು: ‘ಎತ್ತಿನಹೊಳೆ ಯೋಜನೆಯ ಮೂಲಕ ‘ಬಯಲುಸೀಮೆ’ಗೆ ಜೀವಜಲ ಒದಗಿಸಬೇಕೆಂದು ಹಿಂದಿನ ಸರ್ಕಾರಗಳು ಪ್ರಯತ್ನಿಸಿದ್ದರೂ, ಬದ್ಧತೆ ಮತ್ತು ಇಚ್ಛಾಶಕ್ತಿಯ ಕೊರತೆಯಿಂದ ಸಾಧ್ಯವಾಗಿರಲಿಲ್ಲ. ಈ ಯೋಜನೆಯ ಮೊದಲ ಹಂತದ ಕಾಮಗಾರಿ ಶುಕ್ರವಾರ ಉದ್ಘಾಟನೆಯಾಗುತ್ತಿದ್ದು, ‘ಗೌರಿ ಹಬ್ಬ’ದಂದು ಗಂಗೆ ಪೂಜೆ ಮಾಡುತ್ತಿರುವುದು ವಿಶೇಷ’ ಎಂದು ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

‘ಮೊದಲ ಹಂತದ ನೀರು ಪೂರೈಕೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ. ಹೆಬ್ಬನಹಳ್ಳಿ ವಿತರಣಾ ತೊಟ್ಟಿಯ 4ರಿಂದ 32 ಕಿ.ಮೀ. ದೂರದಲ್ಲಿ ಎಸ್ಕೇಪ್ ಚಾನೆಲ್ ರೂಪಿಸಿದ್ದು, ಅಲ್ಲಿಂದ ನಾಲೆಯ ಮೂಲಕ ವಾಣಿವಿಲಾಸ ಸಾಗರಕ್ಕೆ ನೀರು ಪೂರೈಸಲಾಗುತ್ತದೆ. ನ. 1ರ ವೇಳೆಗೆ ಸುಮಾರು ಐದು ಟಿಎಂಸಿ ಅಡಿ ನೀರನ್ನು ಮೇಲಕ್ಕೆ ಎತ್ತಲಾಗುತ್ತದೆ. ಕೇವಲ ಪೂರ್ಣಗೊಂಡ ಕಾಮಗಾರಿಗೆ ಚಾಲನೆ ನೀಡುವ ದಿನವಲ್ಲ, ಬಯಲುಸೀಮೆಯ ‘ಬರಡು’ ಎಂಬ ಅಪವಾದವನ್ನು ತೊಡೆದುಹಾಕುವ ಗಳಿಗೆ’ ಎಂದು ಸಂಭ್ರಮ ಹಂಚಿಕೊಂಡಿದ್ದಾರೆ.

‘ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವ ಮೊದಲು ‘ಗ್ಯಾರಂಟಿ’ಗಳ ಭರವಸೆ ನೀಡಿತ್ತು. ಜೊತೆಗೆ ನೀರಾವರಿ, ಕೃಷಿ ಸುಧಾರಣೆ, ಕೈಗಾರಿಕಾಭಿವೃದ್ಧಿ, ನಿರುದ್ಯೋಗ ನಿವಾರಣೆ ಮುಂತಾದ ಭರವಸೆಗಳನ್ನು ಪಕ್ಷ ನೀಡಿತ್ತು. ಈ ಪೈಕಿ, ಎತ್ತಿನಹೊಳೆ ಯೋಜನೆಯನ್ನು ಪೂರ್ಣಗೊಳಿಸುವ ಬದ್ಧತೆಯನ್ನು ಪ್ರಣಾಳಿಕೆಯಲ್ಲಿ ಪಕ್ಷ ಘೋಷಿಸಿತ್ತು. ಅದರಂತೆ, ಒಂದೂವರೆ ವರ್ಷದ ಒಳಗೆ ಯೋಜನೆಯ ಮೊದಲ ಹಂತದ ನೀರು ಸರಬರಾಜು ಕಾಮಗಾರಿ ಸಾಕಾರಗೊಂಡಿದೆ. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಮಾತ್ರವಲ್ಲದೆ, ರಾಮನಗರದ ಕೆಲವು ಭಾಗ, ತುಮಕೂರು, ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಿಗೆ ಜೀವಜಲ ಸಿಗಲಿದೆ’ ಎಂದಿದ್ದಾರೆ.

‘ಯೋಜನೆಯಡಿ ಒಟ್ಟು 24.01 ಟಿಎಂಸಿ ಅಡಿ ನೀರನ್ನು ಕುಡಿಯುವ ಅಗತ್ಯಕ್ಕೆ ಮತ್ತು ಕೆರೆಗಳನ್ನು ತುಂಬಿಸಲು ಬಳಸಿಕೊಳ್ಳಲಾಗುತ್ತದೆ. ‘2011-12ರಲ್ಲಿ ಅಂದಿನ ಬಿಜೆಪಿ ಸರ್ಕಾರ ದೂರದೃಷ್ಟಿ, ಬದ್ಧತೆ ಇಲ್ಲದೆ, ರಾಜಕೀಯ ಲಾಭದ ದೃಷ್ಟಿಯಿಂದ ಯೋಜನೆ ರೂಪಿಸಿದ್ದರಿಂದಾಗಿ ಕಾಮಗಾರಿ ನಿರೀಕ್ಷೆಯಂತೆ ಮುಂದುವರಿಯಲಿಲ್ಲ. ಬಳಿಕ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ, ಯೋಜನಾ ಮೊತ್ತವನ್ನು ಪರಿಷ್ಕರಿಸಿ, 2014ರ ಫೆಬ್ರವರಿಯಲ್ಲಿ ಅನುಮೋದನೆ ನೀಡಿತು. ಆ ನಂತರ ಚಿಕ್ಕಬಳ್ಳಾಪುರದಲ್ಲಿ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಲಾಗಿತ್ತು. ಅಂದು ಆರಂಭವಾದ ಯೋಜನೆ, ನಡುವೆ ಬಿಜೆಪಿ ಸರ್ಕಾರ ಅಧಿಕಾರದ ಅವಧಿಯಲ್ಲೂ ಪೂರ್ಣಗೊಳ್ಳಲಿಲ್ಲ. ಮತ್ತೆ ಈ ಯೋಜನೆಗೆ ಚುರುಕು ನೀಡಲು ಕಾಂಗ್ರೆಸ್ ಪಕ್ಷವೇ ಅಧಿಕಾರಕ್ಕೆ ಬರಬೇಕಾಯಿತು’ ಎಂದು ಹೇಳಿದ್ದಾರೆ.

ಶುಕ್ರವಾರ, ಸೆಪ್ಟೆಂಬರ್ 6, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 249 | ಪುಟ 18

www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗೌರಿ ಹಬ್ಬದ ಶುಭಾಶಯಗಳು

ಸಿನಿಮಾ ಪುರವಣಿ
'ಇಬ್ಬನಿ ತಬ್ಬಿದ ಇಳೆಯಲಿ' ಚಿತ್ರವು ಒಂದು ಕಾವ್ಯಾತ್ಮಕ ದೃಶ್ಯರೂಪ ಎನ್ನುತ್ತಾರೆ ನಟಿ ಅಂಕಿತಾ ಅಮರ್

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
82,201	25,145	₹73,600 (ಬೆಂಗಳೂರು)	₹84,100 (ಬೆಂಗಳೂರು)	83.97

ಕೆಐಎಡಿಬಿ ₹72 ಕೋಟಿ ಅಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು (ಕೆಐಎಡಿಬಿ) 2021–22ರಲ್ಲಿ ಒಂದೇ ಜಮೀನಿಗೆ ಎರಡನೇ ಬಾರಿ ಪರಿಹಾರ ನೀಡಿದ ಪ್ರಕರಣಗಳಲ್ಲಿ ಒಟ್ಟು ₹72 ಕೋಟಿಗಿಂತಲೂ ಹೆಚ್ಚು ಮೊತ್ತದ ಅಕ್ರಮವಾಗಿದೆ. ರಾಜ್ಯದ ಬೊಕ್ಕಸಕ್ಕೆ ಭಾರಿ ನಷ್ಟವಾಗಿದೆ ಎಂದು ಜಾರಿ ನಿರ್ದೇಶನಾಲಯವು ಹೇಳಿದೆ.

ಧಾರವಾಡದ ಗಾಮನಗಟ್ಟಿ ಕೈಗಾರಿಕಾ ಪ್ರದೇಶದಲ್ಲಿ 2010–12ರ ಅವಧಿಯಲ್ಲಿ ಮಂಡಳಿಯು ಸ್ವಾಧೀನಪಡಿಸಿಕೊಂಡಿದ್ದ ಜಮೀನಿಗೆ 2012ರಲ್ಲೇ ಪರಿಹಾರ ನೀಡಲಾಗಿತ್ತು. ಆದರೆ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ, 2021–22ನೇ ಆರ್ಥಿಕ ವರ್ಷದಲ್ಲಿ ಹಲವು ಜಮೀನುಗಳಿಗೆ ಎರಡನೇ ಬಾರಿಗೆ ಒಟ್ಟು ₹19.99 ಕೋಟಿ ಪರಿಹಾರ ನೀಡಲಾಗಿತ್ತು.

6ನೇ ಪುಟ ನೋಡಿ

ನೂರಾರು ಕೋಟಿ ಅಕ್ರಮ: ವರದಿಯಲ್ಲಿ ಉಲ್ಲೇಖ • ಅಧ್ಯಯನಕ್ಕೆ ಸಮಿತಿ

'ಕೋವಿಡ್ ಅಸ್ತ್ರ' ಬಳಕೆಗೆ ಅಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿರ್ವಹಣೆ ಹೆಸರಿನಲ್ಲಿ ನಡೆದಿದೆ ಎನ್ನಲಾದ ಅಕ್ರಮದ ಕುರಿತು ನ್ಯಾಯಮೂರ್ತಿ ಜಾನ್ ಮೈಕೆಲ್ ಡಿ ಕುನ್ಹಾ ನೇತೃತ್ವದ ವಿಚಾರಣಾ ಆಯೋಗದ ಮಧ್ಯಂತರ ವರದಿಯ ಅಧ್ಯಯನಕ್ಕೆ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ.

ಈ ವರದಿಯನ್ನು ವಿರೋಧಿಗಳ ವಿರುದ್ಧ 'ಅಸ್ತ್ರ'ವಾಗಿ ಬಳಸಲು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಮುಂದಾಗಿದೆ ಎಂದು ವಿಶ್ಲೇಷಿಸಲಾಗಿದೆ.

ವಾರದ ಹಿಂದಷ್ಟೇ ಮಧ್ಯಂತರ ವರದಿಯನ್ನು ನ್ಯಾ. ಡಿ ಕುನ್ಹಾ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿದ್ದರು. ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ವರದಿಯನ್ನು ಹೆಚ್ಚುವರಿ ವಿಷಯವಾಗಿ ಸೇರಿಸಿ ಚರ್ಚೆ ನಡೆಸಲಾಗಿದೆ.

'ಕೋವಿಡ್ ಸಂದರ್ಭದಲ್ಲಿ ನೂರಾರು ಕೋಟಿ ರೂಪಾಯಿ ಅಕ್ರಮ ನಡೆದಿರುವುದು ಮತ್ತು ಕಡತಗಳು ನಾಪತ್ತೆ ಆಗಿರುವುದು ವರದಿಯಲ್ಲಿ ಉಲ್ಲೇಖಿತವಾಗಿದೆ. ಆದ್ದರಿಂದ, ವರದಿಯ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮತ್ತು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್ ನೇತೃತ್ವದ ಸಮಿತಿಗೆ ಅಧ್ಯಯನ ನಡೆಸಿ ವರದಿ ಕೊಡಲು ಸೂಚಿಸಿದ್ದೇವೆ' ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

6ನೇ ಪುಟ ನೋಡಿ

ಮಹದಾಯಿ ನ್ಯಾಯಕ್ಕಾಗಿ ನಿಯೋಗ

ರಾಷ್ಟ್ರೀಯ ವನ್ಯಜೀವಿ ಮಂಡಳಿಯು ಮಹದಾಯಿ ಯೋಜನೆಯ ಪ್ರಸ್ತಾವನೆಗೆ ಒಪ್ಪಿಗೆ ನೀಡದೇ ಮುಂದೂಡಿರುವ ವಿಷಯದ ಕುರಿತು ಸಚಿವ ಸಂಪುಟ ಸಭೆಯಲ್ಲಿ ಗಂಭೀರ ಚರ್ಚೆ ನಡೆಯಿತು. ಈ ವಿಷಯವಾಗಿ ಸರ್ವಪಕ್ಷಗಳ ಸಭೆಯನ್ನು ಕರೆದು, ಪ್ರಧಾನಿಯವರ ಬಳಿ ನಿಯೋಗ ಒಯ್ಯಲು ತೀರ್ಮಾನಿಸಲಾಯಿತು ಎಂದು ಎಚ್.ಕೆ.ಪಾಟೀಲ ತಿಳಿಸಿದರು.

'ಕಳಸಾ ನಾಲಾ ತಿರುವು ಯೋಜನೆಗೆ ಒಪ್ಪಿಗೆ ಸಿಗಬಹುದು ಎಂದು ನಾವು ಕಾತರದಿಂದ ಕಾಯುತ್ತಿದ್ದೆವು. ದುರ್ದೈವ ಎಂದರೆ, ವನ್ಯಜೀವಿ ಮಂಡಳಿಯು ತನ್ನ 79ನೇ ಸಭೆಯಲ್ಲಿ ಏನೋ ಕಾರಣ ನೀಡಿ ಮುಂದೂಡಿದೆ. ಇದರಿಂದ ಕರ್ನಾಟಕಕ್ಕೆ ಅನ್ಯಾಯವಾಗಿದೆ' ಎಂದರು.

'ವನ್ಯಜೀವಿ ಮಂಡಳಿ ಇದೇ ಸಭೆಯಲ್ಲಿ ಗೋವಾ–ತಮ್ನಾರ್ 400 ಕೆ.ವಿ ವಿದ್ಯುತ್ ಮಾರ್ಗಕ್ಕೆ ಕರ್ನಾಟಕದಲ್ಲಿನ 435 ಎಕರೆ ಅರಣ್ಯ ಭೂಮಿ ಬಳಕೆಯಾಗುವ ಪ್ರಸ್ತಾವನೆಗೆ ಮಂಡಳಿಯು ಷರತ್ತುಬದ್ಧ ಒಪ್ಪಿಗೆ ನೀಡಿದೆ. ಕಣ್ಣಿಗೆ ಕಾಣುವ ಪಕ್ಷಪಾತದ ವಿಷಯ ಇದಾಗಿದೆ. ಈ ಯೋಜನೆಗೆ ತಕರಾರು ಎತ್ತಿ ಗೋವಾ ರಾಜ್ಯ ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿರುವುದರಿಂದ ರಾಜ್ಯಕ್ಕೆ ಹಿನ್ನಡೆ ಆಗಿದೆ' ಎಂದರು.

ದಿನಸಿ ಕಿಟ್ ಇಲ್ಲ; ನಗದು ಮುಂದುವರಿಕೆ

ಪಡಿತರ ಯೋಜನೆ ಅಡಿ ಫಲಾನುಭವಿಗಳಿಗೆ ₹170 ನೇರ ನಗದು ವರ್ಗಾವಣೆ ಬದಲಿಗೆ ಆಹಾರ ಕಿಟ್ ವಿತರಿಸಬೇಕು ಎಂಬ ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಅವರ ಮಹತ್ವಾಕಾಂಕ್ಷೆಯ ಯೋಜನೆಗೆ ಸಂಪುಟ ಒಪ್ಪಿಗೆ ನೀಡಲಿಲ್ಲ.

'ಆಹಾರ ಕಿಟ್ ಬದಲಿಗೆ ಮೂರು ಪರ್ಯಾಯ ವಿಚಾರಗಳನ್ನು ಪ್ರಸ್ತಾಪಿಸಲಾಯಿತು. ಇವೆಲ್ಲವುಗಳಿಗಿಂತಲೂ ನೇರ ಹಣ ಕೊಡುವುದೇ ಸೂಕ್ತ ಎಂಬ ಅಭಿಪ್ರಾಯಕ್ಕೆ ಬರಲಾಯಿತು' ಎಂದು ಸಚಿವ ಪಾಟೀಲ ತಿಳಿಸಿದರು.

ಪ್ಯಾರಾಲಿಂಪಿಕ್ಸ್

ಭಾರತದ ಮುಂದುವರಿದ ಪದಕ ಬೇಟೆ

ಪ್ಯಾರಿಸ್ (ಪಿಟಿಐ/ಎಪಿ): ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತದ ಅಥ್ಲೀಟ್‌ಗಳು ಜಯಿಸಿದ ಪದಕಗಳ ಸಂಖ್ಯೆ 25ಕ್ಕೇರಿದೆ. ಗುರುವಾರ ಭಾರತ ತಂಡವು ಒಂದು ಚಿನ್ನ, ಒಂದು ಬೆಳ್ಳಿ ಹಾಗೂ ಕಂಚಿನ ಪದಕ ಜಯಿಸಿದೆ. ಇದರಲ್ಲಿ ಪುರುಷರ ಕ್ಲಬ್ ಥ್ರೋನಲ್ಲಿ ಧರಮ್‌ವೀರ್ ಮತ್ತು ಪ್ರಣವ್ ಸೂರ್ಮಾ ಅವರು ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಜಯಿಸಿದ್ದಾರೆ.

ಇದೇ ಮೊದಲ ಬಾರಿಗೆ ಭಾರತಕ್ಕೆ ಪ್ಯಾರಾ ಜೂಡೊ ಕ್ರೀಡೆಯಲ್ಲಿಯೂ ಕಂಚಿನ ಪದಕ ಒಲಿಯಿತು. ಕಪಿಲ್ ಪರಮಾರ್ ಈ ಸಾಧನೆ ಮಾಡಿದರು.

ಕಪಿಲ್ ಪರಮಾರ್
ಪುರುಷರ ಜೂಡೊ
60 ಕೆ.ಜಿ (ಜೆ1)
ಕಂಚು

ಧರಮ್‌ವೀರ್
ಚಿನ್ನ
ಪುರುಷರ ಕ್ಲಬ್ ಥ್ರೋ
34.59 ಮೀ

ಪ್ರಣವ್ ಸೂರ್ಮಾ
ಪುರುಷರ ಕ್ಲಬ್ ಥ್ರೋ
34.18 ಮೀ
ಬೆಳ್ಳಿ

ಪದಕ ಸಾಧನೆ ಒಟ್ಟು: 25 ಚಿನ್ನ: 5 ಬೆಳ್ಳಿ: 9 ಕಂಚು: 11

ವಿವರ ಪುಟ 12

ರೇಣುಕಸ್ವಾಮಿಯ ಮರ್ಮಾಂಗಕ್ಕೆ ನಟ ಒದ್ದಿದ್ದು ದೃಢ

ದರ್ಶನ್ ತಂಡದ ಕ್ರೌರ್ಯಕಾಂಡ

• ಆದಿತ್ಯ ಕೆ.ಎ.

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಮೇಲೆ ಪಟ್ಟಣಗೆರೆಯ ಶೆಡ್‌ನಲ್ಲಿ ನಟ ದರ್ಶನ್, ಅವರ ಪ್ರೇಯಸಿ ಪವಿತ್ರಾಗೌಡ ಸೇರಿ 14 ಆರೋಪಿಗಳು ನಡೆಸಿದ ಕ್ರೌರ್ಯ ಹಾಗೂ ಚಿತ್ರಹಿಂಸೆಗೆ ಹಲವು ಸಾಕ್ಷ್ಯ ಕಲೆ ಹಾಕಿರುವ ತನಿಖಾ ತಂಡ, ಅವುಗಳನ್ನು ಆರೋಪಪಟ್ಟಿಯಲ್ಲಿ ಉಲ್ಲೇಖಿಸಿದೆ.

'ತಪ್ಪಾಗಿದೆ, ಒಮ್ಮೆ ಬದುಕಲು ಅವಕಾಶ ಕೊಡಿ...' ಎಂದು ಕೈಮುಗಿದು ಪರಿಪರಿಯಾಗಿ ರೇಣುಕಸ್ವಾಮಿ ಬೇಡಿಕೊಂಡರೂ ಮನಸೋಇಚ್ಛೆ ಹಲ್ಲೆ ನಡೆಸಿ ಹತ್ಯೆ ಮಾಡಿರುವುದಕ್ಕೆ ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ತಜ್ಞರ ದತ್ತಾಂಶ ಸಂಗ್ರಹದಿಂದ ತನಿಖಾಧಿಕಾರಿಗಳಿಗೆ ಹಲವು ಸಾಕ್ಷ್ಯಗಳು ಸಿಕ್ಕಿವೆ. ರೇಣುಕಸ್ವಾಮಿ ಅಂತಿಮ ಕ್ಷಣದ ಫೋಟೊಗಳು ಘಟನೆಯ ಭೀಕರತೆ ಕಟ್ಟಿಕೊಡುತ್ತವೆ.

ಎಲ್ಲ ತಾಂತ್ರಿಕ ಸಾಕ್ಷ್ಯಾಧಾರಗಳನ್ನು ಪೊಲೀಸರು ದೋಷಾರೋಪ ಪಟ್ಟಿಯೊಂದಿಗೆ 24ನೇ ಎಸಿಎಂಎಂ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ದತ್ತಾಂಶದ ಮರು ಸಂಗ್ರಹ, ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ದಾಖಲಾಗಿದ್ದ ದೃಶ್ಯಾವಳಿಗಳಿಂದ ಪಡೆಯಲಾದ 9 ಫೋಟೊಗಳು ದರ್ಶನ್ ಮತ್ತು ಸಹಚರರ ಕೃತ್ಯಕ್ಕೆ ಪ್ರಬಲ ಸಾಕ್ಷ್ಯ ಒದಗಿಸಿವೆ ಎಂದು ತನಿಖಾ ತಂಡದ ಮೂಲಗಳು ಹೇಳಿವೆ.

6ನೇ ಪುಟ ನೋಡಿ

ದತ್ತಾಂಶ ಮರುಸಂಗ್ರಹಕ್ಕೆ ಯತ್ನ

ಜೀವದಾನ ನೀಡುವಂತೆ ಬೇಡಿದ್ದ ರೇಣುಕಸ್ವಾಮಿ

'ದರ್ಶನ್ ಹಾಗೂ ಪವಿತ್ರಾಗೌಡ ಅವರ ಮೊಬೈಲ್‌ನಲ್ಲಿ ಕೆಲವು ಫೋಟೊ ಹಾಗೂ ವಿಡಿಯೊಗಳಿದ್ದವು. ಅವರಿಬ್ಬರ ಐ–ಫೋನ್‌ಗಳನ್ನು ಎಫ್‌ಎಸ್‌ಎಲ್‌ಗೆ ರವಾನೆ ಮಾಡಲಾಗಿತ್ತು. ಆದರೂ, ದತ್ತಾಂಶ ಮರು ಸಂಗ್ರಹವಾಗಿಲ್ಲ. ಈ ಎರಡೂ ಮೊಬೈಲ್‌ಗಳನ್ನು ಅತ್ಯಾಧುನಿಕ ವ್ಯವಸ್ಥೆ ಹೊಂದಿರುವ ಗುಜರಾತ್‌ನ ಎಫ್‌ಎಸ್‌ಎಲ್ ವಿಶ್ವವಿದ್ಯಾಲಯಕ್ಕೆ ರವಾನಿಸಲು ಚಿಂತನೆ ನಡೆಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ದರ್ಶನ್–ಪವಿತ್ರಾ ಸಹಜೀವನ'

'ವಿಚಾರಣೆ ವೇಳೆ ಪವಿತ್ರಾ–ದರ್ಶನ್ ಅವರಿಗೆ ಹಲವು ಪ್ರಶ್ನೆ ಕೇಳಲಾಗಿತ್ತು. ರೇಣುಕಸ್ವಾಮಿ ಅಶ್ಲೀಲ ಸಂದೇಶ ಕಳುಹಿಸಿದ್ದನ್ನು ದರ್ಶನ್ ಅವರಿಗೆ ಹೇಳಲು ಕಾರಣ ಏನು ಎಂದು ಕೇಳಲಾಗಿತ್ತು. ಆಗ ತಾವಿಬ್ಬರೂ ಸಹಜೀವನ ನಡೆಸುತ್ತಿರುವುದಾಗಿ ಹೇಳಿಕೊಂಡಿದ್ದಾರೆ. ಇದಕ್ಕೆ ಕೆಲವು ದಾಖಲೆಗಳೂ ದೊರಕಿವೆ' ಎಂದು ಮೂಲಗಳು ತಿಳಿಸಿವೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಬಯಲುಸೀಮೆಯತ್ತ ಎತ್ತಿನಹೊಳೆ

ಯೋಜನೆ: ಏನು? ಎತ್ತ...

24.01	14.056	9.953	₹23,252 ಕೋಟಿ	₹16,152 ಕೋಟಿ
ಬಳಸಿಕೊಳ್ಳುವ ನೀರಿನ ಒಟ್ಟು ಪ್ರಮಾಣ	ಕುಡಿಯುವ ನೀರಿಗಾಗಿ	ಕೆರೆ ತುಂಬಿಸಲು	ಯೋಜನೆಯ ಅಂದಾಜು ವೆಚ್ಚ	ಇಲ್ಲಿಯವರೆಗೆ ಆಗಿರುವ ವೆಚ್ಚ

(ಟಿಎಂಸಿ ಅಡಿಗಳಲ್ಲಿ)

• ಬಾಲಕೃಷ್ಣ ಪಿ.ಎಚ್.

ಸಕಲೇಶಪುರ: ಬರದಿಂದ ಕಂಗೆಟ್ಟ ಬಯಲುಸೀಮೆಯ ಜಿಲ್ಲೆಗಳಿಗೆ ನೀರುಣಿಸುವ ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆ ದಶಕದ ನಂತರ ಸಾಕಾರಗೊಳ್ಳುವ ಸಂಭ್ರಮಕ್ಕೆ 'ಗೌರಿಹಬ್ಬ'ದ ದಿನವೇ ಸಾಕ್ಷಿಯಾಗಲಿದೆ.

ಯೋಜನೆಯು ಮೊದಲ ಹಂತದಲ್ಲಿ ಚಿತ್ರದುರ್ಗದ ಹಿರಿಯೂರಿನ ವಾಣಿವಿಲಾಸ ಜಲಾಶಯಕ್ಕೆ ಹರಿಯಲಿದೆ.

ಪಶ್ಚಿಮ ಘಟ್ಟದ ಮೇಲ್ಭಾಗದಲ್ಲಿ ಹರಿಯುವ ಎತ್ತಿನಹೊಳೆ, ಕಾಡುಮನೆಹೊಳೆ, ಹೊಂಗಡಹಳ್ಳ, ಕೇರಿಹೊಳೆ ಹಳ್ಳಗಳಿಗೆ ಅಡ್ಡಲಾಗಿ ಎಂಟು ವಿಯರ್‌ಗಳನ್ನು (ತಡೆ) ಕಟ್ಟಿ ಮಳೆಗಾಲದಲ್ಲಿ ಪ್ರವಾಹದಿಂದ ಸಿಗುವ ನೀರಿನಲ್ಲಿ 24.11 ಟಿಎಂಸಿ ಅಡಿಯನ್ನು ಬರಪೀಡಿತ ಏಳು ಜಿಲ್ಲೆಗಳಿಗೆ ಹರಿಸುವ ಯೋಜನೆ ಇದಾಗಿದೆ.

ಪ್ರತಿ ವರ್ಷ ಜೂನ್ 15ರಿಂದ ಅಕ್ಟೋಬರ್ 15ರವರೆಗೆ (ಮಳೆಗಾಲದ ವ್ಯತ್ಯಾಸಕ್ಕೆ ಅನುಗುಣವಾಗಿ ವ್ಯತ್ಯಾಸವಾಗಲಿದೆ) ನಾಲ್ಕು ತಿಂಗಳು ಪೂರ್ವಾಭಿಮುಖವಾಗಿ ನೀರು ಹರಿಸಿ ಏಳು ಜಿಲ್ಲೆಗಳ 29 ತಾಲ್ಲೂಕಿನ 38 ಪಟ್ಟಣ ಪ್ರದೇಶ ಹಾಗೂ 6,657 ಗ್ರಾಮಗಳ 75.59 ಲಕ್ಷ ಜನರಿಗೆ ಮತ್ತು ಜಾನುವಾರುಗಳಿಗೆ ನೀರು ಒದಗಿಸುವುದು ಯೋಜನೆಯ ಉದ್ದೇಶವಾಗಿದೆ.

ಪರ–ವಿರೋಧದ ಯೋಜನೆ: 2011 ರಲ್ಲಿ ಯೋಜನೆ ರೂಪಿಸಲಾಗಿತ್ತು. ಅದಕ್ಕೆ ಕರಾವಳಿಯಲ್ಲಿ ಬಿಜೆಪಿ, ಕಾಂಗ್ರೆಸ್ ಸಹಿತ ವಿವಿಧ ಪಕ್ಷಗಳು, ಪರಿಸರ ಪ್ರೇಮಿಗಳು, ಸಾರ್ವಜನಿಕರಿಂದ ಭಾರಿ ವಿರೋಧ ವ್ಯಕ್ತವಾಗಿತ್ತು. ಅದೇ ಸಮಯದಲ್ಲಿ ಕೋಲಾರ, ಚಿಕ್ಕಬಳ್ಳಾಪುರ ಸಹಿತ ನೀರು ಹರಿಯಲಿರುವ ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಬೆಂಬಲಿಸಿ ಹೋರಾಟಗಳು ನಡೆದಿದ್ದವು.

6ನೇ ಪುಟ ನೋಡಿ

ನೇಮಕಾತಿಗೆ 'ಇನ್ಫಿ' ವಿಳಂಬ: ಪರಿಶೀಲನೆಗೆ ಕೇಂದ್ರ ಸೂಚನೆ

• ಸೋನಲ್ ಚೌಧರಿ

ಬೆಂಗಳೂರು: ಐ.ಟಿ. ಸೇವಾ ಕಂಪನಿ ಇನ್ಫೊಸಿಸ್ 'ಐ.ಟಿ. ಪದವೀಧರರನ್ನು [illegible]' ಎಂಬ ಆರೋಪದ ಬಗ್ಗೆ ಪರಿಶೀಲನೆ ನಡೆಸುವಂತೆ ಕೇಂದ್ರ ಕಾರ್ಮಿಕ ಸಚಿವಾಲಯವು ರಾಜ್ಯದ ಕಾರ್ಮಿಕ ಇಲಾಖೆಗೆ ಸೂಚನೆ ನೀಡಿದೆ.

ಸಿಸ್ಟಂ ಎಂಜಿನಿಯರ್ ಮತ್ತು ಡಿಜಿಟಲ್ ಸ್ಪೆಷಲಿಸ್ಟ್ ಎಂಜಿನಿಯರ್ ಹುದ್ದೆಗಳಿಗೆ (ಒಟ್ಟು 2,500 ಮಂದಿಗೆ) ನೇಮಕ ಮಾಡಿಕೊಳ್ಳುವುದಾಗಿ ಕಂಪನಿಯು 2022ರಲ್ಲಿಯೇ ಹೇಳಿದ್ದರೂ, ನೇಮಕಾತಿ ಆಗಿಲ್ಲ ಎಂಬ ಆರೋಪಕ್ಕೆ ಇದು ಸಂಬಂಧಿಸಿದೆ.

ಐ.ಟಿ. ಉದ್ಯೋಗಿಗಳ ಸಂಘಟನೆಯಾದ ಎನ್‌ಐಟಿಇಎಸ್‌ನ ಅಧ್ಯಕ್ಷ ಹರಪ್ರೀತ್ ಸಿಂಗ್ ಸಲೂಜಾ ಅವರು ಸಲ್ಲಿಸಿದ ದೂರಿಗೆ ಪ್ರತಿಯಾಗಿ ಕೇಂದ್ರವು, ಅಗತ್ಯ ಕ್ರಮವನ್ನು ಕೈಗೊಳ್ಳುವಂತೆ ರಾಜ್ಯಕ್ಕೆ ಸೆಪ್ಟೆಂಬರ್ 3ರಂದು ಬರೆದ ಪತ್ರದಲ್ಲಿ ಹೇಳಿದೆ.

ಎನ್‌ಐಟಿಇಎಸ್ ಸಂಘಟನೆಯು ಜೂನ್ ತಿಂಗಳಲ್ಲಿ ಹಾಗೂ ಆಗಸ್ಟ್‌ನಲ್ಲಿ ಕೇಂದ್ರದ ಮಧ್ಯಪ್ರವೇಶಕ್ಕೆ ಕೋರಿಕೆ ಸಲ್ಲಿಸಿತ್ತು. ಇದಾದ ನಂತರದಲ್ಲಿ ಇನ್ಫೊಸಿಸ್ ಕಂಪನಿಯು, ಸರಿಸುಮಾರು ಎರಡು ಸಾವಿರ ಮಂದಿಗೆ ಈ ವರ್ಷದ ಅಕ್ಟೋಬರ್‌ನಲ್ಲಿ ಕೆಲಸಕ್ಕೆ ಸೇರುವಂತೆ ಪತ್ರ ರವಾನಿಸಿದೆ.

ಆದರೆ, ಸರಿಸುಮಾರು 500 ಮಂದಿಗೆ ಕೆಲಸಕ್ಕೆ ಸೇರಿಕೊಳ್ಳುವ ದಿನಾಂಕ ಯಾವುದು ಎಂಬುದು ಕಂಪನಿಯ ಕಡೆಯಿಂದ ಇನ್ನೂ ಖಚಿತವಾಗಿಲ್ಲ. ಈ ವಿಚಾರವಾಗಿ 'ಪ್ರಜಾವಾಣಿ'ಗೆ ಪ್ರತಿಕ್ರಿಯೆ ನೀಡಲು ಇನ್ಫೊಸಿಸ್ ನಿರಾಕರಿಸಿದೆ.

ಅಂಗಾಂಗ ಕಸಿಗೆ ಕಾಯುತ್ತಿರುವವರ ಸಂಖ್ಯೆ ಏರಿಕೆ • ನಗರದ ಖಾಸಗಿ ಆಸ್ಪತ್ರೆಗಳ ವೈದ್ಯರಿಂದ ಕುಟುಂಬಸ್ಥರಿಗೆ ಮನವರಿಕೆ

ಅಂಗಾಂಗ ದಾನ: 'ಖಾಸಗಿ' ಮನವಿಗೆ ಸ್ಪಂದನ

• ವರುಣ ಹೆಗಡೆ

ಬೆಂಗಳೂರು: ಮಿದುಳು ನಿಷ್ಕ್ರಿಯಗೊಂಡವರ ಅಂಗಾಂಗ ದಾನಕ್ಕೆ ಸಂಬಂಧಿಸಿದಂತೆ ಕುಟುಂಬಸ್ಥರಿಗೆ ಮನವರಿಕೆ ಮಾಡಿಸುವಲ್ಲಿ ನಗರದ ಖಾಸಗಿ ಆಸ್ಪತ್ರೆಗಳು ಯಶಸ್ವಿಯಾಗುತ್ತಿದ್ದು, ಈ ವರ್ಷ ರಾಜ್ಯದಲ್ಲಿ ಅಂಗಾಂಗ ದಾನ ಮಾಡಿದ 105 ಮಂದಿಯಲ್ಲಿ 77 ಮಂದಿಯ ಅಂಗಾಂಗಗಳನ್ನು ನಗರದ ಖಾಸಗಿ ಆಸ್ಪತ್ರೆಗಳಲ್ಲಿಯೇ ಸಂಗ್ರಹಿಸಲಾಗಿದೆ.

ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ರಾಜ್ಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆಯು (ಸೊಟ್ಟೊ) ಅಂಗಾಂಗ ಹಾಗೂ ಅಂಗಾಂಶವನ್ನು ಸಂಗ್ರಹಿಸಿ, ಅಂಗಾಂಗ ವೈಫಲ್ಯ ಸಮಸ್ಯೆ ಎದುರಿಸುತ್ತಿರುವವರಿಗೆ ಕಸಿ ಮಾಡಿಸಲು ನೆರವಾಗುತ್ತಿದೆ. ರಸ್ತೆ ಅಪಘಾತ ಸೇರಿ ವಿವಿಧ ಸಂದರ್ಭಗಳಲ್ಲಿ ಗಂಭೀರವಾಗಿ ಗಾಯಗೊಂಡು, ಮಿದುಳು ನಿಷ್ಕ್ರಿಯಗೊಂಡವರ ಅಂಗಾಂಗಗಳನ್ನು ದಾನವಾಗಿ ಪಡೆದು, ಅಂಗಾಂಗ ವೈಫಲ್ಯಕ್ಕೆ ಒಳಗಾದವರಿಗೆ ಕಸಿ ಮಾಡಲಾಗುತ್ತಿದೆ. ದಾನಿಗಳ ಕೊರತೆಯಿಂದ ರಾಜ್ಯದಲ್ಲಿ ಎಂಟು ಸಾವಿರಕ್ಕೂ ಅಧಿಕ ಮಂದಿ ಅಂಗಾಂಗಗಳಿಗಾಗಿ ಎದುರು ನೋಡುತ್ತಿದ್ದಾರೆ.

ವರ್ಷವಾರು ಅಂಗಾಂಗ ದಾನ					
ವರ್ಷ	2020	2021	2022	2023	2024
ದಾನಿಗಳು	35	70	151	178	105

ಅಂಗಾಂಗ ದಾನದ ಬಗ್ಗೆ ಆರೋಗ್ಯ ಇಲಾಖೆಯು ಜಾಗೃತಿ ಮೂಡಿಸುತ್ತಿದ್ದರೂ ಜನರಲ್ಲಿನ ಅರಿವಿನ ಕೊರತೆಯಿಂದಾಗಿ ಅಂಗಾಂಗ ದಾನ ಪ್ರಕ್ರಿಯೆಗೆ ಹಿನ್ನಡೆಯಾಗಿದೆ. ಅಂಗಾಂಗ ವೈಫಲ್ಯಕ್ಕೆ ಒಳಗಾದವರಿಗೆ ಸಮಯಕ್ಕೆ ಸರಿಯಾಗಿ ಕಸಿ ಮಾಡದಿದ್ದಲ್ಲಿ ಜೀವಕ್ಕೆ ಕುತ್ತು ಬರುವ ಸಾಧ್ಯತೆ ಇದೆ. ಆದ್ದರಿಂದ ಇಲ್ಲಿನ ಆಸ್ಪತ್ರೆಗಳ ವೈದ್ಯರೂ ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಯ ಕುಟುಂಬಸ್ಥರಿಗೆ ಅಂಗಾಂಗ ದಾನದ ಮಹತ್ವದ ಬಗ್ಗೆ ತಿಳಿಸಿ, ಸಂಗ್ರಹಿಸಲಾದ ಅಂಗಾಂಗಗಳನ್ನು 'ಸೊಟ್ಟೊ' ಅಡಿ ಹೆಸರು ನೋಂದಾಯಿಸಿಕೊಂಡವರಿಗೆ ಕಸಿ ಮಾಡಿಸುತ್ತಿದ್ದಾರೆ.

ಮೂತ್ರಪಿಂಡಕ್ಕೆ ಹೆಚ್ಚಿನ ಬೇಡಿಕೆ

'ಸೊಟ್ಟೊ' ಸಂಸ್ಥೆಯಡಿ ಅಂಗಾಂಗಕ್ಕಾಗಿ ನೋಂದಾಯಿಸುತ್ತಿರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಸಂಸ್ಥೆಯಡಿ ಮೂತ್ರಪಿಂಡಕ್ಕಾಗಿ 5,945 ಮಂದಿ ನೋಂದಾಯಿಸಿಕೊಂಡು, ಕಾಯುತ್ತಿದ್ದಾರೆ. ಯಕೃತ್ತಿಗಾಗಿ 2,198, ಹೃದಯಕ್ಕಾಗಿ 190, ಶ್ವಾಸಕೋಶಕ್ಕಾಗಿ 79 ಮಂದಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಆದ್ಯತೆ ಅನುಸಾರ ಸಂಸ್ಥೆಯು ಅಂಗಾಂಗಗಳನ್ನು ಒದಗಿಸುತ್ತಿದೆ.

ಹಲವರಿಗೆ ನೆರವು: ಈ ಮೊದಲು ಜೀವಸಾರ್ಥಕತೆ ಹೆಸರಿನಿಂದ ನೋಂದಾಯಿಸಲಾಗಿದ್ದ 'ಸೊಟ್ಟೊ' ಪ್ರಕಾರ, ಈ ವರ್ಷ ಇಲ್ಲಿನ ಆಸ್ಟರ್ ಆರ್‌ವಿ ಆಸ್ಪತ್ರೆಯಲ್ಲಿ ಗರಿಷ್ಠ (24) ಮಂದಿಯಿಂದ ಅಂಗಾಂಗಗಳನ್ನು ಸಂಗ್ರಹಿಸಲಾಗಿದೆ. ಆಸ್ಟರ್ ಸಿಎಂಐ ಆಸ್ಪತ್ರೆಯಲ್ಲಿ 11 ಮಂದಿ, ಸ್ಪರ್ಶ್ ಆಸ್ಪತ್ರೆಯಲ್ಲಿ 10 ಮಂದಿ, ನಾರಾಯಣ ಹೃದಯಾಲಯದಲ್ಲಿ ಐವರು, ಕಾವೇರಿ ಆಸ್ಪತ್ರೆಯಲ್ಲಿ ನಾಲ್ವರಿಂದ ಅಂಗಾಂಗಗಳನ್ನು ಪಡೆಯಲಾಗಿದೆ. ಬ್ಯಾಪ್ಟಿಸ್, ಮಣಿಪಾಲ್ ಸೇರಿ ನಗರದ ವಿವಿಧ ಖಾಸಗಿ ಆಸ್ಪತ್ರೆಗಳಲ್ಲಿಯೂ ದಾನಿಗಳಿಂದ ಅಂಗಾಂಗ ಸಂಗ್ರಹಿಸಿ, ಅಂಗಾಂಗ ವೈಫಲ್ಯಕ್ಕೆ ಒಳಗಾದವರಿಗೆ ಕಸಿ ಮಾಡಲಾಗಿದೆ. ಒಟ್ಟು 105 ದಾನಿಗಳಿಂದ 301 ಅಂಗಾಂಗ ಹಾಗೂ 526 ಅಂಗಾಂಶಗಳನ್ನು ಸಂಗ್ರಹಿಸಲಾಗಿದೆ.

'ವ್ಯಕ್ತಿಯ ಮಿದುಳು ನಿಷ್ಕ್ರಿಯಗೊಂಡ ಬಳಿಕ ಕುಟುಂಬದ ಸದಸ್ಯರ ಒಪ್ಪಿಗೆ ಮೇರೆಗೆ ಅಂಗಾಂಗಗಳನ್ನು ದಾನವಾಗಿ ಪಡೆಯಲಾಗುತ್ತಿದೆ. ದಾನಿಗಳ ಕೊರತೆಯಿಂದಾಗಿ ಅಂಗಾಂಗ ಕಸಿಗೆ ಕಾಯುತ್ತಿರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ರಸ್ತೆ ಅಪಘಾತ ಸೇರಿ ವಿವಿಧ ಸಂದರ್ಭಗಳಲ್ಲಿ ಗಂಭೀರವಾಗಿ ಗಾಯಗೊಂಡು, ಮಿದುಳು ನಿಷ್ಕ್ರಿಯಗೊಂಡವರ ಕುಟುಂಬಸ್ಥರಿಗೆ ಅಂಗಾಂಗ ದಾನದ ಬಗ್ಗೆ ಮನವರಿಕೆ ಮಾಡಿಸಲಾಗುತ್ತಿದೆ' ಎಂದು ಸ್ಪರ್ಶ್ ಆಸ್ಪತ್ರೆಯ ಕಸಿ ಸಲಹೆಗಾರ ಡಾ. ಗೌತಮ್ ಕುಮಾರ್ ತಿಳಿಸಿದರು.

2024 NEW COLLECTION AT
hakoba
SINCE 1960 ®
Embroidery beyond your imagination
BIG DISCOUNT SALE
SALE upto 50% OFF
GET THE BEST OF EMBROIDERED FABRICS ON SWISS COTTON, MUL MUL, ORGANDI, VOILES, KOTA AND MUCH MORE
ONLY AT
Lady Jahangir Kotari Hall
14, Queens Road, Circle, Shivaji Nagar, Near Indian Express, Bangalore - 560001.
10.30 a.m. to 8.30 p.m. All Cards Accepted
Last Date: 8th SEP. 2024

₹8,800 ಕೋಟಿ ಸಿಎಸ್‌ಆರ್ ನಿಧಿ ಶಿಕ್ಷಣಕ್ಕೆ ಮೀಸಲು: ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಬರುವ ₹8,800 ಕೋಟಿ ಸಿಎಸ್‌ಆರ್ ನಿಧಿಯನ್ನು ಮುಂದಿನ 3-4 ವರ್ಷಗಳ ಕಾಲ ಶಾಲೆಗಳ ನಿರ್ಮಾಣ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ಮೀಸಲಿಡುವಂತೆ ಮನವಿ ಮಾಡಲಾಗಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯ 'ಭಾರತ ಜೋಡೊ' ಭವನದಲ್ಲಿ ಗುರುವಾರ ನಡೆದ ಶಿಕ್ಷಕರ ದಿನ ಹಾಗೂ ರಾಜೀವ್ ಗಾಂಧಿ ಶ್ರೇಷ್ಠ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, 'ಈ ಹಣ ವಿನಿಯೋಗಿಸುವ ಉದ್ದೇಶಕ್ಕೆ ನನ್ನ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ' ಎಂದರು.

'ರಾಜಕಾರಣಿಗಳನ್ನು ಜನರು ಬೇಗ ಮರೆಯುತ್ತಾರೆ. ಆದರೆ, ತಮ್ಮ ಗುರುಗಳನ್ನು ಬೇಗ ಮರೆಯುವುದಿಲ್ಲ. ನಾವು ನಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಾಲೆ ಶಿಕ್ಷಕರನ್ನು ಮರೆಯುವುದಿಲ್ಲ. ಶಿಕ್ಷಕರ ಮೇಲೆ ವಿಶೇಷ ನಂಬಿಕೆ ವಿಶ್ವಾಸ ಇರುತ್ತದೆ. ಮಕ್ಕಳು ಮನೆಯಲ್ಲಿ ತಂದೆ ತಾಯಿ ಮಾತು ಕೇಳದಿದ್ದರೂ ಶಿಕ್ಷಕರು ಹೇಳಿದ್ದನ್ನು ಕೇಳುತ್ತಾರೆ' ಎಂದರು.

ಕೆಪಿಸಿಸಿ ಕಚೇರಿಯ 'ಭಾರತ ಜೋಡೊ ಭವನ'ದಲ್ಲಿ ಗುರುವಾರ ನಡೆದ ಶಿಕ್ಷಕರ ದಿನ ಮತ್ತು ರಾಜೀವ್ ಗಾಂಧಿ ಶ್ರೇಷ್ಠ ಶಿಕ್ಷಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿದರು

ಸಾಧಕ ಶಿಕ್ಷಕರಿಗೆ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಶ್ರೇಷ್ಠ ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, ಎಂ.ವಿ. ರಾಜೀವ್ ಗೌಡ ಇದ್ದರು.

ಪಿಒಪಿ ಮೂರ್ತಿ ಬಳಕೆ ನಿಷೇಧಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಸರ ಮಾಲಿನ್ಯ ತಡೆಯುವ ಹೆಸರಿನಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಒಪಿ) ಗಣೇಶನ ಮೂರ್ತಿಗಳ ಬಳಕೆ ನಿರ್ಬಂಧಿಸಿರುವ ಸರ್ಕಾರದ ನಡೆ ಖಂಡನೀಯ ಎಂದು ಬೆಂಗಳೂರು ಮಹಾನಗರ ಗಣೇಶ ಉತ್ಸವ ಸಮಿತಿ ತಿಳಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಅಧ್ಯಕ್ಷ ಈ. ಅಶ್ವತ್ಥನಾರಾಯಣ, 'ಧಾರ್ಮಿಕ ಆಚರಣೆ, ನಂಬಿಕೆ ಮತ್ತು ತಮಗೆ ಇಷ್ಟವಾದ ಮೂರ್ತಿಯನ್ನು ಪೂಜಿಸುವ ಹಕ್ಕು ಪ್ರತಿಯೊಬ್ಬ ಭಕ್ತನಿಗೆ ಇದೆ. ಪರಿಸರಕ್ಕೂ ಹಾನಿಯಾಗದೇ, ಭಕ್ತರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗದಂತಹ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಬೇಕು' ಎಂದು ಆಗ್ರಹಿಸಿದರು.

'ಇತ್ತೀಚೆಗೆ ಮಾಲಿನ್ಯ ನಿಯಂತ್ರಣ ಮಂಡಳಿಯು ತನ್ನ ಆದೇಶದಲ್ಲಿ ಪಿಒಪಿ ಮೂರ್ತಿ, ವಿಗ್ರಹದ ಎತ್ತರ, ಧಾರ್ಮಿಕ ಆಚರಣೆಯ ಬಗ್ಗೆ ಕೆಲವು ನಿರ್ಬಂಧನೆಗಳನ್ನು ವಿಧಿಸಿದೆ. ಸಾರ್ವಜನಿಕ ಗಣೇಶೋತ್ಸವ ಆಚರಿಸಲು ಅಡ್ಡಪಡಿಸಲಾಗದು. ಮಂಡಳಿಯ ಈ ಧೋರಣೆಯಿಂದ ನಮ್ಮ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟಾಗುತ್ತಿದೆ' ಎಂದು ಆರೋಪಿಸಿದರು.

'ಪಿಒಪಿ ಮೂರ್ತಿಗಳನ್ನು ಅಲಂಕಾರಕ್ಕೆ ಮಾತ್ರ ಬಳಸಿ, ಮುಂದಿನ ವರ್ಷವೂ ಇದೇ ಮೂರ್ತಿಗಳನ್ನು ಪ್ರತಿಷ್ಠಾಪಿಸಬೇಕು. ಪಿಒಪಿ ಮೂರ್ತಿಗಳ ಪಕ್ಕದಲ್ಲಿ ಮಣ್ಣಿನ ಗಣೇಶ ವಿಗ್ರಹಗಳನ್ನು ಇರಿಸಿ, ಪೂಜಿಸಿ ವಿಸರ್ಜನೆ ಮಾಡುವಂತೆ ಸೂಚಿಸಬೇಕು. ಪಿಒಪಿ ಮೂರ್ತಿಗಳ ತಯಾರಿಕೆ ಮತ್ತು ಮಾರಾಟಕ್ಕೆ ಯಾವುದೇ ಅಡಚಣೆಯಾಗದಂತೆ ನಿರ್ದೇಶಿಸಬೇಕು' ಎಂದು ಒತ್ತಾಯಿಸಿದರು.

'ಉತ್ಸವ ಮೂರ್ತಿ ಬಿಡುವ ಕೆರೆ, ಕಲ್ಯಾಣಿ ಸ್ಥಳಗಳಲ್ಲಿ ಅಗತ್ಯ ಸೌಲಭ್ಯ ಕಲ್ಪಿಸಬೇಕು. ಅನೇಕ ವರ್ಷಗಳಿಂದ ಸಾರ್ವಜನಿಕ ಗಣೇಶೋತ್ಸವ ಆಚರಿಸುವ ಸಮಿತಿಗಳಿಗೆ ಐದು ವರ್ಷದ ಪರವಾನಗಿ ನೀಡಬೇಕು. ಧ್ವನಿವರ್ಧಕ (ಡಿಜೆ) ಬಳಕೆಗೆ ಯಾವುದೇ ನಿರ್ಬಂಧ ಇರಬಾರದು. ಗೌರಿ–ಗಣೇಶ ಹಬ್ಬದ ಸಂದರ್ಭದಲ್ಲಿ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ (ಎಫ್‌ಎಸ್‌ಎಸ್‌ಎಐ) ಪರವಾನಗಿ ಪಡೆದಿರುವ ವ್ಯಕ್ತಿಗಳಿಂದ ಮಾತ್ರ ಪ್ರಸಾದ ವಿನಿಯೋಗಿಸಬೇಕು ಎಂದು ಆರೋಗ್ಯ ಇಲಾಖೆ ಹೊರಡಿಸಿರುವ ಆದೇಶವನ್ನು ಕೂಡಲೇ ಹಿಂಪಡೆಯಬೇಕು' ಎಂದು ಆಗ್ರಹಿಸಿದರು.

ಗಣೇಶ ಮೂರ್ತಿ ವಿಸರ್ಜನೆಗೆ 462 ಮೊಬೈಲ್ ಟ್ಯಾಂಕ್



ಬೆಂಗಳೂರು: ಗಣೇಶ ಮೂರ್ತಿ ವಿಸರ್ಜನೆಗಾಗಿ ಸಂಚಾರಿ ವಾಹನ (ಮೊಬೈಲ್ ಟ್ಯಾಂಕ್) ಹಾಗೂ ಕೆರೆಗಳಲ್ಲಿ ಕಲ್ಯಾಣಿಗಳ ವ್ಯವಸ್ಥೆ ಮಾಡಲಾಗಿದೆ ಎಂದು ಬಿಬಿಎಂಪಿ ತಿಳಿಸಿದೆ.

41 ಕೆರೆ ಅಂಗಳದಲ್ಲಿ ಶಾಶ್ವತ/ ತಾತ್ಕಾಲಿಕ ಕಲ್ಯಾಣಿಗಳು, 462 ತಾತ್ಕಾಲಿಕ ಮೊಬೈಲ್ ಟ್ಯಾಂಕ್‌ಗಳ ವ್ಯವಸ್ಥೆಯನ್ನು ವಾರ್ಡ್‌ಗಳಲ್ಲಿ ಮಾಡಲಾಗಿದೆ. ಗಣೇಶ ಮೂರ್ತಿ ಪ್ರತಿಷ್ಠಾಪನೆಗಾಗಿ ಅನುಮತಿ ಪಡೆಯಲು 63 ಏಕಗವಾಕ್ಷಿ ಕೇಂದ್ರಗಳನ್ನು ತೆರೆಯಲಾಗಿದೆ.

ಗಣೇಶ ಮೂರ್ತಿ ವಿಸರ್ಜನೆಗೆ ಸಂಬಂಧಿಸಿದಂತೆ ಮೇಲ್ವಿಚಾರಣೆ ಹಾಗೂ ಹೆಚ್ಚಿನ ಮಾಹಿತಿಗಾಗಿ ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಅದರ ಸಂಪೂರ್ಣ ವಿವರಗಳನ್ನು ಪಾಲಿಕೆ ವೆಬ್‌ಸೈಟ್ https://apps.bbmpgov.in/ganesh2024/ ನಲ್ಲಿ ಪಡೆದುಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಮಾಂಸ ಮಾರಾಟ ನಿಷೇಧ: ಗಣೇಶ ಚತುರ್ಥಿಯಾದ ಶನಿವಾರ (ಸೆಪ್ಟೆಂಬರ್ 7) ಕಸಾಯಿಖಾನೆಯಲ್ಲಿ ಪ್ರಾಣಿವಧೆ ಹಾಗೂ ಮಾರಾಟ ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಬಿಬಿಎಂಪಿ ಪಶುಪಾಲನೆ ವಿಭಾಗದ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಬಾಲಕಿಯ ಮೇಲೆ ಅತ್ಯಾಚಾರ: 30 ವರ್ಷ ಜೈಲು ಶಿಕ್ಷೆ

ಮೈಸೂರು: ಐದು ವರ್ಷದ ಬಾಲಕಿಯನ್ನು ಮನೆಗೆ ಕರೆದು, ಅತ್ಯಾಚಾರ ಎಸಗಿದ್ದ ಅಪರಾಧಿ, ತಿ.ನರಸೀಪುರ ತಾಲ್ಲೂಕಿನ ಮಲಿಯೂರು ಗ್ರಾಮದ ಸುರೇಶ್‌ಗೆ ಪೋಕ್ಸೋ ವಿಶೇಷ ನ್ಯಾಯಾಲಯವು 30 ವರ್ಷ ಜೈಲು ಶಿಕ್ಷೆ, ₹1 ಲಕ್ಷ ದಂಡ ವಿಧಿಸಿದೆ.

2023ರ ಜುಲೈ 15ರಂದು ಬಾಲಕಿಯ ಪೋಷಕರಿಲ್ಲದ ವೇಳೆ ಘಟನೆ ನಡೆದಿತ್ತು. ನಂತರ ಆಕೆ ನೀಡಿದ ಮಾಹಿತಿ ಮೇರೆಗೆ ತಾಯಿ ಬನ್ನೂರು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಆ ಠಾಣೆಯ ಅಂದಿನ ಇನ್‌ಸ್ಪೆಕ್ಟರ್ ಟಿ.ಎಸ್.ಲೋಲಾಕ್ಷಿ ಅವರು ತನಿಖೆ ನಡೆಸಿ ದೋಷಾರೋಪಣಾಪಟ್ಟಿ ಸಲ್ಲಿಸಿದ್ದರು.

ದಯಾನಂದ, ಸತೀಶ್‌ಗೆ ಕಸಾಪ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ದಯಾನಂದ ಮೂರ್ತಿ

ಎಂ.ಎನ್.ಸತೀಶ್ ಕುಮಾರ್

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಸಿಬ್ಬಂದಿಗೆ ನೀಡುವ 'ಶ್ರೀಮತಿ ಎಸ್.ರಮಾದೇವಿ ವಿಶ್ವೇಶ್ವರಯ್ಯ ದತ್ತಿ ಪ್ರಶಸ್ತಿ'ಗೆ ದಯಾನಂದ ಮೂರ್ತಿ, 'ಶ್ರೀಮತಿ ವಿ.ಗೌರಮ್ಮ ಗಂಗಾಧರಯ್ಯ ಮಕ್ಕಳ ಸಿಬ್ಬಂದಿ ಸೇವಾ ಪ್ರಶಸ್ತಿ'ಗೆ ಎಂ.ಎನ್.ಸತೀಶ್ ಕುಮಾರ್ ಆಯ್ಕೆಯಾಗಿದ್ದಾರೆ.

ಎಸ್.ರಮಾದೇವಿ ವಿಶ್ವೇಶ್ವರಯ್ಯ ಹಾಗೂ ಎಂ.ಜಿ.ನಾಗರಾಜ್ ಅವರು ಈ ದತ್ತಿ ಪ್ರಶಸ್ತಿಗಳನ್ನು ಸ್ಥಾಪಿಸಿದ್ದಾರೆ. ಕನಿಷ್ಠ 10 ವರ್ಷಗಳು ಪರಿಷತ್ತಿನಲ್ಲಿ ಸೇವೆ ಸಲ್ಲಿಸಿದ ಸಿಬ್ಬಂದಿಗೆ ಈ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಮ್ಯೂಸಿಕಲ್ ವಿಡಿಯೊ ಸಾಂಗ್ ಒಂದು ವಿಶಿಷ್ಟ ಪುಸ್ತಕ ಬಿಡುಗಡೆ: ಉಪಸ್ಥಿತಿ: ದೊಡ್ಡರಂಗೇಗೌಡ, ತಾರಾ ಅನೂರಾಧಾ, ಎಸ್. ನಾರಾಯಣ್, ವಿಜಯಲಕ್ಷ್ಮಿ ದೇಶಮಾನೆ, ನಿಡಸಾಲೆ ಪುಟ್ಟಸ್ವಾಮಯ್ಯ, ವೇಲು, ಆಯೋಜನೆ: ಕಾವ್ಯಸ್ಪಂದನ ಪಬ್ಲಿಕೇಷನ್, ಸ್ಥಳ: ಜಿ.ಟಿ. ಮಾಲ್, ಪ್ರಸನ್ನ ಥಿಯೇಟರ್ ಪಕ್ಕ, ಮಾಗಡಿ ರಸ್ತೆ, ಮಧ್ಯಾಹ್ನ 1

ದಿ ಅನ್‌ನೌನ್ ಆರ್ಟ್ ಗ್ರೂಪ್‌ನ ಕಲಾಕೃತಿಗಳ ಪ್ರದರ್ಶನ: ಚಾಲನೆ: ಪ್ರಿಯಾಂಕಾ ಮೇರಿ ಫ್ರಾನ್ಸಿಸ್, ಸ್ಥಳ: ದ್ವಿಜ್ ಆರ್ಟ್ ಗ್ಯಾಲರಿ, ರೆಸಿಡೆನ್ಸಿ ರಸ್ತೆ, ಸಂಜೆ 5.30

ವಿವಿಧ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಯನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಇ-ಮೇಲ್ ವಿಳಾಸ: nagaradalli_indu@prajavani.co.in

ಭಾರತೀಯ ನಾರು ನಿಗಮ ನಿಯಮಿತ
(ಭಾರತ ಸರ್ಕಾರದ ಉದ್ದಿಮೆ)
ಪಾಟ್ಸಾನ್ ಭವನ, 3ನೇ & 4ನೇ ಮಹಡಿ,
ಸಿಎಫ್ ಬ್ಲಾಕ್, ಆಕ್ಷನ್ ಏರಿಯಾ-1, ಕೋಲ್ಕತಾ, ಪಶ್ಚಿಮ ಬಂಗಾಳ – 700156
ಫೋನ್: 033-2253-1100, ಫ್ಯಾಕ್ಸ್: 033-2252-1771
ಸಿಐಎನ್: U17232WB1971GOI027958
ನಾನ್–ಎಕ್ಸಿಕ್ಯೂಟಿವ್ ಹುದ್ದೆಗಳಿಗೆ (ರೆಗ್ಯೂಲಾರ್) ಹೊಸ ನೇಮಕಾತಿ ಮತ್ತು ವಿಶೇಷ ನೇಮಕಾತಿ ಚಾಲನೆ (ಎಸ್‌ಆರ್‌ಡಿ) –1ನೇ ಪ್ರಯತ್ನ
ಕೆಳಕಂಡ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ
ಅಕೌಂಟಂಟ್: 23 ಹುದ್ದೆಗಳು [ಎಸ್‌ಸಿ–4, ಎಸ್‌ಟಿ–2, ಒಬಿಎನ್ (ಎನ್‌ಸಿಎಲ್)–5, ಇಡಬ್ಲ್ಯುಎಸ್–2, ಯುಆರ್–10]
ಜೂನಿಯರ್ ಅಸಿಸ್ಟೆಂಟ್: 25 ಹುದ್ದೆಗಳು [ಎಸ್‌ಸಿ–4, ಎಸ್‌ಟಿ–2, ಒಬಿಎನ್ (ಎನ್‌ಸಿಎಲ್)–6, ಇಡಬ್ಲ್ಯುಎಸ್–2, ಯುಆರ್–11]
ಜೂನಿಯರ್ ಇನಸ್ಪೆಕ್ಟರ್: 42 ಹುದ್ದೆಗಳು [ಎಸ್‌ಸಿ–7, ಎಸ್‌ಟಿ–4, ಒಬಿಎನ್ (ಎನ್‌ಸಿಎಲ್)–10, ಇಡಬ್ಲ್ಯುಎಸ್–4, ಯುಆರ್–17]
ವಿವರವಾದ ಅಧಿಸೂಚನೆಗಾಗಿ, ದಯವಿಟ್ಟು ಸಂದರ್ಶಿಸಿ www.jutecorp.in
ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 27–ಸೆಪ್ಟಂಬರ್–2024
CBC 41122/12/0013/2425

PUBLIC NOTICE
My client Smt. Prema.V W/O Raghavendra V, Age 41 years, R/at No.39, 1st Floor, Uma Enclave, 5th Main, Sarvabhouma Nagar, Chikkalasandra, Bengaluru -560061, my client has lost the original registered sale deed dated 31-3-2004 registered as document No.BNG(U)-BNG(S) 27566- 2003-2004, of Book-1, at the office of Sub Registrar, Bangalore South Taluk, Bangalore in respect of the property bearing No.30, Khatha NO.18, Situated at Begur Village, Begur Hobli, Bangalore South Taluk, Bengaluru, measuring east to west 30 feet and north to south 40 feet within the limit of the Bruhat Bangalore Mahanagara Palike. Further my client has lodge a complaint for the loss of the aforesaid document under section 155 of CrPC, vide Serial NO.1212020, dated 27-8-2024, Police Unit Bengaluru City. By this notice the public in general are hereby informed to kindly return the same if found to the under signed address.
(AFZAL KHAN) Advocate
No.120/12, 2nd floor, New M M Complex, Chikka bazaar road, Tasker Town, Bangalore-560 051 Mob.No.9845615630

ಬಿಜಿಎಸ್‌ಇ ಫೈನಾನ್ಶ್ಯಲ್ಸ್ ಲಿಮಿಟೆಡ್
CIN: U67120KA1999PLC025860
ಸ್ಟಾಕ್ ಎಕ್ಸ್‌ಚೇಂಜ್ ಟವರ್ಸ್, 51, 4ನೇ ಕ್ರಾಸ್, ಜೆ.ಸಿ. ರಸ್ತೆ, ಬೆಂಗಳೂರು 560027
ಫೋನ್: 080–41575234 / 66673325;
ಇಮೇಲ್: cs@bfsl.co.in; ವೆಬ್‌ಸೈಟ್: www.bfsl.co.in
25ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆ
ಎಜಿಎಮ್ ಸೂಚನೆ: ಈ ಮೂಲಕ ಬಿಜಿಎಸ್‌ಇ ಫೈನಾನ್ಶ್ಯಲ್ಸ್ ಲಿಮಿಟೆಡ್‌ನ ಸದಸ್ಯರೆಲ್ಲರಿಗೂ ಸೂಚನೆಯನ್ನು ನೀಡಲಾಗುತ್ತಿದೆ, ಏನೆಂದರೆ ಕಂಪನಿಯ 25ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು (AGM) ಶನಿವಾರ, 28ನೇ ಸೆಪ್ಟೆಂಬರ್, 2024ರಂದು ಬೆಳಗ್ಗೆ 09.30 ಗಂಟೆಗೆ (ಭಾ.ಕಾ.) ಒಂದು ಸಾಮಾನ್ಯ ಸ್ಥಳದಲ್ಲಿ ಸದಸ್ಯರ ಭೌತಿಕ ಉಪಸ್ಥಿತಿ ಇಲ್ಲದಂತೆಯೇ, ಕಂಪನಿಗಳ ಅಧಿನಿಯಮ, 2013ರ ಅನ್ವಯವಾಗುವ ನಿಬಂಧನೆಗಳ ಅನುಸಾರ, ಅವನ್ನು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು (MCA) ಹೊರಡಿಸಿರುವ ಈ ಮುಂದಿನ ಸಾಮಾನ್ಯ ಸುತ್ತೋಲೆಗಳ ಜೊತೆಗೆ ಓದಿಕೊಂಡಂತೆ: ದಿ.08ನೇ ಏಪ್ರಿಲ್ 2020ರ ಸಂ. 14/2020, ದಿ.13ನೇ ಏಪ್ರಿಲ್ 2020ರ 17/2020, ದಿ.15ನೇ ಜೂನ್, 2020ರ 22/2020, ದಿ.28ನೇ ಸೆಪ್ಟೆಂಬರ್ 2020ರ 33/2020, ದಿ.31ನೇ ಡಿಸೆಂಬರ್ 2020ರ 39/2020, ದಿ.23ನೇ ಜೂನ್, 2021ರ 10/2021, ಮತ್ತು ದಿ.08ನೇ ಡಿಸೆಂಬರ್ 2021ರ 19/2021, ದಿ.05ನೇ ಮೇ, 2022ರ 02/2022; ಮತ್ತು ದಿನಾಂಕ 28.12.2022ರ ಸಾಮಾನ್ಯ ಸುತ್ತೋಲೆ 10/2022 ಮತ್ತು ದಿನಾಂಕ 28.12.2022ರ ಸಾಮಾನ್ಯ ಸುತ್ತೋಲೆ 11/2022, ಹಾಗೂ ಈ ಕುರಿತಂತೆ ಹೊರಡಿಸಿದ ಇತರ ಸುತ್ತೋಲೆಗಳ ಪ್ರಕಾರ, ಇವುಗಳಲ್ಲಿ ಇತ್ತೀಚಿನದೆಂದರೆ ದಿನಾಂಕ 25ನೇ ಸೆಪ್ಟೆಂಬರ್ 2023ರ 09/2023, ಇವು ವಾರ್ಷಿಕ ಸಾಮಾನ್ಯ ಸಭೆಯನ್ನು ವಿಡಿಯೋ ಕಾನ್ಫರೆನ್ಸಿಂಗ್ ("ವಿ.ಸಿ.")ಯ ಅಥವಾ ಇತರ ಆಡಿಯೋ ವಿಷುಯಲ್ (ಓವಿಎಮ್) ಮಾಧ್ಯಮಗಳ ಮೂಲಕ, ಒಂದು ಸಾಮಾನ್ಯ ಸ್ಥಳದಲ್ಲಿ ಸದಸ್ಯರ ಭೌತಿಕ ಉಪಸ್ಥಿತಿ ಇಲ್ಲದಂತೆಯೇ ನಡೆಸಲು ಅನುಮತಿಸುತ್ತವೆ. ಮತ್ತು ಇದು 'ಕೋವಿಡ್–19ರ ಬೆದರಿಕೆಯ ಕಾರಣದಿಂದಾಗಿ ಕಂಪನಿಗಳು ಸಾಮಾನ್ಯ ಮತ್ತು ವಿಶೇಷ ನಿರ್ಣಯಗಳನ್ನು ಅಂಗೀಕರಿಸುವ ಬಗ್ಗೆ ಸ್ಪಷ್ಟೀಕರಣ ನೀಡುವ ಸಲುವಾಗಿ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು (MCA) ಕಂಪನಿಗಳ ಕಾಯಿದೆ, 2013 ಮತ್ತು ಅದರ ಅಡಿಯಲ್ಲಿ ಮಾಡಿದ ನಿಯಮಗಳಿಗೆ ಮತ್ತು ದಿನಾಂಕ ಜನವರಿ 13, 2021ರ ಸಾಮಾನ್ಯ ಸುತ್ತೋಲೆ 02/2021 (ಒಟ್ಟಾಗಿ ಇವುಗಳನ್ನು 'ಎಂಸಿಎ ಸುತ್ತೋಲೆಗಳು' ಎಂದು ಉಲ್ಲೇಖಿಸಿದೆ) ಇದಕ್ಕೆ ಸಂಬಂಧಿಸಿದೆ.
ದಾಖಲೆಗಳ ಲಭ್ಯತೆ: ಯಾರೆಲ್ಲ ಸದಸ್ಯರು ತಮ್ಮ ಇಮೇಲ್ ವಿಳಾಸಗಳನ್ನು ಡಿಪಾಸಿಟರಿ ಪಾರ್ಟಿಸಿಪೆಂಟರು (DPs) ಮತ್ತು ಕಂಪನಿಯೊಂದಿಗೆ/ರಿಜಿಸ್ಟ್ರಾರ್ ಮತ್ತು ಟ್ರಾನ್ಸ್ಫರ್ ಏಜೆಂಟರೊಂದಿಗೆ (RTA) ನೋಂದಾಯಿಸಿಕೊಂಡಿದ್ದಾರೋ ಅಂತಹ ಸದಸ್ಯರೆಲ್ಲರಿಗೂ ಕಂಪನಿಯ 25ನೇ ಎಜಿಎಮ್ ಸೂಚನೆಯ ಮತ್ತು 2023–24ನೇ ಸಾಲಿನ ವಾರ್ಷಿಕ ವರದಿಯ ಪ್ರತಿಗಳನ್ನು ಕಳುಹಿಸಲಾಗಿದೆ. ಜೊತೆಗೆ, ಈ ದಾಖಲೆಗಳು ಕಂಪನಿಯ ವೆಬ್‌ಸೈಟ್ www.bfsl.co.in ನಲ್ಲೂ ಲಭ್ಯವಿರುವಂತೆ ವ್ಯವಸ್ಥೆ ಮಾಡಲಾಗಿದೆ.
ಇ–ಮತದಾನ: ಸದಸ್ಯರು ಬುಧವಾರ, 25ನೇ ಸೆಪ್ಟೆಂಬರ್ 2024 ಬೆಳಗ್ಗೆ 09:00 (ಭಾ.ಕಾ) ರಿಂದ ಶುಕ್ರವಾರ, 27ನೇ ಸೆಪ್ಟೆಂಬರ್ 2024 ಸಂಜೆ 5:00 (ಭಾ.ಕಾ) ವರೆಗೆ ಆನ್‌ಲೈನ್‌ನಲ್ಲಿ ಮತ ಚಲಾಯಿಸಬಹುದು. ರಿಮೋಟ್ ಇ–ವೋಟಿಂಗ್ ಅವಧಿ ಮುಗಿದೊಡನೆ ಸದರಿ ಸೌಲಭ್ಯವನ್ನು ಸ್ಥಗಿತಗೊಳಿಸಲಾಗುತ್ತದೆ. ಅಂತಿಮ ದಿನವಾದ ಶುಕ್ರವಾರ, 20ನೇ ಸೆಪ್ಟೆಂಬರ್ 2024 ನಂತರ ಕಂಪನಿಯ ಸದಸ್ಯರಾದ ವ್ಯಕ್ತಿಗಳು ಈ ಎಜಿಎಮ್ ಸೂಚನೆಯನ್ನು ತಮ್ಮ ಮಾಹಿತಿಗಾಗಿ ಮಾತ್ರವೇ ಎಂದು ಪರಿಗಣಿಸಬೇಕು.
ಯಾವ ಸದಸ್ಯರು ಡೀಮ್ಯಾಟ್ ಅಥವಾ ಭೌತಿಕ ರೂಪದಲ್ಲಿ ತಮ್ಮ ಷೇರುಗಳನ್ನು ಹೊದಿರುವರೋ, ಅಥವಾ ಯಾರು ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿಯೊಂದಿಗೆ ನೋಂದಾಯಿಸಿಕೊಂಡಿಲ್ಲವೋ, ಅಂತಹ ಸದಸ್ಯರು ಸಭೆಯು ನಡೆಯುವ ಅವಧಿಯಲ್ಲಿ ರಿಮೋಟ್ ಇ–ಮತದಾನ ಅಥವಾ ಇ–ಮತದಾನದ ಮೂಲಕ ತಮ್ಮ ಮತಗಳನ್ನು ಚಲಾಯಿಸಬಹುದು. ಭೌತಿಕರೂಪದಲ್ಲಿ ಷೇರು(ಗಳನ್ನು) ಹೊಂದಿರುವ ಸದಸ್ಯರು ಕಂಪನಿಯ enquiry@bfsl.co.in ಅಥವಾ cs@bfsl.co.in ಇಮೇಲ್ ವಿಳಾಸಕ್ಕೆ ಬರೆದು ತಾವು ಹೊಂದಿರುವ ಷೇರುಗಳ ಕುರಿತಾದ ಅಗತ್ಯ ವಿವರಗಳನ್ನು ಮತ್ತು ದಾಖಲೆಗಳನ್ನು ನೀಡಿ ತಮ್ಮ ಇಮೇಲ್ ಐಡಿಗಳನ್ನು ಕಂಪನಿಯೊಂದಿಗೆ ನೋಂದಾಯಿಸಿಕೊಳ್ಳಬಹುದು; ವಿದ್ಯುನ್ಮಾನರೂಪದಲ್ಲಿ ಷೇರು(ಗಳನ್ನು) ಹೊಂದಿರುವ ಸದಸ್ಯರು ಕಂಪನಿಯಿಂದ ಬರುವ ಎಲ್ಲ ಸಂವಹನವನ್ನೂ ವಿದ್ಯುನ್ಮಾನರೂಪದಲ್ಲಿ ಸ್ವೀಕರಿಸಲು ಸಾಧ್ಯವಾಗುವಂತೆ ತಮಗೆ ಸಂಬಂಧಪಟ್ಟ ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೆ (DPs) ತಮ್ಮ ಇಮೇಲ್ ವಿಳಾಸಗಳನ್ನು ದಾಖಲಿಸಿಕೊಳ್ಳಬೇಕಾಗಿ / ನವೀಕರಿಸಬೇಕಾಗಿ ಕೋರುತ್ತೇವೆ.
ವಿಸಿ ಮೂಲಕ ಸಭೆಯನ್ನು ಪ್ರವೇಶಿಸಲು ಮತ್ತು ಭಾಗವಹಿಸಲು ತಾಂತ್ರಿಕ ನೆರವು ಅಗತ್ಯವಿರುವ ಸದಸ್ಯರು ಇಮೇಲ್–ಐಡಿ helpdesk.evoting@cdslindia.comಗೆ ವಿನಂತಿಯನ್ನು ಕಳುಹಿಸುವ ಮೂಲಕ ಸಹಾಯವಾಣಿಯನ್ನು ಸಂಪರ್ಕಿಸಬಹುದು ಅಥವಾ 022– 23058738 ಮತ್ತು 022–23058542–43 ಮೂಲಕ ಇ–ಮತದಾನ ಸೇವೆ ಒದಗಿಸುವ ಸೆಂಟ್ರಲ್ ಡಿಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್) ಅನ್ನು ಸಂಪರ್ಕಿಸಬಹುದು.
ಪುಸ್ತಕ ಮುಚ್ಚಿರುವ/ಕಟಾಫ್ ದಿನಾಂಕ: ವಾರ್ಷಿಕ ಸಾಮಾನ್ಯ ಸಭೆಯ ಉದ್ದೇಶಕ್ಕಾಗಿ ಸದಸ್ಯರ ನೋಂದಣಿ ಮತ್ತು ಷೇರು ವರ್ಗಾವಣೆ ಪುಸ್ತಕವನ್ನು ಶನಿವಾರ 21–09–2024ರಿಂದ ಶನಿವಾರ 28–09–2024ರವರೆಗೆ (ಎರಡು ದಿನಗಳೂ ಸೇರಿ) ಮುಚ್ಚಲಾಗುತ್ತದೆ. ಮತ್ತು ಸದಸ್ಯರ ಮತದಾನದ ಹಕ್ಕುಗಳು ಕಟಾಫ್ ದಿನಾಂಕದಂದು (ಅಂದರೆ 20ನೇ ಸೆಪ್ಟೆಂಬರ್ 2024) ಕಂಪನಿಯ ಪಾವತಿಸಿದ ಇಕ್ವಿಟಿ ಷೇರು ಬಂಡವಾಳದಲ್ಲಿನ ಅವರ ಷೇರುಗಳ ಅನುಪಾತದಲ್ಲಿರುತ್ತದೆ.
ನಿರ್ದೇಶಕರ ಮಂಡಲಿಯ ಆದೇಶದ ಮೇರೆಗೆ
ಸಹಿ/– (ಪ್ರಮೋದ್ ಗೌತಮಚಂದ್ ಜೈನ್)
ಪೂರ್ಣಾವಧಿ ನಿರ್ದೇಶಕರು
ಸ್ಥಳ: ಬೆಂಗಳೂರು
ದಿನಾಂಕ: 02/09/2024

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ,
ಎಲೆಕ್ಟ್ರೋ–ಆಪ್ಟಿಕ್ಸ್ ಸಿಸ್ಟಮ್‌ಗಳಿಗಾಗಿ ಪ್ರಯೋಗಾಲಯ (ಎಲ್‌ಇಒಎಸ್)
ಪೀಣ್ಯ, ಬೆಂಗಳೂರು–560058, ಎಲ್‌ಇಒಎಸ್ ನಿರ್ಮಾಣ ಮತ್ತು ನಿರ್ವಹಣಾ ಸಮೂಹ (ಎಲ್‌ಸಿಎಂಜಿ)
(ದೂರವಾಣಿ: (080)–22685088, 5193, 5093, 5086, ಫ್ಯಾಕ್ಸ್: (080)–28392310]
ಸಂಕ್ಷಿಪ್ತ ಇ–ಟೆಂಡರ್ (ಎನ್‌ಐಇಟಿ) ಆಹ್ವಾನಿಸುವ ಪ್ರಕಟಣೆ
ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಕ್ಕಾಗಿ ಐಟಂ ದರದ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ : ಐಎಸ್‌ಆರ್‌ಎಡಿ ಕಟ್ಟಡ, ಐಎಸ್‌ಆರ್‌ಎಡಿ ಕ್ಯಾಂಪಸ್, ಪೀಣ್ಯ, ಬೆಂಗಳೂರು–58 ನಲ್ಲಿ ಪ್ರಸ್ತಾವಿತ ನವೀಕರಣ ಕಾರ್ಯಗಳು. ಎನ್‌ಐಇಟಿ: CMG/LEOS/2024-25/LMN-08, ದಿನಾಂಕ : 29.08.2024, ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ : ರೂ. 21.68 ಲಕ್ಷಗಳು, ಇಎಂಡಿ ರೂ.43,355/– ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವಧಿ: 03 ತಿಂಗಳು, ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ : ತೆರೆಯುವ ದಿನಾಂಕ : 02.09.2024, ಮುಕ್ತಾಯವಾಗುವ ದಿನಾಂಕ : 18.09.2024
ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ : ಎಲ್‌ಇಒಎಸ್ ಕ್ಯಾಂಪಸ್, ಪೀಣ್ಯ, ಬೆಂಗಳೂರು–58 ರಲ್ಲಿ ಮೆಕ್ಯಾನಿಕಲ್ ಕಾರ್ಯಾಗಾರವನ್ನು ಸ್ಥಾಪಿಸಲು ಉದ್ದೇಶಿತ ಸಿವಿಲ್ ಕೆಲಸಗಳು. ಎನ್‌ಐಇಟಿ: CMG/LEOS/2024-25/LMN-07, ದಿನಾಂಕ : 29.08.2024, ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ : ರೂ. 6.95 ಲಕ್ಷಗಳು, ಇಎಂಡಿ ರೂ.13,909/– ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವಧಿ: 02 ತಿಂಗಳು, ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ : ತೆರೆಯುವ ದಿನಾಂಕ : 02.09.2024, ಮುಕ್ತಾಯವಾಗುವ ದಿನಾಂಕ : 18.09.2024
ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ : ಎಲ್‌ಇಒಎಸ್ ಕ್ಯಾಂಪಸ್, ಪೀಣ್ಯ, ಬೆಂಗಳೂರು–58 ರ ಉಪ ವಿಭಾಗದಲ್ಲಿ ಅಸ್ತಿತ್ವದಲ್ಲಿರುವ ಮುಖ್ಯ ಎಂವಿ ಪ್ಯಾನೆಲ್‌ನ ವಿಸ್ತರಣೆ, ಹೊಸ ಚೇಂಜ್‌ಓವರ್ ಸ್ವಿಚ್ ಪ್ಯಾನೆಲ್ ಮತ್ತು ಡ್ರೈ ಟೈಪ್ ಟ್ರಾನ್ಸ್‌ಫಾರ್ಮರ್ಸ್ ಒಂದು–ಬಾರಿ ಸೇವೆಯನ್ನು ಒದಗಿಸುವುದು. ಎನ್‌ಐಇಟಿ: LEOS/CMG/EMN-07/2024-25, ದಿನಾಂಕ : 02.09.2024, ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ : ರೂ. 11.91 ಲಕ್ಷಗಳು, ಇಎಂಡಿ ರೂ.23,826/– ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವಧಿ: 04 ತಿಂಗಳು, ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ : ತೆರೆಯುವ ದಿನಾಂಕ : 04.09.2024, ಮುಕ್ತಾಯವಾಗುವ ದಿನಾಂಕ : 20.09.2024
ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ : ಎಲ್‌ಇಒಎಸ್ ಕ್ಯಾಂಪಸ್, ಪೀಣ್ಯ, ಬೆಂಗಳೂರು–560058ನಲ್ಲಿ ಒಂದು ವರ್ಷದ ಅವಧಿಗೆ ಎಲ್‌ಟಿ ಕೇಬಲ್‌ಗಳ ಪೂರೈಕೆ, ಹಾಕುವಿಕೆ ಮತ್ತು ಮುಕ್ತಾಯದ ದರ ಒಪ್ಪಂದ, ಎನ್‌ಐಇಟಿ: LEOS/CMG/EMN-10/2023-24, ದಿನಾಂಕ : 04.09.2024, ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ : ರೂ. 12.47 ಲಕ್ಷಗಳು, ಇಎಂಡಿ ರೂ.24,940/– ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವದಿ: 12 ತಿಂಗಳು (1 ವರ್ಷ), ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ: ತೆರೆಯುವ ದಿನಾಂಕ : 06.09.2024, ಮುಕ್ತಾಯವಾಗುವ ದಿನಾಂಕ : 24.09.2024.
ಆಸಕ್ತ ಟೆಂಡರುದಾರರು ಇ–ಟೆಂಡರ್ (ಎನ್‌ಐಇಟಿ) ಆಹ್ವಾನದ ಪ್ರಕಟಣೆಯ ಅರ್ಹತಾ ಮಾನದಂಡ ಮತ್ತು ಇತರೆ ವಿವರವನ್ನು www.isro.gov.in ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು ಮತ್ತು ಟೆಂಡರ್ ದಾಖಲೆಗಳನ್ನು www.tenderwizard.com/ISRO ನಿಂದ ಡೌನ್‌ಲೋಡ್ ಮಾಡಬಹುದು.
ಸಹಿ/– ಸಮೂಹ ನಿರ್ದೇಶಕ
(ನಿರ್ಮಾಣ ಮತ್ತು ನಿರ್ವಹಣಾ ಸಮೂಹ) (ಸಿ&ಎಂಜಿ) ಯುಆರ್‌ಎಸ್‌ಸಿ, ಬೆಂಗಳೂರು.

ದಿ ಹನುಮಂತನಗರ ಸಹಕಾರಿ ಬ್ಯಾಂಕ್ ನಿಯಮಿತ
ಪ್ರಧಾನ ಕಛೇರಿ : # 7/29, 3ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಹನುಮಂತನಗರ, ಬೆಂಗಳೂರು–560019. ದೂರವಾಣಿ ಸಂಖ್ಯೆ : 080–22428985, 26507976
E-mail: headoffice@hnrcbank.in Website: www.hnrcbank.in
ಪ್ರಕಟಣೆ
ಗೌರವಾನ್ವಿತ ಸದಸ್ಯರುಗಳೇ,
ಈ ಮೂಲಕ ತಮ್ಮ ಗಮನಕ್ಕೆ ತರಲಿಚ್ಛಿಸುವುದೇನೆಂದರೆ ಬ್ಯಾಂಕಿನ 59ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ರಾಮೇಗೌಡ ರವರ ಅಧ್ಯಕ್ಷತೆಯಲ್ಲಿ ದಿನಾಂಕ 08ನೇ ಸೆಪ್ಟೆಂಬರ್ 2024ರ ಭಾನುವಾರ ಬೆಳಿಗ್ಗೆ 10.00 ಗಂಟೆಗೆ ಪಿ.ಇ.ಎಸ್. ಕಾಲೇಜ್ ಆವರಣ, ಕುವೆಂಪು ಸಭಾಂಗಣ (PES College Auditorium), ಶ್ರೀನಗರ 50 ಅಡಿರಸ್ತೆ, ಬನಶಂಕರಿ 1ನೇ ಹಂತ, ಬೆಂಗಳೂರು–560050 ಇಲ್ಲಿ ನಡೆಸಲಾಗುತ್ತದೆ. ಈ ಬಗ್ಗೆ ಮಾನ್ಯ ಸದಸ್ಯರೆಲ್ಲರಿಗೂ ತಿಳುವಳಿಕೆ ಪತ್ರಗಳನ್ನು ಈಗಾಗಲೇ ಅಂಚೆ ಮತ್ತು SMS ಮೂಲಕ ತಿಳಿಸಲಾಗಿದೆ. ತಿಳುವಳಿಕೆ ಪತ್ರ ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ನೋಟೀಸ್ ಎಂದು ಪರಿಗಣಿಸಿ ವಾರ್ಷಿಕ ಮಹಾಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವ ಮೂಲಕ ಸಭೆ ಯಶಸ್ವಿಯಾಗಲು ಸಹಕರಿಸಬೇಕಾಗಿ ಪ್ರಾರ್ಥಿಸುತ್ತೇವೆ.
ಮಹಾಸಭೆಗೆ ಹಾಜರಾಗಲು ಗುರುತಿನ ಚೀಟಿ ಕಡ್ಡಾಯ.
ದಿನಾಂಕ : 06.09.2024
ಸ್ಥಳ : ಬೆಂಗಳೂರು
ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/– (ಸುಜಾತ ಎಸ್ ಹೆಚ್)
ಪ್ರಧಾನ ವ್ಯವಸ್ಥಾಪಕರು (ಪ್ರ)

Swiggy
SWIGGY LIMITED
(formerly known as "Swiggy Private Limited" and "Bundl Technologies Private Limited")
CIN: U74110KA2013PLC096530
Registered Office Address: No.55 Sy No.8-14, Ground Floor, I&J Block, Embassy Tech Village, Outer Ring Road, Devarbisanahalli, Bengaluru – 560103
NOTICE OF 11TH ANNUAL GENERAL MEETING OF SWIGGY LIMITED
Notice is hereby given that the 11th Annual General Meeting ("AGM") of the Members of Swiggy Limited ('the Company') will be held on Thursday, September 26, 2024 at 05:00 pm. IST (Indian Standard Time) through Video Conferencing (VC) or Other Audio Visual Means (OAVM) facility in compliance with applicable provisions of the Companies Act, 2013 and rules made thereunder and relevant Circulars issued in this regards by the Ministry of Corporate Affairs.
In compliance with the relevant Circulars, the electronic copies of the Notice of the AGM and the Annual Report for the financial year 2023-2024 has been sent to all the shareholders whose e-mail ID's are registered with the Company or with their Depository Participants and with the Company's Registrar & Transfer Agent viz. Link Intime India Private Limited.
Shareholders are therefore requested to ensure their correct e-mail address and other details are duly updated in the records. The aforesaid documents and other details will also be available on the website of the Company at www.swiggy.in. Members of the Company are requested to note that the physical copies of the aforesaid documents will not be made available to them by the Company. The dispatch of the Notice of the AGM along with Annual Report has been completed on Wednesday, September 04, 2024.
The Company is pleased to provide remote e-voting facility to the Members to cast their votes electronically on all the resolutions set forth in the Notice convening the said Meeting. The Company has availed the services of Link Intime India Private Limited to provide the facility of remote e-voting.
Members holding shares in physical form or in dematerialized form as on the cut-off date i.e. Friday, September 20, 2024 may cast their votes electronically on the Business(es) as set out in the. Notice of the AGM through electronic voting system from a place other than the Venue of AGM {remote e-voting). The remote e-voting period shall commence on Monday, September 23, 2024 (at 09:00 am.) and end on Wednesday, September 25, 2024 (up to 05:00 p.m.)
Members if any holding shares in physical form or who have not registered/ updated their e-mail addresses with the Company/ Depositories, are requested to send the following documents/ information via e-mail rnt.helpdesk@linkintime.co.in in order to register/ update their 'e-mail addresses and to obtain user ID & password and cast their vote through remote e-voting.
1. Name registered in the records of the Company;
2. DP ID & Client ID, Client Master Copy or Consolidated Account Statement (For shares 'held in demat form);
3. Folio No., Share Certificate (For shares held in physical form);
4. E-mail ID and mobile number;
5. Self attested scanned copies of PAN & Aadhaar
The detailed instructions for casting the vote through remote e-voting are provided in the Notice of the AGM. Members are requested to carefully go through the same. This is being issued for the information and benefit of the members of the Company.
On behalf of the Board
For Swiggy Limited
Sd/-
M. Sridhar
Company Secretary & Compliance Officer
Place: Bangalore
Date: 05.09.2024

ಆನೇಕಲ್ ಯೋಜನಾ ಪ್ರಾಧಿಕಾರ
"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯ ರಸ್ತೆ, ಬೆಂಗಳೂರು–560 099.
ಫೋನ್: 080–27835122, ಫ್ಯಾಕ್ಸ್: 080–27836569, www.anekal.tpa.gov.in, www.e-vinyasa.kar.nic.in
ಸಂ:ಆಯೋಪ್ರಾ/ಭೂ.ಬ/15/2024–25 ದಿನಾಂಕ: 05.09.2024
ಪ್ರಕಟಣೆ
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ. ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಮಂಜುನಾಥ್.ಪಿ ಬಿನ್ ಪುಟ್ಟರಾಜು, ಮಲ್ಲಿಕಾರ್ಜುನ ಬಿನ್ ರುದ್ರಪ್ಪ ಮತ್ತು ಶ್ರೀ ರಾಮಕೃಷ್ಣ ಬಿನ್ ಯಲ್ಲಪ್ಪ	ಆನೇಕಲ್	ಸರ್ಜಾಪುರ	ಚಂಬೇನಹಳ್ಳಿ	133/1	0–11.11	ಕೈಗಾರಿಕೆ	ವಸತಿ
2	ಮೆ: ಕ್ರಾಫ್ಟ್ ಶೋ ಇನ್‌ಫ್ರಾ ಪರವಾಗಿ ಪಾಲುದಾರರಾದ ಶ್ರೀ ವಿ.ಬಾಲಮುರಳಿ ಕುಮಾರ್, ಶ್ರೀ ರೆಡ್ಡಿ ಅನಂತ್. ಎಂ.ಎನ್, ಶ್ರೀಮತಿ ಸರಳ ಆನಂತ್ ಮತ್ತು ಶ್ರೀಮತಿ ಪಲ್ಲವಿ ಕುಮಾರ್	ಆನೇಕಲ್	ಸರ್ಜಾಪುರ	ಚಂಬೇನಹಳ್ಳಿ	133/2	1–23	ಕೈಗಾರಿಕೆ	ವಸತಿ
3	ಶ್ರೀ ಮಂಜುನಾಥ್ ಬಿನ್ ಪುಟ್ಟರಾಜು, ಮಲ್ಲಿಕಾರ್ಜುನ ಬಿನ್ ರುದ್ರಪ್ಪ ಮತ್ತು ಶ್ರೀ ರಾಮಕೃಷ್ಣ ಬಿನ್ ಯಲ್ಲಪ್ಪ	ಆನೇಕಲ್	ಸರ್ಜಾಪುರ	ಚಂಬೇನಹಳ್ಳಿ	134/2	1–23	ಕೈಗಾರಿಕೆ	ವಸತಿ
4	ಮೆ: ಕ್ರಾಫ್ಟ್ ಶೋ ಇನ್‌ಫ್ರಾ ಪರವಾಗಿ ಪಾಲುದಾರರಾದ ಶ್ರೀ ವಿ.ಬಾಲಮುರಳಿ ಕುಮಾರ್, ಶ್ರೀ ರೆಡ್ಡಿ ಆನಂತ್. ಎಂ.ಎನ್. ಶ್ರೀಮತಿ ಸರಳ ಆನಂತ್ ಮತ್ತು ಶ್ರೀಮತಿ ಪಲ್ಲವಿ ಕುಮಾರ್	ಆನೇಕಲ್	ಸರ್ಜಾಪುರ	ಚಂಬೇನಹಳ್ಳಿ	134/3	0–17	ಕೈಗಾರಿಕೆ	ವಸತಿ

ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸೃಷ್ಟಿಯಾಗುತ್ತದೆ. ಪ್ರಶ್ನಿತ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ವಸತಿ ರಹಿತ ಸಾರ್ವಜನಿಕರಿಗೆ ಕಾನೂನು ಬದ್ಧ ನಿವೇಶನಗಳು ಒದಗಿಸುತ್ತೇವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ಕೈಗಾರಿಕಾ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.
ಸಹಿ/– ಸದಸ್ಯ ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್.
ವಾಸಾಸಂಇ/ವಾಪ್ರ/ಜಿಎ/1866/2024–25

‘ಶಾಲಾ ಮಟ್ಟದಲ್ಲೇ ಪ್ರಶ್ನೆಪತ್ರಿಕೆ ರಚಿಸಿ’

ಬೆಂಗಳೂರು: ‘ಎಸ್ಸೆಸ್ಸೆಲ್ಸಿ ಅರ್ಧ ವಾರ್ಷಿಕ ಪರೀಕ್ಷೆಗೆ ಶಾಲಾ ಮಟ್ಟದಲ್ಲೇ ಪ್ರಶ್ನೆಪತ್ರಿಕೆಗಳನ್ನು ರಚಿಸಬೇಕು’ ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್ (ಎಐಡಿಎಸ್‌ಒ) ರಾಜ್ಯ ಸಮಿತಿ ಸರ್ಕಾರಕ್ಕೆ ಆಗ್ರಹಿಸಿದೆ.

‘ಈ ಸಾಲಿನ ಎಸ್ಸೆಸ್ಸೆಲ್ಸಿ ಅರ್ಧ ವಾರ್ಷಿಕ ಪರೀಕ್ಷೆಗೆ ಕೆಲವೇ ದಿನ ಇರುವಾಗ ಪ್ರಶ್ನೆಪತ್ರಿಕೆಗಳನ್ನು ರೂಪಿಸಿ, ವಿತರಿಸುವ ನಿರ್ಧಾರವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಕೈಗೊಂಡಿದೆ. ಶಿಕ್ಷಣ ಕ್ಷೇತ್ರದಲ್ಲಿ ಯಾವುದೇ ಬದಲಾವಣೆಗಳನ್ನು ತರಬೇಕಾದರೆ ಅದನ್ನು ಶೈಕ್ಷಣಿಕ ವರ್ಷದ ಆರಂಭದಲ್ಲೇ ಮಾಡಬೇಕು. ಅರ್ಧ ವಾರ್ಷಿಕ ಪರೀಕ್ಷೆಗೆ ಯಾರು ಪ್ರಶ್ನೆಪತ್ರಿಕೆ ತಯಾರಿಸಬೇಕು? ಎಂದು ಶೈಕ್ಷಣಿಕ ವರ್ಷದ ಆರಂಭದಲ್ಲೇ ನಿರ್ಧರಿಸಬೇಕು’ ಎಂದು ಸಮಿತಿ ರಾಜ್ಯ ಘಟಕದ ಕಾರ್ಯದರ್ಶಿ ಅಜಯ್ ಕಾಮತ್ ಆಗ್ರಹಿಸಿದ್ದಾರೆ.

‘ಪರೀಕ್ಷೆಗಳನ್ನು ಶಾಲಾ ಮಟ್ಟದಲ್ಲಿ ನಡೆಸಿದರೂ ಮಂಡಳಿಯಿಂದ ಬರುವ ಪ್ರಶ್ನೆಪತ್ರಿಕೆಗಳು ಪರೀಕ್ಷೆಗಳ ಒತ್ತಡದಲ್ಲಿರುವ ವಿದ್ಯಾರ್ಥಿಗಳ ಮೇಲೆ ಇನ್ನಷ್ಟು ಭಾರ ಉಂಟುಮಾಡುತ್ತವೆ. ಶೈಕ್ಷಣಿಕ ವರ್ಷದ ಮಧ್ಯದಲ್ಲಿ ರಾಜ್ಯ ಸರ್ಕಾರವು ಈ ರೀತಿ ಹಲವು ನಿರ್ಧಾರಗಳನ್ನು ಕೈಗೊಳ್ಳುತ್ತಿದೆ. ವಿದ್ಯಾರ್ಥಿಗಳ, ಶಿಕ್ಷಕರ ಹಾಗೂ ತಜ್ಞರ ಅಭಿಪ್ರಾಯಗಳನ್ನು ಪಡೆಯದೆ, ಅಪ್ರಜಾತಾಂತ್ರಿಕ ಹಾಗೂ ಏಕಪಕ್ಷೀಯ ನಿರ್ಧಾರ ತೆಗೆದುಕೊಳ್ಳುವುದನ್ನು ಸರ್ಕಾರ ಕೈಬಿಡಬೇಕು’ ಎಂದು ಒತ್ತಾಯಿಸಿದ್ದಾರೆ.

ಮುಸ್ಲಿಮರ ಹಾದಿ ತಪ್ಪಿಸುವ ಕಾಂಗ್ರೆಸ್: ಛಲವಾದಿ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಲ್ಲಿ ವಿದ್ಯೆ ಕಡಿಮೆ ಇರುತ್ತದೆಯೋ ಅಲ್ಲಿ ಅರಿವೂ ಕಡಿಮೆ ಇರುತ್ತದೆ. ಮುಸಲ್ಮಾನ ಬಂಧುಗಳನ್ನು ಕಾಂಗ್ರೆಸ್ ಹಾದಿತಪ್ಪಿಸುತ್ತಿದೆ. ಕಾಂಗ್ರೆಸ್ ಬಿತ್ತುವ ವಿಷಕ್ಕೆ ಮುಸಲ್ಮಾನರು ಬಲಿಯಾಗುತ್ತಿದ್ದಾರೆ’ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಹೇಳಿದರು.

ಬಿಜೆಪಿ ರಾಜ್ಯ ಕಚೇರಿಯಲ್ಲಿ ಅಲ್ಪಸಂಖ್ಯಾತರ ಮೋರ್ಚಾದ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿದ ನಂತರ ಮಾಧ್ಯಮಗೋಷ್ಠಿಯಲ್ಲಿ ಅವರು, ‘ಬಿಜೆಪಿ ಅಧಿಕಾರಕ್ಕೆ ಬಂದರೆ ಮುಸ್ಲಿಮರನ್ನು ಪಾಕಿಸ್ತಾನಕ್ಕೆ ಓಡಿಸಲಾಗುತ್ತದೆ, ಅವರನ್ನು ಬದುಕಲು ಬಿಡುವುದಿಲ್ಲ ಎಂದು ಕಾಂಗ್ರೆಸ್ ವಿಷ ಬಿತ್ತುತ್ತಿದೆ’ ಎಂದು ಆರೋಪಿಸಿದರು.

‘ಮುಸ್ಲಿಮರ ಪರ ಎಂದು ಕಾಂಗ್ರೆಸ್ ಹೇಳಿಕೊಳ್ಳುತ್ತದೆ. ಹಾಗಿದ್ದಲ್ಲಿ, ಮುಸ್ಲಿಮರನ್ನು ಏಕೆ ಸಿ.ಎಂ ಮಾಡಿಲ್ಲ, ಪಕ್ಷದ ಅಧ್ಯಕ್ಷ ಸ್ಥಾನವನ್ನು ಮುಸ್ಲಿಮರಿಗೇಕೆ ನೀಡಿಲ್ಲ? ಮುಸ್ಲಿಮರನ್ನು ಜೋಕರ್‌ಗಳಂತೆ ಮುಂದೆ ತಂದು ಕೂರಿಸುತ್ತದೆ ಅಷ್ಟೆ’ ಎಂದರು.

‘ಕೋವಿಡ್ ಸಮಯದಲ್ಲಿ ರಾಜ್ಯದ ಜನರ ರಕ್ಷಣೆಗೆ ಶ್ರಮಹಾಕಿ ದುಡಿದವರನ್ನು ಅಭಿನಂದಿಸುವ ಬದಲಿಗೆ, ರಾಜ್ಯ ಸರ್ಕಾರವು ಅಂತಹವರ ಮೇಲೆ ಅವ್ಯವಹಾರದ ಆರೋಪ ಹೊರಿಸುತ್ತಿದೆ. ಬಿಜೆಪಿ ನಾಯಕರನ್ನು ಸಿಲುಕಿಸಲು ಮುಯ್ಯಿಗೆ ಮುಯ್ಯಿ ಎಂಬಂತೆ ರಾಜ್ಯ ಸರ್ಕಾರ ವರ್ತಿಸುತ್ತಿದೆ’ ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

‘ಉಡುಪಿಯ ಶಿಕ್ಷಕನೊಬ್ಬನಿಗೆ ಪ್ರಶಸ್ತಿ ಘೋಷಿಸಿ, ಆತ ಹಿಜಾಬ್ ನಿರ್ಬಂಧಿಸಿದರು ಎಂದು ಪ್ರಶಸ್ತಿ ವಾಪಸ್ ಪಡೆದ ರಾಜ್ಯ ಸರ್ಕಾರದ ಕ್ರಮ ಸರಿಯಲ್ಲ. ಸರ್ಕಾರವೇ ಆ ಶಿಕ್ಷಕನನ್ನು ಉತ್ತಮ ಎಂದು ಗುರುತಿಸಿತ್ತು. ಎಸ್‌ಡಿಪಿಐ ದೂರು ನೀಡಿದ ತಕ್ಷಣ ಪ್ರಶಸ್ತಿ ಪಟ್ಟಿಯಿಂದ ಹೊರಗಿಟ್ಟಿದೆ. ಇದು ಸರ್ಕಾರದ ದ್ವಂದ್ವ ನೀತಿಯಲ್ಲವೇ? ಕಾಂಗ್ರೆಸ್, ಎಸ್‌ಡಿಪಿಐ ಅನ್ನು ಕೇಳಿಕೊಂಡು ಸರ್ಕಾರ ನಡೆಸುತ್ತಿದೆಯೇ’ ಎಂದು ಪ್ರಶ್ನಿಸಿದರು.

ಆಟೊ ಬುಕ್ ಮಾಡಿ ರದ್ದುಗೊಳಿಸಿದ್ದಕ್ಕೆ ಆಕ್ರೋಶ ● ಜಾಲತಾಣದ ವಿಡಿಯೊ ಆಧರಿಸಿ ಪ್ರಕರಣ

ಮಹಿಳೆಗೆ ನಿಂದಿಸಿ, ಹಲ್ಲೆಗೈದ ಚಾಲಕ

ಪ್ರಜಾವಾಣಿ ವಾರ್ತೆ

ಮಹಿಳೆ ಜತೆ ವಾಗ್ವಾದ ನಡೆಸುತ್ತಿರುವ ಆಟೊ ಚಾಲಕ

ಬೆಂಗಳೂರು: ಆಟೊ ಬುಕ್ ಮಾಡಿ, ರದ್ದುಗೊಳಿಸಿದ ಮಹಿಳೆಯನ್ನು ಆಟೊ ಚಾಲಕ ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ನಡೆಸಿರುವ ಘಟನೆ ನಗರದಲ್ಲಿ ನಡೆದಿದೆ.

ಈ ಘಟನೆಯ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಬೆನ್ನಲ್ಲೆ, ಆಟೊ ಚಾಲಕನ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳಿಗೆ ಎಡಿಜಿಪಿ ಅಲೋಕ್ ಕುಮಾರ್ ಸೂಚಿಸಿದ್ದಾರೆ.

ಆಟೊ ಚಾಲಕ ಮುತ್ತುರಾಜ್ ಎಂಬಾತನನ್ನು ಕರೆಯಿಸಿ, ಪೊಲೀಸರು ವಿಚಾರಣೆ ನಡೆಸಿದ್ದಾರೆ. ಹಲ್ಲೆಗೊಳಗಾದ ಮಹಿಳೆಗೂ ಪೊಲೀಸರು ನೋಟಿಸ್ ನೀಡಿ ವಿಚಾರಣೆಗೆ ಹಾಜರಾಗುವಂತೆ ಸೂಚನೆ ನೀಡಿದ್ದಾರೆ.

ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಸಿಟಿಜನ್ಸ್ ಮೂವ್‌ಮೆಂಟ್ ಈಸ್ಟ್ ಬೆಂಗಳೂರು ಎಂಬ ಖಾತೆಯಿಂದ ಆಟೊ ಚಾಲಕ ಹಲ್ಲೆ ಮಾಡುತ್ತಿರುವ ದೃಶ್ಯಾವಳಿಗಳುಳ್ಳ ವಿಡಿಯೊ ತುಣುಕುಗಳನ್ನು ಪೋಸ್ಟ್ ಮಾಡಿ, ಬೆಂಗಳೂರು ನಗರ ಪೊಲೀಸರಿಗೆ ಟ್ಯಾಗ್ ಮಾಡಲಾಗಿದೆ.

ಆ್ಯಪ್‌ನಲ್ಲಿ ಆಟೊ ಬುಕ್ ಮಾಡಿ, ನಂತರ ರದ್ದುಗೊಳಿಸಿ ಮತ್ತೊಂದು ಆಟೊದಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆಯನ್ನು ಚಾಲಕ ಹಿಂಬಾಲಿಸಿಕೊಂಡು ಹೋಗಿ ಅವಾಚ್ಯ ಪದಗಳಿಂದ ನಿಂದಿಸಿ, ಹಲ್ಲೆ ನಡೆಸಿರುವ ದೃಶ್ಯ ವಿಡಿಯೊದಲ್ಲಿದೆ.

ವಿಡಿಯೊದಲ್ಲಿರುವ ಮಹಿಳೆ ಹಿಂದಿಯಲ್ಲಿ ಮಾತನಾಡುತ್ತಿದ್ದು, 'ತಾನು ಆಟೊ ಬುಕ್ ಮಾಡಿ ರದ್ದು ಮಾಡಿದ್ದರಲ್ಲಿ ಏನು ತಪ್ಪಿದೆ? ನಿಮಗೆ ಬೇಡವಾದಲ್ಲಿ ರದ್ದು ಮಾಡುತ್ತೀರಲ್ಲವೇ' ಎಂದು ಪ್ರಶ್ನಿಸಿದ್ದಾರೆ. ಆಗ ಕೋಪಗೊಂಡ ಆಟೊ ಚಾಲಕ, 'ಆಟೊ ಗ್ಯಾಸ್‌ನ ದುಡ್ಡು ನಿಮ್ಮ ಅಪ್ಪ ಕೊಡುತ್ತಾನಾ' ಎಂದು ಬೈದಿದ್ದಾನೆ.

'ಯಾಕೆ ಕಿರುಚುತ್ತಿದ್ದೀರಿ. ಪೊಲೀಸರಿಗೆ ದೂರು ಕೊಡುವೆ' ಎಂದು ಆಕೆ ಹೇಳಿದಾಗ, 'ಪೊಲೀಸ್ ಠಾಣೆಗೆ ಹೋಗೋಣ' ಎಂದು ಚಾಲಕ ದಬಾಯಿಸಿದ್ದಾನೆ. 'ನಿಮ್ಮ ಜೊತೆ ಯಾಕೆ ಬರಬೇಕು. ನಿಮ್ಮ ನಂಬರ್ ನನ್ನ ಬಳಿ ಇದೆ, ದೂರು ನೀಡುವೆ' ಎಂದು ಎಚ್ಚರಿಕೆ ನೀಡಿದ್ದಾರೆ. ಆಗ ಚಾಲಕ ಆಕೆಯ ಮೇಲೆ ಹಲ್ಲೆ ನಡೆಸಿದ್ದಾನೆ.

ಸ್ಥಳದಲ್ಲಿದ್ದ ಮತ್ತೊಬ್ಬ ಆಟೊ ಚಾಲಕ ಮತ್ತು ಸಾರ್ವಜನಿಕರು, ಜಗಳ ಆಡುವುದು ಬೇಡ ಎಂದು ಹೇಳಿದರೂ ಆತ ಸುಮ್ಮನಾಗಲಿಲ್ಲ.

ಆಟೊ ಚಾಲಕನ ಅಸಭ್ಯ ವರ್ತನೆಗೆ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗಿದ್ದು, ಕಠಿಣ ಕ್ರಮ ಕೈಗೊಳ್ಳುವಂತೆ ಪೊಲೀಸ್ ಇಲಾಖೆಯನ್ನು ಆಗ್ರಹಿಸಿದ್ದಾರೆ. ಜೊತೆಗೆ ಬೆಂಗಳೂರಿನಲ್ಲಿ ತಮಗೂ ಇಂತಹ ಕೆಟ್ಟ ಅನುಭವಗಳಾಗಿವೆ ಎಂದು ಬರೆದುಕೊಂಡಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ನೀಡಿರುವ ರಾಜ್ಯ ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್, ' ಆಟೊ ಚಾಲಕ ಯುವತಿಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿರುವುದು ಒಪ್ಪುವಂತಹದಲ್ಲ. ಇಂತಹ ಕೆಲ ಆಟೊ ಚಾಲಕರು ಎಲ್ಲರಿಗೂ ಕೆಟ್ಟ ಹೆಸರು ತರುತ್ತಾರೆ. ಚಾಲಕನ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುತ್ತೇವೆ' ಎಂದು ಭರವಸೆ ನೀಡಿದ್ದಾರೆ.

ಮುಖ್ಯಾಂಶಗಳು

- ಹರಿದಾಡಿತು 'ಎಕ್ಸ್'ನಲ್ಲಿ ಹಾಕಿದ್ದ ಪೋಸ್ಟ್
- ಹಿಂದಿಯಲ್ಲಿ ಮಾತನಾಡಿದ ಮಹಿಳೆ
- ಆಟೊ ಚಾಲಕನ ಅಸಭ್ಯ ವರ್ತನೆಗೆ ಜನರ ಖಂಡನೆ

ಮಂತ್ರಿ ಕುಟುಂಬ: ಲುಕ್ ಔಟ್ ಸುತ್ತೋಲೆ ಅಮಾನತಿಗೆ ಆದೇಶ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ಮಂತ್ರಿ ಡೆವಲಪರ್ಸ್ ಮುಖ್ಯಸ್ಥ ಸುಶೀಲ್ ಪಿ.ಮಂತ್ರಿ, ಅವರ ಪತ್ನಿ ಸ್ನೇಹಲ್ ಹಾಗೂ ಪುತ್ರ ಪ್ರತೀಕ್ ವಿರುದ್ಧದ ಲುಕ್ ಔಟ್ ಸುತ್ತೋಲೆಯನ್ನು (ಎಲ್‌ಒಸಿ) ಅಮಾನತಿನಲ್ಲಿ ಇರಿಸುವಂತೆ ಹೈಕೋರ್ಟ್ ಆದೇಶಿಸಿದೆ.

ಕೇಂದ್ರ ಗೃಹ ಸಚಿವಾಲಯದ ಬ್ಯುರೊ ಆಫ್ ಇಮಿಗ್ರೇಶನ್ ಹೊರಡಿಸಿದ್ದ ಲುಕ್ ಔಟ್ ಸುತ್ತೋಲೆ ಪ್ರಶ್ನಿಸಿ ಸುಶೀಲ್ ಪಿ.ಮಂತ್ರಿ, ಸ್ನೇಹಲ್ ಮತ್ತು ಪ್ರತೀಕ್ ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ್ ಚಂದನ ಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿ ಈ ಕುರಿತಂತೆ ಆದೇಶಿಸಿತು.

ಅರ್ಜಿದಾರರ ಪರ ಹಾಜರಾಗಿದ್ದ ಹೈಕೋರ್ಟ್ ವಕೀಲ ಎಸ್.ಮಹೇಶ್, 'ಸುಶೀಲ್ ಮಂತ್ರಿ ಕುಟುಂಬದ ವಿರುದ್ಧ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಒಟ್ಟು ಹತ್ತು ಕ್ರಿಮಿನಲ್ ಪ್ರಕರಣ ದಾಖಲಾಗಿವೆ. ಆದರೆ, ಈ ಎಲ್ಲ ಪ್ರಕರಣಗಳಿಗೂ ಹೈಕೋರ್ಟ್ ಈಗಾಗಲೇ ತಡೆ ನೀಡಿದೆ. ಹೀಗಾಗಿ, ಅರ್ಜಿದಾರರ ವಿರುದ್ಧದ ಎಲ್‌ಒಸಿ ಹಿಂಪಡೆಯಲು ನಿರ್ದೇಶಿಸಬೇಕು' ಎಂದು ಕೋರಿದರು.

ಈ ಮನವಿಗೆ ಕೇಂದ್ರ ಸರ್ಕಾರದ ಪರ ಹಾಜರಿದ್ದ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್.ಶಾಂತಿಭೂಷಣ್ ಆಕ್ಷೇಪಿಸಿದರು. ಅಂತೆಯೇ, ರಾಜ್ಯ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಸಿ.ಎಸ್. ಪ್ರದೀಪ್, 'ಹಣಕಾಸು ದುರ್ಬಳಕೆಗೆ ಸಂಬಂಧಿಸಿದಂತೆ ಅರ್ಜಿದಾರರ ವಿರುದ್ಧ ಹಲವು ಕ್ರಿಮಿನಲ್ ಪ್ರಕರಣ ದಾಖಲಾಗಿವೆ' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, 'ಅರ್ಜಿದಾರರ ವಿರುದ್ಧ ಕ್ರಿಮಿನಲ್ ಪ್ರಕರಣಗಳ ಅಂತಿಮ ಆದೇಶಕ್ಕೆ ಒಳಪಟ್ಟು ಎಲ್‌ಒಸಿಯನ್ನು ಅಮಾನತಿನಲ್ಲಿ ಇರಿಸಲಾಗಿದೆ. ಇವರ ಅರ್ಜಿಗಳನ್ನು ಪುರಸ್ಕರಿಸಲಾಗಿದೆ' ಎಂದು ಆದೇಶಿಸಿತು.

ಪ್ರಕರಣವೇನು?: ಗ್ರಾಹಕರಿಂದ ಕೋಟ್ಯಂತರ ರೂಪಾಯಿ ಪಡೆದು ನಿಗದಿತ ವೇಳೆಗೆ ಫ್ಲ್ಯಾಟ್‌ಗಳನ್ನು ಹಸ್ತಾಂತರ ಮಾಡದ ಕಾರಣ ಸುಶೀಲ್ ಮಂತ್ರಿ ಕುಟುಂಬದ ವಿರುದ್ಧ ಕಬ್ಬನ್ ಪಾರ್ಕ್ ಠಾಣೆಯಲ್ಲಿ 10 ಮತ್ತು ಸುಬ್ರಹ್ಮಣ್ಯ ಪುರಂ ಠಾಣೆಯಲ್ಲಿ ಒಂದು ಎಫ್‌ಐಆರ್ ದಾಖಲಾಗಿತ್ತು.

ಸುಬ್ರಹ್ಮಣ್ಯ ಪುರಂ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವನ್ನು ಇತ್ತೀಚೆಗಷ್ಟೇ ಹೈಕೋರ್ಟ್ ವಜಾ ಮಾಡಿತ್ತು.

ರೇವ್ ಪಾರ್ಟಿಗೆ ಜಾಗ: ಪ್ರಕರಣ ರದ್ದು

ಪ್ರಕರಣ ಸಾಬೀತುಪಡಿಸುವ ಸಾಕ್ಷ್ಯಗಳು ಮೇಲ್ನೋಟಕ್ಕೆ ಇಲ್ಲ– ನ್ಯಾಯಪೀಠ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಗೋಡಿ ಸಮೀಪದ ಸಿಂಗೇನ ಅಗ್ರಹಾರದ ಜಿ.ಆರ್. ಫಾರ್ಮ್ ಹೌಸ್‌ನಲ್ಲಿ 2024ರ ಮೇನಲ್ಲಿ ರೇವ್ ಪಾರ್ಟಿ ನಡೆಸಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಫಾರ್ಮ್ ಹೌಸ್ ಅನ್ನು ಬಾಡಿಗೆಗೆ ನೀಡಿದ್ದ ಆರೋಪ ಎದುರಿಸುತ್ತಿದ್ದ ವ್ಯಕ್ತಿಯ ವಿರುದ್ಧದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಗೊಳಿಸಿದೆ.

'ನನ್ನ ವಿರುದ್ಧದ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ಬಿಟಿಎಂ ಲೇ ಔಟ್ 2ನೇ ಹಂತದ ಆರ್. ಗೋಪಾಲ್ ರೆಡ್ಡಿ (68) ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಫಾರ್ಮ್ ಹೌಸ್‌ನಲ್ಲಿ ನಡೆಯುತ್ತಿದ್ದ ಜನ್ಮದಿನದ ಪಾರ್ಟಿಗಳಲ್ಲಿ ಅಕ್ರಮ ಚಟುವಟಿಕೆ ನಡೆಯುತ್ತಿರುವುದು ಅರ್ಜಿದಾರರಿಗೆ ತಿಳಿದಿದೆ ಎಂಬುದನ್ನು ಸಾಬೀತುಪಡಿಸಲು ಮೇಲ್ನೋಟಕ್ಕೆ ಸಾಕ್ಷ್ಯಗಳಿಲ್ಲ. ಅರ್ಜಿದಾರರು ಜಾಗ ಬಾಡಿಗೆಗೆ ನೀಡಿದ್ದಾರೆ ಎಂದ ಮಾತ್ರಕ್ಕೆ ಅಲ್ಲಿ ನಡೆಯುತ್ತಿದ್ದ ಮಾದಕ ದ್ರವ್ಯ ಸೇವನೆ ಚಟುವಟಿಕೆಗಳ ಬಗ್ಗೆ ಅವರಿಗೆ ಅರಿವಿತ್ತು ಎಂದೂ ಅರ್ಥವಲ್ಲ. ಹಾಗಾಗಿ, ಕೃತ್ಯದಲ್ಲಿ ಅರ್ಜಿದಾರರ ಪಾತ್ರವಿದೆ ಎಂದು ಹೇಳಲಾಗದು' ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಪ್ರಕರಣವೇನು?: ಸಿಂಗೇನ ಅಗ್ರಹಾರದಲ್ಲಿನ ಜಿ.ಆರ್.ಫಾರ್ಮ್ ಹೌಸ್ ಮೇಲೆ 2024ರ ಮೇ 19ರಂದು ದಾಳಿ ಮಾಡಿದ್ದ ಪೊಲೀಸರು, 'ಇಲ್ಲಿ ಬರ್ತ್‌ಡೇ ಪಾರ್ಟಿ ಹೆಸರಿನಲ್ಲಿ ಮದ್ಯ ಹಾಗೂ ಮಾದಕ ದ್ರವ್ಯ ಸೇವಿಸುವ ರೇವ್ ಪಾರ್ಟಿಗಳು ನಡೆಯುತ್ತಿರುವುದು ಕಂಡುಬಂದಿದೆ' ಎಂದು ಆರೋಪಿಸಿದ್ದರು. ಫಾರ್ಮ್ ಹೌಸ್‌ಗೆ ಬೀಗ ಹಾಕಿ, ಗಾಂಜಾ, ಎಂಡಿಎಂಎ ಮಾತ್ರೆಗಳು, ಕೊಕೇನ್ ಸೇರಿದಂತೆ ಹಲವು ಮಾದಕ ದ್ರವ್ಯ ವಶಪಡಿಸಿಕೊಂಡಿದ್ದರು.

'ಪಾರ್ಟಿಯಲ್ಲಿ ಇದ್ದವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಮಾದಕದ್ರವ್ಯ ಸೇವನೆ ಮಾಡಿರುವುದು ದೃಢಪಟ್ಟಿದೆ' ಎಂದು ದೋಷಾರೋಪ ಹೊರಿಸಿದ್ದ ಪೊಲೀಸರು, ಹಲವರ ವಿರುದ್ಧ ಪ್ರಕರಣ ದಾಖಲಿಸಿದ್ದರು.

ಆರ್.ಗೋಪಾಲ ರೆಡ್ಡಿ ಅವರನ್ನು ಆರನೇ ಆರೋಪಿಯನ್ನಾಗಿ ಮಾಡಲಾಗಿತ್ತು. ಅವರ ವಿರುದ್ಧ ಭಾರತೀಯ ದಂಡ ಸಂಹಿತೆ–1860ರ ಕಲಂ 290 ಮತ್ತು 294 ಹಾಗೂ ಎನ್‌ಡಿಪಿಎಸ್ ಕಾಯ್ದೆಯ ಕಲಂ 8(ಸಿ), 22(ಬಿ), 22(ಸಿ), 22(ಎ), 27(ಬಿ) ಅಡಿ ದೋಷಾರೋಪ ಹೊರಿಸಲಾಗಿತ್ತು. ಗೋಪಾಲ ರೆಡ್ಡಿ ಪರ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ ವಾದ ಮಂಡಿಸಿದರು. ಸಂಜೀವಿನಿ ಪಿ.ನಾವದಗಿ ವಕಾಲತ್ತು ವಹಿಸಿದ್ದರು. ರಾಜ್ಯ ಪ್ರಾಸಿಕ್ಯೂಷನ್ ಪರ ಪಿ.ತೇಜೇಶ್ ಹಾಜರಿದ್ದರು.

ಸಿಂಡಿಕೇಟ್ ಸದಸ್ಯರ ಕಾರ್ಯ ನಿರ್ವಹಣೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯಕ್ಕೆ ನೂತನವಾಗಿ ನಾಮ ನಿರ್ದೇಶನಗೊಂಡಿರುವ ಒಂಬತ್ತು ಸಿಂಡಿಕೇಟ್ ಸದಸ್ಯರು ಆ ಸ್ಥಾನದಲ್ಲಿ ಕಾರ್ಯನಿರ್ವಹಿಸದಂತೆ ಹಾಗೂ ಸಿಂಡಿಕೇಟ್ ಸಭೆಯಲ್ಲಿ ಭಾಗವಹಿಸದಂತೆ ಹೈಕೋರ್ಟ್ ಮೌಖಿಕ ಸೂಚನೆ ನೀಡಿದೆ.

ನಾಮನಿರ್ದೇಶನದ ಅಧಿಸೂಚನೆ ಪ್ರಶ್ನಿಸಿ ಬೆಂಗಳೂರಿನ ಪಿ.ಬಿ. ಜಯಕೃಷ್ಣ, ಕೆ.ರಾಮಮೂರ್ತಿ ಮತ್ತು ಚಿಕ್ಕಮುನಿಯಪ್ಪ ಹಾಗೂ ಕೋಲಾರದ ಆರ್.ಎಸ್.ಎನ್. ಪ್ರಸಾದ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ್ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ, ಈ ಮೌಖಿಕ ಸೂಚನೆ ನೀಡಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲೆ ಬಿ.ಎಸ್.ನಂದಿನಿ, 'ನಾಮನಿರ್ದೇಶಿತ ನೂತನ ಸಿಂಡಿಕೇಟ್ ಸದಸ್ಯರು ತಮ್ಮ ಸ್ಥಾನದಲ್ಲಿ ಕಾರ್ಯ ನಿರ್ವಹಿಸದಂತೆ ಹೈಕೋರ್ಟ್ ಈ ಹಿಂದಿನ ವಿಚಾರಣೆ ವೇಳೆ ಮೌಖಿಕವಾಗಿ ಸೂಚನೆ ನೀಡಿತ್ತು. ಆದರೆ, ಇತ್ತೀಚೆಗೆ ನಡೆದ ಬೆಂಗಳೂರು ಉತ್ತರ ವಿವಿಯ ಘಟಿಕೋತ್ಸವದಲ್ಲಿ ನಾಮನಿರ್ದೇಶಿತ ಸಿಂಡಿಕೇಟ್ ಸದಸ್ಯರು ಭಾಗವಹಿಸಿದ್ದಾರೆ' ಎಂದು ತಿಳಿಸಿ ಫೋಟೊಗಳನ್ನು ಒಳಗೊಂಡ ಮೆಮೊ ಅನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, 'ಕೋರ್ಟ್ ಸೂಚನೆಯಿದ್ದರೂ ನಾಮ ನಿರ್ದೇಶಿತ ಸದಸ್ಯರು ಈ ರೀತಿ ನಡೆದುಕೊಳ್ಳುವುದು ಸರಿಯಲ್ಲ. ಸಿಂಡಿಕೇಟ್ ಸದಸ್ಯರಿಗೆ ಆ ಸ್ಥಾನದಲ್ಲಿ ಕಾರ್ಯ ನಿರ್ವಹಿಸದಂತೆ ಸೂಚನೆ ನೀಡಿ' ಎಂದು ಸರ್ಕಾರಿ ವಕೀಲರಿಗೆ ಮೌಖಿಕವಾಗಿ ಸೂಚಿಸಿತು.

ಇದಕ್ಕೆ ಸರ್ಕಾರಿ ವಕೀಲರು, 'ಸಿಂಡಿಕೇಟ್ ಸದಸ್ಯರು ಶೈಕ್ಷಣಿಕ ಕ್ಷೇತ್ರದಲ್ಲಿ ಪರಿಣತರಿದ್ದಾರೆ. ನಾಮನಿರ್ದೇಶನ ಪ್ರಕ್ರಿಯೆಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು. ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಬೇಕು' ಎಂದು ಕೋರಿದರು. ಪ್ರತಿವಾದಿಗಳಾದ ಸಿಂಡಿಕೇಟ್ ಸದಸ್ಯರ ಪರ ವಕೀಲರೂ, ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.

ಪ್ರಕರಣವೇನು?: ಬೆಂಗಳೂರು, ಬೆಂಗಳೂರು ನಗರ ಮತ್ತು ಬೆಂಗಳೂರು ಉತ್ತರ ವಿಶ್ವವಿದ್ಯಾಲಯಗಳ ಸಿಂಡಿಕೇಟ್ ಸದಸ್ಯರ ಸ್ಥಾನಕ್ಕೆ ನಾಮ ನಿರ್ದೇಶನ ಮಾಡಿ ರಾಜ್ಯ ಉನ್ನತ ಶಿಕ್ಷಣ ಇಲಾಖೆ 2024ರ ಆಗಸ್ಟ್ 27ರಂದು ಅಧಿಸೂಚನೆ ಹೊರಡಿಸಿತ್ತು.

ಇದನ್ನು ಪ್ರಶ್ನಿಸಿರುವ ಅರ್ಜಿದಾರರು, 'ನಾಮನಿರ್ದೇಶಿತ ನೂತನ ಸದಸ್ಯರಾದ ಜಯಶ್ರೀ ಹೆಗ್ಡೆ, ಎಂ.ಎ.ಮಹದೇವ ನಾಯ್ಕ, ರಮೇಶ್ ಬಾಬು, ಆಯೇಷಾ ಫರ್ಜಾನಾ, ವಿ.ಶಿವಕುಮಾರ್, ಎಸ್. ಆರ್.ಸಹನಾ, ಜೈದೀಪ್, ಅಬ್ರಾಜ್ ಪಾಷಾ ಮತ್ತು ಎಂ.ಗೋಪಾಲ ಗೌಡ ಅವರಿಗೆ ನಿಗದಿತ ಅರ್ಹತೆ ಇಲ್ಲದಿದ್ದರೂ ಸರ್ಕಾರ ನಾಮನಿರ್ದೇಶನ ಮಾಡಿದೆ' ಎಂದು ಆಕ್ಷೇಪಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

The General Public are hereby Informed that, my wife **Smt. M. Shanthakumari**, has entered in to a Sale Agreement, dated 28.10.2015 with Sri N.K. Srinivasamurthy, in respect of two sites formed in the land bearing Sy. No. 268/21, measuring 1 acre 19 guntas of Malur Town, Kolar District. This agreement has been extended from time to time with the consent of both the parties and the last extension was dated 04.10.2018. As the said N.K. Srinivasamurthy did not execute the Sale Deed, as agreed to by him under the agreement referred to above. Smt. M. Shanthakumari, has instituted the suit in O.S. No. 453/2021 on 21.09.2021, before the learned Senior Civil Judge and JMFC, Malur, seeking Specific Performance of the Agreement, dated 28.10.2015 and extended on 04.10.2018 and the said suit is pending. During the pendency of the case, on 02.06.2022 Sri N.K. Srinivasamurthy has sold the land bearing Sy. No. 268/21, measuring 1 acre 19 guntas in favour of Ramesh Kumar, S/o. Chunnilal. Smt. M. Shanthakumari has come to know that Sri Ramesh Kumar is attempting to alienate the said property in favour of third parties with an intention to defraud Smt. Shanthakumari. In these circumstances the public are warned not to deal with Sri Rameshkumar in any manner in respect of the property mentioned herein below and if any such transaction are made inspite of this notice, the same would not be binding on Smt. M. Shanthakumari.

SCHEDULE

All that piece and parcel of the land, bearing Sy. No. 268/21, measuring 1 acre 19 guntas of Malur Town, Kolar District, bounded on East by Sy. No. 268/7, West by Sy. No. 268/10, North by Sy. No. 268/8 and South by Sy. No. 268/9 and 268/17 and sites formed in the said survey number.

V.P. MUNISHAMAIAH, Advocate
No. 639, 14th Cross Srinivasa Nilaya
Domlur Layout, BENGALURU-560071
Mobile- 98450 21759

JOB OPPORTUNITIES

General

"WANTED ATTENDER 24 Hours service for Elderly person No Reddy's & No Naidu's Salary 15000/- at J.P.Nagar. Contact: 8088174438"

REAL ESTATE SELLING

Agricultural Land

General

FOR SALE: 28 Acres Organic Certified Land, Located in Naykal Village, Yadgir District.12 km from Yadgir district headquarter. Just 3 km from Yadgir-Shahpur state highway and 2 km from Chennai to Surat 6-lane highway. Ideal for organic farming or industrial use. Nala conversion can be arranged if interested. Serious buyers please contact to 9704416895

Flat

Nagarabhavi

FLATS FOR-SALE @ Nagarabavi Circle 2 & 3 BHK Ready to Move.1KM From Metro Station Call:9845066608 9538828808

Rajajinagar

PURVA BLUBELLE Adjacent to Magadi road Metro station Rajajinagar Centre of the City 3 Bedroom & Exclusive 5Bedroom Flats +servant room with all luxurious Amenities, Only few units for Sale. Contact: 9844027560

Sites

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

CONNECT ಕ್ಲಾಸಿಫೈಡ್ಸ್

SITES FOR SALE @ Mysuru Road
Ready to Registration & Construction
DS PROPERTIES AND PROMOTERS
ಕೈಗೆಟುಕುವ ಬೆಲೆಯಲ್ಲಿ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಸೈಟ್‌ಗಳು ಲಭ್ಯ
BMRDA APPROVED A-Khatha
70% BANK LOAN available for all Projects
AJJANAHALLI Near Bigbanyan Tree
With all Premium Aminities
DC CONVERSION E-Khatha
HAMPAPURA
Opposite Wonderla Gate & Bangalore-Mysore 10 line Highway
FREE Site Visit CALL: 9611166681, 9742515612

PRM/KA/RERA/1251/308/PR/160824/006972
DS-MAX SAHARA GRAND
LUXURIOUS 2, 3 & 4-BHK APARTMENTS
ELECTRONIC CITY
NEAR HOSA ROAD METRO STATION
2-BHK HOMES STARTS @ ₹ 55 L*
BDA APPROVED | G+4 FLOORS
DS MAX
*T & C Apply
8880 003 003
www.dsmaxproperties.com

You Have Problem? Solutions for all problems from
FAMOUS ASTROLOGER BABA MUSA KHAN 10 Years Same Location Fees after work
9740748819 Open Challenge
Family Dispute, Job, Enemies, Love Affair, Child Problem, Second Wife Problem, Delay in Marriage, Love Marriage, Relation Issue, foreign tour, Etc
For Urgent Solutions Meet Once
Adugodi, Koramangala 8th Blk, Nr Narayan School

R.E.S. POLYTECHNIC
Estd: 1986 - Recognised by Govt. of Karnataka & AICTE
EVENING / WEEKEND CLASSES
Available for working Professionals to EE
10th Pass / What Next ???
JOIN DIPLOMA IN: ♦ Computer Science ♦ IS ♦ Civil ♦ Mechanical ♦ Automobile ♦ Electrical ♦ Electronics ♦ Fashion Tech ♦ Commerce (CP)
RES-24507
5, Sunkadakatte, Magadi Road, Hegganahalli Cross, Bengaluru-91
Call: Secretary - 99166 46466

Kempegowda Layout

NADAPRABHU KEMPEGOWDA LAYOUT 8th.Block D sector 55X100 West-Facing ₹5500/-.1st Block R sector 30x40 West-Facing Price 82Lakhs. Contact:9686469799

Vishweshwariah Layout

VISHVESHWARAIH LAYOUT 2ND BLOCK 40x60 WEST FACING Rs 11,500/- PERSQFT. Contact: 9686469799

Nagarabhavi

SALE: SITE 30x60 Nagarabhavi 2nd Stage 'A' Khata. Bank loan Available. Immediate Registration. Genuine Buyers. 6361819741.

DIRECT OWNER 20x30, 30x40, 40x60 site for sale Vishweswaraiah Layout, Commercial Contact: 8971851966, 9880781399

Kengeri

KENGERI UPANAGAR BDA Site 25x42, E/F, BANASHANKARI 6th Stage, 7th Block 20x30,W/F :9632822225/ 9110467577

Magadi Road

15000 SFT North facing sale at Gollarahatti Magadi main Road Contact : 9844017031

Industrial & Factory

Out-Station

IMMEDIATE SALE:- of INDUSTRY LAND- 5.65 acers with 1,45,000 sqft Buildings, Sheds on Thally road,HOSUR. Contact-9059026979.

Residential/ Commercial

Banashankari

FOR SALE BANASHANKARI 5TH stage 30*40 North facing BDA site Near Uttarahalli 60ft Main Rd Behind Patallamma temple bus Stop Ph: 8050502928

REAL ESTATE BUYING

Sites

Kanakapura Road

WANTED BDA SITE Anjanapura, Banashankari 6`Stage, JP.Nagar 9th, BCCHS, BCMC, Gubblala Doddakallasandra. Agent Excuse. Call: 9008259222.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Wanted

Commercial

URGENTLY NEEDED FOR LEASE/SALE/BUILT-TO-SUIT
For Top Car Showroom/Workshop:
- Showroom : 5,000 - 7,000 Sq.Ft.
- Workshop / Combined Showroom & Workshop : 45,000 - 60,000 Sq.Ft.

PREFERRED LOCATIONS :
1) Peenya, Tumkur Main Road (From Taj Yeshwanthpur Up to Himalaya Drugs).
2) From Varthur Main Road to Hoskote.
3) From Marathahalli Ring Road / Bellandur Up to Sarjapur Bus Stand.
4) And also Main Roads across Bangalore.

Contact : Mr. SEVENRAJ 98450 20007 / 98457 17777 sevenraj@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PERSONAL

Announcements

ANNOUNCEMENT

I, **Archana.V** W/o Kiran H.R, Aged 41 years, R/at # 19/1, Anjaneya Temple Street, Behind Veternary Hospital, Yeshwanthpura, Bengaluru - 560022, that my minor daughter by name **RUTHVIKA K** in her Class-X Marks card issued by ICSE BOARD is mentioned as **05.03.2007** but actual is **15.09.2007**, This is been corrected vide affidavit dated 04.09.2024, before Notary Court of the Chief Metropolitan, Bengaluru.

Change of Name

I, BHAGYAMMA, residing at #59, 4th cross, Andrahalli main road, Maruthinagar, Heggenahalli, Bengaluru-560091 have changed my name to AYESHA MOHAMMADI vide affidavit dated 12.08.2024 before Notary V. Nagarajan, Bangalore

I,ENITH KUMAR MANNI CHANDRASHEKAR Residing at No.4235, VBHCS Layout, Girinagar,4th Phase, Behind Seetha Circle Petrol bunk, Bengaluru-560085 have changed my Name to ENITH RAJ KUMAR MANNI CHANDRASHEKAR vide Affidavit Dtd:05-09-2024 Sworn Before Notary Deepa.M, Bengaluru

PUBLIC NOTICE
To Place your Classified Ads Contact
9731810277

DH Classifieds More value, more impact ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com BOOK NOW
Book your ad with us now! For more details contact:
+91 9845114560 | +91 9901641752 | 080-45557163/164
*Conditions apply

ಎನ್‌.ಇ. ಎಸ್ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ವಿ. ವೆಂಕಟಾಶಿವಾರೆಡ್ಡಿ, ಬಸವನಗುಡಿ ನ್ಯಾಷನಲ್ ಕಾಲೇಜಿನ ಅಧ್ಯಕ್ಷ ಜೆ. ಪಾವನ, ಖಜಾಂಚಿ ವಿ. ಮಂಜುನಾಥ್ 'ನಿವೃತ್ತ ಶಿಕ್ಷಕ' ಅನಂತ್ ರಂಗನ್ ಅವರನ್ನು ಸನ್ಮಾನಿಸಿದರು

ಬ್ಯಾಟರಾಯನಪುರದ ಶ್ರೀಶಾರದಾ ವಿದ್ಯಾಪೀಠದಲ್ಲಿ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಶಾಲಾ–ಕಾಲೇಜು ಶಿಕ್ಷಕರನ್ನು ಸನ್ಮಾನಿಸಲಾಯಿತು. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಸಂಸ್ಥೆಯ ಪದಾಧಿಕಾರಿಗಳಾದ ಎನ್‌. ಕಾಮರಾಜ್‌, ಬಿ.ಎಂ. ಪಟೇಲ್ ಪಾಂಡು, ಬಿ.ಎಂ. ಗಂಗಣ್ಣ, ಬಿ.ಕೆ. ಜಯಕುಮಾರ್‌, ಅಶ್ವತ್ಥನಾರಾಯಣ್ ಟಿ., ರಾಮಣ್ಣ, ಬಿ.ಎಚ್‌. ಕೃಷ್ಣ ಪಾಲ್ಗೊಂಡಿದ್ದರು

ಬೆಂಗಳೂರು ನಗರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉತ್ತರ ಶೈಕ್ಷಣಿಕ ಜಿಲ್ಲಾ ಕಚೇರಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಶಿಕ್ಷಕಿಯರಾದ ಕಾಂತಾಮಣಿ ಎಚ್‌.ಪಿ., ಅಂಜುಮನ್ ಬೇಗಂ, ಸರೋಜಮ್ಮ ವಿ. ಮತ್ತು ಸುಜಾತ ಎನ್‌.ಆರ್‌. ಅವರಿಗೆ ಕೆ.ಎನ್‌. ಲತಾ ಕುಮಾರಿ ಅವರು ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಿದರು. ರಾಜ್ಯ ಪ್ರಾಥಮಿಕ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಗಿರೀಶ್‌, ಉತ್ತರ ವಲಯದ ಡಿಡಿಪಿಐ ಡಿ. ಹನುಮಂತರಾಯ, ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲ ಚಂದ್ರಪ್ಪ ಉಪಸ್ಥಿತರಿದ್ದರು

14,15ಕ್ಕೆ ಗಗನಚುಕ್ಕಿ ಜಲಪಾತೋತ್ಸವ

ಮಳವಳ್ಳಿ (ಮಂಡ್ಯ): 'ತಾಲ್ಲೂಕಿನ ಶಿವನ ಸಮುದ್ರದಲ್ಲಿ ಸೆ.14, 15ರಂದು 'ಗಗನಚುಕ್ಕಿ ಜಲಪಾತೋತ್ಸವ' ಸಂಭ್ರಮ ಮೈದಳೆಯಲಿದೆ. ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾಡಳಿತ ಸಿದ್ಧತೆ ನಡೆಸಿವೆ' ಎಂದು ಶಾಸಕ ಪಿ.ಎಂ. ನರೇಂದ್ರಸ್ವಾಮಿ ಗುರುವಾರ ಇಲ್ಲಿ ತಿಳಿಸಿದರು.

ಜಲಪಾತೋತ್ಸವದ ಲಾಂಛನ ಬಿಡುಗಡೆ ಮಾಡಿದ ಅವರು, '14ರಂದು ಸಂಜೆ 6 ಗಂಟೆಗೆ ಜಲಪಾತೋತ್ಸವದ ಲೇಸರ್ ಹಾಗೂ ಲೈಟಿಂಗ್‌ಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ' ಎಂದು ತಿಳಿಸಿದರು.

ನಗರದ ವಿವಿಧೆಡೆ ಶಾಲಾ–ಕಾಲೇಜುಗಳಲ್ಲಿ ಸಂಭ್ರಮದಿಂದ ಶಿಕ್ಷಕರ ದಿನಾಚರಣೆ

ಅಕ್ಷರ ಕಲಿಸಿದ ಶಿಕ್ಷಕರಿಗೆ ನಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಪ್ಪು ಮಾಡಿದಾಗ ಶಿಕ್ಷಿಸಿ, ತಿದ್ದಿ ಬುದ್ಧಿ ಹೇಳಿದ ಗುರುಗಳನ್ನು ಗೌರವಿಸುವ ಶಿಕ್ಷಕರ ದಿನಾಚರಣೆ ನಗರದ ವಿವಿಧ ಶಾಲಾ ಕಾಲೇಜುಗಳಲ್ಲಿ ಸಂಭ್ರಮದಿಂದ ನೆರವೇರಿತು.

ನಗರದ ಸಿಎಂಆರ್ ವಿಶ್ವವಿದ್ಯಾಲಯದಲ್ಲಿ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನದ ನಿಮಿತ್ತ ನಡೆದ ಶಿಕ್ಷಕರ ದಿನಾಚರಣೆ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ವಿಜ್ಞಾನಿ ಕೆ.ಪಿ. ಜೆ. ರೆಡ್ಡಿ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ (ಐಸೆಕ್) ಮಾಜಿ ನಿರ್ದೇಶಕ ಆರ್.ಎಸ್. ದೇಶಪಾಂಡೆ, ಕುವೆಂಪು ವಿಶ್ವವಿದ್ಯಾಲಯದ ನಿವೃತ್ತ ಕುಲಸಚಿವ ಕೆ.ಎನ್. ವೆಂಕಟಕೃಷ್ಣ ರಾವ್ ಅವರನ್ನು ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಕೆ.ಸಿ. ರಾಮಮೂರ್ತಿ ಸನ್ಮಾನಿಸಿದರು.

ನಗರದ ಸಿಎಂಆರ್ ವಿಶ್ವವಿದ್ಯಾಲಯದಲ್ಲಿ ಗುರುವಾರ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಕೆ.ಪಿ.ಜೆ. ರೆಡ್ಡಿ, ಆರ್‌.ಎಸ್‌. ದೇಶಪಾಂಡೆ, ಕೆ.ಎನ್‌. ವೆಂಕಟಕೃಷ್ಣ ರಾವ್ ಅವರನ್ನು ಸನ್ಮಾನಿಸಲಾಯಿತು. ಕೆ.ಸಿ. ರಾಮಮೂರ್ತಿ ಭಾಗವಹಿಸಿದ್ದರು

ನಂತರ ಮಾತನಾಡಿದ ಕೆ.ಸಿ. ರಾಮಮೂರ್ತಿ, 'ವಿದ್ಯಾರ್ಥಿಗಳನ್ನು ಉತ್ತಮ ಪ್ರಜೆಗಳಾಗಿ ರೂಪಿಸುವ ಶಿಕ್ಷಕರ ಕೊಡುಗೆ ದೊಡ್ಡದು. ಶಿಕ್ಷಕರ ದಿನಾಚರಣೆ ಶಿಕ್ಷಣ ಸಂಸ್ಥೆಗಳಿಗಷ್ಟೇ ಸೀಮಿತವಾಗದೆ, ಇಡೀ ಸಮಾಜ ಆಚರಿಸುವ ಮೂಲಕ ಶಿಕ್ಷಕ ಸಮುದಾಯವನ್ನು ಗೌರವಿಸಬೇಕು' ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯ ಸಹ ಕುಲಾಧಿಪತಿ ಜಯದೀಪ್ ಕೆ.ಆರ್. ರೆಡ್ಡಿ, ಕುಲಪತಿ ಎಚ್‌.ಪಿ ರಾಘವೇಂದ್ರ ಭಾಗವಹಿಸಿದ್ದರು.

'ಜೀವನಪರ್ಯಂತ ಶಿಕ್ಷಕರು': ಶಿಕ್ಷಕರ ದಿನಾಚರಣೆ ಅಂಗವಾಗಿ ನ್ಯಾಷನಲ್ ಎಜುಕೇಶನ್ ಸೊಸೈಟಿಯು ಬಸವನಗುಡಿಯ ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸೊಸೈಟಿಯ (ಎನ್.ಇ.ಎಸ್) ಅಧ್ಯಕ್ಷ ಎಚ್.ಎನ್. ಸುಬ್ರಮಣ್ಯ ಮಾತನಾಡಿ, 'ಒಮ್ಮೆ ಶಿಕ್ಷಕರಾದವರು ಜೀವನ ಪರ್ಯಂತ ಶಿಕ್ಷಕರಾಗಿರುತ್ತಾರೆ. ಸಮಾಜಕ್ಕೆ ಅವರು ಒಂದಲ್ಲಾ ಒಂದು ರೀತಿಯಲ್ಲಿ ಮಾರ್ಗದರ್ಶನ ಮಾಡುತ್ತಾರೆ. ಶಿಕ್ಷಕ ವೃತ್ತಿ ಅತ್ಯಂತ ಶ್ರೇಷ್ಠವಾದದ್ದು, ಬದುಕಿನಲ್ಲಿ ನಮಗೆ ಮಾರ್ಗದರ್ಶನ ಮಾಡಿದ ಶಿಕ್ಷಕರು ಸ್ಮರಣೀಯ. ಅವರನ್ನು ಗೌರವಿಸುವುದು ಶಿಕ್ಷಣ ಸಂಸ್ಥೆಗಳು, ವಿದ್ಯಾರ್ಥಿಗಳು, ಸಮಾಜದ ಕರ್ತವ್ಯ' ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ನಿವೃತ್ತ ಶಿಕ್ಷಕರಾದ ಅನಂತ ರಂಗನ್, ಶೈರೀನ್ ನೇದುಂಗಡಿ, ಅರುಣಾಚಲಂ, ಎಚ್. ಜಿ. ಗೋಕುಲ್, ಸೋನಾರ್ ಮಾರುತಿ, ಜಯರಾಮಪ್ಪ, ಡಿ.ವಿ. ನಾಗೇಶ್, ಎಸ್. ಆರ್. ಪಂಕಜಾ, ಎ.ಜಿ. ನಾಗರಾಜಯ್ಯ ಅವರನ್ನು ಸನ್ಮಾನಿಸಲಾಯಿತು.

ಎನ್.ಇ.ಎಸ್ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ವಿ. ವೆಂಕಟಶಿವಾರೆಡ್ಡಿ, ಖಜಾಂಚಿ ವಿ. ಮಂಜುನಾಥ್, ಎನ್. ಸಿ.ಜೆ ಅಧ್ಯಕ್ಷ ಕೆ.ಎನ್. ರಾಮ್ ಮೋಹನ್ ಎನ್.ಇ.ಪಿ.ಎಸ್. ಅಧ್ಯಕ್ಷ ಜೆ. ಪಾವನ ಪಾಲ್ಗೊಂಡಿದ್ದರು.

ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಬಿಬಿಎಂಪಿ ಶಿಕ್ಷಣ ಇಲಾಖೆ ವತಿಯಿಂದ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು

'ಬೋಧನೆ, ಪೋಷಣೆ ಎರಡೂ ಹೊಣೆ ನಿರ್ವಹಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿ ಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಜೊತೆಗೆ ಪೋಷಕರ ಪಾತ್ರವನ್ನೂ ನಿರ್ವಹಿಸಬೇಕು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಬಿಬಿಎಂಪಿ ಶಿಕ್ಷಣ ಇಲಾಖೆ ಗುರುವಾರ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ-ದಲ್ಲಿ ಅವರು ಮಾತನಾಡಿದರು.

'ಪಾಲಿಕೆ ಶಾಲೆಗಳಲ್ಲಿ ಉತ್ತಮ ಶಿಕ್ಷಣ ಸಿಗುತ್ತದೆ ಎಂದು ಪೋಷಕರು ಮಕ್ಕಳನ್ನು ಕಳುಹಿಸುತ್ತಾರೆ. ಹೆಚ್ಚಿನ ಶಿಕ್ಷಣ ಪಡೆಯದ ಪೋಷಕರೂ ಇದ್ದಾರೆ. ಹೀಗಾಗಿ ಶಿಕ್ಷಕರು ಬೋಧನೆ ಹಾಗೂ ಪೋಷಣೆಯ ಎರಡೂ ಜವಾಬ್ದಾರಿ ಹೊರಬೇಕು' ಎಂದರು.

ಪಾಲಿಕೆಯ ಶಾಲೆ- ಕಾಲೇಜುಗಳಲ್ಲಿ ಈ ವರ್ಷ 23,322 ಮಕ್ಕಳು ಪ್ರವೇಶ ಪಡೆದುಕೊಂಡಿದ್ದಾರೆ ಎಂದು ಬಿಬಿಎಂಪಿ ಶಿಕ್ಷಣ ಇಲಾಖೆಯ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ತಿಳಿಸಿದರು.

2023–24ನೇ ಸಾಲಿನಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿ-ಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಎಸ್ಸೆಸ್ಸೆಲ್ಸಿಯ 73 ವಿದ್ಯಾರ್ಥಿಗಳಿಗೆ ತಲಾ ₹25 ಸಾವಿರ, ದ್ವಿತೀಯ ಪಿಯುಸಿಯ 227 ವಿದ್ಯಾರ್ಥಿಗಳಿಗೆ ತಲಾ ₹35 ಸಾವಿರ ಹಾಗೂ ಪದವಿ ವಿದ್ಯಾರ್ಥಿಗಳಿಗೆ ತಲಾ ₹50 ಸಾವಿರ ಪುರಸ್ಕಾರ ನೀಡಲಾಯಿತು.

ವೇತನ ಹೆಚ್ಚಳದ ಭರವಸೆ: 'ವ್ಯವಸ್ಥೆ ಬೇರೆ ಆಗಿರುವುದರಿಂದ ವೇತನ ನೀಡುವುದರಲ್ಲಿ ಸಮಸ್ಯೆ ಆಗಿದೆ. ವೇತನ ಹೆಚ್ಚಳದ ಬಗ್ಗೆಯೂ ಕೆಲವು ಪ್ರಕ್ರಿಯೆಗಳನ್ನು ನಡೆಸಬೇಕಿದೆ. ವರ್ಷಕ್ಕೆ ಒಂದುಬಾರಿ ವೇತನ ಹೆಚ್ಚಿಸಲೂ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ತುಷಾರ್ ಗಿರಿನಾಥ್ ಭರವಸೆ ನೀಡಿದರು.

'ವೇತನ ಬಿಡುಗಡೆ ಹಾಗೂ ಹೆಚ್ಚಳದಲ್ಲಿ ಸಮಸ್ಯೆಯಾಗಿದೆ' ಎಂದು ಆರೋಪಿಸಿ ಶಿಕ್ಷಕರು ಪುರಭವನದ ಮುಂದೆ ಕಪ್ಪು ಬಟ್ಟೆ ಧರಿಸಿ ಪ್ರತಿಭಟಿಸಿದರು.

ಇದಕ್ಕೆ ತುಷಾರ್ ಗಿರಿನಾಥ್, 'ಅವುಗಳನ್ನು ಶೀಘ್ರ ಪರಿಹರಿಸಲಾಗುತ್ತದೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಜಿ.ಪಂ–ತಾ.ಪಂ ಮೀಸಲು: ಮತ್ತೆ ಕಾಲಾವಕಾಶ ಕೋರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಿಗೆ ಮೀಸಲಾತಿ ನಿಗದಿಪಡಿಸಲು ರಾಜ್ಯ ಸರ್ಕಾರ ಪುನಃ ಮೂರು ವಾರಗಳ ಕಾಲಾವಕಾಶ ನೀಡುವಂತೆ ಹೈಕೋರ್ಟ್‌ಗೆ ಮನವಿ ಮಾಡಿದೆ.

ಈ ಸಂಬಂಧದ ಎರಡು ಪ್ರತ್ಯೇಕ ನ್ಯಾಯಾಂಗ ನಿಂದನೆ ಅರ್ಜಿಗಳನ್ನು ನ್ಯಾಯಮೂರ್ತಿ ವಿ.ಕಾಮೇಶ್ವರ್ ರಾವ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ, 'ಎಲ್ಲಾ 31 ಜಿಲ್ಲೆಗಳಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಪುನರ್‌ವಿಂಗಡಣೆ ಕಾರ್ಯ ಮುಗಿದಿದೆ. ಈಗ ಮೀಸಲಾತಿ ನಿಗದಿಪಡಿಸುವ ಕಾರ್ಯ ಪ್ರಗತಿಯಲ್ಲಿದೆ. ಅದಕ್ಕಾಗಿ ಮೂರು ವಾರಗಳ ಕಾಲಾವಕಾಶ ನೀಡಬೇಕು' ಎಂದರು.

ಇದನ್ನು ದಾಖಲಿಸಿದ ಪೀಠ ಇದೇ 30ಕ್ಕೆ ವಿಚಾರಣೆ ಮುಂದೂಡಿತು.

ನಿಧನವಾರ್ತೆ

ಚನ್ನಬಸಯ್ಯ ಕಾಡದೇವರಮಠ

ಬೆಂಗಳೂರು: ಹುಬ್ಬಳ್ಳಿ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಯಲಿವಾಳ ಗ್ರಾಮದ ಚನ್ನಬಸಯ್ಯ ಎಲ್. ಕಾಡದೇವರಮಠ (71) ಅವರು ನಗರದಲ್ಲಿ ಬುಧವಾರ ನಿಧನರಾಗಿದ್ದಾರೆ.

ಅವರಿಗೆ ಪುತ್ರ, ಪುತ್ರಿ ಇದ್ದಾರೆ. ಹುಬ್ಬಳ್ಳಿಯ ಸ್ವಗೃಹದಲ್ಲಿ ಶುಕ್ರವಾರ (ಸೆಪ್ಟೆಂಬರ್ 6) ಬೆಳಿಗ್ಗೆ ಪಾರ್ಥಿವ ಶರೀರದ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಎಲಿವಾಳದ ಹೊಲದಲ್ಲಿ ಮಧ್ಯಾಹ್ನ 1 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಕೆಳಗಿನ ಷೆಡ್ಯೂಲ್‌ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ಮತ್ತು ಇಲ್ಲಿ ಇನ್ನುಮುಂದೆ "ಷೆಡ್ಯೂಲ್ ಪ್ರಾಪರ್ಟಿ" ಎನ್ನಲಾಗುವ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕೊಟ್ಟಿಗೆತಿಮ್ಮನಹಳ್ಳಿ ಗ್ರಾಮದ ಸರ್ವೆ ನಂ. 20ರಲ್ಲಿ ಸ್ಥಿತಗೊಂಡಿರುವ 'ಪ್ರೆಸ್ಟೀಜ್ ಗಾಲ್ಫ್‌ಶೈರ್' ಎಂಬ ವಸತಿಯೋಗ್ಯ ಬಡಾವಣೆಯಲ್ಲಿರುವ, ನಂ. 96, ಕಾರಹಳ್ಳಿ ಗ್ರಾಮ ಪಂಚಾಯತ್ ದಾಖಲಾತಿಗಳಲ್ಲಿ ಪಂಚಾಯತ್ ಖಾತಾ ನಂ. 1/96 ಮತ್ತು ಇ–ಖಾತಾ ನಂ. 150300200600220247 ಹೊಂದಿರುವ, ಸುಮಾರು 831.76 ಚದರ ಮೀಟರ್ (8953 ಚದರ ಅಡಿ) ವಿಸ್ತೀರ್ಣವುಳ್ಳ ವಸತಿಯೋಗ್ಯ ನಿವೇಶನ ಸ್ವತ್ತನ್ನು ಮತ್ತು ಅದರಲ್ಲಿ ಕಟ್ಟಿರುವ ವಿಲ್ಲಾ, ನನ್ನ ಕಕ್ಷಿದಾರರು ಅದರ ಮಾಲೀಕರಾದ ಶ್ರೀ ವೆಂಕಟೇಶ್ವರ ರಾವ್ ತುಮ್ಮಲ ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಸದರಿ ಷೆಡ್ಯೂಲ್ ಪ್ರಾಪರ್ಟಿ ಮೇಲಾಗಲಿ ಅಥವಾ ಪ್ರಾಪರ್ಟಿಯ ಯಾವುದೇ ಭಾಗದ ಮೇಲಾಗಲಿ, ಯಾವುದೇ ವ್ಯಕ್ತಿಗೆ, ಸಂಸ್ಥೆಗೆ, ಸಂಘಕ್ಕೆ, ಕಂಪನಿಗೆ (ಕಾರ್ಪೊರೇಟ್ ಅಥವಾ ಇನ್ನಿತರೆ) ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಬಾಕಿ ವ್ಯಾಜ್ಯ ಅಥವಾ ಯಾವುದೇ ಸ್ವರೂಪದ ಡಿಮಾಂಡ್‌ಗಳಿದ್ದಲ್ಲಿ, ಅಂತಹವರು ಈ ಪ್ರಕಟಣೆಯ ದಿನಾಂಕದಿಂದ ಹದಿನೈದು (15) ದಿನಗಳೊಳಗೆ ಈ ಕೆಳಗಿನ ಸಹಿದಾರರಿಗೆ ತಮ್ಮ ಹಕ್ಕು, ಅಧಿಕಾರ, ಹಿತಾಸಕ್ತಿ, ಕ್ಲೇಮ್, ಬಾಕಿ ವ್ಯಾಜ್ಯ ಅಥವಾ ಡಿಮಾಂಡ್‌ಗಳನ್ನು ಲಿಖಿತ ರೂಪದಲ್ಲಿ, ಅಗತ್ಯ ಪೂರಕ ದಾಖಾಲಾತಿಗಳ ಸಮೇತ ಮಾಹಿತಿ ನೀಡಬೇಕು, ಇದಕ್ಕೆ ತಪ್ಪಿದಲ್ಲಿ, ಅಂತಹ ಯಾವುದೇ ಕ್ಲೇಮ್‌ಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು/ಅಥವಾ ಕೈಬಿಡಲಾಗುತ್ತದೆ ಹಾಗೂ ನನ್ನ ಕಕ್ಷಿದಾರರು ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿತ ತಮ್ಮ ವ್ಯವಹಾರವನ್ನು ಪೂರ್ಣಗೊಳಿಸಿಕೊಳ್ಳಲು ಸಂಪೂರ್ಣ ಹಕ್ಕುದಾರರಾಗುತ್ತಾರೆ. ಮೇಲ್ಕಂಡ ನಿಗದಿತ ಕಾಲಾವಧಿ ಪೂರ್ಣಗೊಂಡ ನಂತರ ಸಲ್ಲಿಕೆಯಾಗುವ ಆಕ್ಷೇಪಣೆಗಳನ್ನು ಮತ್ತು/ಅಥವಾ ಕ್ಲೇಮ್‌ಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗವುದಿಲ್ಲ ಮತ್ತು ಅವುಗಳು ನನ್ನ ಕಕ್ಷಿದಾರರ ಮೇಲೆ ಯಾವುದೇ ನಿರ್ಬಂಧಗಳನ್ನು ರೂಪಿಸಲಾಗುವುದಿಲ್ಲ.

ಷೆಡ್ಯೂಲ್ ಪ್ರಾಪರ್ಟಿ

ಕೊಟ್ಟಿಗೆತಿಮ್ಮನಹಳ್ಳಿ ಗ್ರಾಮ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದ ಸರ್ವೆ ನಂ. 20 ರಲ್ಲಿ ಸಂಯೋಜಿತ ಪರಿವರ್ತಿತ ಜಮೀನಿನಲ್ಲಿ ರೂಪಿಸಲಾಗಿರುವ 'ಪ್ರೆಸ್ಟೀಜ್ ಗಾಲ್ಫ್‌ಶೈರ್' ಎಂಬ ವಸತಿಯೋಗ್ಯ ಬಡಾವಣೆಯಲ್ಲಿರುವ, ಕಾರಹಳ್ಳಿ ಗ್ರಾಮ ಪಂಚಾಯತ್ ದಾಖಲೆಯಲ್ಲಿ ಪಂಚಾಯತ್ ಖಾತಾ ನಂ. 1/96 ಮತ್ತು ಇ–ಖಾತಾ ನಂ. 150300200600220247 ಹೊಂದಿರುವ, ಸುಮಾರು 831.76 ಚದರ ಮೀಟರ್ (8953 ಚದರ ಅಡಿ) ವಿಸ್ತೀರ್ಣವುಳ್ಳ, ನಂ. 96 ಹೊಂದಿರುವ ವಸತಿಯೋಗ್ಯ ನಿವೇಶನ ಮತ್ತು ಅದರಲ್ಲಿ ಕಟ್ಟಿರುವ ವಿಲ್ಲಾ, ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ: ಆಂತರಿಕ ರಸ್ತೆ; ಪಶ್ಚಿಮಕ್ಕೆ: ಗಾಲ್ಫ್ ಕೋರ್ಸ್ ಕಡೆಗಿನ ಖಾಲಿ ಜಾಗ; ಉತ್ತರಕ್ಕೆ: ಮ್ಯಾನ್ಷನ್ ನಂ. 95; ಮತ್ತು ದಕ್ಷಿಣಕ್ಕೆ: ಮ್ಯಾನ್ಷನ್ ನಂ. 97.

ಅರವಿಂದ ರಾಘವನ್, ವಕೀಲರು,
ನಂ. 48, 2ನೇ ಮಹಡಿ, 'ಇಷಿತಾ',
2ನೇ ಮುಖ್ಯರಸ್ತೆ, ವೈಯಾಲಿಕಾವಲ್,
ಬೆಂಗಳೂರು– 560003.
ಇಮೇಲ್: arvind_ncsr@yahoo.com
ಬೆಂಗಳೂರು ದಿ: 06/09/2024

ನಟಿ ಅಂಕಿತಾ ಅಮರ್ ನಟನೆಯ 'ಇಬ್ಬನಿ ತಬ್ಬಿದ ಇಳೆಯಲಿ' ಸಿನಿಮಾ ಇಂದು (ಸೆ.6) ಬಿಡುಗಡೆಯಾಗಿದೆ. ಇದು ಇವರ ಚೊಚ್ಚಲ ಕಮರ್ಷಿಯಲ್ ಸಿನಿಮಾ. ಈ ಸಿನಿಮಾ ಬೆಳ್ಳಿತೆರೆಯಲ್ಲಿ ಕಾದಂಬರಿ ಓದಿದಂಥ ಅನುಭವ ನೀಡುತ್ತದೆ ಎನ್ನುವ ಅಂಕಿತಾ ಸಿನಿಮಾ ಪುರವಣಿ ಜೊತೆ ಮಾತನಾಡಿದ್ದಾರೆ.

ಏಕಕಾಲದಲ್ಲಿ ಎರಡ್ಮೂರು ಸಿನಿಮಾ

ಸುದೀಪ್ ನಟನೆಯ 'ಮ್ಯಾಕ್ಸ್' ಸಿನಿಮಾ ಬಿಡುಗಡೆಗೆ ಸಿದ್ಧವಾಗುತ್ತಿದೆ. ನಾಳೆ(ಸೆ.7) ಈ ಸಿನಿಮಾದ ಬಿಡುಗಡೆ ದಿನಾಂಕ ಘೋಷಣೆಯಾಗಲಿದೆ. ಈ ಹಿನ್ನೆಲೆಯಲ್ಲಿ ಸುದೀಪ್ ಹಲವು ವಿಷಯಗಳನ್ನು ಹಂಚಿಕೊಂಡರು. ಅವುಗಳ ತುಣುಕುಗಳು ಇಲ್ಲಿವೆ.

1. ವರ್ಷಕ್ಕೆ ಎರಡ್ಮೂರು ಸಿನಿಮಾ ಮಾಡಬೇಕು ಎನ್ನುವ ಆಸೆ ಇದೆ. ಆ ದಿಕ್ಕಿನಲ್ಲೇ ಹೋರಾಟ ಇರುತ್ತದೆ. ಆದರೆ ಕಾರಣಾಂತರಗಳಿಂದ ಸಿನಿಮಾಗಳು ವಿಳಂಬವಾಗುತ್ತವೆ. ಇಷ್ಟು ವರ್ಷಗಳಿಂದ ಸತತವಾಗಿ ಒಮ್ಮೆಗೆ ಒಂದೇ ಸಿನಿಮಾ ಮಾಡಿಕೊಂಡು ಬಂದಿದ್ದೇನೆ. ಮುಂದೆ ನಾನೇ ಹಾಕಿಕೊಂಡು ಈ ನಿಯಮವನ್ನು ಮುರಿಯುತ್ತೇನೆ. ಒಮ್ಮೆಯೇ ಎರಡು ಅಥವಾ ಮೂರು ಸಿನಿಮಾ ಮಾಡಲಿದ್ದೇನೆ. ಹೀಗಾದಾಗ ಮಾರುಕಟ್ಟೆಯಲ್ಲಿ ನನ್ನ ಸಿನಿಮಾಗಳು ಬರುತ್ತಿವೆ ಎನ್ನುವ ಖುಷಿಯೂ ಇರುತ್ತದೆ. ಮನೆಯಲ್ಲಿ ಕಾಲ ಕಳೆಯುವುದೂ ತಪ್ಪುತ್ತದೆ. ಮುಂದೆ ಸತತವಾಗಿ ಶೂಟಿಂಗ್‌ನಲ್ಲಿ ಇರುತ್ತೇನೆ ಎನ್ನುವ ಭರವಸೆ ಕೊಡುತ್ತೇನೆ.

2. 'ಮ್ಯಾಕ್ಸ್' ಸಿನಿಮಾವನ್ನು ಬೇಗ ರಿಲೀಸ್ ಮಾಡಬೇಕು ಎನ್ನುವ ಆಸೆ ನನಗೂ ಇದೆ. ಸೋಷಿಯಲ್ ಮೀಡಿಯಾದಲ್ಲಿ ನನ್ನನ್ನು ಕ್ರಿಕೆಟರ್ ರೀತಿ ಟ್ರೀಟ್ ಮಾಡುತ್ತಿದ್ದಾರೆ. ಅಭಿಮಾನಿಗಳು ಸೆಲ್ಫಿ, ಆಟೋಗ್ರಾಫ್ ಬಿಟ್ಟು 'ಅಣ್ಣಾ ಹೇಗಿದ್ದೀರಿ?' ಎಂದು ಕೇಳುವ ಸ್ಥಿತಿ ಎದುರಾಗಿದೆ. ಜನ ಮರೆತುಹೋಗುವ ಮೊದಲು ಸಿನಿಮಾ ರಿಲೀಸ್ ಮಾಡಬೇಕು. ಯಾರು ಎಷ್ಟೇ ದೊಡ್ಡ ಕಲಾವಿದರಾಗಿರಲಿ ಸತತವಾಗಿ ಮಾರುಕಟ್ಟೆಯಲ್ಲಿ ಬಾಗಿಲು ತಟ್ಟುವುದು ಕರ್ತವ್ಯ.

3. ಸಿನಿಮಾಗಳು ದೊಡ್ಡದಾಗಿರುವಷ್ಟು ಸಮಸ್ಯೆಗಳೂ ದೊಡ್ಡದಾಗಿರುತ್ತವೆ. ದೊಡ್ಡ ಸಿನಿಮಾಗಳು ಡಿಜಿಟಲ್ ಹಕ್ಕುಗಳ ಮಾರಾಟದ ಮೇಲೆ ಅವಲಂಬಿತವಾಗಿರುತ್ತವೆ. ಚಿತ್ರಮಂದಿರಗಳಲ್ಲಿ ಗಳಿಕೆ ಇಲ್ಲವೆಂದಿಲ್ಲ. ಆದರೆ ಈ ಗಳಿಕೆಯ ಅವಧಿ ಇಳಿಕೆಯಾಗಿದೆ. ಜೊತೆಗೆ ಸಿನಿಮಾಗಳ ಬಜೆಟ್ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಒಟ್ಟಾರೆ ವ್ಯವಹಾರದ ಮೇಲೆ ಅವಲಂಬಿತವಾಗಿರಲೇಬೇಕು. ಕೆಲವೊಮ್ಮೆ ಡಿಜಿಟಲ್ ಹಕ್ಕುಗಳ ಮಾರಾಟಕ್ಕೆ ಕಾಯದೆ ಚಿತ್ರಮಂದಿರಗಳಿಗೆ ಬರಬಹುದು. ಆದರೆ ಕೆಲವೊಮ್ಮೆ ಕಾಯಲೇಬೇಕಾಗುತ್ತದೆ. ಈಗ ಸಿನಿಮಾ ವ್ಯವಹಾರ ಬದಲಾಗಿದೆ. ಸಿನಿಮಾ ಮಾಡುವುದಷ್ಟೇ ಅಲ್ಲ, ವ್ಯವಹಾರದಲ್ಲೂ ಸ್ಮಾರ್ಟ್ ಆಗಿರಬೇಕು.

4. 'ಮ್ಯಾಕ್ಸ್' ಬಳಿಕ ಅನೂಪ್ ಭಂಡಾರಿ ನಿರ್ದೇಶನದ 'ಬಿಲ್ಲಾ ರಂಗಾ ಬಾಷಾ' ಸಿನಿಮಾ ಸೆಟ್ಟೇರಲಿದೆ. ಈ ಸಿನಿಮಾಗೆ ನಾವು ಆರೇಳು ವರ್ಷಗಳಿಂದ ಕೆಲಸ ಮಾಡುತ್ತಿದ್ದೇವೆ. 'ಬಿಲ್ಲಾ ರಂಗಾ ಬಾಷಾ' ಸಿನಿಮಾವನ್ನು ಮಾಡಲು ಸಾಧ್ಯವೇ ಎನ್ನುವುದನ್ನು ತಿಳಿದುಕೊಳ್ಳಲು ನಾವು 'ವಿಕ್ರಾಂತ್ ರೋಣ' ಸಿನಿಮಾವನ್ನು ಮಾಡಿದೆವು. ಏಕೆಂದರೆ ಎಷ್ಟೋ ಸಿನಿಮಾವನ್ನು ಮಾಡಲು ಹೆಜ್ಜೆ ಇಡುವಾಗ ಹಣವಿರುತ್ತದೆ, ಆದರೆ ಅದನ್ನು ಮಾಡುವ ಸಾಮರ್ಥ್ಯವಿದೆಯೇ ಎಂದು ತಿಳಿದಿರುವುದಿಲ್ಲ. ನಾವು ಏನನ್ನೋ ಹೇಳಲು ಹೋಗಿ ತೆರೆ ಮೇಲೆ ಜೋಕ್ ಆಗಿಬಿಡಬಹುದು. 'ಬಿಲ್ಲಾ ರಂಗ ಬಾಷಾ' ಸಿನಿಮಾದ ಬಜೆಟ್, ಸ್ಕೇಲ್‌ಗೆ ಹತ್ತಿರವಾದ ಸಿನಿಮಾ ಮಾಡೋಣ ಎಂದು ನಿರ್ಧರಿಸಿ 'ವಿಕ್ರಾಂತ್ ರೋಣ' ಮಾಡಿದೆವು. ಇದರಲ್ಲಿ ತಂಡ ಸಿದ್ಧವಾಯಿತು, ನಮ್ಮ ಸಾಮರ್ಥ್ಯದ ಮೇಲೆ ನಂಬಿಕೆ ಬಂದಿತು. 'ಬಿಲ್ಲಾ ರಂಗಾ ಬಾಷಾ' ನನ್ನ ಇಲ್ಲಿಯವರೆಗಿನ ಸಿನಿಪಯಣದ ಅತಿ ದೊಡ್ಡ ಸಿನಿಮಾ. 2025ರಲ್ಲಿ ಈ ಸಿನಿಮಾ ಬಿಡುಗಡೆಯಾಗಲಿದೆ. ಸತ್ಯಜ್ಯೋತಿ ನಿರ್ಮಾಣದ ಸಿನಿಮಾವೂ ಖಚಿತವಾಗಿದೆ. ಮುಂದಿನ 25 ದಿನದೊಳಗೆ ನಾಲ್ಕೈದು ಸಿನಿಮಾಗಳನ್ನು ಲಾಕ್ ಮಾಡಿಕೊಳ್ಳಲಿದ್ದೇನೆ. ನನ್ನ ನಿರ್ದೇಶನದ ಮುಂದಿನ ಚಿತ್ರವನ್ನು ಕೆಆರ್‌ಜಿ ನಿರ್ಮಾಣ ಮಾಡಲಿದೆ.

5. ಅತ್ತ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗದ ಸಿನಿಮಾಗಳನ್ನು ಒಟಿಟಿಗಳು ಖರೀದಿಸುತ್ತಿಲ್ಲ. ಕೆಲವು ಒಟಿಟಿಯವರು ಖರೀದಿಯನ್ನೇ ನಿಲ್ಲಿಸಿದ್ದಾರೆ. ಮನೆಯಲ್ಲಿ ದೇವರ ಕೋಣೆ ಇದೆ ಎಂದು ದೇವಸ್ಥಾನಕ್ಕೆ ಹೋಗದೇ ಇರುತ್ತೇವೆಯೇ? ಚಿತ್ರಮಂದಿರಗಳ ಅನುಭವವೇ ಬೇರೆ. ಜನರನ್ನು ಚಿತ್ರಮಂದಿರದತ್ತ ಸೆಳೆಯುವಂಥಹದ್ದು ಏನು ಮಾಡಿದ್ದೀರಿ ಎನ್ನುವುದು ಮುಖ್ಯವಾಗುತ್ತದೆ. ಚಿತ್ರಮಂದಿರಗಳ ಕಲೆಕ್ಷನ್ ಚೆನ್ನಾಗಿದೆ. ಈ ಮಾರುಕಟ್ಟೆ ಹಾಳಾಗಿಲ್ಲ. ಈ ದೇವಸ್ಥಾನಕ್ಕೆ ಯಾವತ್ತೂ ಬೀಗ ಬೀಳಲ್ಲ. ಕನಿಷ್ಠ 30–36 ಲಕ್ಷ ಜನ ಸಿನಿಮಾ ನೋಡಿದರೆ ಅದರ ಗಳಿಕೆ ಎಷ್ಟು ಗೊತ್ತೇ? ಆದರೆ ಅಷ್ಟು ಜನ ನೋಡುತ್ತಿಲ್ಲ.

6. ಒಬ್ಬ ಒಳ್ಳೆ ಕಲಾವಿದ ನಿರ್ದೇಶಕ ಆಗಿಯೇ ಆಗುತ್ತಾನೆ. ನಿರ್ದೇಶಕರಾದ ಮೇಲೆ ಸ್ವಾರ್ಥ ಎನ್ನುವುದನ್ನು ಬಿಟ್ಟು ಇನ್ನೊಬ್ಬ ಕಲಾವಿದನಿಗೆ ಕಥೆ ಬರೆದು ಬಂದರೆ ಏನಾದರೂ ಆಗಲಿ ಆ ಸಿನಿಮಾವನ್ನು ಖಂಡಿತಾ ಮಾಡುತ್ತೇನೆ.

7. 'ಮಾರ್ಟಿನ್' ಧ್ರುವ ಸರ್ಜಾ ಅವರಿಗೆ ವೈಯಕ್ತಿಕವಾಗಿ ಹಾಗೂ ಕನ್ನಡ ಚಿತ್ರರಂಗಕ್ಕೆ ಹೆಸರು ತಂದುಕೊಡಲಿದೆ. ಧ್ರುವಗೆ ಪ್ಯಾನ್ ಇಂಡಿಯಾ ಮಟ್ಟದಲ್ಲಿ ದೊಡ್ಡ ಸ್ಟಾರ್ ಆಗಿ ನಿಲ್ಲುವ ಅರ್ಹತೆ, ಯೋಗ್ಯತೆ ಇದೆ. ರಕ್ಷಿತ್, ಆತ ಒಂದು ಮಗುವಿನಂತೆ. ಎಲ್ಲದರಲ್ಲೂ ಆಸಕ್ತಿ ಹೊಂದಿದಾತ. ಇಂತಹ ಮಕ್ಕಳಿಗೆ ನಾವು ಸ್ವಾತಂತ್ರ್ಯ ನೀಡಬೇಕು. ಕಟ್ಟಿಹಾಕಿ ನಮ್ಮದೇ ಸಿನಿಮಾ ಮಾಡು ಎನ್ನಲು ಸಾಧ್ಯವಿಲ್ಲ. ಹೇಮಂತ್ ಎಂ.ರಾವ್ ಅವರ ನಿರ್ದೇಶನದಲ್ಲಿ ಕೆಲಸ ಮಾಡಲು ಕಾತುರನಾಗಿದ್ದೇನೆ. ❖

ಬಿಗ್‌ಬಾಸ್ ಕಥೆ ಏನು?

ಬಿಗ್‌ಬಾಸ್ ಹೊಸ ಆವೃತ್ತಿ ಬಗ್ಗೆ ಚರ್ಚೆ ನಡೆಯುತ್ತಿದೆ. ಬಿಗ್‌ಬಾಸ್‌ಗೆ ಹತ್ತು ವರ್ಷ ನನ್ನ ಜೀವನವನ್ನು ನೀಡಿದ್ದೇನೆ. ಈ ಕಾರ್ಯಕ್ರಮ ನಡೆಸಿಕೊಡುವಲ್ಲಿ ನನ್ನ ಭಾಗದಿಂದ ಹೆಚ್ಚು ಪ್ರಯತ್ನವಿದೆ. ಬಿಗ್‌ಬಾಸ್ ಶೋಗಳನ್ನು ಆಸ್ವಾದಿಸಿದ್ದೇನೆ, ಅದಕ್ಕೆ ಸಮಯ ನೀಡಿದ್ದೇನೆ, ಶೋ ಮಾಡಲು ಆಸಕ್ತಿಯೂ ಇದೆ. ಆದರೆ ಕೆಲವೊಮ್ಮೆ ನಾವು ಮುಂದುವರಿಯಬೇಕಾಗುತ್ತದೆ. ಈ ನಿಟ್ಟಿನಲ್ಲಿ ಚರ್ಚೆ ನಡೆದಿದೆ. ಅವರು ಹೊಸಮುಖ ಹುಡುಕಲಿ ಎಂದು ನಾನು ವೈಯಕ್ತಿಕವಾಗಿ ಬಯಸುತ್ತೇನೆ.

ಇದು ಹೊಸ ಕೆ–ಡ್ರಾಮಾ

ಅಭಿಲಾಷ್ ಪಿ.ಎಸ್.

● 2022ರಲ್ಲಿ ನಿಮ್ಮ ಸಿನಿಪಯಣ ಆರಂಭವಾಯಿತು. ಚೊಚ್ಚಲ ಸಿನಿಮಾದ ನಿರೀಕ್ಷೆ ಏನಿದೆ?

ವಾರದ ಹಿಂದೆ (ಆ.30) ನಾನು ನಟಿಸಿದ್ದ 'ಮೈ ಹೀರೋ' ಸಿನಿಮಾ ಬಿಡುಗಡೆಯಾಗಿತ್ತು. ಇದು ಕಮರ್ಷಿಯಲ್ ಮಾದರಿಯಲ್ಲ, ಸಾಕ್ಷ್ಯಚಿತ್ರದ ಮಾದರಿಯಲ್ಲಿತ್ತು. ಹಾಗೆ ನೋಡಿದರೆ 'ಇಬ್ಬನಿ ತಬ್ಬಿದ ಇಳೆಯಲಿ' ನನ್ನ ಮೊದಲ ಕಮರ್ಷಿಯಲ್ ಸಿನಿಮಾ. 2022ರ ಅಕ್ಟೋಬರ್‌ನಲ್ಲಿ ಮೊದಲು ಸಹಿ ಹಾಕಿದ್ದು, ಶೂಟಿಂಗ್ ಆರಂಭಿಸಿದ್ದು ಇದೇ ಸಿನಿಮಾ. ಇದು ಕೌಟುಂಬಿಕ ಸಿನಿಮಾವೂ ಹೌದು, ಸ್ನೇಹಿತರ ಜೊತೆಗೂಡಿ ಹೋಗಬಹುದಾದ ಸಿನಿಮಾವೂ ಆಗಿದೆ. 'ಅಮೃತ ವರ್ಷಿಣಿ', 'ನಮ್ಮೂರ ಮಂದಾರ ಹೂವೆ', 'ಅಮೆರಿಕಾ! ಅಮೆರಿಕಾ!!', 'ಹೂಮಳೆ' ಚಿತ್ರಗಳಲ್ಲಿ ಹೇಗೆ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೋ ಅದೇ ರೀತಿ ಭಾವನೆಗಳನ್ನು ಇಟ್ಟುಕೊಂಡು ನಮ್ಮ ಈ ಸಿನಿಮಾ ಕಥೆ ಹೆಣೆಯಲಾಗಿದೆ. ಸಾಹಿತ್ಯಕ್ಕೆ ಒತ್ತುಕೊಟ್ಟು ಕಾವ್ಯಾತ್ಮಕವಾಗಿ ದೃಶ್ಯರೂಪದಲ್ಲಿ ಈ ಸಿನಿಮಾ ಕಟ್ಟಿಕೊಟ್ಟಿದ್ದೇವೆ. ಹಾಗೆಂದು ಇದು ಹಳೇ ಕಾಲದ ಸಿನಿಮಾದ ಫೀಲ್ ಕೊಡುವುದಿಲ್ಲ. ಇದು ಕನ್ನಡ ಚಿತ್ರರಂಗಕ್ಕೆ ಹೊಸಶೈಲಿಯ ಸಿನಿಮಾ ಎನ್ನಬಹುದು.

ಈ ಸಿನಿಮಾದ ಮೇಕಿಂಗ್, ಸಿನಿಮಾಟೋಗ್ರಫಿ, ದೃಶ್ಯಗಳು, ಸಂಗೀತವಿದೆಯಲ್ಲ ಅದು ಕೆ–ಡ್ರಾಮಾ (ಕೊರಿಯನ್ ಸಿನಿಮಾಗಳು) ಪ್ರೇಮಕಥೆಗಳಿಂತ ಚೆನ್ನಾಗಿ ಮೂಡಿಬಂದಿದೆ. ಇದರ ಬಗ್ಗೆ ಚರ್ಚೆಗಳು ನಡೆಯಲಿದೆ. ಸಿನಿಮಾದಲ್ಲಿ ಪಾತ್ರದ ಪರಿಚಯ ಮತ್ತು ಪೋಷಣೆ, ಕಥೆಯ ರೂಪ ಬಹಳ ಕಾವ್ಯಾತ್ಮಕವಾಗಿದೆ. ಪ್ರತಿಯೊಂದು ಫ್ರೇಮ್‌ಗಳನ್ನು ನೋಡುವಾಗ ಒಂದು ಕೃತಿಯನ್ನು ಓದಿದ ಅನುಭವ ಜನರಿಗೆ ಆಗಲಿದೆ. ಈ ಸಿನಿಮಾವನ್ನು ಚಿತ್ರಮಂದಿರದಲ್ಲೇ ಅನುಭವಿಸಬೇಕು. ಚಿತ್ರಮಂದಿರದಲ್ಲಿ ನೋಡುವ ಸಿನಿಮಾ ಎಂದರೆ ಹೀಗಿರಬೇಕು ಎಂದು ಜನ ಮಾತನಾಡಿಕೊಳ್ಳಬೇಕು ಎಂಬ ನಿರೀಕ್ಷೆಯಲ್ಲಿ ನಾನಿದ್ದೇನೆ.

● ಹೊಸಬರ ಮೇಲೆ ಭರವಸೆ ಇಟ್ಟು ಬಂಡವಾಳ ಹೂಡಿದ ರಕ್ಷಿತ್ ಶೆಟ್ಟಿ ಬಗ್ಗೆ...

ಈ ಸಿನಿಮಾದ ಕಥೆ ಉತ್ಕೃಷ್ಟವಾಗಿದೆ. ಜೊತೆಗೆ ನಿರ್ದೇಶನವೂ ಅಷ್ಟೇ. ರಕ್ಷಿತ್ ಅವರು ಸಂಪೂರ್ಣವಾದ ನಂಬಿಕೆಯನ್ನು ನಿರ್ದೇಶಕರಾದ ಚಂದ್ರಜಿತ್ ಬೆಳ್ಳಪ್ಪ ಅವರ ಮೇಲೆ ಇಟ್ಟಿದ್ದರು. ಆ ನಂಬಿಕೆ ಎನ್ನುವುದು ಹಲವಾರು ರೀತಿ ಕವಲೊಡೆಯಿತು. ಕಲಾವಿದರು, ತಂತ್ರಜ್ಞರ ಆಯ್ಕೆ ವಿಚಾರದಲ್ಲಿ ಇದನ್ನು ನೀವು ಕಾಣಬಹುದು. ನಾನು ಅವರನ್ನು ನಾಲ್ಕೈದು ಬಾರಿ ಭೇಟಿಯಾಗಿರಬಹುದು. ಸಿನಿಮಾದ ಮೇಲೆ ರಕ್ಷಿತ್ ಅವರಿಗೆ ಇರುವ ಒಲವು ಅಪಾರ. ಕಲೆಗೆ ಅವರು ಕೊಡುವ ಬೆಲೆ ಇದು. ಶಿಸ್ತು, ಪ್ರಾಮಾಣಿಕತೆ, ನಂಬಿಕೆ ಅವರಿಗೆ ಮುಖ್ಯವಾಗಿದೆ.

● ಈ ವರ್ಷ ಅತ್ಯುತ್ತಮ ನಟಿ ಪ್ರಶಸ್ತಿ ನಿಮಗೇ ಎಂದು ರಕ್ಷಿತ್ ಹೇಳಿದ್ದಾರೆ...

ಅದು ಅವರ ದೊಡ್ಡ ಗುಣ. ಈ ಮಾತನ್ನು ರಕ್ಷಿತ್ ಶೆಟ್ಟಿ ಅವರು ಹೇಳಿದ್ದಾರೆ ಎನ್ನುವುದಕ್ಕಿಂತ ನನ್ನ ಸಿನಿಮಾದ ನಿರ್ಮಾಪಕರಾಗಿ ಅವರು ಈ ರೀತಿ ಹೇಳಿದ್ದಾರೆ ಎನ್ನುವುದು ಮುಖ್ಯ. ಈ ರೀತಿ ಪ್ರೋತ್ಸಾಹ ಪ್ರಶಸ್ತಿ ಸಿಕ್ಕಿದಷ್ಟೇ ಖುಷಿ ನೀಡುತ್ತದೆ. ಈ ಮಾತು ನಾನು ನನ್ನ ಪಾತ್ರಕ್ಕೆ ನ್ಯಾಯ ಒದಗಿಸಿದ್ದೇನೆ ಎಂಬ ಭರವಸೆ ಮೂಡಿಸಿದೆ. ಪ್ರೇಕ್ಷಕರಿಗಿಂತ ಮೊದಲೇ ನಿರ್ಮಾಪಕರು ನನ್ನ ಪಾತ್ರವನ್ನು ಒಪ್ಪಿಕೊಂಡಿದ್ದಾರೆ ಎನ್ನುವುದಕ್ಕೆ ಇದು ಸಾಕ್ಷಿಯಾಗಿದೆ.

● ಹೊಸ ಸಿನಿಮಾಗಳು ಎಲ್ಲಿಯವರೆಗೆ ಬಂದವು?

'ಜಸ್ಟ್ ಮ್ಯಾರೀಡ್' ಹಾಗೂ 'ಸತ್ಯ ಸನ್ ಆಫ್ ಹರಿಶ್ಚಂದ್ರ' ಸಿನಿಮಾಗಳ ಶೂಟಿಂಗ್ ಪೂರ್ಣಗೊಂಡಿದೆ. ಇವುಗಳ ಪೋಸ್ಟ್ ಪ್ರೊಡಕ್ಷನ್ ನಡೆಯುತ್ತಿವೆ. 'ಸತ್ಯ ಸನ್ ಆಫ್..' ಸಿನಿಮಾದ ಡಬ್ಬಿಂಗ್ ಹಾಗೂ ಪ್ಯಾಚ್‌ವರ್ಕ್ ಬಾಕಿ ಇದೆ. ಇದರಲ್ಲಿ ಕಥೆಯೇ ನನ್ನ ಪಾತ್ರದ ಮೇಲೆ ಹೋಗುತ್ತದೆ. ಇದನ್ನು ಹೊರತುಪಡಿಸಿ ಹೊಸ ಕಥೆಗಳು ಬರುತ್ತಿವೆ. ಆದರೆ ಯಾವುದನ್ನೂ ಒಪ್ಪಿಕೊಳ್ಳುವ ಮನಃಸ್ಥಿತಿಯಲ್ಲಿ ನಾನಿಲ್ಲ. ಏಕೆಂದರೆ ಇನ್ನೂ ಎರಡು ಸಿನಿಮಾಗಳು ಬಿಡುಗಡೆಯಾಗಬೇಕಿವೆ. ಮುಖ್ಯವಾಗಿ 'ಇಬ್ಬನಿ ತಬ್ಬಿದ ಇಳೆಯಲಿ' ಸಿನಿಮಾದ ಫಲಿತಾಂಶ ನನ್ನ ಮುಂದಿನ ಸಿನಿಮಾಗಳ ಗೈಡ್ ಆಗಿರಲಿದೆ. ❖

ವೀರೇಶ್ ಸಿನಿಮಾಸ್

ಜೆ.ಪಿ.ನಗರ ಸಿದ್ಧಲಿಂಗೇಶ್ವರ
PVR INOX: MALL OF ASIA | NEXUS | ORION | VAISHNAVI | REGALIA | MARKETCITY | AURA | VEGACITY | SPIRIT | UPTOWN | BHARTIYA | REX | GT | VR MALL | GLOBAL | FALCONCITY | SWAGATH | CENTRAL | LIDO | MANTRI | RMZ | GARUDA | YELAHANKA | NEIGHBOURHOOD | SBR | BROOKFIELD
cinépolis: ETA | MEENAKSHI | ORION EAST | LULU | SHANTINIKETAN | SJR
GOPALAN CINEMAS: ARCH | INNOVATION | GRAND | SIGNATURE | LEGACY
ROCKLINE cinemas JALAHALLI
MIRAJ SUNKADAKATTE
CINEPHILE THE MOVIE HUB HSR LAYOUT
VAISHNAVI VAIBHAVI UTHARAHALLI
Balaji Cinemas : Multiplex CHIKKALASANDRA
V CINEMAS RAMMURTHYNAGAR
ತುಮಕೂರು ಮಾರುತಿ, PVR INOX
ಮೈಸೂರು PVR INOX GARUDA | FORUM | SATYAM, DRC CINEMAS, VISION CINEMAS
ಶಿವಮೊಗ್ಗ Bharath Cinemas
ದಾವಣಗೆರೆ MOVIETIME
ಬಳ್ಳಾರಿ MOVIETIME
ಹುಬ್ಬಳ್ಳಿ PVR INOX, cinépolis
ಧಾರವಾಡ PVR INOX
ಬೆಳಗಾವಿ PVR INOX, KAPEEL
ಗುಲ್ಬರ್ಗ PVR INOX, MIRAJ
ರಾಯಚೂರು MIRAJ
ಬೀದರ್ ಸಪ್ನ
ಗಂಗಾವತಿ ಶಿವೆ
ಮಂಗಳೂರು PVR INOX, cinépolis, Bharath Cinemas
ಉಡುಪಿ Bharath Cinemas
ಮಣಿಪಾಲ PVR INOX, Bharath Cinemas
ಕುಂದಾಪುರ Bharath Cinemas
ಸುರತ್ಕಲ್ Cine GALAXY
ಪಡುಬಿದ್ರೆ Bharath Cinemas
ಪುತ್ತೂರು Bharath Cinemas

ಮೂರು ಚಿತ್ರಗಳು ತೆರೆಗೆ

ಚಂದ್ರಜಿತ್ ಬೆಳ್ಳಪ್ಪ ನಿರ್ದೇಶನದ 'ಇಬ್ಬನಿ ತಬ್ಬಿದ ಇಳೆಯಲಿ' ಸಿನಿಮಾ ಸೇರಿದಂತೆ ಇಂದು(ಸೆ.6) ಮೂರು ಸಿನಿಮಾಗಳು ತೆರೆಕಾಣಲಿವೆ.

ಮಯೂರಿ, ವಿಹಾನ್

ಇಬ್ಬನಿ ತಬ್ಬಿದ ಇಳೆಯಲಿ

ನಟ ರಕ್ಷಿತ್ ಶೆಟ್ಟಿ ಸಾರಥ್ಯದ ಪರಂವಃ ಸ್ಟುಡಿಯೋಸ್ ನಿರ್ಮಾಣ ಮಾಡಿರುವ, ಚಂದ್ರಜಿತ್ ಬೆಳ್ಳಪ್ಪ ನಿರ್ದೇಶದ ಸಿನಿಮಾ ಇದಾಗಿದೆ. ರಕ್ಷಿತ್ ಶೆಟ್ಟಿ ಅವರ 'ಸೆವೆನ್ ಆಡ್ಸ್' ಚಿತ್ರದ ಭಾಗವಾಗಿರುವ ಚಂದ್ರಜಿತ್ 9 ವರ್ಷಗಳ ಹಿಂದೆ ತಮ್ಮ ಬ್ಲಾಗ್‌ನಲ್ಲಿ ಬರೆದ ಕಥೆ ಇಂದು ಸಿನಿಮಾವಾಗಿದೆ. 'ಕಿರಿಕ್ ಪಾರ್ಟಿ' ಮತ್ತು 'ಅವನೇ ಶ್ರೀಮನ್ನಾರಾಯಣ' ಚಿತ್ರಗಳ ಚಿತ್ರಕಥೆಯಲ್ಲಿ ತೊಡಗಿಸಿಕೊಂಡಿದ್ದ ಚಂದ್ರಜಿತ್ 'ಕಥಾಸಂಗಮ' ಚಿತ್ರದಲ್ಲಿ 'ರೇನ್ಬೋ ಲ್ಯಾಂಡ್' ಕಥೆಯನ್ನು ನಿರ್ದೇಶಿಸಿದ್ದಾರೆ. 'ಪ್ರೀತಿ ಎಂದರೆ ಏನು? ಹಳೆಯ ನೆನಪುಗಳಾ? ನಾಳೆ ಜೊತೆಯಾಗಿರಬೇಕು ಎಂಬ ಕನಸುಗಳಾ? ದೂರವಾದ ನಂತರದ ಚಡಪಡಿಕೆಯಾ? ಇದೆಲ್ಲದರ ಸಂಗಮವೇ 'ಇಬ್ಬನಿ ತಬ್ಬಿದ ಇಳೆಯಲಿ' ಸಿನಿಮಾ. ಇದೊಂದು ಕಾವ್ಯಾತ್ಮಕ ಪ್ರೇಮಕಥೆ. ಬೇಷರತ್ತಾಗಿ ಪ್ರೀತಿಸುವುದನ್ನು ಸಂಭ್ರಮಿಸುವ ಚಿತ್ರವಿದು. ನಿನ್ನೆ, ಇಂದು ಮತ್ತು ನಾಳೆಯ ಪ್ರೀತಿಯನ್ನು ತೋರಿಸುವ ಚಿತ್ರ. ಕಾಲೇಜಿನಿಂದ ಪ್ರಾರಂಭವಾಗುವ ಈ ಕಥೆಯು ಪ್ರೌಢಾವಸ್ಥೆಯಲ್ಲಿ ಅಂತ್ಯವಾಗುತ್ತದೆ. ಹೀಗೆ ಒಂದು ದಶಕದ ವಿವಿಧ ಕಾಲಘಟ್ಟವನ್ನು ಈ ಚಿತ್ರವು ಸೂಕ್ಷ್ಮವಾಗಿ ತೋರಿಸಲಿದೆ' ಎಂದಿದ್ದಾರೆ ಚಂದ್ರಜಿತ್. ಸಿನಿಮಾದಲ್ಲಿ 'ಪಂಚತಂತ್ರ' ಖ್ಯಾತಿಯ ವಿಹಾನ್ ಹಾಗೂ 'ನಮ್ಮನೆ ಯುವರಾಣಿ' ಖ್ಯಾತಿಯ ಅಂಕಿತಾ ಅಮರ್ ಹಾಗೂ ಮಯೂರಿ ನಟರಾಜ್ ನಟಿಸಿದ್ದಾರೆ. ಚಿತ್ರಕ್ಕೆ ಗಗನ್ ಬಡೇರಿಯಾ ಸಂಗೀತ ಮತ್ತು ಶ್ರೀವತ್ಸನ್ ಸೆಲ್ವರಾಜನ್ ಅವರ ಛಾಯಾಚಿತ್ರಗ್ರಹಣವಿದೆ.

ಎ ಡೇ ಇನ್ ಡಾಲರ್ಸ್‌ಪೇಟೆ

ಬಹುತೇಕ ಹೊಸಬರೇ ಇರುವ ಸಿನಿಮಾ ಇದು. ಮೋಹನ್ ಎನ್. ಮುನಿನಾರಾಯಣಪ್ಪ ಆ್ಯಕ್ಷನ್ ಕಟ್ ಹೇಳಿರುವ ಈ ಚಿತ್ರ ಸತ್ಯ ಘಟನೆ ಆಧರಿತ ಸಿನಿಮಾವಾಗಿದೆ. ತಮಿಳುನಾಡಿನ ಬ್ಯಾಂಕ್‌ವೊಂದರ ಮ್ಯಾನೇಜರ್ ಆಕಸ್ಮಿಕವಾಗಿ ₹13 ಕೋಟಿಗಳನ್ನು ನೂರು ಜನರ ಖಾತೆಗೆ ಹಾಕಿಬಿಡುತ್ತಾನೆ. ಈ ಘಟನೆಯ ಸುತ್ತ ಈ ಸಿನಿಮಾ ಸಾಗುತ್ತದೆ ಎಂದಿದೆ ಚಿತ್ರತಂಡ. ಹೈಪರ್ ಲಿಂಕ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಸಿನಿಮಾದಲ್ಲಿ 'ಲೂಸಿಯಾ' ಖ್ಯಾತಿಯ ಪವನ್ ಪತ್ನಿ ಸೌಮ್ಯ ಜಗನ್‌ಮೂರ್ತಿ, 'ಮೆಟ್ರೊ ಸಾಗಾ'ದ ಆಕರ್ಷ್ ಕಮಲ, ವೆಂಕಟ್ ರಾಜ್, ಕುಶಾಲ್ಸ್ ಮುಖ್ಯಪಾತ್ರದಲ್ಲಿ ಅಭಿನಯಿಸಿದ್ದು, 'ದಿಯಾ' ಖ್ಯಾತಿಯ ಪೃಥ್ವಿ ಅಂಬಾರ್ ಅತಿಥಿ ಪಾತ್ರದಲ್ಲಿ ನಟಿಸಿದ್ದಾರೆ. ಉಳಿದಂತೆ ದತ್ತು ಬಣಕರ್, ಕೌಶಿಕ್, ರಾಘು ರಾಮಕೊಪ್ಪ, ಹೊನ್ನವಳ್ಳಿ ಕೃಷ್ಣ ಮತ್ತಿತರರು ತಾರಾಬಳಗದಲ್ಲಿದ್ದಾರೆ.

ಅನ್ನ

ನಂದನ್

ಎನ್.ಎಸ್. ಇಸ್ಲಾಹುದ್ದೀನ್

ಇದು ಎನ್.ಎಸ್. ಇಸ್ಲಾಹುದ್ದೀನ್ ನಿರ್ದೇಶನದ ಚಿತ್ರ. ಈ ಚಿತ್ರದ ಕಥೆ ಹನೂರು ಚನ್ನಪ್ಪ ಅವರದು. ಹನೂರು ಅವರ ಕಥಾಸಂಕನದಲ್ಲಿನ 'ಅನ್ನ' ಎಂಬ 22 ಪುಟಗಳ ಕಥೆ ಒಂದಾಗಿದೆ. '80ರ ಕಾಲಘಟ್ಟದಲ್ಲಿ ನಡೆಯುವ ಕಥೆ ಇದಾಗಿದೆ. ಕೆಲವೊಂದು ಹಳ್ಳಿಗಾಡುಗಳಲ್ಲಿ ಅನ್ನ ಹಬ್ಬದ ದಿನ ಮಾತ್ರ ಮಾಡುವುದು ಎಂದು ತಿಳಿದಿತ್ತು. ಈ ಕಥೆಯು ಇದರ ಸುತ್ತವೇ ತಿರುಗಲಿದ್ದು, ಹಳ್ಳಿಯ ಬಡಕುಟುಂಬದಲ್ಲಿ ಬೆಳೆದ ಹುಡುಗನೊಬ್ಬ ಜಾತ್ರೆಯಲ್ಲಿ ನಾಪತ್ತೆಯಾಗಿ ತದನಂತರ ಅವನ ಹುಡುಕಾಟದಲ್ಲಿ ಎದುರಾಗುವ ಒಂದಷ್ಟು ಸಮಸ್ಯೆಗಳ ನಡುವೆ ಅನ್ನದ ಅರಿವು ಮೂಡಿಸುವ ಪ್ರಯತ್ನ ಇದಾಗಿದೆ' ಎಂದಿದ್ದಾರೆ ನಿರ್ದೇಶಕರು. ಈ ಚಿತ್ರ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡಿದೆ. ಮಾಸ್ಟರ್ ನಂದನ್ 'ಮಹದೇವ' ಎಂಬ ಪಾತ್ರದಲ್ಲಿ ನಟಿಸಿದ್ದು, ಪದ್ಮಶ್ರೀ, ಸಿದ್ದು ಪ್ರಸನ್ನ, ಸಂಪತ್, ಬಲ ರಾಜವಾಡಿ ಮತ್ತಿತರರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಝೈದ್‌ಗೆ ರಚಿತಾ, ಮಲ್ಲೈಕಾ ಸಾಥ್

ರಚಿತಾರಾಮ್

ಮಲ್ಲೈಕಾ

'ಬನಾರಸ್' ಸಿನಿಮಾ ಬಳಿಕ ನಟ ಝೈದ್ ಖಾನ್‌ಗೆ 'ಉಪಾಧ್ಯಕ್ಷ' ಚಿತ್ರದ ನಿರ್ದೇಶಕ ಅನಿಲ್ ಕುಮಾರ್ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಕಳೆದ ಏಪ್ರಿಲ್‌ನಲ್ಲಿ ಘೋಷಣೆಯಾಗಿದ್ದ 'ಕಲ್ಟ್' ಎಂಬ ಶೀರ್ಷಿಕೆಯ ಈ ಚಿತ್ರಕ್ಕೆ ಇದೀಗ ಇಬ್ಬರು ನಾಯಕಿಯರ ಸೇರ್ಪಡೆಯಾಗಿದೆ.

ಚಂದನವನದ ಡಿಂಪಲ್ ಕ್ವೀನ್ ರಚಿತಾ ರಾಮ್ ಹಾಗೂ ನಟ ಚಿಕ್ಕಣ್ಣ ನಾಯಕರಾಗಿ ನಟಿಸಿದ್ದ ಚೊಚ್ಚಲ ಚಿತ್ರ 'ಉಪಾಧ್ಯಕ್ಷ'ದ ಮೂಲಕ ತಮ್ಮ ಚಂದನವನದ ಪಯಣ ಆರಂಭಿಸಿದ್ದ ಮಲ್ಲೈಕಾ ಟಿ. ವಸುಪಾಲ್ ಚಿತ್ರತಂಡ ಸೇರಿಸಿಕೊಂಡಿದ್ದಾರೆ. 'ಬನಾರಸ್' ಚಿತ್ರದಲ್ಲಿ ಮುಗ್ಧ ಹುಡುಗನಾಗಿ ಕಾಣಿಸಿಕೊಂಡಿದ್ದ ಝೈದ್ ಖಾನ್, ಈ ಚಿತ್ರದಲ್ಲಿ ಮಾಸ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಲೋಕಿ ಸಿನಿಮಾಸ್ ಈ ಸಿನಿಮಾವನ್ನು ನಿರ್ಮಾಣ ಮಾಡುತ್ತಿದೆ. ❖

ತನಿಖೆ ಆರಂಭದಲ್ಲೇ ಹಲವು ಸವಾಲು ● ಪೊಲೀಸರಲ್ಲಿ ಶಂಕೆ ಹೆಚ್ಚಿಸಿದ ಆರೋಪಿಗಳ ಗೊಂದಲಮಯ ಹೇಳಿಕೆಗಳು

ದರ್ಶನ್ ಬಂಧನದ ಹಿಂದಿನ ರೋಚಕ ಕಥನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣದ ತನಿಖೆಯ ಆರಂಭದಲ್ಲಿ ಎದುರಾದ ಹಲವು ಸವಾಲುಗಳನ್ನು ಪೊಲೀಸರು ಹಿಮ್ಮೆಟ್ಟಿಸಿ, ಚಿತ್ರನಟ ದರ್ಶನ್ ಮತ್ತು ಅವರ ಪ್ರೇಯಸಿ ಪವಿತ್ರಾ ಗೌಡ ಕೃತ್ಯದಲ್ಲಿ ಭಾಗಿಯಾಗಿರುವುದನ್ನು ಪತ್ತೆಹಚ್ಚಿದ ರೋಚಕ ಕಥನ ನ್ಯಾಯಾಲಯಕ್ಕೆ ಸಲ್ಲಿಸಿರುವ ಆರೋಪಪಟ್ಟಿಯಲ್ಲಿದೆ.

ತೀವ್ರ ಹಲ್ಲೆಯಿಂದ ರೇಣುಕಸ್ವಾಮಿ ಮೃತಪಟ್ಟಿದ್ದರಿಂದ ಆಘಾತಕ್ಕೆ ಒಳಗಾದ ಆರೋಪಿಗಳು ನಾಲ್ವರನ್ನು ಶರಣಾಗುವಂತೆ ಯೋಜನೆ ರೂಪಿಸುತ್ತಾರೆ. ನಿಖಿಲ್ ನಾಯಕ್, ಕಾರ್ತಿಕ್, ಕೇಶವಮೂರ್ತಿ ಹಾಗೂ ರಾಘವೇಂದ್ರ ಶರಣಾಗುತ್ತಾರೆ. ಹಣಕಾಸಿನ ವಿಚಾರಕ್ಕೆ ಕೊಲೆ ಮಾಡಿರುವುದಾಗಿ ಆರಂಭದಲ್ಲಿ ತಪ್ಪೊಪ್ಪಿಕೊಂಡಿರುತ್ತಾರೆ. ಆರಂಭದಲ್ಲಿ ಪೊಲೀಸರೂ ರೌಡಿಶೀಟರ್ ಹತ್ಯೆ ನಡೆದಿರಬಹುದು ಎಂದೇ ಭಾವಿಸಿರುತ್ತಾರೆ.

ಆರೋಪಿಗಳ ಹೇಳಿಕೆಯಲ್ಲಿ ಗೊಂದಲ ಇದ್ದುದ್ದರಿಂದ ಸಂಶಯಗೊಂಡ ಡಿಸಿಪಿ ಎಸ್. ಗಿರೀಶ್ ಹಾಗೂ ಎಸಿಪಿ ಚಂದನ್ ಕುಮಾರ್ ಅವರು ತೀವ್ರ ವಿಚಾರಣೆ ನಡೆಸುತ್ತಾರೆ. ಆಗ, 'ದರ್ಶನ್ ಅವರ ಪತ್ನಿಗೆ ಸಂದೇಶ ಕಳುಹಿಸಿದ್ದಕ್ಕೆ ಕೊಲೆ ಮಾಡಲಾಗಿದೆ' ಎಂದು ರಾಘವೇಂದ್ರ ಬಾಯ್ಬಿಡುತ್ತಾರೆ. ನಂತರ, ಇತರೆ ಮೂವರನ್ನು ಪ್ರತ್ಯೇಕ ಕೊಠಡಿಯಲ್ಲಿ ಕೂರಿಸಿ ವಿಚಾರಣೆ ನಡೆಸಿದಾಗ, ದರ್ಶನ್ ಅವರ ಪ್ರೇಯಸಿ ಪವಿತ್ರಾಗೌಡ ಅವರಿಗೆ ಸಂದೇಶ ಕಳುಹಿಸಿದ್ದಕ್ಕೆ ಕೃತ್ಯ ಎಸಗಿರುವುದಾಗಿ ಕೇಶವಮೂರ್ತಿ ಹೇಳುತ್ತಾರೆ. ಆಗ ಕೃತ್ಯ ಬಯಲಾಗುತ್ತದೆ.

ರಾಘವೇಂದ್ರನ ಹಿನ್ನೆಲೆ ಕೆದಕಿದಾಗ, ಚಿತ್ರದುರ್ಗದ ದರ್ಶನ್ ಅಭಿಮಾನಿಗಳ ಸಂಘದ ಅಧ್ಯಕ್ಷ ಎಂಬುದು ಗೊತ್ತಾಗುತ್ತದೆ.

'ಚಿತ್ರದುರ್ಗದಿಂದ ಶೆಡ್‌ಗೆ ಕರೆದೊಯ್ದು 'ಡಿ-ಬಾಸ್' ಸೇರಿ ಎಲ್ಲರೂ ಹೊಡೆದೆವು' ಎಂದು ತಪ್ಪೊಪ್ಪಿಕೊಳ್ಳುತ್ತಾರೆ. ಆಗ ಎಚ್ಚರಿಕೆಯ ಹೆಜ್ಜೆ ಇರಿಸಿದ ಪೊಲೀಸರು, ಎಲ್ಲರ ಮೊಬೈಲ್ ನೆಟ್‌ವರ್ಕ್ ಲೊಕೇಷನ್ ಪರಿಶೀಲಿಸುತ್ತಾರೆ. ದರ್ಶನ್, ಪವಿತ್ರಾಗೌಡ ಸೇರಿ ಎಲ್ಲ ಆರೋಪಿಗಳ ಮೊಬೈಲ್ ನೆಟ್‌ವರ್ಕ್ ಒಂದೇ ಸ್ಥಳದಲ್ಲಿ ಇರುವುದು ಪತ್ತೆಯಾಗುತ್ತದೆ.

ಜೂನ್ 11ರಂದು ನಸುಕಿನಲ್ಲಿ ಎಸಿಪಿ ಚಂದನ್ ಕುಮಾರ್ ಅವರು, ಡಿಸಿಪಿ ಗಿರೀಶ್ ಅವರಿಗೆ ಕರೆ ಮಾಡಿ, ದರ್ಶನ್ ಪ್ರಕರಣದಲ್ಲಿ ಭಾಗಿಯಾಗಿರುವ ಅನುಮಾನದ ಬಗ್ಗೆ ಮಾಹಿತಿ ನೀಡುತ್ತಾರೆ. ಬಂಧನಕ್ಕೆ ಅನುಮತಿ ಕೇಳುತ್ತಾರೆ. ಆಗಲೇ ಬಂಧನಕ್ಕೆ ಸೂಚನೆ ನೀಡಿದ ಡಿಸಿಪಿ, 'ತಕ್ಷಣವೇ ಮೈಸೂರಿಗೆ ಹೊರಡಿ' ಎನ್ನುತ್ತಾರೆ.

ದರ್ಶನ್ ಅವರು ಪತ್ನಿ ಮನೆಯಲ್ಲಿ ಪೂಜಾ ಕಾರ್ಯ ಮುಗಿಸಿಕೊಂಡು ಮೈಸೂರಿನ ಫಾರ್ಮ್ ಹೌಸ್‌ಗೆ ತೆರಳಿದ್ದರು. ಅಲ್ಲಿಂದ ಚಿತ್ರೀಕರಣದ ಸ್ಥಳಕ್ಕೆ ಹೋಗಿದ್ದರು. ಕೊಲೆ ಮಾಹಿತಿ ಬೆನ್ನಲ್ಲೇ ಎಸಿಪಿ ಚಂದನ್ ತಂಡ, ಮೈಸೂರಿಗೆ ತೆರಳಿತ್ತು. ಜಿಮ್‌ನಲ್ಲಿ ದೈಹಿಕ ಕಸರತ್ತು ನಡೆಸುತ್ತಿದ್ದ ವೇಳೆಯೇ ದರ್ಶನ್ ಅವರನ್ನು ವಶಕ್ಕೆ ಪಡೆದಿತ್ತು. ಬೆಂಗಳೂರಿಗೆ ಕರೆತಂದು ವಿಚಾರಣೆ ನಡೆಸಿದ ಬಳಿಕ ಬಂಧಿಸಲಾಗಿತ್ತು.

ಹಲ್ಲೆ ಬಳಸಲಾಗಿದ್ದ ಕೋಲು

ಹಲ್ಲೆಗೆ ಬಳಸಿದ್ದ ಲಾಠಿ

ಮೆಗ್ಗರ್ ಉಪಕರಣ

ಸ್ಕಾರ್ಪಿಯೊದಲ್ಲಿ ಶವ ಸಾಗಿಸಿದ ದೃಶ್ಯ

ಕಟ್ಟಿ ಹಾಕಲು ಬಳಸಿದ್ದ ಹಗ್ಗದ ತುಂಡು

ಲೈಟ್ ಬಾಯ್ ಸಾವು: ಯೋಗರಾಜ್ ಭಟ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮನದ ಕಡಲು' ಸಿನಿಮಾ ಚಿತ್ರೀಕರಣದ ವೇಳೆ 30 ಅಡಿ ಎತ್ತರದ ಏಣಿಯಿಂದ ಬಿದ್ದು, ಲೈಟ್ ಬಾಯ್ ಒಬ್ಬರು ಗುರುವಾರ ಮೃತಪಟ್ಟಿದ್ದಾರೆ.

ತುಮಕೂರು ಜಿಲ್ಲೆ ಕೊರಟಗೆರೆಯ ನಿವಾಸಿ ಶಿವರಾಜ್ (30) ಮೃತಪಟ್ಟವರು.

ಮಾದನಾಯಕನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ವಿಆರ್‌ಎಲ್ ಅರೇನಾ ಬಳಿ ಚಿತ್ರೀಕರಣ ನಡೆಯುತ್ತಿತ್ತು. ಆ ವೇಳೆ ಅವಘಡ ಸಂಭವಿಸಿದೆ.

ಶಿವರಾಜ್ ಹಾಗೂ ಅವರ ಸಹೋದರ ನಗರದ ಬಡಾವಣೆಯೊಂದರಲ್ಲಿ ನೆಲೆಸಿದ್ದರು. ಇಬ್ಬರೂ ಲೈಟ್ ಬಾಯ್‌ಗಳಾಗಿ ಕೆಲಸ ಮಾಡುತ್ತಿದ್ದರು.

ಚಿತ್ರೀಕರಣದ ವೇಳೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ವಹಿಸಿದ ಆರೋಪದ ಅಡಿ ನಿರ್ದೇಶಕ ಯೋಗರಾಜ್ ಭಟ್ (ಮೂರನೇ ಆರೋಪಿ) ಹಾಗೂ ವ್ಯವಸ್ಥಾಪಕ ಸುರೇಶ್ (ಮೊದಲ ಆರೋಪಿ) ವಿರುದ್ಧ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮನೋಬಿಂಬ: ಯೂಟ್ಯೂಬ್ ಚಾನಲ್

ಬೆಂಗಳೂರು: ನಗರದ ನಾಗರಿಕರಿಗೆ ಮನೋಚೈತ್ಯನ್ಯ ಕಾರ್ಯಕ್ರಮ ನೀಡಲು 'ಮನೋಬಿಂಬ' ಎಂಬ ಯೂಟ್ಯೂಬ್ ಚಾನಲ್ ಅನ್ನು ಬಿಬಿಎಂಪಿ ಆರಂಭಿಸಿದೆ.

ಮಾನಸಿಕ ಆರೋಗ್ಯ ತಜ್ಞರೊಂದಿಗೆ ಸಾರ್ವಜನಿಕರು ಮಾನಸಿಕ ಆರೋಗ್ಯ, ಕೆಲಸದ ಸ್ಥಳಗಳಲ್ಲಿ ಒತ್ತಡ ನಿವಾರಣೆ, ಶಾಲಾ, ಕಾಲೇಜುಗಳಲ್ಲಿ ಮಕ್ಕಳಲ್ಲಿ ಪರೀಕ್ಷೆ ಒತ್ತಡ ನಿವಾರಣೆ ಹಾಗೂ ಇತರೆ ಆರೋಗ್ಯ ಕ್ಷೇಮ ವಿಚಾರಗಳ ಬಗ್ಗೆ ಈ ಯೂಟ್ಯೂಬ್ ಚಾನಲ್‌ನಲ್ಲಿ ಸಂವಾದ ನಡೆಸಬಹುದು ಮತ್ತು ಪರಿಹಾರ ಕಂಡುಕೊಳ್ಳಬಹುದು.

ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಅವರು ಗುರುವಾರ ಲೋಕಾರ್ಪಣೆ ಮಾಡಿದರು.

ಯುಟ್ಯೂಬ್ ಚಾನಲ್ ಲಿಂಕ್: https://youtube.com/@bbmpmanobimba?si=AGGsqNBT9BwbPFE_

ಸುಧಾರೆಡ್ಡಿ ಅವರು 'ಪಿಂಕ್ ಪವರ್ ರನ್' ಪೋಷಾಕು ಅನಾವರಣ ಮಾಡಿದರು. ಪಿ.ವಿ. ಸಿಂಧು ಹಾಗೂ ಡಾ. ಸುಧಾ ಸಿನ್ಹ ಉಪಸ್ಥಿತರಿದ್ದರು

29ಕ್ಕೆ ಸ್ತನ ಕ್ಯಾನ್ಸರ್ ಜಾಗೃತಿ ಓಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಧಾರೆಡ್ಡಿ ಫೌಂಡೇಶನ್ ಮತ್ತು ಮೇಘಾ ಎಂಜಿನಿಯರಿಂಗ್ ಆ್ಯಂಡ್ ಇನ್ಫ್ರಾಸ್ಟ್ರಕ್ಚರ್ (ಎಂಇಐಎಲ್) ಫೌಂಡೇಶನ್ ಜಂಟಿಯಾಗಿ ಇದೇ 29ರಂದು ಹೈದರಾಬಾದ್‌ನ ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ 'ಪಿಂಕ್ ಪವರ್ ರನ್' ಸ್ತನ ಕ್ಯಾನ್ಸರ್ ಜಾಗೃತಿ ಓಟ ಹಮ್ಮಿಕೊಂಡಿದೆ.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸುಧಾರೆಡ್ಡಿ ಫೌಂಡೇಶನ್‌ನ ಸಂಸ್ಥಾಪನಾಧ್ಯಕ್ಷೆ ಸುಧಾರೆಡ್ಡಿ, 'ಈ ಓಟದಲ್ಲಿ ಗಿನ್ನಿಸ್ ವಿಶ್ವ ದಾಖಲೆ ನಿರ್ಮಿಸುವ ಗುರಿ ಹೊಂದಲಾಗಿದೆ. 'ಪಿಂಕ್ ಪವರ್ ರನ್' ಮೂರು ವಿಭಿನ್ನ ವಿಭಾಗಗಳಲ್ಲಿ ನಡೆಯಲಿದೆ. 3 ಕಿ.ಮೀ., 5 ಕಿ.ಮೀ. ಮತ್ತು 10 ಕಿ.ಮೀ. ಓಟದಲ್ಲಿ ವಿವಿಧ ವಯೋಮಾನದವರು ಭಾಗವಹಿಸಬಹುದಾಗಿದ್ದು, ಓಟದಲ್ಲಿ ಪಾಲ್ಗೊಳ್ಳುವವರಿಗೆ ಅಗತ್ಯ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ' ಎಂದು ವಿವರಿಸಿದರು.

'ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸುವ ಮತ್ತು ಸ್ತನ ಕ್ಯಾನ್ಸರ್ ಪೀಡಿತರಿಗೆ ಭರವಸೆ ನೀಡುವ ಪ್ರಯತ್ನ ಇದಾಗಿದೆ. ಈ ಓಟದಲ್ಲಿ ಪಾಲ್ಗೊಳ್ಳಲು www.pinkpowerrun.in ಮೂಲಕ ನೋಂದಾಯಿಸಿಕೊಳ್ಳಬಹುದು' ಎಂದು ತಿಳಿಸಿದ್ದಾರೆ.

ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ. ಸಿಂಧು ಹಾಗೂ ಸ್ತ್ರೀರೋಗ ತಜ್ಞೆ ಡಾ. ಸುಧಾ ಸಿನ್ಹ ಉಪಸ್ಥಿತರಿದ್ದರು.

'ಪ್ರಜಾಪ್ರಭುತ್ವಕ್ಕೆ ಕೊಡಲಿ ಪೆಟ್ಟು ಕೊಡುವ ಶಕ್ತಿಗಳ ಹಿಮ್ಮೆಟ್ಟಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾಪ್ರಭುತ್ವಕ್ಕೆ ಕೊಡಲಿ ಪೆಟ್ಟು ಕೊಡುವ ಶಕ್ತಿಗಳನ್ನು ಮೆಟ್ಟಿ ನಾವು ನಿಲ್ಲಬೇಕು. ಪ್ರಜಾಪ್ರಭುತ್ವವಾದಿಗಳ ಹೋರಾಟ ಯಶಸ್ವಿ ಆಗಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಶ್ವ ಪ್ರಜಾಪ್ರಭುತ್ವ ದಿನದ ಅಂಗವಾಗಿ ಸೆಪ್ಟೆಂಬರ್ 15ರಂದು ಬೀದರ್‌ನಿಂದ ಚಾಮರಾಜನಗರ ವರೆಗೆ 2,500 ಕಿ.ಮೀ ಉದ್ದದ ಮಾನವ ಸರಪಳಿ ಮತ್ತು ಪ್ರಜಾಪ್ರಭುತ್ವ ಸಂಭ್ರಮ ಆಚರಣೆ ಕುರಿತಂತೆ ವಿಧಾನಸೌಧದಲ್ಲಿ ಗುರುವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

'ಈ ಮಾನವ ಸರಪಳಿ ಚಳವಳಿಯಲ್ಲಿ ವಿಧಾನಸೌಧದ ಎದುರು ನಾನು ಭಾಗವಹಿಸುತ್ತೇನೆ. ಇದರಲ್ಲಿ ಎಲ್ಲರೂ ಭಾಗವಹಿಸಬೇಕು' ಎಂದೂ ಮನವಿ ಮಾಡಿದರು.

'ಪ್ರಜಾಪ್ರಭುತ್ವ ನಾಶ ಮಾಡಲು ಯತ್ನಿಸುತ್ತಿರುವ ದುಷ್ಟ ಶಕ್ತಿಗಳ ಸಂಖ್ಯೆ ಕಡಿಮೆ ಇದ್ದರೂ ಹೆಚ್ಚು ಚಟುವಟಿಕೆ ನಡೆಸುತ್ತಿದ್ದಾರೆ. ಪ್ರಜಾಪ್ರಭುತ್ವವಾದಿಗಳು ಹೆಚ್ಚು ಪ್ರಮಾಣದಲ್ಲಿದ್ದರೂ ಕ್ರಿಯಾಶೀಲವಾಗಿಲ್ಲ' ಎಂದರು.

ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ, ಶಿಕ್ಷಣ ಸಚಿವ ಮಧು ಬಂಗಾರಪ್ಪ, ವಕ್ಫ್ ಸಚಿವ ರಹೀಂ ಖಾನ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳಕರ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸಭೆಯಲ್ಲಿದ್ದರು.

ಮೈಸೂರು ರೇಸ್

ನಾಟಿ ಚಾರ್ಮರ್ ಗೆಲ್ಲುವ ನಿರೀಕ್ಷೆ

ಹೆಚ್.ಹೆಚ್.ಶ್ರೀ ಕೃಷ್ಣರಾಜ ಒಡೆಯರ್ ಮೆಮೋರಿಯಲ್ ಟ್ರೋಫಿ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ನಾಟಿ ಚಾರ್ಮರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಧುರಂಧರ್ 7, ಮಿಸ್ಟಿಕಲ್ ಮರ್ಲಿನ್ 10, ಎಪ್ಸಮ್ ಡೌನ್ಸ್ 5

2ನೇ ರೇಸ್: ಹಿಡನ್ ಪ್ಲೆಷರ್ 9, ನಾಟಿ ಮೆಥಡ್ಸ್ 8, ಫಿನಿಕ್ಸ್ ಸರ್ಪ್ರೈಸ್ 11

3ನೇ ರೇಸ್: ಅತುಲ್ಯ 1, ಡಿ ರೊಮನ್ ಪವರ್ 6, ನ್ಯಾಚುರಲ್ ಸ್ಪೀಡ್ 8

4ನೇ ರೇಸ್: ರಾಪಿಡಸ್ 6, ಗೋಲ್ಡನ್ ಪೀಕ್ಸ್ 8, ಪ್ರೈಮ್ ಅಬ್ಬೇಸ್ 7

5ನೇ ರೇಸ್: ನಾಟಿ ಚಾರ್ಮರ್ 2, ರಾವಿಷಿಂಗ್ ಫಾರ್ಮ್ 4, ಐರನ್ ಕ್ಲಾಡ್ 7

6ನೇ ರೇಸ್: ಅಸಗಿರಿ 10, ಜೂನ್ 9, ಡಿ ರೊಮನ್ ರೀನ್ಸ್ 5

7ನೇ ರೇಸ್: ಸ್ಕ್ವೇರ್ ಕಟ್ 6, ಡಿ ಅಡ್ಮಿರಲ್ 9, ಫ್ಲೈಯಿಂಗ್ ಫಾಲ್ಕನ್ 12

ಉತ್ತಮ ಬೆಟ್: ಅಸಗಿರಿ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ರಾಜ್ಯ ಸರ್ಕಾರದ ವಿರುದ್ಧ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಆರೋಪ

ನನ್ನ ಮೇಲಿನ ದ್ವೇಷ: ಕೆಐಒಸಿಎಲ್‌ಯಲ್ಲಿ ಅಡ್ಡಿ

ಪ್ರಜಾವಾಣಿ ವಾರ್ತೆ

ನನ್ನನ್ನು ರಾಜಕೀಯವಾಗಿ ಮುಗಿಸಲು ಸ್ವಪಕ್ಷೀಯರೇ ಪಿತೂರಿ ನಡೆಸುತ್ತಿದ್ದಾರೆ ಎಂದು ಸಿ.ಎಂ ಹೇಳಿದ್ದಾರೆ. ವಿರೋಧ ಪಕ್ಷಗಳು ತಂತ್ರ ಮಾಡುತ್ತಿಲ್ಲ ಎಂದು ಅವರೇ ಒಪ್ಪಿಕೊಂಡಂತಾಗಿದೆ.

ಎಚ್‌.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಶಿವಮೊಗ್ಗ: 'ನನ್ನ ಮೇಲಿನ ವೈಯಕ್ತಿಕ ದ್ವೇಷಕ್ಕೆ ಕುದುರೆಮುಖ ಕಬ್ಬಿಣ ಅದಿರು ಕಂಪನಿಯ (ಕೆಐಒಸಿಎಲ್) ಕಾರ್ಯಾಚರಣೆಗೆ ಸಣ್ಣ ಸಣ್ಣ ವಿಚಾರಗಳನ್ನು ಮುಂದಿಟ್ಟುಕೊಂಡು ರಾಜ್ಯ ಸರ್ಕಾರ ಅಡ್ಡಿಪಡಿಸುತ್ತಿದೆ. ಇದರಿಂದ ಆ ಸಂಸ್ಥೆ ನಿತ್ಯ ₹27 ಕೋಟಿ ನಷ್ಟ ಅನುಭವಿಸುವಂತಾಗಿದೆ' ಎಂದು ಕೇಂದ್ರ ಉಕ್ಕು ಹಾಗೂ ಬೃಹತ್ ಕೈಗಾರಿಕೆ ಸಚಿವ ಎಚ್‌.ಡಿ.ಕುಮಾರಸ್ವಾಮಿ ಆರೋಪಿಸಿದರು.

'ಕೇಂದ್ರ ಸಚಿವನಾಗಿ ಅಧಿಕಾರ ಸ್ವೀಕರಿಸಿದ ನಂತರ ಮೊದಲು ನಾನು ಕಡತಕ್ಕೆ ಸಹಿ ಹಾಕಿದ್ದು ಕೆಐಒಸಿಎಲ್‌ನ ಗಣಿಗಾರಿಕೆಗೆ ಸಂಬಂಧಿಸಿದ್ದು. ರಾಜ್ಯ ಸರ್ಕಾರಕ್ಕೆ ಅದನ್ನು ಸಹಿಸಿಕೊಳ್ಳಲು ಆಗಲಿಲ್ಲ. ಹಾಗಾಗಿ ನನ್ನ ವಿರುದ್ಧ ಅಪಪ್ರಚಾರ ಆರಂಭಿಸಲಾಗಿದೆ' ಎಂದು ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ದೂರಿದರು.

'ಕೆಐಒಸಿಎಲ್‌ಗೆ ಸಂಡೂರಿನಲ್ಲಿ ಗಣಿ ಮಂಜೂರು ಮಾಡಿ, ಅದನ್ನು ನೋಂದಣಿ ಮಾಡಿಕೊಟ್ಟದ್ದು 2016ರಲ್ಲಿ ಸಿದ್ದರಾಮಯ್ಯ ನೇತೃತ್ವದ ಆಡಳಿತದ ಅವಧಿಯಲ್ಲಿ. ಗಣಿಗಾರಿಕೆ ಸ್ಥಳದಲ್ಲಿ ಗಿಡ ಬೆಳೆಸಲು ಅರಣ್ಯ ಇಲಾಖೆಗೆ ₹ 190 ಕೋಟಿಯನ್ನು ಕಂಪನಿ ಪಾವತಿಸಿದೆ. ಆದರೆ, ರಾಜ್ಯದ ಅರಣ್ಯ ಸಚಿವರಿಗೆ ಅದರ ತಲೆಬುಡ ಗೊತ್ತಿಲ್ಲ. ಸುಮ್ಮನೆ ತೊಂದರೆ ಕೊಡುತ್ತಿದ್ದಾರೆ. ನನ್ನ ಮೇಲೆ ದ್ವೇಷ ಇದ್ದರೆ ಬೇರೆ ಕಡೆ ತೀರಿಸಿಕೊಳ್ಳಿ. ಕೆಐಒಸಿಎಲ್ ಕಾರ್ಯಾಚರಣೆಗೆ ಅಡ್ಡಿಪಡಿಸಿ ಕಾರ್ಮಿಕರನ್ನು ಏಕೆ ಬೀದಿಗೆ ತಳ್ಳುವಿರಿ' ಎಂದರು.

'ಮುಖ್ಯಮಂತ್ರಿಯಾಗಿದ್ದ ನಾನು ಅನುಭವದಿಂದ ಹೇಳುತ್ತಿದ್ದೇನೆ. ಕೇಂದ್ರದೊಂದಿಗೆ ನಿತ್ಯವೂ ಸಂಘರ್ಷ ಬೇಡ' ಎಂದು ಕುಮಾರಸ್ವಾಮಿ ಅವರು ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿದರು.

'ಚುನಾವಣೆ ಸಂದರ್ಭ ಆರೋಪ-ಪ್ರತ್ಯಾರೋಪ, ಸಂಘರ್ಷ ಮಾಡೋಣ. ಆದರೆ, ಪ್ರತಿದಿನ ರಾಜಕೀಯಕ್ಕಾಗಿ ಸಂಘರ್ಷ ಮಾಡುತ್ತಾ ಹೋದರೆ ರಾಜ್ಯದ ಅಭಿವೃದ್ಧಿ ಕುಂಠಿತವಾಗಲಿದೆ' ಎಂದು ಹೇಳಿದರು.

'ವಿಐಎಸ್‌ಎಲ್ ಉಳಿಸುವೆ, ಅನುಮಾನ ಬೇಡ'

'ಭದ್ರಾವತಿಯ ವಿಐಎಸ್‌ಎಲ್ ಕಾರ್ಖಾನೆಯನ್ನು ಖಾಸಗಿಯವರಿಗೆ ಮಾರಾಟ ಮಾಡಲು ಕೇಂದ್ರದ ಬಂಡವಾಳ ಹಿಂತೆಗೆತ ಇಲಾಖೆ 2016ರಲ್ಲಿ ತೀರ್ಮಾನ ಕೈಗೊಂಡಿದೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರದ ಹಣಕಾಸು ಇಲಾಖೆಗೆ ಮನವರಿಕೆ ಮಾಡಿ ಅದರಿಂದ ಯೂಟರ್ನ್ ಆಗುವ ಕೆಲಸ ಮಾಡುತ್ತಿದ್ದೇನೆ' ಎಂದು ಹೇಳಿದರು.

'ವಿಐಎಸ್‌ಎಲ್ ಕಾರ್ಖಾನೆಗೆ ಈಗ ಸಂಪೂರ್ಣ ಹೊಸ ತಾಂತ್ರಿಕ ಯಂತ್ರಗಳನ್ನು ಅಳವಡಿಸಬೇಕಿದೆ. ಅದಕ್ಕೆ ಅಗತ್ಯವಿರುವ ₹15,000 ಕೋಟಿ ಬಂಡವಾಳವನ್ನು ಭಾರತೀಯ ಉಕ್ಕು ಪ್ರಾಧಿಕಾರದಿಂದ (SAIL) ಹೂಡಿಕೆ ಮಾಡಿಸಲು ಪ್ರಯತ್ನ ನಡೆಸಿದ್ದೇನೆ. ಸ್ವಲ್ಪ ತಡವಾದರೂ, ಎಷ್ಟೇ ಕಷ್ಟಗಳು ಎದುರಾದರೂ ಕಾರ್ಖಾನೆಗೆ ಜೀವ ನೀಡುವ ಮೂಲಕ ಸರ್.ಎಂ.ವಿಶ್ವೇಶ್ವರಾಯ ಅವರ ಹೆಸರು ಉಳಿಸುವೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ಸ್ಥಳೀಯ ಸಂಸ್ಥೆ ಚುನಾವಣೆಯಲ್ಲೂ ಮೈತ್ರಿ'

'ಬಿಜೆಪಿಯೊಂದಿಗೆ ಮೈತ್ರಿ ಸುದೀರ್ಘ ಅವಧಿಗೆ ಮುಂದುವರಿಯಬೇಕು ಎಂಬುದು ನಮ್ಮ (ಜೆಡಿಎಸ್) ಆಶಯ. ಹೀಗಾಗಿ ಮಹಾನಗರ ಪಾಲಿಕೆ ಸೇರಿ ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಬಿಜೆಪಿ ಜೊತೆ ಹೊಂದಾಣಿಕೆ ಮುಂದುವರಿಸುತ್ತೇವೆ. ಒಟ್ಟಾಗಿ ಚುನಾವಣೆ ಎದುರಿಸುತ್ತೇವೆ' ಎಂದು ಎಚ್‌.ಡಿ. ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

ಕರ್ನಾಟಕ ಲೋಕಸೇವಾ ಆಯೋಗಕ್ಕೆ ಭೋಜ್ಯಾ ನಾಯ್ಕ ಸದಸ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಸದಸ್ಯರನ್ನಾಗಿ ಕುವೆಂಪು ವಿಶ್ವವಿದ್ಯಾಲಯದ ಕೈಗಾರಿಕಾ ರಾಸಾಯನ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಎಚ್‌. ಎಸ್. ಭೋಜ್ಯಾ ನಾಯ್ಕ ಅವರನ್ನು ನೇಮಿಸಲಾಗಿದೆ.

ಭೋಜ್ಯಾ ನಾಯ್ಕ ಅವರನ್ನು ಅಧಿಕಾರಿ ವಿಭಾಗದಿಂದ ಖಾಲಿ ಇರುವ ಸದಸ್ಯ ಸ್ಥಾನಕ್ಕೆ ನೇಮಿಸಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಗುರುವಾರ ಅಧಿಸೂಚನೆ ಹೊರಡಿಸಿದ್ದಾರೆ.

ಗೌರಿ ಖರೀದಿ...

ಗೌರಿ-ಗಣೇಶ ಹಬ್ಬದ ಪ್ರಯುಕ್ತ ಬಸವನಗುಡಿಯ ಗಾಂಧಿ ಬಜಾರ್‌ನಲ್ಲಿ ಮಹಿಳೆಯೊಬ್ಬರು ಗುರುವಾರ ಗೌರಿ ವಿಗ್ರಹವನ್ನು ಖರೀದಿಸಿದರು

ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಚಾಮುಂಡೇಶ್ವರಿ ದೇವಸ್ಥಾನ ಆಸ್ತಿ ಹಸ್ತಾಂತರ ಸಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೈಸೂರಿನ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಸೇರಿದ ಸ್ಥಿರ ಮತ್ತು ಚರಾಸ್ತಿಗಳನ್ನು ಹಸ್ತಾಂತರ ಮಾಡಬಾರದು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

'ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ-2024 ಅನ್ನು ರದ್ದುಗೊಳಿಸಬೇಕು' ಎಂದು ಕೋರಿ ದಿವಂಗತ ಶ್ರೀಕಂಠದತ್ತ ಒಡೆಯರ್ ಪತ್ನಿ ಪ್ರಮೋದಾ ದೇವಿ ಒಡೆಯರ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ಚಾಮುಂಡಿ ದೇವಸ್ಥಾನದ ಮಾಲೀಕತ್ವಕ್ಕೆ ಸಂಬಂಧಿಸಿದ ಮೇಲ್ಮನವಿ ಹೈಕೋರ್ಟ್‌ನ ವಿಭಾಗೀಯ ನ್ಯಾಯಪೀಠದಲ್ಲಿ ವಿಚಾರಣೆಗೆ ಬಾಕಿ ಇದೆ. ಕರ್ನಾಟಕ ಶಾಸನಸಭೆ ಪ್ರಕ್ರಿಯೆ ಮತ್ತು ನಡಾವಳಿ ನಿಯಮ 161ರ ಪ್ರಕಾರ ಯಾವುದಾದರೂ ಪ್ರಕರಣ ನ್ಯಾಯಾಲಯದ ಪರಿಶೀಲನೆಗೆ ಒಳಪಟ್ಟಿದ್ದರೆ ಆ ವಿಚಾರಕ್ಕೆ ಸಂಬಂಧಿಸಿದಂತೆ ವಿಧಾನಸಭೆಯಲ್ಲಿ ನಿರ್ಣಯ ಮಂಡಿಸುವಂತಿಲ್ಲ. ಆದರೆ, ರಾಜ್ಯ ಸರ್ಕಾರ 2024ರ ಫೆಬ್ರುವರಿ 19ರಂದು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಿದ್ದು, 21ರಂದು ಅನುಮೋದನೆ ಪಡೆದಿದೆ' ಎಂದು ಆಕ್ಷೇಪಿಸಿದರು.

ಇದಕ್ಕೆ ರಾಜ್ಯ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಎನ್.ದೇವದಾಸ್, 'ಸರ್ಕಾರ ಕಾನೂನು ರೂಪಿಸುವಂತಿಲ್ಲ ಎಂದು ಹೇಳಲಾಗದು. ಸಂವಿಧಾನದ 212ನೇ ವಿಧಿಯ ಪ್ರಕಾರ ನ್ಯಾಯಾಲಯಗಳು ಶಾಸನ ಸಭೆಯ ಪ್ರಕ್ರಿಯೆ ಬಗ್ಗೆ ಪ್ರಶ್ನಿಸಲು ನಿರ್ಬಂಧವಿದೆ. ಚಾಮುಂಡಿ ಬೆಟ್ಟದ ಮೇಲೆ ಅರ್ಜಿದಾರರಿಗೆ ಹಕ್ಕಿಲ್ಲ' ಎಂದು ಸಮಜಾಯಿಷಿ ನೀಡಿದರು.

ಇದನ್ನು ಬಲವಾಗಿ ಆಕ್ಷೇಪಿಸಿದ ಅರ್ಜಿದಾರರ ಪರ ವಕೀಲರು, 'ದೇವಸ್ಥಾನದ ಸಂಪ್ರದಾಯ ಮತ್ತು ಆಚರಣೆಯನ್ನು ಕೈಗೆತ್ತಿಕೊಳ್ಳುವ ಯಾವುದೇ ಅಧಿಕಾರ ಸರ್ಕಾರಕ್ಕಿಲ್ಲ. ದೇವಸ್ಥಾನದ ಆಸ್ತಿಯನ್ನು ಹಸ್ತಾಂತರ ಅಥವಾ ಮಾರ್ಪಾಡು ಮಾಡಲಾಗುತ್ತಿದೆ. ಹೀಗಾಗಿ, ಯಥಾಸ್ಥಿತಿ ಕಾಪಾಡುವುದು ಅತ್ಯಂತ ಜರೂರಿದೆ. ದೇವಸ್ಥಾನದ ಸಂಪ್ರದಾಯ, ದೇವಾಲಯದ ಚರ, ಸ್ಥಿರಾಸ್ತಿಗೆ ಸಂಬಂಧಿಸಿದ ಯಥಾಸ್ಥಿತಿಯನ್ನು ಬದಲಿಸಲಾಗಿದೆ. ಇಡೀ ಜಾಗವನ್ನು ಸರ್ಕಾರ ವಶಕ್ಕೆ ಪಡೆದಿದೆ. ಪೊಲೀಸರನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿದೆ' ಎಂದರು.

'ದೇವಸ್ಥಾನದಲ್ಲಿ ಏನೇನು ಬದಲಾಯಿಸಲಾಗಿದೆ ಎಂಬುದಕ್ಕೆ ಸಂಬಂಧಿಸಿದಂತೆ ಪ್ರಮಾಣಪತ್ರ ಸಲ್ಲಿಸಲು ಸರ್ಕಾರಕ್ಕೆ ಆದೇಶಿಸಬೇಕು. ಸಂಪ್ರದಾಯವನ್ನು ಬದಲಾಯಿಸದಂತೆ ಆದೇಶಿಸಬೇಕು. ನೀತಿಯ ಭಾಗವಾಗಿ ಯಾವುದೇ ನಿರ್ಧಾರ ಕೈಗೊಳ್ಳದಂತೆ ಸರ್ಕಾರಕ್ಕೆ ಆದೇಶಿಸಬೇಕು. ದೇವಸ್ಥಾನಕ್ಕೆ ಸಂಬಂಧಿಸಿದ ಯಾವುದೇ ಸ್ಥಿರ ಮತ್ತು ಚರ ಆಸ್ತಿಯನ್ನು ಹಸ್ತಾಂತರ ಮಾಡದಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ರಾಜ್ಯ ಸರ್ಕಾರಕ್ಕೆ ಆಕ್ಷೇಪಣೆ ಸಲ್ಲಿಸಲು ಆದೇಶಿಸಿ, ವಿಚಾರಣೆಯನ್ನು ಇದೇ 25ಕ್ಕೆ ಮುಂದೂಡಿತು.

ಉಮಾಶ್ರೀ ಸೇರಿ ಮೂವರಿಗೆ ಗೌರವ ಡಾಕ್ಟರೇಟ್

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ 12ನೇ ಘಟಿಕೋತ್ಸವ ಶುಕ್ರವಾರ ನಡೆಯಲಿದ್ದು, ನಟಿ ಹಾಗೂ ವಿಧಾನಪರಿಷತ್ ಸದಸ್ಯೆ ಉಮಾಶ್ರೀ ಸೇರಿ ಮೂವರು ಗಣ್ಯರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುವುದು.

'ರಂಗಭೂಮಿ, ಕಲೆ, ಸಮಾಜ ಸೇವೆಯನ್ನು ಪರಿಗಣಿಸಿ ಉಮಾಶ್ರೀ ಡಾಕ್ಟರೇಟ್ ನೀಡಲಾಗುತ್ತಿದೆ' ಎಂದು ವಿವಿ ತಿಳಿಸಿದೆ.

ಬಳ್ಳಾರಿಯ ವಿಭೂತಿಗುಡ್ಡ ಮೈನಿಂಗ್ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕರಾಗಿದ್ದ ಎಸ್.ಕೆ ಮೋದಿ (ಕೈಗಾರಿಕೆ ಮತ್ತು ಸಮಾಜ ಸೇವೆ) ಮತ್ತು ತೆಗ್ಗಿನಮಠದ ಚಂದ್ರಮೌಳೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರಿಗೆ ಮರಣೋತ್ತರ ಗೌರವ ಡಾಕ್ಟರೇಟ್ ನೀಡಲಾಗುತ್ತಿದೆ.

ರಾಜ್ಯಪಾಲರು ಘಟಿಕೋತ್ಸವದಲ್ಲಿ ಪಾಲ್ಗೊಳ್ಳುವುದಿಲ್ಲ. ಉನ್ನತ ಶಿಕ್ಷಣ ಸಚಿವ ಎಂ.ಸಿ ಸುಧಾಕರ್ ಭಾಗವಹಿಸುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ.

ವಿಮಾನದಲ್ಲಿ ಬಾಲಕಿಗೆ ಕಿರುಕುಳ ನೀಡಿದ ಪ್ರಕರಣ

ಲೈಂಗಿಕ ಕಿರುಕುಳ: 3 ವರ್ಷ ಕಠಿಣ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಮಾನದಲ್ಲಿ ಬಾಲಕಿಗೆ ಲೈಂಗಿಕ ದೌರ್ಜನ್ಯವೆಸಗಿದ್ದ ವ್ಯಕ್ತಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪೋಕ್ಸೊ ಕಾಯ್ದೆಯ ಪ್ರಕರಣಗಳ ಒಂದನೇ ತ್ವರಿತ ವಿಶೇಷ ನ್ಯಾಯಾಲಯ ಮೂರು ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ₹10 ಸಾವಿರ ದಂಡ ವಿಧಿಸಿದೆ.

2023ರ ಜೂನ್ 27ರಂದು ತಂದೆ, ತಾಯಿ ಜತೆ ಸಂತ್ರಸ್ತ ಬಾಲಕಿ ವಾಷಿಂಗ್ಟನ್‌ನಿಂದ ದೋಹಾ ಮೂಲಕ ಬೆಂಗಳೂರಿಗೆ ವಿಮಾನದಲ್ಲಿ ಪ್ರಯಾಣಿಸುತ್ತಿದ್ದಳು. ಬಾಲಕಿಯ ಪಕ್ಕದ ಸೀಟಿನಲ್ಲಿ ಕುಳಿತಿದ್ದ ತಮಿಳುನಾಡಿನ ಕಂಡಂಗಿಪಟ್ಟಿ ನಿವಾಸಿ ಅಮವಾಸೈ ಮುರುಗೇಸನ್ ಎಂಬಾತ ಮದ್ಯದ ಅಮಲಿನಲ್ಲಿ ಆಕೆಯ ಎದೆ, ಮೈ, ಕೈಗಳನ್ನು ಮುಟ್ಟಿ ಲೈಂಗಿಕ ಕಿರುಕುಳ ನೀಡಿದ್ದ ಎಂದು ಸಂತ್ರಸ್ತೆಯ ತಂದೆ ಪೊಲೀಸರಿಗೆ ದೂರು ನೀಡಿದ್ದರು.

ಅಂದಿನ ತನಿಖಾಧಿಕಾರಿ, ಇನ್‌ಸ್ಪೆಕ್ಟರ್ ಎನ್.ಆನಂದ್ ಅವರು ಒಂಬತ್ತು ಜನ ಸಾಕ್ಷಿದಾರರ ವಿಚಾರಣೆ ನಡೆಸಿ, ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು. ಈ ಪ್ರಕರಣದಲ್ಲಿ ಬಾಲಕಿ ಹಾಗೂ ಆಕೆಯ ತಂದೆ, ತಾಯಿಯ ಹೇಳಿಕೆಯನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಲಯ ದಾಖಲಿಸಿಕೊಂಡಿತ್ತು.

ಪ್ರಕರಣದ ವಿಚಾರಣೆಯನ್ನು ಪೂರ್ಣಗೊಳಿಸಿದ ವಿಶೇಷ ನ್ಯಾಯಾಲಯದ ನ್ಯಾಯಾಧೀಶೆ ಕೆ.ಎನ್.ಸರಸ್ವತಿ ಅವರು, 'ಅಮವಾಸೈ ಮುರುಗೇಸನ್ ಅಪರಾಧಿ' ಎಂದು ಸಾರಿದರು. ಅಪರಾಧಿಗೆ ಪೋಕ್ಸೊ ಕಾಯ್ದೆ ಅಡಿ ಮೂರು ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ₹ 10 ಸಾವಿರ ದಂಡವನ್ನು ವಿಧಿಸಿ ಆದೇಶ ಹೊರಡಿಸಿದರು. ಪಬ್ಲಿಕ್ ಪ್ರಾಸಿಕ್ಯೂಟರ್ ಎ.ಚಂದ್ರಕಲಾ ಅವರು ಪ್ರಾಸಿಕ್ಯೂಷನ್ ಪರವಾಗಿ ವಾದ ಮಂಡಿಸಿದ್ದರು.

ಚಿತ್ರಾವಳಿ

ಅ.ನಾ.ಪ್ರಹ್ಲಾದರಾವ್ ಅವರ ಎಂಟು ಪದಬಂಧ ಪುಸ್ತಕಗಳು ಹಾಗೂ ಎರಡು ಸುಡೊಕು ಪುಸ್ತಕಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಗರದಲ್ಲಿ ಗುರುವಾರ ಬಿಡುಗಡೆ ಮಾಡಿದರು. ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಸಚಿವರಾದ ಕೆ.ಎಚ್.ಮುನಿಯಪ್ಪ, ಪ್ರಿಯಾಂಕ್ ಖರ್ಗೆ ಹಾಗೂ ವಸಂತ ಪ್ರಕಾಶನದ ಕೆ.ಎಸ್.ಮುರಳಿ ಉಪಸ್ಥಿತರಿದ್ದರು

ಮನೋಜ್ಞ ನೃತ್ಯ ಕಲಾ ಅಕಾಡೆಮಿಯ ವಾರ್ಷಿಕೋತ್ಸವದ ಅಂಗವಾಗಿ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಕಾಡೆಮಿಯ ವಿದ್ಯಾರ್ಥಿಗಳು 'ನೃತ್ಯ ರುಚಿರಾ' ಎಂಬ ನೃತ್ಯವನ್ನು ಪ್ರಸ್ತುತಪಡಿಸಿದರು

ಕೇಜ್ರಿವಾಲ್ ಅರ್ಜಿ: ತೀರ್ಪು ಕಾಯ್ದಿರಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದ ಪ್ರಕರಣದಲ್ಲಿ ಜಾಮೀನು ಕೋರಿ ಮತ್ತು ತನ್ನನ್ನು ಸಿಬಿಐ ಬಂಧಿಸಿದ್ದನ್ನು ಪ್ರಶ್ನಿಸಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಲ್ಲಿಸಿರುವ ಪ್ರತ್ಯೇಕ ಅರ್ಜಿಗಳ ತೀರ್ಪನ್ನು ಸುಪ್ರೀಂ ಕೋರ್ಟ್ ಗುರುವಾರ ಕಾಯ್ದಿರಿಸಿತು.

ಸಿಬಿಐ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು, ಕೇಜ್ರಿವಾಲ್ ಪರ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಅವರ ವಾದ, ಪ್ರತಿವಾದಗಳನ್ನು ಆಲಿಸಿದ ನ್ಯಾಯಮೂರ್ತಿಗಳಾದ ಸೂರ್ಯಕಾಂತ ಮತ್ತು ಉಜ್ವಲ್ ಭುಯಾನ್ ಅವರ ಪೀಠವು, ತೀರ್ಪನ್ನು ಕಾಯ್ದಿರಿಸಿತು.

ಕೇಜ್ರಿವಾಲ್ ಅವರನ್ನು ಸಿಬಿಐ ಜೂನ್ 26ರಂದು ಬಂಧಿಸಿತ್ತು. ಅವರ ಬಂಧನವನ್ನು ದೆಹಲಿ ಹೈಕೋರ್ಟ್ ಆಗಸ್ಟ್ 5ರಂದು ಎತ್ತಿಹಿಡಿದಿತ್ತು.



ಸೇನಾ ಕಮಾಂಡರ್‌ಗಳ ಜಂಟಿ ಸಮ್ಮೇಳನ

'ಶಾಂತಿ ಕಾಪಾಡಲು ಯುದ್ಧಕ್ಕೂ ಸಿದ್ಧವಿರಬೇಕು'

ಲಖನೌ (ಪಿಟಿಐ): ದೇಶದಲ್ಲಿ ಶಾಂತಿ ಕಾಪಾಡಿಕೊಳ್ಳಲು ಸೇನಾಪಡೆಗಳು ಯುದ್ಧಕ್ಕೂ ಸಿದ್ಧವಿರಬೇಕು ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಗುರುವಾರ ಕರೆ ನೀಡಿದ್ದಾರೆ.

ಸೇನೆಯ ಮೂರೂ ಪಡೆಗಳ ಕಮಾಂಡರ್‌ಗಳು ಇದೇ ಮೊದಲ ಬಾರಿಗೆ ಆಯೋಜಿಸಿರುವ ಜಂಟಿ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಭಾರತ ಶಾಂತಿ ಪ್ರಿಯ ರಾಷ್ಟ್ರ. ಹಾಗಾಗಿ, ಶಾಂತಿ ಕಾಪಾಡಿಕೊಳ್ಳಲು ಸೇನೆಯು ಯುದ್ಧಕ್ಕೂ ಸಿದ್ಧವಿರಬೇಕು. ಭವಿಷ್ಯದಲ್ಲಿ ಎದುರಾಗಬಹುದಾದ ಭದ್ರತಾ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಮೂರು ಸೇನಾಪಡೆಗಳು ಜಂಟಿಯಾಗಿ ಕಾರ್ಯನಿರ್ವಹಿಸಬೇಕಿದೆ ಎಂದು ಒತ್ತಿ ಹೇಳಿದರು.

ರಷ್ಯಾ-ಉಕ್ರೇನ್ ಯುದ್ಧ, ಹಮಾಸ್ ಹಾಗೂ ಇಸ್ರೇಲ್ ನಡುವಿನ ಸಮರ ಹಾಗೂ ಬಾಂಗ್ಲಾದೇಶದಲ್ಲಿನ ಬೆಳವಣಿಗೆಗಳನ್ನು ಉಲ್ಲೇಖಿಸಿದ ಸಚಿವರು, ಅವುಗಳ ವಿವಿಧ ಆಯಾಮಗಳನ್ನು ಅಧ್ಯಯನ ಮಾಡಿ ಭವಿಷ್ಯದಲ್ಲಿ ಬಂದೊದಗಬಹುದಾದ ಅನಿರೀಕ್ಷಿತ ಸವಾಲುಗಳನ್ನು ಎದುರಿಸಲು ಸಿದ್ಧವಿರಬೇಕು ಎಂದರು.

ಜಾಗತಿಕ ಚಂಚಲತೆಯ ಹೊರತಾಗಿಯೂ ಭಾರತವು ಶಾಂತಿಯುತವಾಗಿ ಅಭಿವೃದ್ಧಿ ಸಾಧಿಸುತ್ತಿದೆ. ಹಾಗಿದ್ದರೂ, ಸವಾಲುಗಳು ಹೆಚ್ಚಾಗುತ್ತಲೇ ಇದ್ದು, ನಾವು ಎಚ್ಚರವಾಗಿರಬೇಕಾದ್ದು ಅವಶ್ಯ ಎಂದು ಹೇಳಿದರು.

ಸೇನಾಪಡೆಗಳಲ್ಲಿ ಸಾಂಪ್ರದಾಯಿಕ ಹಾಗೂ ಆಧುನಿಕ ಶಸ್ತ್ರಾಸ್ತ್ರಗಳನ್ನು ಸಮತೋಲಿತವಾಗಿ ಸಂಗ್ರಹಿಸಿಟ್ಟುಕೊಳ್ಳಬೇಕು ಎಂದು ಇದೇ ವೇಳೆ ಕರೆ ಕೊಟ್ಟರು. ದತ್ತಾಂಶ ನಿರ್ವಹಣೆ ಹಾಗೂ ಕೃತಕ ಬುದ್ಧಿಮತ್ತೆ ಕ್ಷೇತ್ರಗಳಲ್ಲಿನ ಅತ್ಯಾಧುನಿಕ ತಾಂತ್ರಿಕತೆಯನ್ನು ಸೇನಾಪಡೆಗಳು ಹೆಚ್ಚಾಗಿ ಬಳಸಿಕೊಳ್ಳಬೇಕಾದ ಮಹತ್ವವನ್ನೂ ಒತ್ತಿ ಹೇಳಿದರು.

ಸೇನಾ ಪಡೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾನ್, ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ, ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ, ವಾಯುಪಡೆಯ ಮುಖ್ಯಸ್ಥ ಚೀಫ್ ಮಾರ್ಷಲ್ ವಿ.ಆರ್. ಚೌಧರಿ ಹಾಗೂ ರಕ್ಷಣಾ ಕಾರ್ಯದರ್ಶಿ ಗಿರಿಧರ್ ಅರಮನೆ ಅವರು ಬುಧವಾರ ಆರಂಭಗೊಂಡ ಈ ಎರಡು ದಿನಗಳ ಜಂಟಿ ಸಮ್ಮೇಳನದಲ್ಲಿ ಭಾಗಿಯಾಗಿದ್ದರು.

ಸೇನೆಯ ಮೂರೂ ಪಡೆಗಳ ಕಮಾಂಡರ್‌ಗಳು ಲಖನೌನಲ್ಲಿ ಆಯೋಜಿಸಿರುವ ಜಂಟಿ ಸಮ್ಮೇಳನದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾಗವಹಿಸಿದರು

–ಪಿಟಿಐ ಚಿತ್ರ

ನಾಡಪ್ರಭು ಕೆಂಪೇಗೌಡ ಬಿಡಿಎ ಬಡಾವಣೆಯಲ್ಲಿ ಹತ್ತಾರು ಕೋಟಿ ದುಂದುವೆಚ್ಚ

ಒಣಗುತ್ತಿವೆ ಸಾವಿರಾರು ಗಿಡಗಳು

• ಆರ್. ಮಂಜುನಾಥ್

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ನಾಲ್ಕು ವರ್ಷಗಳಿಂದ ಹತ್ತಾರು ಕೋಟಿ ರೂಪಾಯಿ ವ್ಯಯಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನೆಟ್ಟಿದ್ದ ಸಾವಿರಾರು ಗಿಡಗಳು ನಿರ್ವಹಣೆ ಇಲ್ಲದೆ ಒಣಗುತ್ತಿವೆ.

ಪರಿಸರ ದಿನ, ಅರಣ್ಯೀಕರಣ, ಹಸಿರೀಕರಣ ಎಂಬ ಹೆಸರಿನಲ್ಲಿ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ (ಎನ್‌ಪಿಕೆಎಲ್) ನಾಲ್ಕು ವರ್ಷಗಳಿಂದ ಬಿಡಿಎ ಅರಣ್ಯ ವಿಭಾಗ ಲಕ್ಷಾಂತರ ಸಸಿಗಳನ್ನು ನೆಟ್ಟಿದೆ ಎಂದು ಅಧಿಕಾರಿಗಳು ಹೇಳುತ್ತಾರೆ. ಸಸಿಯೊಂದಕ್ಕೆ ₹1,000ಕ್ಕೂ ಹೆಚ್ಚು ವೆಚ್ಚ ಮಾಡಲಾಗಿದೆ ಎಂದೂ ಹೇಳಲಾಗುತ್ತಿದೆ. ಆದರೆ ಇದೀಗ ಬಹುತೇಕ ಗಿಡಗಳು ಜೀವಂತ ಉಳಿದಿಲ್ಲ.

‘ಬಿಡಿಎ ಬಡಾವಣೆಗಳನ್ನೆಲ್ಲ ಹಸಿರುಮಯ ಮಾಡುತ್ತೇವೆ’ ಎಂದು ರಸ್ತೆ ಬದಿ, ರಸ್ತೆ ವಿಭಜಕದ ಜಾಗದಲ್ಲಿ ಸಸಿಗಳನ್ನು ನೆಡಲಾಗಿದೆ. ಉದ್ಯಾನಗಳಲ್ಲಿ ಯಾವುದೇ ರೂಪುರೇಷೆ ಇಲ್ಲದೆ ಸಸಿಗಳನ್ನು ನೆಡಲಾಗಿದೆ. ಉದ್ಯಾನ ಅಭಿವೃದ್ಧಿಗೆ ಇವೆಲ್ಲ ತೊಡಕಾಗಿದ್ದವು. ಉದ್ಯಾನ ಅಭಿವೃದ್ಧಿ ಕೈಗೊಳ್ಳುವ ಮುನ್ನವೇ ಅಲ್ಲಿ ಅಡ್ಡಾದಿಡ್ಡಿ ನೆಟ್ಟಿದ್ದ ಗಿಡಗಳೂ ಒಣಗಿವೆ.

‘ಬಿಡಿಎ ಅರಣ್ಯ ವಿಭಾಗದ ಲೆಕ್ಕದಲ್ಲಿ ಮಾತ್ರ ಸಸಿಗಳಿವೆ, ವಾಸ್ತವದಲ್ಲಿ ರಸ್ತೆಗಳಲ್ಲಿ ಗಿಡಗಳಿಲ್ಲ. ಎನ್‌ಪಿಕೆಎಲ್‌ನ ಬಟಾಬಯಲಿನಲ್ಲಿ ಅನಗತ್ಯವಾಗಿ ಬೆಳೆದಿರುವ ಕಳೆ ಸಸಿಗಳ ನಡುವೆ ‘ಗಿಡ ರಕ್ಷಕಗಳು’ ಮಾತ್ರ ಅಲ್ಲಲ್ಲಿ ಕಾಣಸಿಗುತ್ತವೆ. ಸಸಿಗಳಿಗೆ ನೀರು ಹಾಕಿಲ್ಲ, ನಿರ್ವಹಣೆಯನ್ನೂ ಮಾಡಿಲ್ಲ. ಹೀಗಾಗಿ, ಎಲ್ಲವೂ ಒಣಗಿವೆ’ ಎಂದು ಸ್ಥಳೀಯರಾದ ರಾಜೇಶ್, ಶೋಭಾ, ಗಂಗಾಧರ್, ಮನೋಹರ್ ದೂರಿದರು.

‘ಎನ್‌ಪಿಕೆಎಲ್‌ನಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಸಸಿಗಳನ್ನು ನೆಟ್ಟಿರುವ ಬಗ್ಗೆ ಬಿಡಿಎ ಅರಣ್ಯ ವಿಭಾಗದ ಅಧಿಕಾರಿಗಳು ಹೇಳುತ್ತಿದ್ದರು. ಆದರೆ, ವಾಸ್ತವದಲ್ಲಿ ಅದರಲ್ಲಿ ಕಾಲು ಭಾಗದಷ್ಟೂ ಗಿಡಗಳು ಇಲ್ಲಿಲ್ಲ. ಕೆಲವೆಡೆ ಕೇವಲ ಬಿದಿರಿನ ಗಿಡ ರಕ್ಷಕಗಳಷ್ಟೇ ಕಾಣುತ್ತವೆ. ಸ್ಥಳೀಯವಾಗಿ ಅಗತ್ಯವಿಲ್ಲದ ಸಸಿಗಳನ್ನು ನರ್ಸರಿಗಳಲ್ಲಿ ಬೆಳೆಸಲಾಗುತ್ತಿದೆ. ಅರಣ್ಯದಲ್ಲಿ ಬೆಳೆಯುವ ಮರಗಳು, ನಗರದ ವಾತಾವರಣದಲ್ಲಿ ಬೆಳೆಯುವುದಿಲ್ಲ ಎಂಬ ಅರಿವಿದ್ದರೂ ಲೆಕ್ಕ, ವೆಚ್ಚಕ್ಕಾಗಿ ಅಂತಹ ಗಿಡಗಳನ್ನೂ ಬೆಳೆಸಲಾಗುತ್ತಿದೆ’ ಎಂದು ಪರಿಸರ ಕಾರ್ಯಕರ್ತರು ಆರೋಪಿಸುತ್ತಾರೆ.

ನಾಡಪ್ರಭು ಕೆಂಪೇಗೌಡ ಬಡಾವಣೆಯ ಎಚ್ ಸೆಕ್ಟರ್‌ನಲ್ಲಿ ಒಣಗಿರುವ ಗಿಡಗಳು

ಬಡಾವಣೆಯಲ್ಲಿ ಬಿದಿರಿನ ‘ಗಿಡ ರಕ್ಷಕ’ಗಳಷ್ಟೇ ಉಳಿದಿವೆ

ದುಂದುವೆಚ್ಚಕ್ಕೆ ಶಿಕ್ಷೆ ಇಲ್ಲವೆ?

‘ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಬಿಡಿಎ ಅರಣ್ಯ ವಿಭಾಗದವರು ನಾಲ್ಕು ವರ್ಷಗಳಿಂದ ನೆಟ್ಟಿರುವ ಸಸಿಗಳಲ್ಲಿ ಬಹುತೇಕ ಎಲ್ಲವೂ ಒಣಗಿವೆ. ಒಂದು ಬಾರಿ ನೆಟ್ಟ ಮೇಲೆ ಯಾರೂ ಇತ್ತ ತಿರುಗಿ ನೋಡಿಲ್ಲ. ದುಂದುವೆಚ್ಚ ಮಾಡಬೇಡಿ, ನಿರ್ವಹಣೆ ಮಾಡುವುದಾದರೆ ಮಾತ್ರ ನೆಡಿ ಎಂದು ಆಗಲೇ ಒತ್ತಾಯಿಸಿದ್ದೆವು. ಆದರೆ ಯಾರೂ ನಮ್ಮ ಮಾತು ಕೇಳಲಿಲ್ಲ. ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ ದಾಖಲೆಗೆ ತೋರಿಸಲು ಸಸಿ ನೆಟ್ಟರು. ಅಂತಹವರ ಮೇಲೆ ಶಿಸ್ತು ಕ್ರಮ ಕೈಗೊಂಡು, ಶಿಕ್ಷೆ ನೀಡಬೇಕು’ ಎಂದು ಪರಿಸರ ಕಾರ್ಯಕರ್ತ ಗೌಡಯ್ಯ ಒತ್ತಾಯಿಸಿದರು.

‘ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (ಕೆಆರ್‌ಐಡಿಎಲ್) ಗುತ್ತಿಗೆ ನೀಡುವಂತಿಲ್ಲ ಎಂದೆಲ್ಲ ಹೇಳುತ್ತಾರೆ. ಆದರೆ, ಬಿಡಿಎ ಅರಣ್ಯ ವಿಭಾಗದ ಅಧಿಕಾರಿಗಳು ಹಣ ಮಾಡಿಕೊಳ್ಳಲೆಂದೇ ಅವರಿಗೆ ಗುತ್ತಿಗೆ ನೀಡಿ ಕೋಟ್ಯಂತರ ರೂಪಾಯಿಗಳನ್ನು ಕಬಳಿಸಿದ್ದಾರೆ. ನಾವಲ್ಲ, ಹಿಂದೆ ಇದ್ದವರು ಮಾಡಿದ್ದಾರೆ ಎನ್ನುತ್ತಾರೆ. ಯಾರೇ ಮಾಡಿದ್ದರೂ ಎಲ್ಲವೂ ತನಿಖೆಯಾಗಿ, ಶಿಕ್ಷೆಯಾಗಲಿ’ ಎಂದು ಆಗ್ರಹಿಸಿದರು.

ಸಮೀಕ್ಷೆ ನಡೆಯುತ್ತಿದೆ: ಬಿಡಿಎ

‘ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ (ಎನ್‌ಪಿಕೆಲ್) ಬೃಹತ್ ಸಂಖ್ಯೆಯ ಗಿಡಗಳು ಒಣಗಿರುವುದು ಗಮನಕ್ಕೆ ಬಂದಿದೆ. ಈ ಗಿಡಗಳನ್ನು ತೆಗೆದು, ಹೊಸ ಸಸಿಗಳನ್ನು ನೆಡಲಾಗುತ್ತದೆ’ ಎಂದು ಬಿಡಿಎ ಅರಣ್ಯ ವಿಭಾಗದ ಉಪ ನಿರ್ದೇಶಕ ಎನ್. ಚಿದಾನಂದ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಎನ್‌ಪಿಕೆಲ್‌ನಲ್ಲಿ ಮಾತ್ರವಲ್ಲ, ಬಿಡಿಎಯ ಎಲ್ಲ ಬಡಾವಣೆಗಳಲ್ಲೂ ಸಸಿಗಳನ್ನು ನೆಡಲು ಸುಮಾರು ₹30 ಕೋಟಿ ವೆಚ್ಚ ಮಾಡಲಾಗಿದೆ. ಕಡಿಮೆ ಅವಧಿಯಲ್ಲಿ ಕೆಲಸ ಮುಗಿಸಬೇಕಿದ್ದ ಕಾರಣದಿಂದ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (ಕೆಆರ್‌ಐಡಿಎಲ್) ಗುತ್ತಿಗೆಗಳನ್ನು ನೀಡಲಾಗಿದೆ. ಕೆಲವು ಗುತ್ತಿಗೆಗಳ ಅವಧಿ ಮುಗಿದಿರಬಹುದು. ಎಲ್ಲವನ್ನೂ ಸಮೀಕ್ಷೆ ಮಾಡಲಾಗುತ್ತಿದೆ. ಹೊಸ ಸಸಿಗಳನ್ನು ನೆಡಲಾಗುತ್ತದೆ’ ಎಂದು ಹೇಳಿದರು.

ಜೈವಿಕ ತಂತ್ರಜ್ಞಾನ ನೀತಿ–2024ಕ್ಕೆ ರಾಜ್ಯ ಸಚಿವ ಸಂಪುಟ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೈವಿಕ ತಂತ್ರಜ್ಞಾನದ ಉದಯೋನ್ಮುಖ ಕ್ಷೇತ್ರಗಳಿಗೆ ಆದ್ಯತೆ ನೀಡುವ ‘ಕರ್ನಾಟಕ ಜೈವಿಕ ತಂತ್ರಜ್ಞಾನ ನೀತಿ–2024ಕ್ಕೆ’ ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಕಾನೂನು ಸಚಿವ ಎಚ್.ಕೆ. ಪಾಟೀಲ ಈ ಕುರಿತು ವಿವರ ನೀಡಿದರು.

ಜೈವಿಕ ಕೃಷಿ, ಜೈವಿಕ– ಕೈಗಾರಿಕಾ (ಜೈವಿಕ ಶಕ್ತಿ, ಸ್ಮಾರ್ಟ್ ಪ್ರೊಟೀನ್ ಮತ್ತು ನ್ಯೂಟ್ರಾಸ್ಯುಟಿಕಲ್ಸ್), ಸಾಗರ ಜೈವಿಕ ತಂತ್ರಜ್ಞಾನ, ಸಿಂಥೆಟಿಕ್ಸ್ ಬಯೋಟೆಕ್ನಾಲಜಿ, ವೈದ್ಯಕೀಯ ಸಾಧನಗಳು ಮತ್ತು ರೋಗ ನಿರ್ಣಯ, ಜೈವಿಕ ತಂತ್ರಜ್ಞಾನದಲ್ಲಿ ಎಐ/ಎಂಎಲ್, ಆರೋಗ್ಯಕ್ಕಾಗಿ ಬಹು ಓಮಿಕ್ಸ್, ಅಪರೂಪದ ಕಾಯಿಲೆಗಳಿಗೆ ಕೋಶ ಮತ್ತು ಜೀನ್ ಚಿಕಿತ್ಸೆಗಳು, ಬಾಹ್ಯಾಕಾಶ ಜೈವಿಕ ತಂತ್ರಜ್ಞಾನಗಳಿಗೆ ಒತ್ತು ಸಿಗಲಿದೆ ಎಂದರು. ಐದು ವರ್ಷಗಳ ಅವ ಧಿಯ ಹೊಸ ನೀತಿಗೆ ₹100 ಕೋಟಿ ಪ್ರೋತ್ಸಾಹಕ ನೀಡಲಾಗುವುದು ಎಂದರು.

ವಯೋಮಿತಿ ಸಡಿಲಿಕೆ: ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್- ಬಿ ಮತ್ತು ಗ್ರೂಪ್ -ಸಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯನ್ನು ಮೂರು ವರ್ಷಗಳಿಗೆ ಹೆಚ್ಚಿಸಲು, ಒಂದು ಬಾರಿಯ ಕ್ರಮವಾಗಿ ಒಂದು ವರ್ಷದ ಅವಧಿಗೆ ಸಡಿಲಿಸಲು ನಿರ್ಧಾರ.

ಪ್ರಮುಖ ನಿರ್ಣಯಗಳು:

- ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ (ಕ್ರೈಸ್) ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿಶಾಲಾ ಕಾಲೇಜುಗಳಿಗೆ ₹18.54 ಕೋಟಿ ಮೊತ್ತದಲ್ಲಿ ಮೂಲ ಸೌಕರ್ಯ
- ವಿವಿಧ ಕೇಂದ್ರ ಕಾರಾಗೃಹಗಳಲ್ಲಿರುವ 59 ಜೀವಾವಧಿ ಶಿಕ್ಷೆಗೆ ಒಳಗಾದವರನ್ನು ಸನ್ನಡತೆ ಆಧಾರದ ಮೇಲೆ ಅವಧಿ ಪೂರ್ವ ಬಿಡುಗಡೆ ಮಾಡಲು ನಿರ್ಧಾರ.
- ವಿವಿಧ ಕಾರ್ಮಿಕ ಕಾಯ್ದೆಗಳಡಿ ನೋಂದಣಿ, ನವೀಕರಣ, ತಿದ್ದುಪಡಿ ಮತ್ತಿತರ ಸೇವೆಗಳಿಗಾಗಿ ಬಳಕೆದಾರರಿಂದ ಸಂಗ್ರಹಿಸಲಾಗುತ್ತಿರುವ ಶುಲ್ಕ, ದಂಡ ಮುಂತಾದ ದರಗಳ ಪರಿಷ್ಕರಣೆಗೆ ಅನುಮೋದನೆ.
- ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಗೆ ರೇಡಿಯೊ ಥೆರಪಿ ಚಿಕಿತ್ಸಾ ಮತ್ತು ರೋಗ ನಿರ್ಧಾರಕ ಉಪಕರಣಗಳನ್ನು ₹70 ಕೋಟಿ ವೆಚ್ಚದಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ.
- ಮೈಸೂರಿನ 40 ಹಾಸಿಗೆ ಸಾಮರ್ಥ್ಯದ ನ್ಯೂರಾಲಜಿ ಆಸ್ಪತ್ರೆಯನ್ನು 100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯನ್ನಾಗಿ ₹117.11 ಕೋಟಿ ವೆಚ್ಚದಲ್ಲಿ ಉನ್ನತೀಕರಿಸಲು ಒಪ್ಪಿಗೆ.
- ಕಲಬುರಗಿಯಲ್ಲಿ 150 ಹಾಸಿಗೆ ಸಾಮರ್ಥ್ಯದ ಮಕ್ಕಳ ಆರೋಗ್ಯ ಘಟಕವನ್ನು ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ತಾಂತ್ರಿಕ ನೆರವಿನೊಂದಿಗೆ ₹221.51 ಕೋಟಿ ವೆಚ್ಚದಲ್ಲಿ ಸ್ಥಾಪಿಸಲು ಅನುಮೋದನೆ.
- ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಸೇವೆಗೆ ಸೇರಿದ ಕೇಂದ್ರ ಸ್ಥಾನ ಸಹಾಯಕರು, ಹಿರಿಯ ಉಪ ನೋಂದಣಾಧಿಕಾರಿ, ಉಪ ನೋಂದಣಾಧಿಕಾರಿಗಳನ್ನು ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡಲು ನಿಗದಿಪಡಿಸಿದ ಅವಧಿಯನ್ನು ಆ.10ರಿಂದ ಸೆ.30 ರವರೆಗೆ ವಿಸ್ತರಿಸಲು ಅನುಮೋದನೆ.
- ಸ್ವಸಹಾಯ ಗುಂಪುಗಳ ಸದಸ್ಯರಾಗಿರುವ 1 ಲಕ್ಷ ಮಹಿಳೆಯರಿಗೆ ಕಾಫಿ ಮಂಡಳಿ ಸಹಭಾಗಿತ್ವದಲ್ಲಿ ಕಾಫಿ ಉದ್ಯಮಿ ಗಳಾಗಲು ತರಬೇತಿ ನೀಡುವುದರ ಜತೆಗೆ 200 ಕಾಫಿ ಕಿಯೋಸ್ಕ್‌ಗಳನ್ನು ₹25 ಕೋಟಿ ವೆಚ್ಚದಲ್ಲಿ ಪ್ರಾರಂಭಿಸಲು ಹಾಗೂ ಸ್ವಸಹಾಯ ಗುಂಪುಗಳ ಮಹಿಳೆಯರ ಮೂಲಕ ನಿರ್ವಹಿಸಲು ಅನುಮೋದನೆ.
- ಮೈಸೂರು ಜಿಲ್ಲೆ ವರುಣ ಹೋಬಳಿ ಚೋರನಹಳ್ಳಿ ಗ್ರಾಮದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಇನ್‌ಕ್ಯುಬೇಷನ್ ಸೆಂಟರ್ ಕೌಶಲ ಅಭಿವೃದ್ಧಿ ಕೇಂದ್ರ, ಮೌಲ್ಯಮಾಪನ ಕೇಂದ್ರ ಮತ್ತು ಎಂಜಿನಿಯರಿಂಗ್ ಪದವೀಧರರಿಗೆ ನವೋದ್ಯಮ ತರಬೇತಿ ನೀಡುವ ಕೇಂದ್ರದ ನಿರ್ಮಾಣ ಕಾಮಗಾರಿಗಳ ಪರಿಷ್ಕೃತ ಅಂದಾಜು ಮೊತ್ತ ₹75.91 ಕೋಟಿಗೆ ಆಡಳಿತಾತ್ಮಕ ಅನುಮೋದನೆ.
- ಉತ್ತರ ಕನ್ನಡ ಜಿಲ್ಲೆಯ ಕಾರವಾರದ ವೈದ್ಯಕೀಯ ವಿಜ್ಞಾನ ಮಹಾ ವಿದ್ಯಾಲಯದ ಆವರಣದಲ್ಲಿ 450 ಹಾಸಿಗೆಗಳ ಆಸ್ಪತ್ರೆ ಮತ್ತು ವಸತಿನಿಲಯ ಕಟ್ಟಡ ನಿರ್ಮಾಣ ಕಾಮಗಾರಿಗೆ ₹198.27 ಕೋಟಿ ಪರಿಷ್ಕೃತ ಅಂದಾಜಿಗೆ ಒಪ್ಪಿಗೆ.
- ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಕಲಬುರಗಿ ಶಾಖೆಯ ಕಟ್ಟಡ ಕಾಮಗಾರಿಯ ₹262.20 ಕೋಟಿ ಪರಿಷ್ಕೃತ ಅಂದಾಜಿಗೆ ಅನುಮೋದನೆ.

ಶೋಭಾ ವಿರುದ್ಧದ ಎಫ್‌ಐಆರ್ ರದ್ದು

ಪ್ರಜಾವಾಣಿ ವಾರ್ತೆ

ಚೆನ್ನೈ: ರಾಮೇಶ್ವರಂ ಕೆಫೆಯಲ್ಲಿ ನಡೆದ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ನೀಡಿದ್ದ ಹೇಳಿಕೆ ವಿಚಾರವಾಗಿ ಕೇಂದ್ರ ಸಚಿವ ಶೋಭಾ ಕರಂದ್ಲಾಜೆ ಅವರು ತಮಿಳುನಾಡಿನ ಜನರ ಕ್ಷಮೆ ಯಾಚಿಸಿದ ನಂತರ, ಅವರ ವಿರುದ್ಧ ಮದುರೆ ಪೊಲೀಸರು ದಾಖಲಿಸಿದ್ದ ಎಫ್‌ಐಆರ್‌ಅನ್ನು ಮದ್ರಾಸ್ ಹೈಕೋರ್ಟ್ ಗುರುವಾರ ರದ್ದುಪಡಿಸಿದೆ.

ಸಚಿವೆ ಶೋಭಾ ಅವರು ತಾವು ಆಡಿದ್ದ ಮಾತುಗಳಿಗೆ ಕ್ಷಮೆ ಯಾಚಿಸಿರುವ ಕಾರಣಕ್ಕೆ ಪ್ರಕರಣವನ್ನು ಕೊನೆಗೊಳಿಸಬಹುದು ಎಂದು ಅಡ್ವೊಕೇಟ್ ಜನರಲ್ ಪಿ.ಎಸ್. ರಾಮನ್ ಅವರು ತಿಳಿಸಿದ ನಂತರ, ನ್ಯಾಯಮೂರ್ತಿ ಜಿ. ಜಯಚಂದ್ರನ್ ಅವರು ಎಫ್‌ಐಆರ್ ರದ್ದತಿಗೆ ಆದೇಶಿಸಿದರು.

‘ದಲಿತ ಕ್ರೈಸ್ತರಿಗೆ ಪರಿಶಿಷ್ಟ ಜಾತಿ ಸೌಲಭ್ಯ ಕಲ್ಪಿಸಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಲಿತ ಕ್ರೈಸ್ತರಿಗೆ ಪರಿಶಿಷ್ಟ ಜಾತಿ ಸೌಲಭ್ಯ ಮುಂದುವರಿಸಬೇಕು’ ಎಂದು ಕರ್ನಾಟಕ ರಾಜ್ಯ ಆದಿಜಾಂಬವ ಸಂಘವು ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಕೆ.ಜಿ. ಬಾಲಕೃಷ್ಣನ್ ನೇತೃತ್ವದ ವಿಚಾರಣಾ ಆಯೋಗಕ್ಕೆ ಮನವಿ ಸಲ್ಲಿಸಿದೆ.

ಪರಿಶಿಷ್ಟ ಜಾತಿಯ ವ್ಯಕ್ತಿಗಳು ಬೇರೆ ಧರ್ಮಗಳಿಗೆ ಮತಾಂತರಗೊಂಡರೆ ಅವರಿಗೆ ಪರಿಶಿಷ್ಟ ಜಾತಿ ಸ್ಥಾನ ನೀಡಿ ಮೀಸಲಾತಿ ಕಲ್ಪಿಸಬೇಕೇ ಎಂಬುದನ್ನು ಪರಿಶೀಲಿಸಲು ಕೇಂದ್ರ ಸರ್ಕಾರ ನೇಮಿಸಿದ ಈ ಆಯೋಗಕ್ಕೆ ಸಂಘದ ಕಾರ್ಯಾಧ್ಯಕ್ಷ ಜಂಬೂದ್ವೀಪ ಸಿದ್ದರಾಜು ಈ ಮನವಿ ಸಲ್ಲಿಸಿದ್ದಾರೆ.

‘ಕ್ರೈಸ್ತ ಧರ್ಮಕ್ಕೆ ಮತಾಂತರವಾಗಿದ್ದರೂ, ಅವರ ಬೇರುಗಳು ಪರಿಶಿಷ್ಟ ಜಾತಿಯ ಸಂಬಂಧಗಳ ಜೊತೆ ಬೆಸೆದುಕೊಂಡಿದೆ. ಅವರು ಮೂರ್ತಿ ಪೂಜೆಯಲ್ಲಿ ನಂಬಿಕೆ ಇಟ್ಟುಕೊಂಡಿದ್ದು, ಭಾರತೀಯ ಸಂಪ್ರದಾಯಗಳನ್ನು ಬಿಟ್ಟುಕೊಟ್ಟಿಲ್ಲ. ಅವರನ್ನು ಸಮಾಜದಲ್ಲಿ ಮಾದಿಗ, ಹೊಲೆಯರೆಂದೇ ಗುರುತಿಸಲಾಗುತ್ತಿದೆ. ಆದರೆ, ಇಸ್ಲಾಂ ಧರ್ಮಕ್ಕೆ ಮತಾಂತರವಾದ ಪರಿಶಿಷ್ಟರು, ಪರಿಶಿಷ್ಟ ಜಾತಿಯ ಸಂಬಂಧವನ್ನು ಕಡಿದುಕೊಂಡಿರುತ್ತಾರೆ. ಯಾಕೆಂದರೆ, ಮುಸ್ಲಿಂ ಧರ್ಮದ ಕಟ್ಟುಪಾಡುಗಳು ಕಠಿಣವಾಗಿವೆ. ಹೀಗಾಗಿ, ದಲಿತ ಕ್ರೈಸ್ತರು ಪರಿಶಿಷ್ಟ ಮೀಸಲಾತಿಯಲ್ಲಿಯೇ ಮುಂದುವರೆಸಬೇಕು’ ಎಂದು ಮನವಿಯಲ್ಲಿ ಅವರು ಆಗ್ರಹಿಸಿದ್ದಾರೆ.

ಕೈಗಾರಿಕಾ ಮೂಲಸೌಕರ್ಯಕ್ಕೆ ₹5 ಸಾವಿರ ಕೋಟಿ ಸಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿರುವ ಕೈಗಾರಿಕಾ ಪ್ರದೇಶಗಳಿಗೆ ನದಿ ಮೂಲದಿಂದ ಪ್ರತ್ಯೇಕ ನೀರು ಸರಬರಾಜು ವ್ಯವಸ್ಥೆ ಹಾಗೂ ಮೂಲಸೌಕರ್ಯ ಕಲ್ಪಿಸಲು ₹5 ಸಾವಿರ ಕೋಟಿ ಸಾಲ ಪಡೆಯಲಾಗುತ್ತದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ತಿಳಿಸಿದರು.

ಭಾರತೀಯ ಕೈಗಾರಿಕೆಗಳ ಒಕ್ಕೂಟ (ಸಿಐಐ) ಏರ್ಪಡಿಸಿದ್ದ 'ಇನ್ನೋವರ್ಜ್' ಸಮಾವೇಶದಲ್ಲಿ ಅವರು ಗುರುವಾರ ಮಾತನಾಡಿದರು.

‘ಉದ್ದೇಶಿತ ನೀರು ಸರಬರಾಜು ಯೋಜನೆಗೆ ಅಂದಾಜು ₹2 ಸಾವಿರ ಕೋಟಿ ಬೇಕಾಗುತ್ತದೆ. ಉಳಿದ ₹3 ಸಾವಿರ ಕೋಟಿಯನ್ನು ಹಳೇ ಕೈಗಾರಿಕಾ ಪ್ರದೇಶಗಳಲ್ಲಿ ಮೂಲಸೌಕರ್ಯ ಒದಗಿಸಲು ಹಾಗೂ ಹೊಸ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ, ಭೂಸ್ವಾಧೀನಕ್ಕೆ ಬಳಸಲಾಗುವುದು’ ಎಂದು ಅವರು ಹೇಳಿದರು.

‘ರಾಜ್ಯದಲ್ಲಿರುವ ಬಹುತೇಕ ಕೈಗಾರಿಕಾ ಪ್ರದೇಶಗಳಲ್ಲಿ ನಿರೀಕ್ಷಿತ ಮೂಲಸೌಕರ್ಯ ಇಲ್ಲ. ಪ್ರತ್ಯೇಕ ನೀರು ಸರಬರಾಜು ವ್ಯವಸ್ಥೆಯಂತೂ ಇಲ್ಲವೇ ಇಲ್ಲ. ಹೀಗಾಗಿ, ಹಣಕಾಸು ಇಲಾಖೆ ಜತೆಗೂ ಚರ್ಚಿಸಲಾಗುತ್ತಿದೆ’ ಎಂದು ಅವರು ಹೇಳಿದರು.

ಸಿಐಐ ಇಂಡಿಯಾ ಅಧ್ಯಕ್ಷ, ವೋಲ್ವೊ ಅಧ್ಯಕ್ಷ ಕಮಲ್ ಬಾಲಿ, ಸಿಐಐ ಕರ್ನಾಟಕ ಘಟಕದ ಅಧ್ಯಕ್ಷ ಎನ್. ವೇಣು, ಉಪಾಧ್ಯಕ್ಷ ರಬೀಂದ್ರ ಶ್ರೀಕಂಠನ್, ಐಟಿ-ಬಿಟಿ ಇಲಾಖೆಯ ಕಾರ್ಯದರ್ಶಿ ಏಕರೂಪ್ ಕೌರ್ ಉಪಸ್ಥಿತರಿದ್ದರು.

ಸಿಐಐ ಏರ್ಪಡಿಸಿದ್ದ 'ಇನ್ನೋವರ್ಜ್' ಸಮಾವೇಶದಲ್ಲಿ ಎಂ.ಬಿ.ಪಾಟೀಲ ಅವರಿಗೆ ಕಮಲ್ ಬಾಲಿ ಸ್ಮರಣಿಕೆ ನೀಡಿದರು.ಏಕರೂಪ್ ಕೌರ್ ಉಪಸ್ಥಿತರಿದ್ದರು

ಕೆಎಚ್‌ಐಆರ್‌ಸಿಗೆ 10 ದಿನದಲ್ಲಿ ಚಾಲನೆ

ಬೆಂಗಳೂರಿನ ಹೊರ ವಲಯದಲ್ಲಿ 2,000 ಎಕರೆ ವಿಸ್ತೀರ್ಣದಲ್ಲಿ ಎರಡು ಹಂತಗಳಲ್ಲಿ ನಿರ್ಮಾಣವಾಗುವ ‘ ಜ್ಞಾನ– ಆರೋಗ್ಯ– ಆವಿಷ್ಕಾರ ಮತ್ತು ಸಂಶೋಧನಾ ನಗರ’ (ಕೆಎಚ್‌ಐಆರ್‌ಸಿ) ಯೋಜನೆಗೆ 10 ದಿನದೊಳಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ ಎಂದು ಬೃಹತ್ ಮತ್ತು ಎಂ.ಬಿ. ಪಾಟೀಲ ತಿಳಿಸಿದರು.

ಬೆಂಗಳೂರು ಮತ್ತು ಬೆಳಗಾವಿಯಲ್ಲಿ ಎರಡು ಪ್ರತ್ಯೇಕ ಸ್ಟಾರ್ಟಪ್ ಪಾರ್ಕ್ ಸ್ಥಾಪಿಸಲಾಗುವುದು. ಅದಕ್ಕೆ ಅಗತ್ಯವಾಗಿರುವ ಭೂಮಿಯನ್ನು ಬೆಂಗಳೂರಿನಲ್ಲಿ ಗುರುತಿಸಲಾಗಿದೆ. ಬೆಳಗಾವಿಯಲ್ಲಿ ಪರಿಶೀಲಿಸಲಾಗುತ್ತಿದೆ. ಬೆಳಗಾವಿಯಲ್ಲಿ ‘ಮೆಡ್‌-ಟೆಕ್ ಸ್ಟಾರ್ಟಪ್ ಪಾರ್ಕ್’ ಸ್ಥಾಪಿಸುವ ಉದ್ದೇಶವಿದೆ ಎಂದು ಮಾಹಿತಿ ನೀಡಿದರು.

ಬಂಡೀಪುರ ಪ್ರದೇಶದಲ್ಲಿ ಜಿಂಕೆ ಬೇಟೆ ವಿಚಾರಣೆ ವಿಳಂಬ

ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಂಡೀಪುರ ಅರಣ್ಯ ಪ್ರದೇಶದಲ್ಲಿ ಜಿಂಕೆಯನ್ನು ಬೇಟೆಯಾಡಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣವೊಂದರ ವಿಚಾರಣೆ 16 ವರ್ಷವಾದರೂ ಕುಂಟುತ್ತಾ ಸಾಗುತ್ತಿದೆ’ ಎಂಬ ಹಿನ್ನೆಲೆಯಲ್ಲಿ ಹೈಕೋರ್ಟ್ ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ.

‘ನಮ್ಮ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿ ಕೇರಳದ ಕೊಯಿಕ್ಕೋಡ್‌ನ ತಾಮರಶೇರಿಯ ಅಬ್ದುಲ್ ರೆಹಿಮಾನ್ (52), ಅಬ್ದುಲ್ ಮಜೀದ್ (60) ಮತ್ತು ಸುಲ್ತಾನ್ ಬತೇರಿಯ ಮೊಹಮ್ಮದ್ ಕುಟ್ಟಿ (76) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ಅರ್ಜಿದಾರರನ್ನು ಘೋಷಿತ ಅಪರಾಧಿಗಳು ಎಂದು ಸಾರಲಾಗಿದೆ. ವಿಚಾರಣೆಗೆ ಹಾಜರಾಗಲು ನ್ಯಾಯಾಲಯ ರಕ್ಷಣೆ ಒದಗಿಸಬೇಕು’ ಎಂದು ಕೋರಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ರಾಜ್ಯ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ‘ಆರೋಪಿಗಳು 2008ರಲ್ಲಿ ಬಂಡೀಪುರ ಅರಣ್ಯದಲ್ಲಿ ಜಿಂಕೆಯನ್ನು ಬೇಟೆಯಾಡಿ ಅದರ ಕಾಲು, ಕೈಗಳನ್ನು ಸ್ಥಳದಲ್ಲೇ ಬಿಟ್ಟು ಮಾಂಸವನ್ನು ಕೊಂಡೊಯ್ದಿದ್ದಾರೆ. ಇವರೆಲ್ಲಾ ಕೇರಳದ ಸುಲ್ತಾನ್ ಬತೇರಿಯಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದರು. ಮಾಹಿತಿ ಆಧರಿಸಿ ಆರೋಪಿಗಳನ್ನು ಘಟನಾ ಸ್ಥಳಕ್ಕೆ ಕರೆದೊಯ್ದಾಗ ಜಿಂಕೆಯ ಕಾಲುಗಳು ಸಿಕ್ಕಿದ್ದವು. ಎಲ್ಲರ ವಿರುದ್ಧ ದೋಷಾರೋಪ ನಿಗದಿಗೊಳಿಸಲಾಗಿದೆ. ಈಗಾಗಲೇ ಸಾಕ್ಷಿಗಳ ದಾಖಲು ಪ್ರಕ್ರಿಯೆ ನಡೆಯುತ್ತಿದೆ. ಆದರೆ, ಆರೋಪಿಗಳು ನ್ಯಾಯಾಲಯಕ್ಕೆ ಸರಿಯಾಗಿ ಹಾಜರಾಗುತ್ತಿಲ್ಲ’ ಎಂದರು.

ಈ ವಿವರಣೆಗೆ ಅತೃಪ್ತಿ ವ್ಯಕ್ತಪಡಿಸಿದ ನ್ಯಾಯಪೀಠ, ‘ಒಂದು ಗಂಭೀರ ಅರಣ್ಯ ಅಪರಾಧವನ್ನು ಇತ್ಯರ್ಥಗೊಳಿಸಲು 16 ವರ್ಷ ಏಕೆ ತೆಗೆದುಕೊಂಡಿರಿ? ಹೀಗಾದರೆ ಆರೋಪಿಗಳು ಎದೆಯುಬ್ಬಿಸಿ ಓಡಾಡುತ್ತಾರಲ್ಲವೇ? ಯಾರನ್ನಾದರೂ ಶಿಕ್ಷೆಗೆ ಗುರಿಯಾಗುವಂತೆ ಮಾಡಬೇಕಾದರೆ, ಬೇಗ ಮಾಡಿ. ಒಂದು ಪ್ರಕರಣವನ್ನು 16 ವರ್ಷಗಳವರೆಗೆ ತಳ್ಳುತ್ತಾ ಕೂತರೆ ಹೇಗೆ? 2008ರಲ್ಲಿ ಜಿಂಕೆ ಕೊಂದಿರುವುದಕ್ಕೆ ಅರಣ್ಯ ಕಾಯ್ದೆ ಅಡಿ ಪ್ರಕರಣ ದಾಖಲಿಸಿ, 2024ರಲ್ಲಿ ಅದರ ವಿಚಾರಣೆ ನಡೆಸಲಾಗುತ್ತಿದೆ ಎಂದರೆ ಹೇಗೆ? ಅರ್ಜಿದಾರರು ನ್ಯಾಯಾಲಯದ ಮುಂದೆ ಬಂದಿಲ್ಲ ಎಂದು ಎಷ್ಟು ವರ್ಷ ಕಾಯುತ್ತಾ ಕೂರುತ್ತೀರಿ’ ಎಂದು ಚಾಟಿ ಬೀಸಿತು.

‘ನಾವೀಗ 2024ರಲ್ಲಿದ್ದೇವೆ. ವಿಳಂಬ ಸಲ್ಲದು’ ಎಂದ ನ್ಯಾಯಪೀಠ, ‘ಗುಂಡ್ಲುಪೇಟೆಯ ಪ್ರಧಾನ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿನ ವಿಚಾರಣಾ ಪ್ರಕ್ರಿಯೆ ರದ್ದುಪಡಿಸಬೇಕು’ ಎಂಬ ಅರ್ಜಿದಾರರ ಕೋರಿಕೆಯನ್ನು ವಜಾಗೊಳಿಸಿ ಆದೇಶಿಸಿತು.

ಮುಖ್ಯಾಂಶಗಳು

- 16 ವರ್ಷಗಳ ಸುದೀರ್ಘ ವಿಳಂಬ
- ಪ್ರಕರಣ ರದ್ದುಪಡಿಸಲು ನಕಾರ

ಅರ್ಜಿದಾರರು ವಿಚಾರಣೆಯಿಂದ ನುಣುಚಿಕೊಳ್ಳುತ್ತಿರುವುದರಿಂದ ಅವರಿಗೆ ಯಾವುದೇ ರಕ್ಷಣೆ ನೀಡಲಾಗದು. ವಿಚಾರಣಾ ನ್ಯಾಯಾಲಯ ಪ್ರಕರಣವನ್ನು ಮೂರು ತಿಂಗಳಲ್ಲಿ ವಿಲೇವಾರಿ ಮಾಡಬೇಕು

ಎಂ.ನಾಗಪ್ರಸನ್ನ, ನ್ಯಾಯಮೂರ್ತಿ

35 ಕೆ.ಜಿ. ಜಿಂಕೆ ಮಾಂಸ ವಶ

‘ಅಬ್ದುಲ್ ರೆಹಿಮಾನ್, ಅಬ್ದುಲ್ ಮಜೀದ್ ಮತ್ತು ಮೊಹಮ್ಮದ್ ಕುಟ್ಟಿ 2008ರ ನವೆಂಬರ್ 30ರಂದು ಬಂಡೀಪುರ ಅರಣ್ಯದಲ್ಲಿ ಜಿಂಕೆಯನ್ನು ಕೊಂದು, ಅದರ ಕಾಲು ಕತ್ತರಿಸಿ ಬಿಸಾಡಿದ್ದರು. ನಂತರ ಅದರ ದೇಹವನ್ನು ಸುಲ್ತಾನ್ ಬತೇರಿಗೆ ತೆಗೆದುಕೊಂಡು ಹೋಗಿದ್ದರು’ ಎಂಬ ಆರೋಪದಡಿ ಇವರೆಲ್ಲರ ವಿರುದ್ಧ ವನ್ಯಜೀವಿ ರಕ್ಷಣಾ ಕಾಯ್ದೆ-1972ರ ಕಲಂ 2 (36), 9, 31, 34, 35 (6, 8) 48 (ಎ) ಜೊತೆಗೆ 51ರ ಅಡಿಯಲ್ಲಿ ಗುಂಡ್ಲುಪೇಟೆಯ ಮದ್ದೂರು ವಿಭಾಗದ ವಲಯ ಅರಣ್ಯಾಧಿಕಾರಿ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು.

ಆರೋಪಿಗಳಿಂದ ಕೇರಳದ ಸುಲ್ತಾನ್ ಬತೇರಿಯಲ್ಲಿ 35 ಕೆ.ಜಿ. ಜಿಂಕೆ ಮಾಂಸ ಮತ್ತು ಅದರ ಚರ್ಮವನ್ನು ಹಾಗೂ ನಂತರದಲ್ಲಿ ಪರವಾನಗಿ ಇಲ್ಲದ ಗನ್, ಕಾಟ್ರಿಜ್ ಅನ್ನು ವಶಪಡಿಸಿಕೊಳ್ಳಲಾಗಿತ್ತು. ವನ್ಯಜೀವಿ ರಕ್ಷಣಾ ಕಾಯ್ದೆ ಅಡಿಯಲ್ಲಿ ಗುಂಡ್ಲುಪೇಟೆ ಠಾಣೆಯಲ್ಲಿ ಹಾಗೂ ಸುಲ್ತಾನ್ ಬತೇರಿಯಲ್ಲಿ ಶಸ್ತ್ರಾಸ್ತ್ರ ಕಾಯ್ದೆ ಅಡಿ ಪ್ರತ್ಯೇಕ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು.

‘ಭಾಗ್ಯಲಕ್ಷ್ಮಿ’ಯಲ್ಲಿ ₹23 ಕೋಟಿ ಅಕ್ರಮ: ಎಸ್‌ಐಟಿ ರಚಿಸಿ’

ಪ್ರಜಾವಾಣಿ ವಾರ್ತೆ

ರಮೇಶ್ ಬಾಬು

ಬೆಂಗಳೂರು: ‘ಭಾಗ್ಯಲಕ್ಷ್ಮಿ ಯೋಜನೆಯಡಿ 2010–2011ನೇ ಸಾಲಿನಲ್ಲಿ ಉಚಿತ ಸೀರೆ ಹಂಚಿಕೆಯಲ್ಲಿ ಸುಮಾರು ₹23 ಕೋಟಿಯ ಅವ್ಯವಹಾರ ನಡೆದಿದೆ. ಈ ಹಗರಣದ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಬೇಕು’ ಎಂದು ಆಗ್ರಹಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್ ಬಾಬು ಪತ್ರ ಬರೆದಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಗುರುವಾರ ಈ ವಿಷಯ ತಿಳಿಸಿದ ರಮೇಶ್ ಬಾಬು, ‘ಸೂರತ್‌ನಿಂದ ಮಾರುಕಟ್ಟೆ ದರಕ್ಕಿಂತ ಹೆಚ್ಚು ದರ ನೀಡಿ ಸುಮಾರು 10.68 ಲಕ್ಷ ಸೀರೆ ಖರೀದಿಸಿ ಹಂಚಿಕೆ ಮಾಡಲಾಗಿತ್ತು. ಅಂದು ವಿಧಾನಪರಿಷತ್ ಬಿಜೆಪಿ ಸದಸ್ಯರಾಗಿದ್ದ ಲಹರ್ ಸಿಂಗ್ ಸಿರೋಯಾ ಈ ವಹಿವಾಟಿನಲ್ಲಿ ಭಾಗಿಯಾಗಿರುವ ಆರೋಪವಿದೆ’ ಎಂದರು.

‘ಮೋಟಮ್ಮ ಅವರು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರಾಗಿದ್ದಾಗ ಈ ವಿಚಾರ ಚರ್ಚೆಯಾಗಿತ್ತು. ಆಗ ಸದಸ್ಯರಾಗಿದ್ದ ಯು.ಬಿ. ವೆಂಕಟೇಶ್, ದಯಾನಂದ ಮುಂತಾದವರೂ ಚರ್ಚೆ ನಡೆಸಿದ್ದರು’ ಎಂದರು.

‘ರಾಜಸ್ಥಾನದಿಂದ ಬಂದು ಕರ್ನಾಟಕದಲ್ಲಿ ರಾಜಕೀಯ ನೆಲೆ ಕಂಡುಕೊಂಡಿರುವ ಲಹರ್ ಸಿಂಗ್ ಕರ್ನಾಟಕದ ಹಿತ ಕಾಪಾಡುತ್ತಾರೋ, ರಾಜಸ್ಥಾನದ ಹಿತ ಕಾಪಾಡುತ್ತಾರೋ ನೋಡಬೇಕು. ಅಕ್ರಮಗಳ ಬಗ್ಗೆ ಮಾತನಾಡುವ ಅವರು ಈ ಸೀರೆ ಹಗರಣದ ಬಗ್ಗೆ ಧ್ವನಿ ಎತ್ತಬೇಕು. ತನಿಖೆಗೆ ಆಗ್ರಹಿಸಿ ಮುಖ್ಯಮಂತ್ರಿಗೆ ಪತ್ರ ಬರೆಯಬೇಕು’ ಎಂದು ಆಗ್ರಹಿಸಿದರು.

‘ಶಾಲೆಗೆಂದು ಪಡೆದ ಸಿಎ ನಿವೇಶನದಲ್ಲಿ ಬಿರಿಯಾನಿ ಹೋಟೆಲ್ ನಡೆಸುತ್ತಿರುವ ಛಲವಾದಿ ನಾರಾಯಣಸ್ವಾಮಿ ವಿರುದ್ಧ ಕಾಂಗ್ರೆಸ್ ಪಕ್ಷದ ಎರಡನೇ ಸಾಲಿನ ನಾಯಕರು ರಾಜ್ಯಪಾಲರಿಗೆ ದೂರು ಕೊಟ್ಟಿದ್ದಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ಗೇಲಿ ಮಾಡಿದ್ದಾರೆ. ವಿಜಯೇಂದ್ರ, ಆರ್. ಅಶೋಕ, ಸಂಸದ ಡಾ.ಕೆ. ಸುಧಾಕರ್, ಅಶ್ವತ್ಥ ನಾರಾಯಣ ಅವರು ಜಗನ್ನಾಥ ಭವನದ ನಾಯಕರಲ್ಲ, ಬಾಲಭವನದ ನಾಯಕರು ಎಂದು ಜಗನ್ನಾಥ ಭವನದ ನಾಯಕರಾದ ಬಿ.ಎಲ್. ಸಂತೋಷ, ಸಿ.ಟಿ. ರವಿ, ಯತ್ನಾಳ್, ರವಿಕುಮಾರ್ ಹೇಳುತ್ತಿದ್ದಾರೆ’ ಎಂದು ತಿರುಗೇಟು ನೀಡಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ಇದ್ದರು.

‘ಭೂ ಹಗರಣ ಸೃಷ್ಟಿಸಿ, ಕಿರುಕುಳ ನೀಡುವ ವ್ಯಕ್ತಿ’

‘ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಕೋರ್ಟ್ ಮೆಟ್ಟಿಲೇರಿರುವ ಸ್ನೇಹಮಯಿ ಕೃಷ್ಣ, ಭೂ ಹಗರಣ ಸೃಷ್ಟಿಸಿ, ಕಿರುಕುಳ ನೀಡುವ ವ್ಯಕ್ತಿ’ ಎಂದು ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಆರೋಪಿಸಿದರು.

‘ಮೈಸೂರು ನಗರದಲ್ಲಿ ಮಾತ್ರ ಆತನ ಮೇಲೆ 22 ಎಫ್‌ಐಆರ್ ದಾಖಲಾಗಿವೆ. ಅಮಾಯಕ ಭೂಮಾಲೀಕರನ್ನು ಹೆದರಿಸಿ ಸಣ್ಣಪುಟ್ಟ ಜಗಳ ಸೃಷ್ಟಿಸಿ ಕಾನೂನು ದುರುಪಯೋಗ ಮಾಡಿಕೊಂಡಿರುವ ವ್ಯಕ್ತಿ’ ಎಂದರು.

‘ಆರ್‌ಟಿಐಯಲ್ಲಿ ದಾಖಲೆ ಪಡೆಯುವುದು, ಅದಕ್ಕೆ ವೈಟ್ನರ್ ಹಾಕುವುದು, ನಕಲಿ ಸೀಲು ಹಾಕಿ ದಾಖಲೆ ಸೃಷ್ಟಿಸುವ ಈತ ನಕಲಿಗಳ ಸರದಾರ. ಮುಡಾ ಪ್ರಕರಣದಲ್ಲಿ ಒಂದಷ್ಟು ನಕಲಿ ದಾಖಲೆ ಸೃಷ್ಟಿಸಿದ್ದಾನೆ ಎಂದು ಪೊಲೀಸ್ ಕಮಿಷನರ್‌ಗೆ ಈಗಾಗಲೇ ದೂರು ನೀಡಲಾಗಿದೆ. ಕುಮಾರಸ್ವಾಮಿ ಬಿಡುಗಡೆ ಮಾಡಿರುವ ದಾಖಲೆಗಳನ್ನು ನೀಡಿದ್ದೂ ಇದೇ ಸ್ನೇಹಮಯಿ ಕೃಷ್ಣ’ ಎಂದರು.

‘ಉಕ್ರೇನ್ ಸಂಘರ್ಷ ಬಗೆಹರಿಸಲು ಭಾರತ ಪ್ರಾಮಾಣಿಕ ಯತ್ನ’


ವ್ಲಾಡಿಮಿರ್ ಪುಟಿನ್

ಮಾಸ್ಕೊ (ಪಿಟಿಐ): ‘ಉಕ್ರೇನ್ ಸಂಘರ್ಷದ ಕುರಿತು ಭಾರತ, ಚೀನಾ, ಬ್ರೆಜಿಲ್‌ನೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇನೆ. ಈ ಮೂರೂ ರಾಷ್ಟ್ರಗಳು ಸಂಘರ್ಷ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿವೆ’ ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಹೇಳಿದ್ದಾರೆ.

ವ್ಲಾದಿವೋಸ್ಟಾಕ್‌ನಲ್ಲಿ ನಡೆದ ಈಸ್ಟರ್ನ್ ಎಕನಾಮಿಕ್ ಫೋರಂನ (ಇಇಎಫ್) ಸರ್ವಸದಸ್ಯರ ಅಧಿವೇಶನದಲ್ಲಿ ಪುಟಿನ್ ಈ ಹೇಳಿಕೆಗಳನ್ನು ನೀಡಿದ್ದಾರೆ ಎಂದು ರಷ್ಯಾದ ಸರ್ಕಾರಿ ಸುದ್ದಿಸಂಸ್ಥೆ ‘ಟಾಸ್’ ವರದಿ ಮಾಡಿದೆ.

‘ಉಕ್ರೇನ್ ಮಾತುಕತೆಗಳನ್ನು ಮುಂದುವರಿಸಲು ಬಯಸಿದರೆ, ನಾನು ಕೂಡ ಮಾತುಕತೆಗೆ ಮುಂದಾಗಬಹುದೆಂದು ಪುಟಿನ್ ಹೇಳಿದ್ದಾರೆ’ ಎಂದು ಅಮರಿಕದ ಮಾಧ್ಯಮ ಸಂಸ್ಥೆ ‘ಪೊಲಿಟಿಕೊ’ ಕೂಡ ವರದಿ ಮಾಡಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಉಕ್ರೇನ್‌ಗೆ ಭೇಟಿ ನೀಡಿ, ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರೊಂದಿಗೆ ಮಾತುಕತೆ ನಡೆಸಿದ ಎರಡು ವಾರಗಳ ನಂತರ ಪುಟಿನ್ ಅವರಿಂದ ಈ ಹೇಳಿಕೆಗಳು ಬಂದಿವೆ.

‘ನಾವು ನಮ್ಮ ಸ್ನೇಹಿತರು ಮತ್ತು ಪಾಲುದಾರರನ್ನು ಗೌರವಿಸುತ್ತೇವೆ. ಮುಖ್ಯವಾಗಿ ಚೀನಾ, ಬ್ರೆಜಿಲ್ ಮತ್ತು ಭಾರತ ಈ ಸಂಘರ್ಷದ ಸುತ್ತಲಿನ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿವೆ. ಈ ವಿಷಯದ ಬಗ್ಗೆ ನಾನು ನಮ್ಮ ಪಾಲುದಾರರೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿರುತ್ತೇನೆ’ ಎಂದು ಪುಟಿನ್ ಹೇಳಿದ್ದಾರೆ.

‘ಗೌರಿ ಲಂಕೇಶ್ ನೆನಪು’ ಕಾರ್ಯಕ್ರಮದಲ್ಲಿ ರಹಮತ್ ತರಿಕೆರೆ ಕಳವಳ

‘ದೇಶದಲ್ಲೀಗ ‘ಒಂದರ’ ಭಯೋತ್ಪಾದನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದಲ್ಲಿ ಈಗ ‘ಒಂದು’ ಎಂಬುದು ಭಯೋತ್ಪಾದನೆಯ ಪದವಾಗಿದೆ. ಒಂದು ಭಾಷೆ, ಒಂದು ಚುನಾವಣೆ, ಒಂದು ಧರ್ಮ, ಒಂದು ಸಿದ್ಧಾಂತ, ಒಂದು ರಾಜಕೀಯ ಪಕ್ಷ ಎಂದು ವೈವಿಧ್ಯವನ್ನು ಇಲ್ಲವಾಗಿಸುವ ಭಯವನ್ನು ಹುಟ್ಟಿಸಲಾಗುತ್ತಿದೆ’ ಎಂದು ಸಂಸ್ಕೃತಿ ಚಿಂತಕ ರಹಮತ್ ತರೀಕೆರೆ ಆತಂಕ ವ್ಯಕ್ತಪಡಿಸಿದರು.

ಗೌರಿ ಸ್ಮಾರಕ ಟ್ರಸ್ಟ್ ನಗರದಲ್ಲಿ ಗುರುವಾರ ಆಯೋಜಿಸಿದ್ದ ‘ಗೌರಿ ಲಂಕೇಶ್ ನೆನಪು–2024’ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಸ್ವಾತಂತ್ರ್ಯ ಹೋರಾಟ ಮತ್ತು ಏಕೀಕರಣ ಚಳವಳಿಗಳ ಸಂದರ್ಭದಲ್ಲಿ ‘ಒಂದು’ ಎಂಬುದು ಏಕತೆಯನ್ನು ಪ್ರತಿನಿಧಿಸುತ್ತಿತ್ತು. ಆದರೆ ಈಗ ಅದು ಬಹುತ್ವ ಮತ್ತು ಒಕ್ಕೂಟ ವ್ಯವಸ್ಥೆಗೆ ಕಂಟಕವಾಗಿ ಅದನ್ನು ಬದಲಿಸಲಾಗಿದೆ. ಈ ಭಯೋತ್ಪಾದನೆಯನ್ನು ನಾವು ಮುಖಾಮುಖಿಯಾಗಬೇಕು’ ಎಂದರು.

‘ಎಂ.ಎಂ.ಕಲಬುರ್ಗಿ ಮತ್ತು ಗೌರಿ ಲಂಕೇಶ್ ಅವರು ಒಕ್ಕೂಟ ವ್ಯವಸ್ಥೆಯ ಪ್ರತಿಪಾದಕರಾಗಿದ್ದರು. ಕನ್ನಡತ್ವದ ಮೇಲೆ ಸಂಸ್ಕೃತ, ಹಿಂದಿ, ಶಿಕ್ಷಣ ವ್ಯವಸ್ಥೆ, ಬಂಡವಾಳಶಾಹಿ ನೀತಿಗಳ ಹೇರಿಕೆಯು ಒಕ್ಕೂಟ ವ್ಯವಸ್ಥೆಗೆ ಮಾರಕವಾಗಿದೆ. ಕಲಬುರ್ಗಿ ಮತ್ತು ಗೌರಿ ಅದರ ವಿರುದ್ಧ ದನಿ ಎತ್ತಿದ್ದರು. ಅವರಿಬ್ಬರ ಕೊಲೆಗಳು, ಒಕ್ಕೂಟ ವ್ಯವಸ್ಥೆಯ ಆಶೋತ್ತರಗಳ ಹತ್ಯೆಯೇ ಆಗಿದೆ’ ಎಂದರು.

‘ಭಾರತದ ಗಣರಾಜ್ಯದಲ್ಲಿನ ಬಿರುಕುಗಳು’ ಕುರಿತು ಮಾತನಾಡಿದ ಮುಂಬೈನ ಟಾಟಾ ಸಾಮಾಜಿಕ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕ ಆರ್. ರಾಮಕುಮಾರ್, ‘ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳ ಆರ್ಥಿಕ ಹಕ್ಕುಗಳನ್ನು ಹತ್ತಿಕ್ಕುವ ಎಲ್ಲ ಕೆಲಸಗಳನ್ನೂ ಎನ್‌ಡಿಎ ಸರ್ಕಾರ ಮಾಡುತ್ತಿದೆ. ತೆರಿಗೆ ಆದಾಯದಲ್ಲಿ ರಾಜ್ಯಗಳ ಪಾಲನ್ನು ಕಡಿಮೆ ಮಾಡುತ್ತಿದೆ. ತಮ್ಮ ಹಕ್ಕನ್ನು ಪ್ರತಿಪಾದಿಸುವ ರಾಜ್ಯಗಳನ್ನು ದೇಶವಿರೋಧಿಗಳಂತೆ ಬಿಂಬಿಸುತ್ತಿದೆ’ ಎಂದು ಆರೋಪಿಸಿದರು.

‘ಕೇಂದ್ರ–ಕರ್ನಾಟಕ–ಗಣತಂತ್ರದ ಕನಸು’ ಕುರಿತು ಮಾತನಾಡಿದ ಚಿಂತಕಿ ಪ್ರೊ.ಮೀನಾಕ್ಷಿ ಬಾಳಿ, ‘ಬಿಜೆಪಿ ಸರ್ಕಾರ ಒಕ್ಕೂಟ ವ್ಯವಸ್ಥೆಗೆ ಎಷ್ಟು ವಿರುದ್ಧವಾಗಿ ಇದೆಯೆಂದರೆ, ತೀವ್ರ ನೆರೆ ಬಂದಾಗ ಬಿಜೆಪಿ ಮುಖ್ಯಮಂತ್ರಿ ಯಡಿಯೂರಪ್ಪನವರು ನೆರವು ಕೋರಲು ದೆಹಲಿಗೆ ಹೋಗಿದ್ದರು. ಆದರೆ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರನ್ನು ಮಾತನಾಡಿಸಲೂ ಇಲ್ಲ. ಅವರು ಬರಿಗೈಯಲ್ಲಿ ವಾಪಸ್ಸು ಬಂದರು. ಹೀಗೆ ಬಿಜೆಪಿಯು ಶಾಸನ, ಆಡಳಿತ ಮತ್ತು ಆರ್ಥಿಕತೆ ಎಲ್ಲದರಲ್ಲೂ ಒಕ್ಕೂಟ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತಿದೆ’ ಎಂದರು.

ಗೌರಿ ಲಂಕೇಶ್ ಅವರ ಭಾವಚಿತ್ರಕ್ಕೆ ಅವರ ತಾಯಿ ಇಂದಿರಾ ಲಂಕೇಶ್ ಪುಷ್ಪನಮನ ಸಲ್ಲಿಸಿದರು. ನೂರ್ ಶ್ರೀಧರ್, ವಿಜಯಮ್ಮ, ಪ್ರೊ.ರಹಮತ್ ತರೀಕೆರೆ, ಪ್ರೊ.ರಾಮಕುಮಾರ್, ಪ್ರೊ.ಮೀನಾಕ್ಷಿ ಬಾಳಿ ಇದ್ದರು –ಪ್ರಜಾವಾಣಿ ಚಿತ್ರ

ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ–ರಾಜ್ಯದ ಮಧ್ಯೆ ಕೊಂಡಿಯಾಗಬೇಕಿದ್ದ ರಾಜ್ಯಪಾಲರನ್ನು ಮೋದಿ ಸರ್ಕಾರ ತನ್ನ ಗುಲಾಮನನ್ನಾಗಿ ಮಾಡಿಕೊಂಡಿದೆ

ಪ್ರೊ.ಮೀನಾಕ್ಷಿ ಬಾಳಿ, ಚಿಂತಕಿ

ಸೆಸ್, ಸರ್‌ಚಾರ್ಜ್‌ಗಳಲ್ಲಿ ರಾಜ್ಯಗಳಿಗೆ ಪಾಲಿಲ್ಲ. ತೆರಿಗೆ ಆದಾಯ ಹಂಚಿಕೊಳ್ಳಲು ಇಷ್ಟವಿಲ್ಲದ ಬಿಜೆಪಿ ಸೆಸ್, ಸರ್‌ಚಾರ್ಜ್‌ಗಳನ್ನು ಹೆಚ್ಚಿಸಿ ರಾಜ್ಯಗಳ ಹಣ ಲೂಟಿ ಹೊಡೆಯುತ್ತಿದೆ

ಆರ್.ರಾಮಕುಮಾರ್, ಪ್ರಾಧ್ಯಾಪಕ, ಟಾಟಾ ಸಾಮಾಜಿಕ ವಿಜ್ಞಾನ ಸಂಸ್ಥೆ

ಕೇರಳ: ಇದೇ 12ಕ್ಕೆ ಐದು ರಾಜ್ಯಗಳ ಸಮಾವೇಶ


ಕೆ.ಎನ್. ಬಾಲಗೋಪಾಲ್

ತಿರುವನಂತಪುರ (ಪಿಟಿಐ): ಆರ್ಥಿಕ ವಿಷಯಗಳ ಕುರಿತು ಚರ್ಚಿಸಲು, ವಿರೋಧ ಪಕ್ಷಗಳು ಆಡಳಿತದಲ್ಲಿರುವ ಐದು ರಾಜ್ಯಗಳ ಪ್ರತಿನಿಧಿಗಳ ಸಮಾವೇಶವನ್ನು ಕೇರಳ ಸರ್ಕಾರ ಆಯೋಜಿಸಿದೆ. 16ನೇ ಹಣಕಾಸು ಆಯೋಗದ ಮುಂದೆ ಮಂಡಿಸಬೇಕಿರುವ ಆರ್ಥಿಕ ಅಗತ್ಯಗಳ ಕುರಿತು ಇಲ್ಲಿ ಚರ್ಚಿಸಲಾಗುವುದು ಎಂದು ಕೇರಳದ ಹಣಕಾಸು ಸಚಿವರಾದ ಕೆ.ಎನ್.ಬಾಲಗೋಪಾಲ್ ಗುರುವಾರ ತಿಳಿಸಿದರು.

ಎಡರಂಗದ ಆಡಳಿತವಿರುವ ಕೇರಳ, ಡಿಎಂಕೆ ಆಡಳಿತವಿರುವ ತಮಿಳುನಾಡು, ಕಾಂಗ್ರೆಸ್ ಆಡಳಿತವಿರುವ ಕರ್ನಾಟಕ ಮತ್ತು ತೆಲಂಗಾಣ ಹಾಗೂ ಎಎಪಿ ಆಡಳಿತವಿರುವ ಪಂಜಾಬ್ ರಾಜ್ಯ ಸರ್ಕಾರಗಳ ಪ್ರತಿನಿಧಿಗಳು ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ.

ಇದೇ 12ರಂದು ನಡೆಯುವ ಸಮಾವೇಶವನ್ನು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಉದ್ಘಾಟಿಸುವರು. ದೇಶದಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವಿನ ಹಣಕಾಸು ಹಂಚಿಕೆ ಮತ್ತು ಸಹಕಾರವನ್ನು ರಕ್ಷಿಸುವ ಮತ್ತು ಬಲಪಡಿಸುವ ಉದ್ದೇಶವನ್ನು ಈ ಸಮಾವೇಶ ಹೊಂದಿದೆ ಎಂದು ಬಾಲಗೋಪಾಲ್ ಹೇಳಿದರು.

ತೆಲಂಗಾಣದ ಉಪ ಮುಖ್ಯಮಂತ್ರಿ ಮತ್ತು ಹಣಕಾಸು ಸಚಿವರಾದ ಭಟ್ಟಿ ವಿಕ್ರಮಾರ್ಕ ಮಲ್ಲು, ಕರ್ನಾಟದ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಪಂಜಾಬ್‌ನ ಹಣಕಾಸು ಸಚಿವರಾದ ಹರ್‌ಪಾಲ್ ಸಿಂಗ್ ಚೀಮಾ, ತಮಿಳುನಾಡಿನ ಹಣಕಾಸು ಸಚಿವರಾದ ತಂಗಂ ತೆನ್ನರಸು ಮತ್ತು ಕೇರಳ ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್ ಅವರು ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ.

ಅದರ ಜತೆಗೆ ಐದೂ ರಾಜ್ಯಗಳ ಹಣಕಾಸು ಇಲಾಖೆಗಳ ಕಾರ್ಯದರ್ಶಿಗಳು ಸೇರಿದಂತೆ ಹಿರಿಯ ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

ಸಲಿಂಗಿಗಳ ಚಟುವಟಿಕೆ: ಮಾರ್ಗಸೂಚಿ ವಾಪಸ್ ಪಡೆದ ಎನ್‌ಎಂಸಿ

ನವದೆಹಲಿ (ಪಿಟಿಐ): ಸಲಿಂಗಕಾಮ ಹಾಗೂ ಗುದಸಂಭೋಗವನ್ನು ಅಸಹಜ ಲೈಂಗಿಕ ಅಪರಾಧವನ್ನಾಗಿ ಕಾಣುವ ಪಠ್ಯವನ್ನು ‘ವಿಧಿವಿಜ್ಞಾನ ಹಾಗೂ ಟಾಕ್ಸಿಕಾಲಜಿ’ ವಿಷಯದಲ್ಲಿ ಮರುಸೇರ್ಪಡೆ ಮಾಡುವ ಮಾರ್ಗಸೂಚಿಯನ್ನು ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ಗುರುವಾರ ಹಿಂಪಡೆದಿದೆ. ವೈದ್ಯಕೀಯ ಪದವಿ ತರಗತಿಗಳ ಪಠ್ಯದಲ್ಲಿನ ಬದಲಾವಣೆಗೆ ಸಂಬಂಧಿಸಿ ದಂತೆ ಆಗಸ್ಟ್ 31ರಂದು ಮಾರ್ಗಸೂಚಿ ಹೊರಡಿಸಲಾಗಿತ್ತು.

ಸಾರ್ವಜನಿಕರಿಂದ ಈ ಮಾರ್ಗಸೂಚಿಗೆ ಪ್ರತಿರೋಧ ವ್ಯಕ್ತವಾದ ಕಾರಣಕ್ಕೆ ಎನ್‌ಎಂಸಿ ಮಾರ್ಗಸೂಚಿಯನ್ನು ವಾಪಸ್ ಪಡೆದಿದೆ. ಅದರ ಪ್ರಕಟಣೆಯು ಈ ವಿಷಯವನ್ನು ಸ್ಪಷ್ಟಪಡಿಸಿದೆ.

ನಿಶ್ಚಿತ ಕಡಿಮೆ ಬೆಲೆಯಲ್ಲಿ

TRIPLE DHAMAKA CELEBRATIONS

ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ

Ganesha habba Sale

53rd ANNIVERSARY CELEBRATIONS

GIFTS WORTH 11 CRORES

1 CRORE+ HAPPY CUSTOMERS

ಉಚಿತ* FIRE-BOLTT SMART CALLING WATCH Worth ₹20,000

LG 55 OLED EVO AI C4 4K SMART TV OLED55C46LA — ಇ.ಎಮ್.ಐ ₹6,999 — ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

SAMSUNG 55 OLED 4K SMART TV 55S90D — ಇ.ಎಮ್.ಐ ₹6,990

EXCHANGE BONANZA
UPTO ₹25,000
ವರೆಗೂ ಕಡಿತ ಹಳೆಯ ಎಲೆಕ್ಟ್ರಾನಿಕ್ಸ್ ಗೃಹೋಪಯೋಗಿ ವಸ್ತುಗಳ, ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್‌ಗಳು. ಎಕ್ಸ್‌ಚೇಂಜ್ ಮೇಲೆ

5G mela — ಇ.ಎಮ್.ಐ ₹916 — STARTS FROM ₹10,990* — vivo SAMSUNG ONEPLUS OPPO mi
ಉಚಿತ: ZEBRONICS POWER BANK / NECK BAND / SMART WATCH (METAL) WORTH UPTO ₹7,990

iPhone 13/14/15 — ಇ.ಎಮ್.ಐ ₹4,324 — STARTS FROM ₹51,890* — UPTO ₹4,000 CASH BACK

SONY 65 4K ULTRA HD SMART LED GOOGLE TV K-65S25 — ಇ.ಎಮ್.ಐ ₹6,500

NVY PRIDE OF INDIA — LOWEST PRICE CHALLENGE — 4K LED — 48% OFF* — NVY Official LED partner of RCB

Model	Price	EMI
43 4K SMART	₹20,560	₹1,713
55 4K SMART	₹31,000	₹2,583

CASHBACK BONANZA
UPTO 20%*

SLIM SERIES — FREE — • 8GB RAM • 512GB SSD • 15,6 • WIN11 MSO 21 — ಇ.ಎಮ್.ಐ ₹2,416 — OFFER PRICE ₹28,990*
ಉಚಿತ: LAPCARE W/L MOUSE + 32GB PENDRIVE WORTH ₹1,399

GAMING — FREE — • 8GB RAM • 512GB SSD • 4 GB GFX NVIDIA GTX/ • 15.6" FHD • WIN11 MSO 21 — ಇ.ಎಮ್.ಐ ₹4,333 — OFFER PRICE ₹51,990*
ಉಚಿತ: ZEBRONICS SMART WATCH (METAL) WORTH ₹7,990

Haier 598 LITRES INOX STEEL FINISH, 3 DOOR ಸೈಡ್ ಬೈ ಸೈಡ್ REFRIGERATOR — ಇ.ಎಮ್.ಐ ₹2,994 — ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

Godrej 564 LITRES ಸೈಡ್ ಬೈ ಸೈಡ್ REFRIGERATOR — ಇ.ಎಮ್.ಐ ₹2,525 — ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

FINANCE BONANZA
1 ಇ.ಎಮ್.ಐ ಉಚಿತ* | Upto ₹7,500 ಕ್ಯಾಶ್ ಬ್ಯಾಕ್* | ಕೇವಲ ಪಾವತಿಸಿ ₹1 ಮನೆಗೆ ತೆಗೆದುಕೊಂಡು ಹೋಗಿ*

LG 13/10KG WASHTOWER™ SMART WASHER DRYER FWT1310BG — ಇ.ಎಮ್.ಐ ₹24,999 — ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

BOSCH 8 ಕೆಜಿ ಫ್ರಂಟ್ ಲೋಡಿಂಗ್ — ಇ.ಎಮ್.ಐ ₹3,558 — ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

LG AUDIO SOUND BAR S40T — LG S40T 2.1 CHANNEL 300 W SOUNDBAR, DOLBY DIGITAL, AI SOUND PRO — ಇ.ಎಮ್.ಐ ₹974 — OFFER PRICE ₹11,690* — MRP: ₹26,990

Prestige MIXER GRINDER ENDURA 1000W + + COOKER STAINLESS STEEL POPULAR 3 LTR — BEST PRICE ₹8,990 — ಉಚಿತ: BUTTERFLY RAPID 250 MM NONSTICK TAWA WORTH ₹999

EUREKA FORBES AQUAGUARD SUPERIO RO+UV+MTDS+SS+ — NIRLEP NON STICK COOKWARE:ASPA 4 Pc SET — BEST PRICE ₹19,990 — ಉಚಿತ: VIJAYALAKSHMI DRY IRON WORTH ₹880

KAFF CHIMNEY: MAX BF 60 + Butterfly GAS STOVE:RAPID 4B GLASS TOP STOVE — BEST PRICE ₹12,299 — ಉಚಿತ: BUTTERFLY 1.5 LITRE WATER KETTLE WORTH ₹1299

Racold GEYSER:CDR/DLX SP 25V + KENSTAR INDUCTION COOKER:STOVA 12 (KISTO 127) — BEST PRICE ₹10,749 — ಉಚಿತ: PHILIPS BEAUTY PRODUCTS: HAIR DRYER WORTH ₹995

LG 28 ಲೀ ಕನ್‌ವೆಕ್ಷನ್ ಮೈಕ್ರೋವೇವ್ MC2846BR — ಇ.ಎಮ್.ಐ ₹1,358

DAIKIN 1 TON 3 STAR INVERTER AIR CONDITIONER — ಇ.ಎಮ್.ಐ ₹3,316 — ಉಚಿತ: ₹20000 ಮೌಲ್ಯದ FIRE-BOLTT SMART CALLING WATCH

LG SAMSUNG SONY Haier Panasonic NVY IFB Godrej LLOYD Whirlpool BOSCH Electrolux PHILIPS hp acer DELL Lenovo ASUS vivo OPPO ONEPLUS mi iPhone JBL BLUE STAR HAFELE Symphony HAVELLS USHA DAIKIN GENERAL Prestige VOLTAS VOLTAS·beko Butterfly Preethi VIJAYALAKSHMI ULTRA EUREKA FORBES pureit Livpure FABER KENSTAR Pigeon BAJAJ Crompton MAHARAJA V-GUARD ZEBRONICS KAFF OZONE

GIRIAS® THE CONSUMER DURABLE PEOPLE Since 1971

ಅಂದ್ರಹಳ್ಳಿ 95918 35070 । ಅತ್ತಿಬೆಲೆ 99009 77747 । ಆರ್.ಟಿ.ನಗರ 91080 65665 । ಆನೇಕಲ್ 9036289556 । ಇಂದಿರಾನಗರ 9035499255 । ಉತ್ತರಹಳ್ಳಿ 90362 89563 । ಕತ್ರಿಗುಪ್ಪೆ 9035499288 । ಕನಕಪುರ ಮುಖ್ಯ ರಸ್ತೆ 90082 20739 ।ಕುಣಿಗಲ್ 90362 89546 । ಕೆಂಗೇರಿ 99009 77712 । ಕೆಆರ್ ಪುರಂ 9019929881 । ಕೋರಮಂಗಲ 90354 11200 । ಕೋಲಾರ 90082 20791 । ಗಾಂಧಿನಗರ 9035499311 । ಗುಬ್ಬಿ 9035027688 । ಗೌರಿಬಿದನೂರು 90354 99244 । ಚನ್ನಪಟ್ಟಣ 9035023186 । ಚಿಂತಾಮಣಿ 90362 89552 । ಚಿಕ್ಕಜಾಲ 95918 32080 । ಚಿಕ್ಕಬಳ್ಳಾಪುರ 9591561669 । ಜಯನಗರ 90354 99077 । ಜಾಲಹಳ್ಳಿ ಕ್ರಾಸ್ 9008220804 । ತಿಪಟೂರು 90362 89548 । ತುಮಕೂರು 90082 18009 । ದೊಡ್ಡಬಳ್ಳಾಪುರ 77602 12888 । ನಾಗರಭಾವಿ 90354 99191 । ನೆಲಮಂಗಲ 9606922798 । ಬಾಗೇಪಲ್ಲಿ 9036289562 । ಬ್ರಿಗೇಡ್ ರಸ್ತೆ 9035023186 । ಬನಶಂಕರಿ 9035499199 । ಬನ್ನೇರುಘಟ್ಟ ರೋಡ್ 9035422500 । ಬಸವನಗುಡಿ 90354 99244 । ಭಾರ್ತಿಯಾ ಮಾಲ್ 70900 00981 । ಮಾದನಾಯಕನಹಳ್ಳಿ 90362 89550 । ಮತ್ತಿಕೆರೆ 90352 22377 । ಮಲ್ಲೇಶ್ವರಂ 90354 99233 । ಮಾಗಡಿರಸ್ತೆ 90362 89557 । ಮಾರತ್‌ಹಳ್ಳಿ 90354 99011 । ಮಾಲೂರು 9036984484 । ಮೈಸೂರು ರಸ್ತೆ 90354 99188 । ಯಲಹಂಕ 9036001315 । ರಾಜಾಜಿನಗರ 9035499144 । ರಾಮನಗರ 9606922697 । ವಿಜಯನಗರ 96069 22795 ।ಶಿರಾ 9035023188 । ಸದಾಶಿವನಗರ 9035499088 । ಸಹಕಾರನಗರ 90199 29882 । ಹಿರಿಯೂರು 9035023185 । ಹೆಚ್‌ಆರ್‌ಬಿಆರ್ ಲೇಔಟ್ 90354 99177 । ಹೆಬ್ಬಗೋಡಿ 90350 50023 । ಹೆಸರಘಟ್ಟ ಮುಖ್ಯ ರಸ್ತೆ 90362 89551 । ಹೊಸಕೋಟೆ 90362 89545 । ಹೊಸೂರು 04344 243633 । ಹೊಸೂರು ರಸ್ತೆ 9035499022

STORE LOCATOR

*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಕಂಪನಿಯ ಸ್ವಂತ ವಿವೇಚನೆಯಿಂದ ಹಣಕಾಸು. ಆಯ್ದ ಬ್ರಾಂಡ್‌ಗಳು ಮತ್ತು ಮಾಡೆಲ್‌ಗಳ ಮೇಲೆ 20% ಕ್ಯಾಶ್‌ಬ್ಯಾಕ್ ಮತ್ತು 1 ಇಎಂಐ ರಿಯಾಯಿತಿ. ರೂ.7500 ವರೆಗಿನ ಬಜಾಜ್ ಕ್ಯಾಶ್ ಬ್ಯಾಕ್ / ಆಯ್ದ ನಗರಗಳಲ್ಲಿ ಮಾತ್ರ ಮಾನ್ಯವಾಗಿರುವ ವೋಚರ್‌ಗಳು ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು 3 ಇಎಂಐ ಅನ್ನು ತೆರವುಗೊಳಿಸಿದ ನಂತರ ಗ್ರಾಹಕರ ಬ್ಯಾಂಕ್ ಖಾತೆ / ಬಿಎಫ್‌ಎಲ್ ವ್ಯಾಲೆಟ್‌ಗೆ ಕ್ರೆಡಿಟ್ ಮಾಡಲಾಗುತ್ತದೆ.*ಉತ್ತಮ ಕೆಲಸದ ಸ್ಥಿತಿಯಲ್ಲಿರಲು ಎಂ.ಆರ್.ಪಿ ಮತ್ತು ಉತ್ಪನ್ನದ ಮೇಲೆ ಮಾನ್ಯವಾದ ಎಕ್ಸ್‌ಚೇಂಜ್ ಆಫರ್. ಹಳೆಯ ಉತ್ಪನ್ನದ ಸ್ಥಿತಿಯನ್ನು ಆಧರಿಸಿ ವಿನಿಮಯ ಮೌಲ್ಯವು ಭಿನ್ನವಾಗಿರುತ್ತದೆ.

162 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು. SHOP ONLINE @ www.giriasindia.com

"like" us on facebook HTTPS://WWW.FACEBOOK.COM/GIRIAS.INDIA

WE SUPPORT ROUND TABLE INDIA LADIES CIRCLE INDIA www.roundtableindia.org www.ladiescircleindia.org

ರೇಣುಕಸ್ವಾಮಿ ಕೊನೆ ಕ್ಷಣದ ಚಿತ್ರ ಬಹಿರಂಗ • ನನ್ನ ಮಗ ಒದ್ದಾಡಿ ಪ್ರಾಣ ಬಿಟ್ಟಿದ್ದಾನೆ: ಕಾಶಿನಾಥಯ್ಯ

‘ಆರೋಪಿಗಳಿಗೆ ಕಠಿಣ ಶಿಕ್ಷೆಯಾಗಲಿ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ರೇಣುಕಸ್ವಾಮಿ ಕೊಲೆಯಾಗುವ ಮುನ್ನ ಅನುಭವಿಸಿದ ಯಾತನೆಯ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಬಹಿರಂಗಗೊಂಡ ಬೆನ್ನಲ್ಲೇ ಆತನ ಕುಟುಂಬ ಸದಸ್ಯರು ಗುರುವಾರ ಭಾವುಕರಾಗಿ ಪ್ರತಿಕ್ರಿಯಿಸಿ ಕಣ್ಣೀರು ಸುರಿಸಿದರು. ಆರೋಪಿಗಳಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ಒತ್ತಾಯಿಸಿದರು.


ಕಾಶಿನಾಥಯ್ಯ ಶಿವನಗೌಡರ್

‘ಬರಿಮೈನಲ್ಲಿ ಕುಳಿತಿದ್ದ ನನ್ನ ಮಗ ಅಂಗಲಾಚಿ ಬೇಡಿಕೊಳ್ಳುವ ಚಿತ್ರ ನೋಡಿ ನಮ್ಮ ಮನಸ್ಸಿಗೆ ಗಾಸಿಯಾಗಿದೆ. ಅವನು ಒದ್ದಾಡಿ ಪ್ರಾಣ ಬಿಟ್ಟಿದ್ದಾನೆ. ಅವನು ಎಷ್ಟು ನೋವು ಅನುಭವಿಸಿರಬಹುದು? ಕಿರುಚಾಡಿರಬಹುದು? ಅತ್ತಿರಬಹುದು? ಎಂಬುದನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಅವನ ಬಡಕಲು ದೇಹಕ್ಕೆ ಹತ್ತಾರು ಮಂದಿ ಸೇರಿ ಹೊಡೆದರೆ ಏನಾಗಬಹುದು? ನನ್ನ ಮಗ ಕೈಮುಗಿದು ಅಂಗಲಾಚಿ ಬೇಡಿಕೊಳ್ಳುವಾಗ ಮನಸ್ಸು ಕರಗಿ ಆತನನ್ನು ಬಿಟ್ಟುಬಿಡಬಹುದಾಗಿತ್ತಲ್ಲವೇ’ ಎಂದು ಪ್ರಶ್ನಿಸುತ್ತಲೇ ರೇಣುಕಸ್ವಾಮಿ ತಂದೆ ಕಾಶಿನಾಥಯ್ಯ ಶಿವನಗೌಡರ್ ಭಾವುಕರಾದರು.

‘ಅಷ್ಟು ಜನರಲ್ಲಿ ಒಬ್ಬರಿಗೂ ಮನುಷ್ಯತ್ವ ಇರಲಿಲ್ಲವೇ? ಅನುಕಂಪ, ಕರುಣೆ ಇರಲಿಲ್ಲವೇ? ಒಬ್ಬ ಮನುಷ್ಯನಿಗೆ ಅಷ್ಟೊಂದು ಚಿತ್ರ ಹಿಂಸೆ ನೀಡಿ ಕೊಲ್ಲುವುದು ನ್ಯಾಯವೇ? ನಮಗೆ ತಡೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಮಗ ಕೊಲೆಯಾಗಿರುವುದು ಅಷ್ಟೇ ಗೊತ್ತಿತ್ತು. ಆದರೆ ಈ ಚಿತ್ರಗಳನ್ನು ನೋಡಿದಾಗ ನಮ್ಮ ನೋವು ಹೆಚ್ಚುತ್ತಲೇ ಇದೆ. ಆತನ ನೆನಪುಗಳು ಮರುಕಳಿಸುತ್ತಿದ್ದು, ತಡೆಯಾಗುತ್ತಿಲ್ಲ’ ಎಂದು ಕಣ್ಣೀರು ಹಾಕಿದರು.

‘ಆರೋಪಿಗಳು ಮನುಷ್ಯರೇ ಎಂಬುದು ತಿಳಿಯುತ್ತಿಲ್ಲ. ಈ ಚಿತ್ರಗಳನ್ನು ನೋಡಲು ಸಾಧ್ಯವಾಗುತ್ತಿಲ್ಲ. ಕೊಲೆ ಮಾಡಿದವರಿಗೆ ಕಠಿಣ ಶಿಕ್ಷೆಯಾಗಬೇಕು’ ಎಂದು ತಾಯಿ ರತ್ನಪ್ರಭಾ ಒತ್ತಾಯಿಸಿದರು.

‘ನಮಗೆ ಆ ಚಿತ್ರಗಳನ್ನು ಯಾರೂ ತೋರಿಸಬೇಡಿ. ನೋಡಲು ಸಾಧ್ಯವಾಗುತ್ತಿಲ್ಲ. ನನ್ನ ಅಣ್ಣ ದರ್ಶನ್ ಅವರ ಅಭಿಯಾನಿಯಾಗಿದ್ದ, ಅಭಿಮಾನಕ್ಕಾದರೂ ಕ್ಷಮಿಸಿ ಕಳುಹಿಸಬಹುದಾಗಿತ್ತು’ ಎಂದು ರೇಣುಕಸ್ವಾಮಿ ಸಹೋದರಿ ಸುಚಿತ್ರಾ ನೊಂದು ನುಡಿದರು.

ದಾವಣಗೆರೆ ವರದಿ: ‘ಚಿತ್ರಹಿಂಸೆ ನೀಡಿ ರೇಣುಕಸ್ವಾಮಿ ಕೊಲೆ ಮಾಡಿದ ನಟ ದರ್ಶನ್ ಹಾಗೂ ಸಹಚರರಿಗೆ ಕಾನೂನು ಪ್ರಕಾರ ಕಠಿಣ ಶಿಕ್ಷೆ ವಿಧಿಸಬೇಕು’ ಎಂದು ರೇಣುಕಸ್ವಾಮಿ ಪತ್ನಿ ಸಹನಾ ಅವರ ತಂದೆ ಸೋಮಣ್ಣ ಒತ್ತಾಯಿಸಿದರು.

‘ರೇಣುಕಸ್ವಾಮಿ ಮಾಡಿರುವ ತಪ್ಪನ್ನು ದರ್ಶನ್ ಕ್ಷಮಿಸಬಹುದಿತ್ತು. ಆಗ ಅವರಿಗೆ ಒಳ್ಳೆಯದಾಗುತ್ತಿತ್ತು. ಕ್ಷಮಿಸಿ ಎಂಬುದಾಗಿ ಅಂಗಲಾಚಿದರೂ ಚಿತ್ರಹಿಂಸೆ ನೀಡಿ ಕೊಲೆ ಮಾಡಿದ್ದು ಶಿಕ್ಷಾರ್ಹ ಅಪರಾಧ’ ಎಂದು ಅವರ ಸ್ವಂತ ಊರಾದ ಹರಿಹರದಲ್ಲಿ ಗುರುವಾರ ಸುದ್ದಿಗಾರರಿಗೆ ಹೇಳಿದರು.

‘ಪುತ್ರಿ ಸಹನಾ 7 ತಿಂಗಳ ಗರ್ಭಿಣಿಯಾಗಿದ್ದು, ಪತಿ ಸಾವಿನ ಬಳಿಕ ತೀವ್ರ ನೋವಿನಿಂದ ಅನಾರೋಗ್ಯಕ್ಕೆ ಒಳಗಾಗಿದ್ದಾರೆ. ಹೆರಿಗೆಗೆಂದು ತವರು ಮನೆಗೆ ಬಂದಿರುವ ಅವರು ಜ್ವರದಿಂದ ಬಳಲುತ್ತಿದ್ದಾರೆ. ಪ್ರತಿಕ್ರಿಯೆ ನೀಡಲು ನಿರಾಕರಿಸುತ್ತಿದ್ದಾರೆ’ ಎಂದು ಅವರು ಹೇಳಿದರು.

ದರ್ಶನ್ ಭೇಟಿಯಾದ ಪತ್ನಿ, ತಮ್ಮ

ಬಳ್ಳಾರಿ: ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿ ಇರುವ ಕೊಲೆ ಆರೋಪಿ, ನಟ ದರ್ಶನ್ ಅವರನ್ನು ಪತ್ನಿ ವಿಜಯಲಕ್ಷ್ಮಿ, ತಮ್ಮ ದಿನಕರ್ ಮತ್ತು ಸುಶಾಂತ್ ನಾಯ್ಡು ಗುರುವಾರ ಭೇಟಿಯಾಗಿ ಚರ್ಚಿಸಿದರು.

ಸಂಜೆ 4ಕ್ಕೆ ಬಂದ ವಿಜಯಲಕ್ಷ್ಮಿ, ದಿನಕರ್ ಮತ್ತು ಸುಶಾಂತ್ ನಾಯ್ಡು ಅವರನ್ನು ತಪಾಸಣೆ ಮಾಡಿದ ಬಳಿಕ ಪೊಲೀಸರು 4.30ಕ್ಕೆ ಸಂದರ್ಶಕರ ಕೊಠಡಿಗೆ ಕಳುಹಿಸಿದರು. ದರ್ಶನ್ ಅವರನ್ನು ಕೂಡ ಅಲ್ಲಿಗೆ ಕರೆತರಲಾಯಿತು. ಅರ್ಧ ಗಂಟೆ ಚರ್ಚೆ ಬಳಿಕ ಸಂಜೆ 5ಕ್ಕೆ ದರ್ಶನ್ ಮತ್ತೆ ಜೈಲಿಗೆ ಮರಳುವಾಗ ಅವರ ಕೈಯಲ್ಲಿ ಬಟ್ಟೆ, ಆಹಾರ ಪದಾರ್ಥಗಳ ಚೀಲವಿತ್ತು.

ಸಂಜೆ 5.30ರ ಸಮಾರಿಗೆ, ಕೆಲ ದಾಖಲೆ ಪತ್ರಗಳನ್ನು ಹಿಡಿದ ವಿಜಯಲಕ್ಷ್ಮಿ ಜೈಲಿನಿಂದ ಹೊರ ಬಂದರು. ಜೈಲಿಂದ ಹೊರ ಬಂದವರೇ ಕಾರಿನಲ್ಲಿ ಕೂತು ಹೊರಟರು. ಸುದ್ದಿಗಾರರ ಜೊತೆ ಮಾತನಾಡಲು ನಿರಾಕರಿಸಿದರು. ದರ್ಶನ್ ಕುಟುಂಬಸ್ಥರು ಭೇಟಿ ವಿಚಾರ ಮೊದಲೇ ತಿಳಿದಿದ್ದ ಅಭಿಮಾನಿಗಳು, ಜೈಲಿನ ಬಳಿ ಭಾರಿ ಸಂಖ್ಯೆಯಲ್ಲಿ ಸೇರಿದ್ದರು.

‘ಈ ಮಧ್ಯೆ ನೋಟರಿಯೊಬ್ಬರು ಜೈಲಿಗೆ ತೆರಳಿದರು. ದರ್ಶನ್ ತಮ್ಮ ಜಾಮೀನು ಅರ್ಜಿಯ ವಕಾಲತಿಗೆ ನೋಟರಿ ಸಮ್ಮುಖದಲ್ಲಿ ಸಹಿ ಹಾಕಿದರು’ ಎಂದು ಮೂಲಗಳು ಹೇಳಿವೆ. ದರ್ಶನ್‌ಗೆ ಇನ್ನೂ ಟಿವಿ ಒದಗಿಸಲಾಗಿಲ್ಲ.

ನಾನು ಮದುವೆಯಾಗಲು ಸಿದ್ಧ: ಬೆಂಗಳೂರಿನ ಕೆಂಗೇರಿಯಿಂದ ಕಾರಾಗೃಹಕ್ಕೆ ಹಣ್ಣುಹಂಪಲು, ತಿಂಡಿ ತಿನಿಸು ಬಂದಿದ್ದ ಲಕ್ಷ್ಮಿ ಎಂಬುವವರು ದರ್ಶನ್ ಅವರನ್ನು ನೋಡಲೇಬೇಕು ಎಂದು ಪಟ್ಟು ಹಿಡಿದರು. ಆದರೆ, ಇದಕ್ಕೆ ನಿರಾಕರಿಸಿದ ಪೊಲೀಸರು, ‘ಪತ್ನಿ ಮತ್ತು ರಕ್ತ ಸಂಬಂಧಿಗಳಿಗೆ ಮಾತ್ರ ಭೇಟಿಗೆ ಅವಕಾಶವಿದೆ’ ಎಂದರು.

‘ಪತ್ನಿಗೆ ಮಾತ್ರ ಅವಕಾಶ ನೀಡುವುದಿದ್ದರೆ, ದರ್ಶನ್ ಅವರನ್ನು ಮದುವೆಯಾಗಲು ಸಿದ್ಧ. ನನಗೆ ಅವಕಾಶ ಕೊಡಿ. ಪರಪ್ಪನ ಅಗ್ರಹಾರಕ್ಕೆ ಹೋಗಿದ್ದೆ. ಅಲ್ಲಿಯೂ ಭೇಟಿ ನಿರಾಕರಿಸಿದರು. ಇಲ್ಲಿಯೂ ತಡೆಯುತ್ತಿದ್ದೀರಿ. ಹಣ್ಣು, ತಿನಿಸು ಕೊಟ್ಟು ಹೋಗುತ್ತೇನೆ’ ಎಂದು ಅಂಗಲಾಚಿದರು. ಪೊಲೀಸರು ಅವರನ್ನು ವಾಪಸ್ ಕಳುಹಿಸಿದರು.

ಬಳ್ಳಾರಿ ಕಾರಾಗೃಹದಲ್ಲಿನ ಸಂದರ್ಶಕರ ಕೊಠಡಿಗೆ ಗುರುವಾರ ಪೊಲೀಸರು ದರ್ಶನ್ ಅವರನ್ನು ಕರೆದೊಯ್ದರು

ಸುದ್ದಿ 2 ನಿಮಿಷ

‘ಶೌಚಾಲಯ ತೊಳೆಸಿದರೆ ತಪ್ಪೇನು?’

ಚಿತ್ರದುರ್ಗ: ‘ಶಾಲೆಗಳಲ್ಲಿ ವಿದ್ಯಾರ್ಥಿಗಳಿಂದ ಶೌಚಾಲಯ ತೊಳೆಸಿದರೆ ತಪ್ಪೇನು’ ಎಂದು ಪ್ರಶ್ನಿಸಿರುವ ಚಿತ್ರದುರ್ಗದ ಸಂಸದ ಗೋವಿಂದ ಕಾರಜೋಳ, ‘ಜಪಾನ್‌ನಲ್ಲಿ ಈಗಲೂ ಶಿಕ್ಷಕರು ಹಾಗೂ ವಿದ್ಯಾರ್ಥಿಗಳೇ ಶಾಲೆಗಳಲ್ಲಿನ ಶೌಚಾಲಯ ಸ್ವಚ್ಛಗೊಳಿಸುತ್ತಾರೆ. ನಾನು ಕಲಿಯುವಾಗ ನಮ್ಮ ಹಾಸ್ಟೆಲ್ ಕಸವನ್ನು ನಾವೇ ಗುಡಿಸಿ ಸ್ವಚ್ಛಗೊಳಿಸುತ್ತಿದ್ದೆವು’ ಎಂದರು.

ನಗರದಲ್ಲಿ ಗುರುವಾರ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ನಾವು ಕಲಿಯುವಾಗ ಶಿಕ್ಷಕರು ನಮ್ಮನ್ನು ಒಂಟಿ ಕಾಲಿನ ಮೇಲೆ ನಿಲ್ಲಿಸಿ ಪಾಠ ಹೇಳಿ ಕೊಡುತ್ತಿದ್ದರು. ತಪ್ಪು ಮಾಡಿದರೆ ಬಡಿದು ಬುದ್ಧಿ ಹೇಳುತ್ತಿದ್ದರು. ಶಿಕ್ಷಿಸುತ್ತಿದ್ದರು. ಇದನ್ನು ಪಾಲಕರೂ ಒಪ್ಪಿ ಬೆಂಬಲಿಸುತ್ತಿದ್ದರು. ಈಗ ಮಕ್ಕಳನ್ನು ದಂಡಿಸಿದರೆ, ಪಾಲಕರು ಶಿಕ್ಷಕರೊಂದಿಗೆ ಜಗಳ ಮಾಡುತ್ತಾರೆ’ ಎಂದರು.

‘ಶಿಕ್ಷಕರು ವಿದ್ಯಾರ್ಥಿಗಳನ್ನು ಶೌಚಾಲಯ ತೊಳೆಯಲು ಹಚ್ಚಿದ್ದಾರೆ, ಕೆಲಸ ಮಾಡಿಸುತ್ತಾರೆ ಎಂಬೆಲ್ಲಾ ವಿಡಿಯೊ ನೋಡಿದ್ದೇವೆ. ಇಂತಹ ಸಂದರ್ಭಗಳಲ್ಲಿ ಶಿಕ್ಷಕರ ವಿರುದ್ಧ ಕ್ರಮ ಜರುಗಿಸಲಾಗುತ್ತಿದೆ. ವಿದ್ಯಾರ್ಥಿಗಳ ಕೈಗೆ ಪೊರಕೆ ನೀಡಿದರೆ ಅಪರಾಧ ಎನ್ನುವ ಪರಿಸ್ಥಿತಿ ಎದುರಾಗಿದೆ. ಇಂತಹ ಘಟನೆಗಳಿಂದ ವಿದ್ಯಾರ್ಥಿಗಳಿಗೆ ಸ್ವಚ್ಛ ಮಾಡುವ ಕೆಲಸವೆಂದರೆ ಕೀಳು ಎಂಬ ಭಾವನೆ ಮೂಡುತ್ತಿದೆ. ಇದರ ಬದಲಿಗೆ ಸ್ವಚ್ಛತೆ ಬಗ್ಗೆ ಮಕ್ಕಳಿಗೆ ಕಲಿಸಿಕೊಡುವುದು ಅಗತ್ಯವಿದೆ’ ಎಂದು ಅವರು ಸಲಹೆ ನೀಡಿದರು.

ಕುಪ್ಪಳಿ: ವಿಶ್ವಮಾನವ ಸಂದೇಶ ಫಲಕ ಅನಾವರಣ

ತೀರ್ಥಹಳ್ಳಿ: ತಾಲ್ಲೂಕಿನ ಕುಪ್ಪಳಿಯಲ್ಲಿರುವ ರಾಷ್ಟ್ರಕವಿ ಕುವೆಂಪು ಅವರ ನಿವಾಸದ ಆವರಣದಲ್ಲಿ ವಿಶ್ವಮಾನವ ಸಂದೇಶವುಳ್ಳ 36 ಅಡಿ ಅಗಲ, 18 ಅಡಿ ಎತ್ತರದ ಫಲಕ ಅನಾವರಣಗೊಳಿಸಲಾಯಿತು.

ಈ ಫಲಕವನ್ನು ಗ್ರಾನೈಟ್‌ನಲ್ಲಿ ಕೆತ್ತಲಾಗಿದೆ. ಕವಿ ಕುವೆಂಪು ಪರಿಚಯ, ಸಪ್ತಸೂತ್ರ, ಪಂಚಮಂತ್ರ, ವಿಶ್ವಮಾನವ ಗೀತೆಯನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಬರೆಯಲಾಗಿದೆ. 9 ಅಡಿ ಎತ್ತರ 4 ಅಡಿ ಅಗಲವಿರುವ ಕುವೆಂಪು ಅವರ ಕಂಚಿನ ಉಬ್ಬು ಕಲಾಕೃತಿಯನ್ನೂ ಫಲಕ ಹೊಂದಿದೆ. ಇದಕ್ಕೆ ಒಟ್ಟು ₹16 ಲಕ್ಷ ವೆಚ್ಚವಾಗಿದ್ದು, ಮೈಸೂರಿನ ಕಲಾವಿದ ಶಿತಿನ್ ಶೆಟ್ಟಿಗಾರ್ ಅವರು 9 ತಿಂಗಳಲ್ಲಿ ಫಲಕದಲ್ಲಿನ ಕೆತ್ತನೆಯನ್ನು ಪೂರ್ಣಗೊಳಿಸಿದ್ದಾರೆ.

ಕುಪ್ಪಳಿಯ ಕವಿಮನೆಗೆ ವಾರ್ಷಿಕ 2 ಲಕ್ಷಕ್ಕೂ ಅಧಿಕ ಪ್ರವಾಸಿಗರು ಭೇಟಿ ನೀಡುತ್ತಾರೆ. ಕುವೆಂಪು ಅವರ ಆಶಯದಂತೆಯೂ ಫಲಕವನ್ನು ನಿರ್ಮಿಸಲಾಗಿದೆ ಎಂದು ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಮಕಾರ್ಯದರ್ಶಿ ಕಡಿದಾಳು ಪ್ರಕಾಶ್ ತಿಳಿಸಿದ್ದಾರೆ.

‘ರೇಣುಕಸ್ವಾಮಿ ಸಾವು ಆಗಿದ್ದು ಹೇಗೆ?’

ಬೆಂಗಳೂರು: ಮರಣೋತ್ತರ ಪರೀಕ್ಷೆಯಲ್ಲಿ ರೇಣುಕಸ್ವಾಮಿಯ ವೃಷಣಗಳಿಗೆ ಎಲೆಕ್ಟ್ರಿಕ್ ಶಾಕ್ ನೀಡಿರುವುದು ದೃಢವಾಗಿದೆ. ಅಲ್ಲದೇ ವೃಷಣಗಳ ಮೇಲೆ ಮೇಲೆ ಕಾಲಿನಿಂದ ತುಳಿದು ಹಾನಿಗೊಳಿಸಿರುವುದು ಪತ್ತೆಯಾಗಿದೆ. ಹೀಗಾಗಿ, ಅವುಗಳ ಮೇಲಿನ ಚರ್ಮ ಕಿತ್ತು ಬಂದಿದೆ. ಅಲ್ಲದೆ, ಆತನ ಎದೆ, ಹೊಟ್ಟೆ, ಬೆನ್ನು, ತಲೆಯ ಭಾಗಕ್ಕೆ ಕೈ, ಕಾಲು ಮತ್ತು ದೊಣ್ಣೆಯಿಂದ ಹಲ್ಲೆ ನಡೆಸಿದ ಪರಿಣಾಮ ಆಂತರಿಕ ಮತ್ತು ಬಾಹ್ಯವಾಗಿ ತೀವ್ರ ರಕ್ತಸ್ರಾವವಾಗಿ ರೇಣುಕಸ್ವಾಮಿ ಮೃತಪಟ್ಟಿದ್ದಾರೆ. ಪಕ್ಕೆಲುಬು ಮುರಿದು ಶ್ವಾಸಕೋಶಕ್ಕೆ ಚುಚ್ಚಿಕೊಂಡಿದೆ. ಎದೆಗೂಡಿನ ಮೂಳೆ ಮುರಿತವಾಗಿದೆ ಎಂದು ವೈದ್ಯರು ನೀಡಿದ ವರದಿಯಲ್ಲಿದೆ. ರೇಣುಕಸ್ವಾಮಿ ದೇಹದ 39 ಕಡೆಗಳಲ್ಲಿ ತೀವ್ರ ಗಾಯಗಳಾಗಿವೆ ಎಂದು ದಾಖಲಿಸಲಾಗಿದೆ. ಅದನ್ನೇ ಆರೋಪ ಪಟ್ಟಿಯಲ್ಲೂ ಉಲ್ಲೇಖಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಹತ್ಯೆಗೆ ಮುನ್ನ ಪಬ್‌ನಲ್ಲಿ ಪಾರ್ಟಿ ಮಾಡಿದ್ದ ದರ್ಶನ್, ಸಹಚರರು • ಘಟನೆ ಮರುಸೃಷ್ಟಿ

ಸ್ಟೋನಿ ಬ್ರೂಕ್‌ನಲ್ಲಿ ‘ಡಿ ಬಾಸ್ ಸಫಾರಿ’

• ಕೆ.ಎಸ್.ಸುನಿಲ್

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆಗೂ ಮುನ್ನ ನಟ ದರ್ಶನ್ ಮತ್ತು ಸ್ನೇಹಿತರು ಸ್ಟೋನಿ ಬ್ರೂಕ್ ಪಬ್‌ನಲ್ಲಿ ಪಾರ್ಟಿ ನಡೆಸಿದ್ದರು. ಆರೋಪಿಗಳು ಜತೆಗೂಡಿದ್ದ ಪಾರ್ಟಿಯಲ್ಲಿ ನಟ ಚಿಕ್ಕಣ್ಣ ಸಹ ಭಾಗಿಯಾಗಿರುವುದು ತನಿಖೆ ವೇಳೆ ಸಾಬೀತಾಗಿದೆ.

ಜೂನ್ 8ರಂದು ಆರ್.ಆರ್. ನಗರದ ಸ್ಟೋನಿ ಬ್ರೂಕ್ ಪಬ್‌ನಲ್ಲಿ ದರ್ಶನ್, ಅವರ ವ್ಯವಸ್ಥಾಪಕ ನಾಗರಾಜ್, ಪ್ರದೂಷ್, ವಿನಯ್ ಪಾರ್ಟಿ ಮಾಡಿದ್ದರು. ಪಬ್ ಮಾಲೀಕ ವಿನಯ್, ದರ್ಶನ್ ಮೇಲಿನ ಅಭಿಮಾನದಿಂದ ‘ಡಿ ಬಾಸ್ ಸಫಾರಿ’ ಎಂಬ ಪ್ರತ್ಯೇಕ ಲಾಂಜ್ ನಿರ್ಮಿಸಿದ್ದರು. ವನ್ಯಜೀವಿಗಳ ಚಿತ್ರ, ಹಸಿರಿನ ವಾತಾವರಣ ಇದೆ. ದರ್ಶನ್ ಹಾಗೂ ಅವರ ಸ್ನೇಹಿತರು ಈ ಪಬ್‌ಗೆ ಬಂದಾಗ ಇದೇ ಲಾಂಜ್‌ನಲ್ಲಿ ಪಾರ್ಟಿ ಮಾಡುತ್ತಿದ್ದರು. ವಿಶೇಷವಾಗಿ ವಿನ್ಯಾಸ ಮಾಡಿದ ಕುರ್ಚಿಯಲ್ಲಿಯೇ ದರ್ಶನ್ ಕುಳಿತುಕೊಳ್ಳುತ್ತಿದ್ದರು ಎಂದು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಸ್ಟೋನಿ ಬ್ರೂಕ್ ಹೋಟೆಲ್‌ನಲ್ಲಿ ದರ್ಶನ್, ಚಿಕ್ಕಣ ಸೇರಿ ಹಲವರು ನಡೆಸಿದ್ದ ಪಾರ್ಟಿಯ ದೃಶ್ಯವನ್ನು ಮರುಸೃಷ್ಟಿ ಮಾಡಲಾಗಿತ್ತು

ಸ್ಟೋನಿ ಬ್ರೂಕ್ ಪಬ್‌ನಲ್ಲಿ ದರ್ಶನ್ ಮತ್ತು ನಡೆಸಿದ ಪಾರ್ಟಿಯ ದೃಶ್ಯಗಳನ್ನು ತನಿಖೆ ವೇಳೆ ಮರುಸೃಷ್ಟಿ ಮಾಡಲಾಗಿತ್ತು. ದರ್ಶನ್ ಹಾಗೂ ಸಹಚರರನ್ನು ಕರೆತಂದು ಸ್ಥಳ ಮಹಜರು ಮಾಡಲಾಗಿತ್ತು.

ದರ್ಶನ್, ನಾಗರಾಜ್, ಪ್ರದೂಷ್, ವಿನಯ್, ಚಿಕ್ಕಣ್ಣ ಕೊಲೆ ನಡೆದ ದಿನ ‘ಡಿ ಬಾಸ್ ಸಫಾರಿ’ ಲಾಂಜ್‌ನಲ್ಲಿ ಯಾವ್ಯಾವ ಸ್ಥಳಗಳಲ್ಲಿ ಹೇಗೆ? ಕುಳಿತಿದ್ದರೋ ಅದೇ ರೀತಿಯ ಚಿತ್ರಣವನ್ನು ಮಹಜರು ವೇಳೆ ಮರುಸೃಷ್ಟಿಸಿ, ಚಿತ್ರೀಕರಿಸಲಾಗಿದೆ. ನೀಲಿ ಬಣ್ಣದ ಟಿ ಶರ್ಟ್ ಧರಿಸಿರುವ ದರ್ಶನ್ ಎಡ ಬದಿಯಲ್ಲಿ ಪ್ರದೂಷ್ ಹಾಗೂ ಬಲ ಬದಿಯಲ್ಲಿ ಚಿಕ್ಕಣ್ಣ ಕುಳಿತಿದ್ದರು ಎಂಬುದು ಫೋಟೊದಲ್ಲಿ ಬಹಿರಂಗಗೊಂಡಿದೆ.

ಪಾರ್ಟಿ ಮಾಡಿದ್ದ ಸ್ಥಳದಲ್ಲಿಯೇ ಆರೋಪಿಗಳನ್ನು ಕೂರಿಸಿ ಪೊಲೀಸ್ ಅಧಿಕಾರಿಯೊಬ್ಬರು ಲ್ಯಾಪ್‌ಟಾಪ್‌ನಲ್ಲಿ ಎಲ್ಲ ಮಾಹಿತಿಯನ್ನು ದಾಖಲಿಸಿಕೊಂಡಿದ್ದರು. ದರ್ಶನ್ ಮತ್ತು ಸ್ನೇಹಿತರು ಮೌನವಾಗಿ ಕುಳಿತಿರುವುದು, ಚಿಕ್ಕಣ್ಣ ಹಾಗೂ ವಿನಯ್ ಆತಂಕದಲ್ಲಿರುವುದು ಸ್ಥಳ ಮಹಜರಿನ ಫೋಟೊದಲ್ಲಿ ಕಾಣಿಸುತ್ತದೆ. ಇತರೆ ಕೆಲವು ಪೊಲೀಸ್ ಸಿಬ್ಬಂದಿ ಸಹ ಚಿತ್ರದಲ್ಲಿದ್ದಾರೆ.

ನಟ ಚಿಕ್ಕಣ್ಣ ಸಹ ಕೊಲೆ ನಡೆದ ದಿನ ಪಾರ್ಟಿಯಲ್ಲಿದ್ದ ಕಾರಣ ಅವರನ್ನೂ ಮಹಜರಿಗೆ ಕರೆಸಲಾಗಿತ್ತು. ಆದರೆ, ಪ್ರಕರಣದಲ್ಲಿ ಚಿಕ್ಕಣ್ಣ ಹೇಳಿಕೆಯನ್ನಷ್ಟೆ ದಾಖಲಿಸಿದ್ದು, ಸಾಕ್ಷಿದಾರರನ್ನಾಗಿ ಮಾಡಲಾಗಿದೆ.

ಪಬ್‌ನಲ್ಲಿ ಪಾರ್ಟಿ ನಡೆಸುತ್ತಿದ್ದ ವೇಳೆ ಪವನ್ ಕರೆ ಮಾಡಿ ರೇಣುಕಸ್ವಾಮಿಯನ್ನು ಪಟ್ಟಣಗೆರೆ ಶೆಡ್‌ಗೆ ಕರೆತಂದಿರುವುದಾಗಿ ಮಾಹಿತಿ ನೀಡಿದ್ದರು. ಪಾರ್ಟಿಯಿಂದ ಹೊರಟಿದ್ದ ದರ್ಶನ್, ರಾಜರಾಜೇಶ್ವರಿ ನಗರಕ್ಕೆ ತೆರಳಿ, ಅಲ್ಲಿಂದ ಪವಿತ್ರಾ ಜತೆಗೆ ಶೆಡ್‌ಗೆ ಬಂದಿದ್ದರು.

ಪಾರ್ಟಿಯಿಂದ ಎದ್ದು ದರ್ಶನ್ ಮತ್ತು ವಿನಯ್ ಕೆಂಪು ಬಣ್ಣದ ಜೀಪಿನಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಬಂದರು. ಬಳಿಕ ಕಪ್ಪು ಬಣ್ಣದ ಸ್ಕಾರ್ಪಿಯೊ ವಾಹನದಲ್ಲಿ ಅಲ್ಲಿಂದ ತೆರಳಿದ್ದರು. ಮೃತದೇಹವನ್ನು ಬಿಳಿ ಬಣ್ಣದ ವಾಹನದಲ್ಲಿ ಸಾಗಿಸಿರುವ ದೃಶ್ಯ ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಈ ಎಲ್ಲಾ ಅಂಶಗಳನ್ನು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

‘ಕೋವಿಡ್ ಅಸ್ತ್ರ’ ಬಳಕೆಗೆ ಅಣಿ

ಒಂದನೇ ಪುಟದಿಂದ...

ಒಂದು ತಿಂಗಳಲ್ಲಿ ಸಮಿತಿ ಸಿ.ಎಂಗೆ ವರದಿ ಸಲ್ಲಿಸಲಿದೆ. ವರದಿ ಆಧರಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು. ವಿಚಾರಣಾ ಆಯೋಗದ ಕಾರ್ಯಾವಧಿಯನ್ನು ಆರು ತಿಂಗಳು ಮುಂದುವರೆಸಲು ಸಂಪುಟ ಒಪ್ಪಿಗೆ ನೀಡಿದೆ ಎಂದು ಹೇಳಿದರು.

ಕೋವಿಡ್ ಸಂದರ್ಭದಲ್ಲಿ ಆರೋಗ್ಯ ಇಲಾಖೆಯಲ್ಲಿ ಯಾವ ಅಧಿಕಾರಿಗಳು ಇದ್ದರು, ಅವರು ವಿಚಾರಣಾ ಆಯೋಗಕ್ಕೆ ಏಕೆ ಕಡತಗಳನ್ನು ಒಪ್ಪಿಸಿಲ್ಲ ಎಂದು ಅಧ್ಯಯನ ನಡೆಯಲಿದೆ. ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿ ವರದಿಯನ್ನೂ ವಿಚಾರಣಾ ಆಯೋಗ ಗಮನಿಸಿದೆ ಎಂದು ಸಚಿವ ಪಾಟೀಲ ಅವರು ವಿವರಿಸಿದರು.

ಸುಧಾ ಓದಿರಿ

ದರ್ಶನ್ ತಂಡದ ಕ್ರೌರ್ಯಕಾಂಡ

ಒಂದನೇ ಪುಟದಿಂದ...

ಆರೋಪಿಗಳ ಎದುರು ರೇಣುಕಸ್ವಾಮಿ ಕೈಮುಗಿದು ಬೇಡಿಕೊಂಡಿದ್ದು, ಹಲ್ಲೆಯ ಬಳಿಕ ಪ್ರಜ್ಞೆತಪ್ಪಿ ನೆಲದ ಮೇಲೆ ಅಂಗಾತ ಬಿದ್ದಿದ್ದು, ಬಿಳಿ ಬಣ್ಣದ ಸ್ಕಾರ್ಪಿಯೊ ವಾಹನದಲ್ಲಿ ಮೃತದೇಹ ಸಾಗಣೆ ಮಾಡಿದ್ದ ಫೋಟೊಗಳು ಲಭಿಸಿವೆ. ಜತೆಗೆ, ರೇಣುಕಸ್ವಾಮಿ ಮೇಲೆ ಹಲ್ಲೆಗೆ ಬಳಸಿದ್ದ ಶೆಡ್‌ನ ಸೆಕ್ಯೂರಿಟಿ ಗಾರ್ಡ್‌ನ ಲಾಠಿ, ಕಟ್ಟಿಹಾಕಲು ಬಳಸಿದ್ದ ಹಗ್ಗದ ತುಂಡು, ಎಲೆಕ್ಟ್ರಿಕ್ ಶಾಕ್ ನೀಡಲು ಉಪಯೋಗಿಸಿದ್ದ ಮೆಗ್ಗರ್ ಸಾಧನವನ್ನು ಪೊಲೀಸರು ಜಪ್ತಿ ಮಾಡಿಕೊಂಡಿದ್ದು, ತೀವ್ರ ಸ್ವರೂಪದ ಹಲ್ಲೆ ಮತ್ತು ವಿದ್ಯುತ್ ಆಘಾತದಿಂದ ಸಾವು ಸಂಭವಿಸಿದೆ ಎಂಬುದಕ್ಕೆ ಪುರಾವೆ ಲಭಿಸಿದೆ ಎಂದು ತನಿಖಾ ತಂಡ ಆರೋಪಪಟ್ಟಿಯಲ್ಲಿ ಹೇಳಿದೆ.

ಪವಿತ್ರಾಗೌಡ ಅವರ ವ್ಯವಸ್ಥಾಪಕ ಕೆ.ಪವನ್ ಸೂಚನೆಯಂತೆ ಜೂನ್ 8ರಂದು ಮಧ್ಯಾಹ್ನ 2.30ರಿಂದ 3 ಗಂಟೆಯ ಸುಮಾರಿಗೆ ಪಟ್ಟಣಗೆರೆಯ ಶೆಡ್‌ಗೆ ರೇಣುಕಸ್ವಾಮಿ ಅವರನ್ನು ರಾಘವೇಂದ್ರ ನೇತೃತ್ವದ ತಂಡವು ಕರೆತಂದಿತ್ತು. ಅದೇ ವೇಳೆಯಲ್ಲಿ ದರ್ಶನ್, ವಿನಯ್, ನಟ ಚಿಕ್ಕಣ್ಣ, ನಾಗರಾಜ್, ಪ್ರದೂಷ್ ಅವರು ರಾಜರಾಜೇಶ್ವರಿ ನಗರದ ಸ್ಟೋನಿ ಬ್ರೂಕ್ ರೆಸ್ಟೋರೆಂಟ್‌ನಲ್ಲಿ ಪಾರ್ಟಿ ನಡೆಸುತ್ತಿದ್ದರು. ಆಗ ಪವನ್, ರೇಣುಕಸ್ವಾಮಿ ಫೋಟೊ ತೆಗೆದು ಪ್ರದೂಷ್ ಮೊಬೈಲ್‌ಗೆ ಕಳುಹಿಸಿದ್ದರು. ‘ಯಾರನ್ನೋ ಕರೆತಂದು ಹಲ್ಲೆ ನಡೆಸುತ್ತಿರುವುದಾಗಿ’ ಹೇಳಿ ಸೆಕ್ಯೂರಿಟಿ ಗಾರ್ಡ್ ಸಹ ಶೆಡ್‌ನ ಮಾಲೀಕರ ಸಂಬಂಧಿಯೂ ಆಗಿರುವ ವಿನಯ್‌ಗೆ ಮತ್ತೊಂದು ಫೋಟೊ ಕಳುಹಿಸಿದ್ದರು.

ರೇಣುಕಸ್ವಾಮಿ ಮೃತಪಟ್ಟ ನಂತರ ಆರೋಪಿಗಳು ಈ ಫೋಟೊಗಳನ್ನು ಅಳಿಸಿ ಹಾಕಿ ಸಾಕ್ಷ್ಯನಾಶ ಪಡಿಸಿದ್ದರು. ಆ ಫೋಟೊಗಳನ್ನು ಎಸ್‌ಎಫ್‌ಎಲ್ ತಜ್ಞರು ಮರು ಸಂಗ್ರಹಿಸಿದ್ದಾರೆ.

‘ಪವಿತ್ರಾಗೌಡ ಚಪ್ಪಲಿಯಿಂದ ಹಲ್ಲೆ ನಡೆಸಿದರೆ, ದರ್ಶನ್ ರೇಣುಕಸ್ವಾಮಿ ಮರ್ಮಾಂಗಕ್ಕೆ ಒದೆಯುತ್ತಾರೆ. ‘ನನ್ನ ಅಪ್ಪೆಯ ಮೇಲೆ ಕಣ್ಣು ಹಾಕುತ್ತೀಯಾ. ಎಷ್ಟೋ ಧೈರ್ಯ ನಿನಗೆ’ ಎಂದು ಕೆರಳುತ್ತಾರೆ. ಆಗ, ರೇಣುಕಸ್ವಾಮಿ ಜೀವದಾನಕ್ಕೆ ಮೊರೆ ಇಡುತ್ತಾರೆ. ಮನೆಯಲ್ಲಿ ವಯಸ್ಸಾದ ಪೋಷಕರು, ಗರ್ಭಿಣಿ ಪತ್ನಿ ಇದ್ದಾಳೆ ಎಂಬುದಾಗಿ ಮನವರಿಕೆಗೆ ಪ್ರಯತ್ನಿಸುತ್ತಾರೆ. ಆದರೂ, ಆರೋಪಿಗಳ ಮನಸ್ಸು ಬದಲಾಗುವುದಿಲ್ಲ. ಹಗ್ಗದಿಂದ ಬಿಗಿದು ಲಾಠಿ ಮುರಿಯುವ ತನಕ ಅಮಾನುಷವಾಗಿ ಹಲ್ಲೆ ನಡೆಸುತ್ತಾರೆ. ಕಣ್ಣಿನ ಗುಡ್ಡೆಗೂ ಹೊಡೆಯುತ್ತಾರೆ. ರೇಣುಕಸ್ವಾಮಿ ಎದೆಯ ಮೇಲೆ ದರ್ಶನ್ ಕಾಲಿಡುತ್ತಾರೆ. ಧನರಾಜ್ ಎಲೆಕ್ಟ್ರಿಕ್ ಶಾಕ್ ನೀಡುತ್ತಾರೆ. ಅದಾದ ಮೇಲೆ ರೇಣುಕಸ್ವಾಮಿ ನರಳಿನರಳಿ ಮೃತಪಡುತ್ತಾರೆ’ ಎಂದು ತನಿಖಾ ತಂಡದ ಮೂಲಗಳು ತಿಳಿಸಿವೆ.

‘ರೇಣುಕಸ್ವಾಮಿ ಮೃತಪಟ್ಟ ನಂತರ ದರ್ಶನ್ ಅವರೇ ಮೃತದೇಹದ ವಿಲೇವಾರಿಗೆ ಸೂಚಿಸುತ್ತಾರೆ. ಅದರಂತೆ ಪ್ರದೂಷ್ ಹಾಗೂ ವಿನಯ್ ಸೇರಿಕೊಂಡು, ತಾವೇ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡು ಅನ್ಯ ವ್ಯಕ್ತಿಗಳು ಪೊಲೀಸರ ಎದುರು ಶರಣಾಗುವಂತೆ ಮಾಡಲು ಸಂಚು ರೂಪಿಸುತ್ತಾರೆ. ಸ್ಥಳದಲ್ಲಿದ್ದ ಚಿತ್ರದುರ್ಗ ರಾಘವೇಂದ್ರ ಹಾಗೂ ವಿನಯ್ ಮತ್ತು ಪ್ರದೂಷ್ ಕರೆಸಿದ ಇತರ ಮೂವರನ್ನು ಹಣದ ಆಮಿಷವೊಡ್ಡಿ ಶರಣಾಗತಿ ಮಾಡಿಸಲಾಗುತ್ತದೆ. ಹಣಕಾಸಿನ ವ್ಯವಹಾರಕ್ಕೆ ಕೊಲೆ ಮಾಡಿರುವುದಾಗಿ ಅವರು ಕಾಮಾಕ್ಷಿಪಾಳ್ಯ ಠಾಣೆಯಲ್ಲಿ ಶರಣಾಗುವ ಸಮಯದಲ್ಲಿ ಅವರು ಹೇಳಿಕೆ ನೀಡಿದ್ದರು’ ಎಂದು ಮೂಲಗಳು ಹೇಳಿವೆ.

ಕಾರಿನಲ್ಲಿ ಕರೆತಂದಿದ್ದರು: ಜೂನ್ 8ರಂದು ಬೆಳಿಗ್ಗೆ ಚಿತ್ರದುರ್ಗದಲ್ಲಿ ತನ್ನ ತಂಗಿಯ ಸ್ಕೂಟಿಯಲ್ಲಿ ರೇಣುಕಸ್ವಾಮಿ ತೆರಳುತ್ತಿದ್ದರು. ಆಗ ಕರೆ ಮಾಡಿದ್ದ ರಾಘವೇಂದ್ರ ಅವರು ದರ್ಶನ್ ಭೇಟಿ ಮಾಡಿಸುವುದಾಗಿ ಹೇಳಿದ್ದರು. ಅದಕ್ಕೆ ಒಪ್ಪದೇ ಇದ್ದಾಗ ಅಪಹರಣ ಮಾಡಿದ್ದರು. ಅಪಹರಣ ನಡೆಸುವುದಕ್ಕೂ ನಾಲ್ಕು ದಿನ ಮೊದಲು ಪವಿತ್ರಾಗೌಡ ಅವರು ರೇಣುಕಸ್ವಾಮಿ ಜತೆಗೆ ಫೋನ್‌ನಲ್ಲಿ ಮಾತನಾಡಿದ್ದರು. ಸಂದೇಶ ಕಳುಹಿಸದಂತೆ ಬೆದರಿಕೆ ಹಾಕಿದ್ದರು. ಅದಾದ ಬಳಿಕ ಪವನ್, ಪವಿತ್ರಾ ಹೆಸರಿನಲ್ಲಿ ಸಂದೇಶ ಕಳುಹಿಸಿ ರೇಣುಕಸ್ವಾಮಿಯ ವಿಳಾಸ ಪತ್ತೆಹಚ್ಚಿರುತ್ತಾರೆ’ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಶಾಲಾ ವಾಹನ–ಬಸ್ ಡಿಕ್ಕಿ: ಇಬ್ಬರು ಮಕ್ಕಳ ಸಾವು

ಮಾನ್ವಿ (ರಾಯಚೂರು ಜಿಲ್ಲೆ): ತಾಲ್ಲೂಕಿನ ಕಪಗಲ್ ಸಮೀಪ ಗುರುವಾರ ಶಾಲಾ ವಾಹನ ಹಾಗೂ ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯ ಬಸ್ ಮಧ್ಯೆ ಸಂಭವಿಸಿದ ಭೀಕರ ಅಪಘಾತದಲ್ಲಿ ಶಾಲಾ ವಾಹನದಲ್ಲಿದ್ದ ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ. 15 ವಿದ್ಯಾರ್ಥಿಗಳು ಗಂಭೀರವಾಗಿ ಗಾಯಗೊಂಡಿದ್ದಾರೆ.

ಲೊಯೋಲ ಶಾಲೆಯ ವಿದ್ಯಾರ್ಥಿಗಳಾದ ಸಮರ್ಥ ಅಮರೇಶ (7) ಹಾಗೂ ಶ್ರೀಕಾಂತ ಮಾರೇಶ (12) ಮೃತಪಟ್ಟಿದ್ದಾರೆ. ಒಬ್ಬ ಬಾಲಕ ಹಾಗೂ ಚಾಲಕನ ಸ್ಥಿತಿ ಗಂಭೀರವಾಗಿದೆ. ಅಪಘಾತದಲ್ಲಿ ಮೂವರು ಮಕ್ಕಳ ಕಾಲುಗಳು ತುಂಡಾಗಿವೆ. ಕುರ್ಡಿ ಗ್ರಾಮದಿಂದ ಶಾಲಾ ಬಸ್ಸು ಮಾನ್ವಿಯ ಲೊಯೋಲ ಶಾಲೆಗೆ ತೆರಳುತ್ತಿತ್ತು.

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ
DISTRICT INSTITUTE OF EDUCATION AND TRAINING
ದೂರವಾಣಿ ಸಂಖ್ಯೆ : 08226-223001
Email : diet.chamarajanagar@gmail.com
Web : dietchamarajanagara.karnataka.gov.in

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಚಾಮರಾಜನಗರ
ಇ–ಟೆಂಡರ್ ಪ್ರಕಟಣೆ

2022–23ನೇ ಸಾಲಿನ ಆಯವ್ಯಯ ಘೋಷಣೆಯಂತೆ ಜಿಲ್ಲೆಯ 04 ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ Integrated MINI PC, Laptop, LED Projector, Interactive Panel Board, 1kv UPS, 2kv UPS, 3kv UPS ಗಳನ್ನು ಪೂರೈಸಲು ಆಸಕ್ತಿಯುಳ್ಳ ಬಿಡ್‌ದಾರರಿಂದ ಇ–ಟೆಂಡರ್ ಸಲ್ಲಿಸಲು ಪ್ರಾರಂಭದ ದಿನಾಂಕ : 04–09–2024 ಕೊನೆಯ ದಿನಾಂಕ : 18–09–2024 ಸಂಜೆ 5.30 ಗಂಟೆ ಹೆಚ್ಚಿನ ವಿವರಗಳಿಗಾಗಿ ಇ–ಪ್ರಕ್ಯೂರ್ ಮೆಂಟ್ ಪೋರ್ಟಲ್ https://www.eproc.karnataka.gov.in ಸಂಪರ್ಕಿಸುವುದು.

ಸಹಿ/– ಪ್ರಾಂಶುಪಾಲರು
ಸಂ:ವಾಸಾಸಂಇ:ಚಾನಗರ:232:2024–25 ಡಯಟ್, ಚಾಮರಾಜನಗರ

ಕರ್ನಾಟಕ ಗೃಹ ಮಂಡಳಿ
ಕರ್ನಾಟಕ ಗೃಹ ಮಂಡಳಿ ಸಮುದಾಯದ ನಿರ್ಮಾಣದತ್ತ
ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಲಾಟರಿ/2024–25 ದಿನಾಂಕ : 04–09–2024

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಬೆಂಗಳೂರು ದಕ್ಷಿಣ ತಾಲ್ಲೂಕು, ಚುಂಚುನಕುಪ್ಪೆ, ಬ್ಯಾಲಾಳು ದೋಣೇನಹಳ್ಳಿ ಬಡಾವಣೆಯಲ್ಲಿ ಅಭಿವೃದ್ಧಿಪಡಿಸಿರುವ ನಿವೇಶನಗಳನ್ನು ಹಂಚಿಕೆ ಮಾಡುವ ಸಲುವಾಗಿ ಈ ಹಿಂದೆ ಪತ್ರಿಕಾ ಪ್ರಕಟಣೆ ನೀಡಿ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ಸದರಿ ಪ್ರಕಟಣೆಗೆ ಅನುಗುಣವಾಗಿ ನಿಗದಿತ ಆರಂಭಿಕ ಠೇವಣಿ ಮೊತ್ತದೊಂದಿಗೆ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ ಕರ್ನಾಟಕ ಗೃಹ ಮಂಡಳಿ ಹಂಚಿಕೆ ನಿಯಮಾವಳಿ 1983ರ ನಿಯಮ 9ರ ಅನ್ವಯ ಪ್ರವರ್ಗವಾರು ಮೀಸಲಾತಿಯಡಿಯಲ್ಲಿ ಲಾಟರಿ ಮುಖಾಂತರ ಹಂಚಿಕೆ ಮಾಡಲು ತಾತ್ಕಾಲಿಕ & ಅಂತಿಮ ಅರ್ಹ/ಅನರ್ಹ ಅರ್ಜಿದಾರರ ಪಟ್ಟಿಯನ್ನು ಪ್ರಕಟಿಸಿ ಇ–ಲಾಟರಿ ಮೂಲಕ ಹಂಚಿಕೆ ಮಾಡಲು ಈ ಕೆಳಕಂಡಂತೆ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ.
ಲಾಟರಿ ಮಾಡುವ ಸ್ಥಳ:– ಕರ್ನಾಟಕ ಗೃಹ ಮಂಡಳಿ ಆವರಣ, ಕೇಂದ್ರ ಕಛೇರಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು.

ಬಡಾವಣೆ	ಅರ್ಹ & ಅನರ್ಹ ಅರ್ಜಿದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆ ದಿನಾಂಕ	ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸ್ಥಳ	ಅರ್ಹ/ಅನರ್ಹ ಅರ್ಜಿದಾರರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕ	ಲಾಟರಿ ದಿನಾಂಕ ಮತ್ತು ಸಮಯ	ಮಂಡಳಿ ಪ್ರಸ್ತುತ ದರ (ಪ್ರತಿ ಚದರಡಿಗೆ)
ಬೆಂಗಳೂರು ದಕ್ಷಿಣ ತಾ॥ ಚುಂಚುನಕುಪ್ಪೆ, ಬ್ಯಾಲಾಳು ದೋಣೇನಹಳ್ಳಿ,	09–09–2024	21–09–2024	26–09–2024	01–10–2024 ಬೆಳಿಗ್ಗೆ 11.30 ಗಂಟೆಗೆ	EWS Rs.875/- LIG, MIG, HIG-I, HIG-II Rs. 1750/-

ವಿಶೇಷ ಸೂಚನೆ:– ಅರ್ಜಿದಾರರ ತಾತ್ಕಾಲಿಕ ಮತ್ತು ಅಂತಿಮ ಅರ್ಹ/ಅನರ್ಹ ಅರ್ಜಿಗಳ ವಿವರಗಳನ್ನು ಮಂಡಳಿಯ ವೆಬ್‌ಸೈಟ್, ಕೇಂದ್ರ ಕಛೇರಿಯ ಸೂಚನಾಫಲಕದಲ್ಲಿ ಹಾಗೂ ಆಯಾ ಜಿಲ್ಲಾ ಯೋಜನಾ ಕಛೇರಿಯಲ್ಲಿ ಮೇಲೆ ತಿಳಿಸಿರುವ ಆಯಾ ದಿನಾಂಕಗಳಂದು ಪ್ರಕಟಿಸಲಾಗುವುದು. ಅನರ್ಹ ಅರ್ಜಿದಾರರು ಆಕ್ಷೇಪಣೆ ಸಲ್ಲಿಸಲು ತಿಳಿಸಿರುವ ಕೊನೆಯ ದಿನಾಂಕದೊಳಗೆ ಮಾಹಿತಿ/ದಾಖಲೆಯನ್ನು ಸಂಬಂಧಿಸಿದ ಜಿಲ್ಲಾ ಯೋಜನಾ ಕಛೇರಿಗಳಲ್ಲಿ ಅಥವಾ ಕೇಂದ್ರ ಕಛೇರಿ, ಹಂಚಿಕೆ ಶಾಖೆ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು ಇಲ್ಲಿ ಸಲ್ಲಿಸಲು ಕೋರಲಾಗಿದೆ. ಇಲ್ಲವಾದಲ್ಲಿ ತಮ್ಮ ಅರ್ಜಿಗಳನ್ನು ಲಾಟರಿ ಅಂತಿಮ ಅರ್ಹ ಅರ್ಜಿದಾರರ ಪಟ್ಟಿಗೆ ಪರಿಗಣಿಸಲಾಗುವುದಿಲ್ಲ.
ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಗೃಮಂ, ಬೆಂಗಳೂರು ನಗರ ಜಿಲ್ಲಾ ಯೋಜನಾ ಕಛೇರಿ, ಮೊಬೈಲ್ ನಂ. 9845600099 ಹಾಗೂ ಸಹಾಯಕ ಕಂದಾಯ ಅಧಿಕಾರಿ, ಹಂಚಿಕೆ ಶಾಖೆ, ಕರ್ನಾಟಕ ಗೃಹ ಮಂಡಳಿ, 4ನೇ ಮಹಡಿ, ಕಾವೇರಿ ಭವನ, ಬೆಂಗಳೂರು ಇವರನ್ನು ಖುದ್ದಾಗಿ ಅಥವಾ ಮೊಬೈಲ್ ನಂ. 9164839817, ದೂರವಾಣಿ ಸಂಖ್ಯೆ: 080–22273511 ವಿಸ್ತರಣೆ : 307/309 ರಲ್ಲಿ ಸಂಪರ್ಕಿಸಬಹುದು ಹಾಗೂ ವೆಬ್‌ಸೈಟ್ www.khb.karnataka.gov.in ಯಿಂದ ಮಾಹಿತಿ ಪಡೆಯಬಹುದು.

ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/CP/1856/Zen/2024-25

ಬಯಲುಸೀಮೆಯತ್ತ ಎತ್ತಿನಹೊಳೆ

ಒಂದನೇ ಪುಟದಿಂದ...

ಕರಾವಳಿಯಲ್ಲಿ ವಿರೋಧ ವ್ಯಕ್ತಪಡಿಸಿದ್ದ ಪಕ್ಷಗಳು ಬಯಲುಸೀಮೆಯಲ್ಲಿ ಬೆಂಬಲ ನೀಡಿದ್ದವು. ವಿರೋಧಗಳ ನಡುವೆಯೇ 2014ರಲ್ಲಿ ಅಂದು ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು ಶಂಕುಸ್ಥಾಪನೆ ನೆರವೇರಿಸಿದ್ದರು. ದಶಕದ ಬಳಿಕ ಯೋಜನೆಯ ಮೊದಲ ಹಂತಕ್ಕೆ ಚಾಲನೆ ದೊರೆಯುತ್ತಿದೆ.

ಉದ್ಘಾಟನೆ: ಮುಖ್ಯಮಂತ್ರಿ ಅವರು ಹಾಸನ ಜಿಲ್ಲೆ ಹೆಬ್ಬನಹಳ್ಳಿಯಲ್ಲಿ ಸೆ.6ರಂದು ಮಧ್ಯಾಹ್ನ 12.05ಕ್ಕೆ ಯೋಜನೆಗೆ ಚಾಲನೆ ನೀಡಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಂಸದ ಶ್ರೇಯಸ್ ಪಟೇಲ್, ಶಾಸಕ ಶಿವಲಿಂಗೇಗೌಡ, ಸಿಮೆಂಟ್ ಮಂಜು, ತುಮಕೂರು, ಹಾಸನ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಮಗಳೂರು, ಕೋಲಾರದ ಸಚಿವರು, ಶಾಸಕರು ಭಾಗ ವಹಿಸಲಿದ್ದಾರೆ.

> **ಹೋಮ ಹವನ ಮಾಡಬೇಕು, ಕುಂಬಳಕಾಯಿ ಬಲಿ ನೀಡಬೇಕು. ದೇವರಲ್ಲಿ ಪ್ರಾರ್ಥಿಸಿ ಯೋಜನೆಗೆ ಚಾಲನೆ ನೀಡಬೇಕು**
> **ಡಿ.ಕೆ. ಶಿವಕುಮಾರ್**
> ಉಪ ಮುಖ್ಯಮಂತ್ರಿ

ಐತಿಹಾಸಿಕ ದಿನ: ಡಿಕೆಶಿ

‘ರಾಜ್ಯದ ಇತಿಹಾಸದಲ್ಲಿಯೇ ಶುಕ್ರವಾರ ಮರೆಯಲಾರದ ದಿನ. ಆಲಮಟ್ಟಿಯ ನಂತರ ಅತಿ ದೊಡ್ಡ ಯೋಜನೆ ಇದಾಗಿದೆ. ಏಳು ಜಿಲ್ಲೆಗಳಲ್ಲಿ ನೀರಿನ ಸಮಸ್ಯೆ ಪರಿಹಾರಗೊಳ್ಳಲಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ನೀರು ಎತ್ತುವ ಪಂಪ್‌ಹೌಸ್‌ಗಳನ್ನು ಗುರುವಾರ ವೀಕ್ಷಿಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ನನ್ನ ರಾಜಕೀಯ ಜೀವನದ ಅತಿದೊಡ್ಡ ಯೋಜನೆ ಇದಾಗಿದೆ. ಈ ಯೋಜನೆ ಪೂರ್ಣಗೊಳ್ಳುವುದಿಲ್ಲ ಎಂದು ಬಿಜೆಪಿಯವರು ಟೀಕಿಸಿದ್ದರು. ಟೀಕೆಗಳು ಸಾಯುತ್ತವೆ. ನಾವು ಮಾಡಿದ ಕೆಲಸಗಳು ಉಳಿಯುತ್ತವೆ’ ಎಂದು ಪ್ರತಿಕ್ರಿಯಿಸಿದರು.

‘ನೀರು ಸೋರಿಕೆ ಇಲ್ಲ’

‘ಎತ್ತಿನಹೊಳೆ ಯೋಜನೆಯಲ್ಲಿ ಮಳೆಗಾಲದಲ್ಲಿ ನೀರು ಹರಿಸುವುದರಿಂದ ನೀರು ಸೋರಿಕೆ ಇರುವುದಿಲ್ಲ’ ಎಂದು ಯೋಜನೆಯ ಸಹಾಯಕ ಎಂಜಿನಿಯರ್ ಬಾಲಕೃಷ್ಣ ‘ಪ್ರಜಾವಾಣಿ’ಗೆ ತಿಳಿಸಿದರು.

‘ಜೂನ್15ರಿಂದ ಅಕ್ಟೋಬರ್15ರವರೆಗೆ ಮಳೆಗಾಲ ಇರುವುದರಿಂದ ನೀರು ಆವಿಯಾಗುವುದಿಲ್ಲ ನೀರು ಬಳಕೆದಾರರು ಅಕ್ರಮವಾಗಿ ಬಳಸುವ ಪ್ರಮೇಯ ಇರುವುದಿಲ್ಲ. ಮುಂಗಾರು ಮಳೆಯ ಅವಧಿಯಲ್ಲಿ ನಾಲ್ಕು ತಿಂಗಳು ನೀರನ್ನು ಎತ್ತಿ ಹರಿಸಲಾಗುತ್ತದೆ. ಇದರಿಂದ ಪರಿಸರದ ಮೇಲೆ ಯಾವುದೇ ರೀತಿಯ ದುಷ್ಪರಿಣಾಮ ಉಂಟಾಗುವುದಿಲ್ಲ. ಬದಲಿಗೆ, ಹೆಚ್ಚುವರಿ ಮಳೆ ನೀರಿನಿಂದ ಆಗಬಹುದಾದ ಪ್ರವಾಹ ಅಪಾಯವನ್ನು ನಿಯಂತ್ರಣವೂ ಆಗಲಿದೆ’ ಎಂದರು.

‘ಎತ್ತಿನ ಹೊಳೆ ನೀರು ಕೆಂಪುಹೊಳೆಗೆ ಹರಿದು, ಕುಮಾರಧಾರಾ ನದಿಗೆ ಸೇರುತ್ತದೆ. ಅಲ್ಲಿಂದ ನೇತ್ರಾವತಿ ನದಿಗೆ ಸೇರುತ್ತದೆ. ನೇತ್ರಾವತಿ ನದಿ ಸಮುದ್ರಕ್ಕೆ ಸೇರುತ್ತದೆ. ಶೇ 1ರಷ್ಟು ನೀರನ್ನು ಮಾತ್ರ ಯೋಜನೆಯಡಿ ಬಳಸಲಾಗುತ್ತಿದೆ. ಇದರಿಂದ ಸಮುದ್ರಕ್ಕೆ ಸೇರುವ ನೀರಿನಲ್ಲಿ ಒಂದಂಶ ಕಡಿಮೆಯಾಗಬಹುದು. ಇದನ್ನು ಅರಿತೇ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಕುಡಿಯುವ ನೀರು ಒದಗಿಸಲು ಯೋಜನೆ ಕೈಗೊಳ್ಳಬಹುದು ಎಂದು ಅನುಮತಿ ನೀಡಿದೆ’ ಎಂದು ಮಾಹಿತಿ ನೀಡಿದರು.

‘ಸಂಗ್ರಹವಾಗುವ ನೀರನ್ನು ಟಿಎಂಸಿ ಅಡಿ ಆಧಾರದಲ್ಲಿ ಅಳೆಯಲಾಗುತ್ತದೆ. ಹರಿಯುವ ನೀರನ್ನು ಕ್ಯುಮೆಕ್ಸ್ (ಮೀಟರ್ ಕ್ಯೂಬಿಕ್ ಪರ್ ಸೆಕೆಂಡ್) ಆಧಾರದಲ್ಲಿ ಅಳತೆ ಮಾಡಲಾಗುತ್ತದೆ. ಒಂದು ಸೆಕೆಂಡಿಗೆ ಸಾವಿರ ಲೀಟರ್ ಹರಿಯುವುದು ಒಂದು ಕ್ಯುಮೆಕ್ಸ್ ಆಗಿರುತ್ತದೆ. ಶುಕ್ರವಾರದಿಂದ ನಿತ್ಯ 25ರಿಂದ 30 ಕ್ಯುಮೆಕ್ಸ್ ಪಂಪ್ ಮಾಡಲಾಗುವುದು. ಇಲ್ಲಿ 14 ಕ್ಯುಮೆಕ್ಸ್ ಸಾಮರ್ಥ್ಯದ ಆರು ಮೋಟರ್ ಚಾಲನೆಯಲ್ಲಿ ಇರುತ್ತವೆ. ಮಧ್ಯೆ ಯಾವುದಾದರೂ ರಿಪೇರಿಗೆ ಬಂದರೆ, ಹೆಚ್ಚುವರಿಯಾಗಿರುವ ಏಳನೇ ಪಂಪ್ ಕಾರ್ಯನಿರ್ವಹಿಸುತ್ತದೆ. ಇವುಗಳ ಸಾಮರ್ಥ್ಯ 85 ಕ್ಯುಮೆಕ್ಸ್’ ಎಂದು ವಿವರಿಸಿದರು.

ಕೆಐಎಡಿಬಿ: ₹72 ಕೋಟಿ ಅಕ್ರಮ

ಒಂದನೇ ಪುಟದಿಂದ...

ಈ ಸಂಬಂಧ ಧಾರವಾಡದ ವಿದ್ಯಾಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ನಂತರದ ದಿನಗಳಲ್ಲಿ ಪ್ರಕರಣವು ಸಿಐಡಿಗೆ ವರ್ಗಾವಣೆಯಾಗಿತ್ತು. ದೊಡ್ಡ ಮೊತ್ತದ ಪ್ರಕರಣವಾದ ಕಾರಣ ಇ.ಡಿ ಇಸಿಐಆರ್ ದಾಖಲಿಸಿಕೊಂಡು ತನಿಖೆ ಆರಂಭಿಸಿತ್ತು. ಇದೇ ಆಗಸ್ಟ್ 9, 10 ರಂದು ರಾಜ್ಯದ 12 ಕಡೆ ಶೋಧ ನಡೆಸಿತ್ತು.

ಈ ಕುರಿತ ಹೇಳಿಕೆಯಲ್ಲಿ ಇ.ಡಿ, ‘ಆರಂಭದಲ್ಲಿ ಅಂದಾಜಿಸಿರುವುದಕ್ಕಿಂತಲೂ ಹಲವು ಪಟ್ಟು ದೊಡ್ಡ ಪ್ರಮಾಣದಲ್ಲಿ ಅಕ್ರಮ ನಡೆದಿದೆ. ಪರಿಹಾರ ದೊರೆತಿಲ್ಲ ಎಂದು ನಕಲಿ ದಾಖಲೆ ಸೃಷ್ಟಿಸಿ ₹72 ಕೋಟಿಗಿಂತಲೂ ಹೆಚ್ಚು ಮೊತ್ತವನ್ನು ಅಕ್ರಮವಾಗಿ ವರ್ಗಾವಣೆ ಮಾಡಿಕೊಳ್ಳಲಾಗಿದೆ. ರಾಜ್ಯದಲ್ಲಿ ಈಚೆಗೆ ನಡೆಸಿದ ಶೋಧ ಕಾರ್ಯದ ವೇಳೆ ಈ ಅಕ್ರಮಕ್ಕೆ ಸಂಬಂಧಿಸಿದ ದಾಖಲೆಗಳು ದೊರೆತಿವೆ’ ಎಂದು ಹೇಳಿದೆ.

‘ಅಕ್ರಮದ ಹಣ ವರ್ಗಾವಣೆಯಾಗಿರುವ ಎಲ್ಲ ಖಾತೆಗಳ ವಿವರಗಳನ್ನು ಕಲೆಹಾಕಲಾಗುತ್ತಿದೆ. ತನಿಖೆ ಮುಂದುವರೆದಿದೆ’ ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.

ಇಬ್ಬರ ಬಂಧನ

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೇ 3ರಂದು ಇ.ಡಿ ಅಧಿಕಾರಿಗಳು ಇಬ್ಬರನ್ನು ಬಂಧಿಸಿದ್ದಾರೆ.

ಅಕ್ರಮ ನಡೆದ ಅವಧಿಯಲ್ಲಿ ಕೆಐಎಡಿಬಿ ಧಾರವಾಡ ವಿಶೇಷ ಭೂಸ್ವಾಧೀನಾಧಿಕಾರಿ ಆಗಿದ್ದ, ನಿವೃತ್ತ ಅಧಿಕಾರಿ ವಸಂತಕುಮಾರ್ ದುರ್ಗಪ್ಪ ಸಜ್ಜನ್ ಮತ್ತು ಭೂ ದಲ್ಲಾಳಿ ಮೈಬೂಬ್ ಅಲ್ಲಾಬಕ್ಷ್ ದುಂಡಾಸಿ ಎಂಬುವವರನ್ನು ಬಂಧಿಸಲಾಗಿದೆ ಎಂದು ಇ.ಡಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕಾರು, ಜಮೀನು ಖರೀದಿ...

- ಪರಿಹಾರದ ಹಣವನ್ನು ವರ್ಗಾಯಿಸಿಕೊಳ್ಳಲು ನಕಲಿ ದಾಖಲೆಗಳನ್ನು ಸೃಷ್ಟಿಸಿ, ಬ್ಯಾಂಕ್ ಖಾತೆಗಳನ್ನು ತೆರೆಯಲಾಗಿದೆ. ಆ ಖಾತೆಗಳಿಂದ ಇತರ ನೂರಾರು ಖಾತೆಗಳಿಗೆ ಹಣ ಮರುವರ್ಗಾವಣೆಯಾಗಿದೆ.
- ಈಗಾಗಲೇ ಪರಿಹಾರ ಪಡೆದುಕೊಂಡಿದ್ದ 7 ಮಂದಿ ಖಾತೆಗೂ ಹಣ ವರ್ಗಾವಣೆ ಮಾಡಲಾಗಿದೆ. ಆ ಹಣವನ್ನು ಮಂಡಳಿಯ ಅಧಿಕಾರಿಗಳು ಮತ್ತು ಭೂ ದಲ್ಲಾಳಿ ಪಡೆದುಕೊಂಡಿದ್ದಾರೆ.
- ಈ ಹಣವನ್ನು ಬಳಸಿಕೊಂಡು ಜಮೀನು, ಮನೆಗಳನ್ನು ಖರೀದಿಸಲಾಗಿದೆ. ಐಷಾರಾಮಿ ಕಾರುಗಳನ್ನೂ ಖರೀದಿಸಲಾಗಿದೆ. ಕೋಟ್ಯಂತರ ಮೊತ್ತದ ನಿಶ್ಚಿತ ಠೇವಣಿಗಳನ್ನು ಇರಿಸಲಾಗಿದೆ.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಉತ್ತರ ಕನ್ನಡ

ಉಪ ಕೃಷಿ ನಿರ್ದೇಶಕರ ಕಛೇರಿ, ಕಾರವಾರ

ಕ್ರ.ಸಂ–E-Tender ಪ್ರಕಟಣೆ ಸಂಖ್ಯೆ: AD/2024-25/SE0204

ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ಸೇವೆ ಒದಗಿಸಲು ಇ-ಟೆಂಡರ್ ಪ್ರಕಟಣೆ

ಉಪ ಕೃಷಿ ನಿರ್ದೇಶಕರು, ಕಾರವಾರ ಇವರ ಕಛೇರಿಯಲ್ಲಿ 2024–25ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ಸೇವೆ ಒದಗಿಸಲು ಅರ್ಹ ಸಂಸ್ಥೆಗಳಿಂದ ಇ-ಟೆಂಡರ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ದಿನಾಂಕ: 03–09–2024 ರಿಂದ ಪ್ರಕ್ರಿಯೆ ಪ್ರಾರಂಭವಾಗುತ್ತಿದ್ದು, ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 20–09–2024 ರಂದು ಮಧ್ಯಾಹ್ನ 12:30 pm ಘಂಟೆ ಆಗಿರುತ್ತದೆ. ದಿನಾಂಕ: 21–09–2024 ರಂದು ಮಧ್ಯಾಹ್ನ 12:30 pm ಘಂಟೆಗೆ ತಾಂತ್ರಿಕ ಬಿಡ್ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್: http://kppp.karnataka.gov.in ನಲ್ಲಿ ಪಡೆಯಬಹುದು. ಪತ್ರಿಕೆಯಲ್ಲಿ ಪ್ರಕಟವಾಗಿರುವ ಬಿಡ್ ಆಹ್ವಾನ ಪ್ರಕಟಣೆ/ಬಿಡ್‌ಡಾಕ್ಯೂಮೆಂಟ್ಸ್ ಫಾರಂ ಆಗಿರುವುದಿಲ್ಲ.

ಸಹಿ/– ಉಪ ಕೃಷಿ ನಿರ್ದೇಶಕರು–1,
ಕಾರವಾರ, ಉತ್ತರ ಕನ್ನಡ

DIPR/ADK/KSMCA/319/24-25 Dt.05.09.2024

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಕಾಮಗಾರಿ ಇಲಾಖೆ, ಕೇಂದ್ರ ಕಚೇರಿ, ಶಾಂತಿನಗರ, ಬೆಂಗಳೂರು – 560 027.

ಸಂಖ್ಯೆ. ಬೆಮಸಾ/ಕೇಕ/ಕಾಇ/ಕಾನಿಅ/836/2024–25 ದಿನಾಂಕ: 03.09.2024

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 13/2024–25

ಅರ್ಹ ಗುತ್ತಿಗೆದಾರರಿಂದ 1) **"ಬೆಂಗಳೂರು ಕೆ.ಜಿ.ಬಿ.ಎಸ್. ನಲ್ಲಿ ಪ್ರಯಾಣಿಕರ ಸೌಕರ್ಯ ಸುಧಾರಿಸುವುದು ಮತ್ತು ಅಭಿವೃದ್ಧಿ ಕೆಲಸಗಳು"** ಟೆಂಡರ್‌ಗಿಟ್ಟ ಅಂದಾಜು ಮೊತ್ತ **ರೂ. 115.25 ಲಕ್ಷಗಳು** ಹಾಗೂ ಇ.ಎಂ.ಡಿ ಮೊತ್ತ **ರೂ. 2,00,000/–**, 2) **"ಶಾಂತಿನಗರ ಟಿ.ಟಿ.ಎಂ.ಸಿ. ಯಲ್ಲಿ ಹೆಚ್ಚುವರಿ ಅಭಿವೃದ್ಧಿ ಕೆಲಸಗಳು"** ಟೆಂಡರ್‌ಗಿಟ್ಟ ಅಂದಾಜು ಮೊತ್ತ **ರೂ. 127.11 ಲಕ್ಷಗಳು** ಹಾಗೂ ಇ.ಎಂ.ಡಿ ಮೊತ್ತ **ರೂ. 2,00,000/–**, 3) **"ಬೆಂಗಳೂರು ಹೆಚ್.ಎಸ್.ಆರ್. ಲೇಔಟ್‌ನಲ್ಲಿರುವ ಬೆಂ.ಮ.ಸಾ.ಸಂಸ್ಥೆಯ ಬಸ್ ಘಟಕ–25 ರಲ್ಲಿ ವಿದ್ಯುತ್ ಬಸ್ ಚಾರ್ಜಿಂಗ್ ಸ್ಟೇಷನ್‌ಗಾಗಿ 3000 ಕೆ.ವಿ.ಎ. ಸಾಮರ್ಥ್ಯದ ಹೆಚ್.ಟಿ. ವಿದ್ಯುತ್ ಸಂಪರ್ಕ ಒದಗಿಸುವುದು"** ಟೆಂಡರ್‌ಗಿಟ್ಟ ಅಂದಾಜು ಮೊತ್ತ **ರೂ. 191.70 ಲಕ್ಷಗಳು** ಹಾಗೂ ಇ.ಎಂ.ಡಿ ಮೊತ್ತ **ರೂ. 2,86,000/–**, 4) **"ಬೆಂಗಳೂರು ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿರುವ ಬೆಂ.ಮ.ಸಾ.ಸಂಸ್ಥೆಯ ಬಸ್ ನಿಲ್ದಾಣದಲ್ಲಿ ವಿದ್ಯುತ್ ಬಸ್ ಚಾರ್ಜಿಂಗ್ ಸ್ಟೇಷನ್‌ಗಾಗಿ 1400 ಕೆ.ವಿ.ಎ. ಸಾಮರ್ಥ್ಯದ ಹೆಚ್ಚುವರಿ ಹೆಚ್.ಟಿ. ವಿದ್ಯುತ್ ಸಂಪರ್ಕ ಒದಗಿಸುವುದು"** ಟೆಂಡರ್‌ಗಿಟ್ಟ ಅಂದಾಜು ಮೊತ್ತ **ರೂ. 232.20 ಲಕ್ಷಗಳು** ಹಾಗೂ ಇ.ಎಂ.ಡಿ ಮೊತ್ತ **ರೂ. 3,49,000/–**, 5) **"ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆಯಲ್ಲಿ ಬಸ್ ಘಟಕ ನಿರ್ಮಿಸುವುದು"** ಟೆಂಡರ್‌ಗಿಟ್ಟ ಅಂದಾಜು ಮೊತ್ತ **ರೂ. 335.00 ಲಕ್ಷಗಳು** ಹಾಗೂ ಇ.ಎಂ.ಡಿ ಮೊತ್ತ **ರೂ. 5,03,000/–**, 6) **"ಬೆಂಗಳೂರು ಕೊಡತಿಯಲ್ಲಿರುವ ಬಸ್ ಘಟಕ–42 ರ ವಾಹನ ನಿಲುಗಡೆ ಪ್ರದೇಶಕ್ಕೆ ಕಾಂಕ್ರೀಟ್ ಅಳವಡಿಸುವುದು ಮತ್ತು ಅಭಿವೃದ್ಧಿ ಕೆಲಸಗಳು"** ಟೆಂಡರ್‌ಗಿಟ್ಟ ಅಂದಾಜು ಮೊತ್ತ **ರೂ. 419.00 ಲಕ್ಷಗಳು** ಹಾಗೂ ಇ.ಎಂ.ಡಿ ಮೊತ್ತ **ರೂ. 6,29,000/–**, 7) **"ಬೆಂಗಳೂರು ದಾಸನಪುರ ಹೋಬಳಿ, ತೋಟಗೆರೆಯಲ್ಲಿ (ಸ ಸಂ. 26) ಉಪಕೆಲಸಗಳೊಂದಿಗೆ ಬಸ್ ಘಟಕ ನಿರ್ಮಿಸುವುದು"** ಟೆಂಡರ್‌ಗಿಟ್ಟ ಅಂದಾಜು ಮೊತ್ತ **ರೂ. 588.00 ಲಕ್ಷಗಳು** ಹಾಗೂ ಇ.ಎಂ.ಡಿ ಮೊತ್ತ **ರೂ. 8,82,000/–** ಮತ್ತು 8) **"ಬೆಂಗಳೂರು ಶಾಂತಿನಗರದಲ್ಲಿ ನೌಕರರ ವಸತಿ ಗೃಹಗಳ ಬ್ಲಾಕ್–2 ನಿರ್ಮಿಸುವುದು"** ಟೆಂಡರ್‌ಗಿಟ್ಟ ಅಂದಾಜು ಮೊತ್ತ **ರೂ. 415.25 ಲಕ್ಷಗಳು** ಹಾಗೂ ಇ.ಎಂ.ಡಿ ಮೊತ್ತ **ರೂ. 6,23,000/–** ಕೆಲಸಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. ಭಾಗವಹಿಸುವ ಗುತ್ತಿಗೆದಾರರು **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದು.

(1) ಕ್ರ.ಸಂ. 1 ರಿಂದ 4 ರಲ್ಲಿನ ಕೆಲಸಗಳಿಗೆ ಟೆಂಡರ್ ಸಲ್ಲಿಸಲು ಕಡೆ **ದಿನಾಂಕ: 12.09.2024.**
(2) ಕ್ರ.ಸಂ. 5 ಮತ್ತು 6 ರಲ್ಲಿನ ಕೆಲಸಗಳಿಗೆ ಟೆಂಡರ್ ಸಲ್ಲಿಸಲು ಕಡೆ **ದಿನಾಂಕ: 20.09.2024.**
(3) ಕ್ರ.ಸಂ. 7 ಮತ್ತು 8 ರಲ್ಲಿನ ಕೆಲಸಗಳಿಗೆ ಟೆಂಡರ್ ಸಲ್ಲಿಸಲು ಕಡೆ **ದಿನಾಂಕ: 24.09.2024**

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಬೆ.ಮ.ಸಾ.ಸಂಸ್ಥೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, (ರಾರಾನ–ಕೆರೆಗಳು) ಅನೆಕ್ಸ್ ಕಟ್ಟಡ–3
3ನೇ ಮಹಡಿ, ಕೊಠಡಿ ಸಂ.308, ನರಸಿಂಹರಾಜ ಚೌಕ, ಬೆಂಗಳೂರು–02.

ಸಂಖ್ಯೆ:ಕಾಪಾಅ(ರಾರಾನ–ಕೆರೆಗಳು)/ಟೆಂಡರ್–01/2024–25 ದಿನಾಂಕ: 05.09.2024

ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಈ ಕೆಳಗಿನ ಸಹಿದಾರರು ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್ ಅಥವಾ ಯಾವುದೇ ಕೇಂದ್ರ/ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು/ವರ್ಗೀಕರಣ
1	ಹೊಸಕೆರೆಹಳ್ಳಿ ಕೆರೆಯಲ್ಲಿ ಮಾರ್ಗ ಬದಲಾವಣೆ ಚರಂಡಿಯ (Diversion Drain) ಬಾಕಿ ಉಳಿಕೆ ನಿರ್ಮಾಣ ಮಾಡುವುದು. (ಸಾಮಾನ್ಯರಿಗೆ) **ಕಾಮಗಾರಿಯ ಅಂದಾಜು ಮೊತ್ತ ₹.249.89 ಲಕ್ಷಗಳು ಇಎಂಡಿ ಮೊತ್ತ: ₹.3,75,000/–**
2	ಗಾಂಧಿನಗರ ಹೊಸಕೆರೆ ಕೆರೆಯಲ್ಲಿ ಬಾಕಿ ಉಳಿದಿರುವ ಮಾರ್ಗ ಬದಲಾವಣೆ ಕೊಳವೆಮಾರ್ಗ (Diversion Pipeline), ಒದಗಿಸುವುದು, ಒಳಹರಿವು ಮತ್ತು ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು. (ಸಾಮಾನ್ಯರಿಗೆ) **ಕಾಮಗಾರಿಯ ಅಂದಾಜು ಮೊತ್ತ ₹.319.03 ಲಕ್ಷಗಳು ಇಎಂಡಿ ಮೊತ್ತ: ₹.4,80,000/–**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳು ದಿನಾಂಕ **10.09.2024**ರ ಮಧ್ಯಾಹ್ನ **3:00** ಗಂಟೆಯ ನಂತರ ಲಭ್ಯವಿರುತ್ತದೆ. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **13.09.2024** ರ ಮಧ್ಯಾಹ್ನ **3:00** ಗಂಟೆಗೆ ನಡೆಸಲಾಗುವುದು. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ **20.09.2024**ರ ಸಂಜೆ **4:00** ಗಂಟೆಯವರೆಗೆ (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **21.09.2024**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಬಿಡ್ ತೆರಯುವುದನ್ನು: (ತಾಂತ್ರಿಕ ಬಿಡ್‌ಗೆ ಅನುಮೋದನೆ) ದೊರೆತ ನಂತರ ತಿಳಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ಕೆರೆಗಳು–ರಾರಾನ)

ಜಿಲ್ಲಾ ಪಂಚಾಯತ ಧಾರವಾಡ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಕಾರ್ಯನಿರ್ವಾಹಕ ಇಂಜಿನೀಯರವರ ಕಚೇರಿ, ಗ್ರಾ.ಕು.ನೀ&ನೈ ವಿಭಾಗ, ಧಾರವಾಡ

ಕ್ರ.ಸಂ./ಗ್ರಾ.ಕು.ನೀ.&.ನೈ./ವಿಧಾ/ಸ.ಇಂ./ಇ–ಟೆಂಡರ/2024–25/760 ದಿನಾಂಕ: 05.09.2024

ಅಲ್ಪಾವಧಿ ಸರ್ವಿಸ್ ಟೆಂಡರನ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ವಿಷಯ: ಕಾಮಗಾರಿಯ ಟೆಂಡರನ ಪ್ರಕಟಣೆ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಡಿ ಧಾರವಾಡ ಜಿಲ್ಲೆಯ ಈ ಕೆಳಗಾಣಿಸಿದ ಕಾಮಗಾರಿಯ ಕಾಮಗಾರಿಯ ಟೆಂಡ್‌ರ್ ಕರೆಯಲಾಗಿದೆ.

ಕಾಮಗಾರಿಯ ವಿವರ ಈ ಕೆಳಗಿನಂತಿದೆ

ಧಾರವಾಡ ಜಿಲ್ಲೆ: ವರ್ಗ: ಸಾಮಾನ್ಯ: **Indent No: RWSSD/2023-24/WS/WORK_INDENT 5456/CALL-2**
ಗರಿಷ್ಠ ಮೊತ್ತ: **59.89ಲಕ್ಷಗಳು**

ಗುತ್ತಿಗೆ ಕಾರ್ಯಕ್ರಮದ ವಿವರಗಳು ಈ ಕೆಳಗಿನಂತಿವೆ (Calander of Events)

1) ಖಾಲಿ ಟೆಂಡರ ಫಾರ್ಮಗಾಗಿ ಇ–ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್ ಬಿ ಗಳನ್ನು ವೈಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ: 06.09.2024 ರಿಂದ ದಿನಾಂಕ: 13.09.2024 ಸಾಯಂಕಾಲ 4.00 ಘಂಟೆಗೆ
2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 14.09.2024 ಸಾಯಂಕಾಲ 4.30 ಘಂಟೆಗೆ
3) ಆರ್ಥಿಕ ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ

ಸದರಿ ಮೇಲೆ ತಿಳಿಸಿದ ಕಾಮಗಾರಿಯ ಅಂತಿಮ ಹೆಸರು, ಟೆಂಡರಗಿಟ್ಟ ಮೊತ್ತ, ಇ.ಎಂ.ಡಿ ಮೊತ್ತ ಮುಂತಾದ ವಿವರಗಳನ್ನು ವೆಬ್‌ಸೈಟ್ **kppp.karnataka.gov.in login** ನಲ್ಲಿ ಪಡೆಯಬಹುದು. ಟೆಂಡರ ಫಾರ್ಮುಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ ಆಸಕ್ತ ಗುತ್ತಿಗೆದಾರರು ವಿವರಗಳನ್ನು ಮತ್ತು ಷರತ್ತುಗಳನ್ನು ವೆಬ್‌ಸೈಟ್ **kppp.karnataka.gov.in login** ನಲ್ಲಿ ಲಾಗ್‌ಇನ್ ಮಾಡಿ ನೋಡಬಹುದು. ಸದರಿ ಟೆಂಡರನಲ್ಲಿ ತಿದ್ದುಪಡಿಗಳಿದ್ದಲ್ಲಿ ಇ–ಪ್ರೋಕ್ಯೂರಮೆಂಟ ವೆಬಸೈಟನಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ, ಟೆಂಡರಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ.

ಸಹಿ/–
ಕಾರ್ಯನಿರ್ವಾಹಕ ಇಂಜನೀಯರರು,
ಗ್ರಾ.ಕು.ನೀ & ನೈ. ವಿಭಾಗ, ಧಾರವಾಡ.

ಡಿಐಪಿಆರ್/ಧಾರವಾಡ/357/ಮಣಿಪಾಲ್/2024–25

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ

ನಂ.5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 009.
ದೂ: 080–22341230/35 ಇ–ಮೇಲ್: bmicapa@gmail.com

ಸಂಖ್ಯೆ: ಬಿಎಂಐಸಿಎಪಿಎ/ಭೂಉಬ–01/47/2023–24/833 ದಿನಾಂಕ: 04.09.2024

ಸಾರ್ವಜನಿಕ ಪ್ರಕಟಣೆ

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]

ಶ್ರೀ ಶ್ರೀನಿವಾಸ್‌ಮೂರ್ತಿ.ಆರ್., ಜಿಪಿಎ ದಾರರು ಮತ್ತು ಶ್ರೀ ವೆಂಕಟರಮಣಪ್ಪ ಮತ್ತು ಇತರರು ಮಾಲೀಕರುಗಳು ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ರಾಚನಮಡು ಗ್ರಾಮದ ಸರ್ವೆ ಸಂಖ್ಯೆ: 4/1ರ 01ಎ–02ಗು, ಸರ್ವೆ ಸಂಖ್ಯೆ: 4/3ರ 01ಎ–12¼ಗು, ಸರ್ವೆ ಸಂಖ್ಯೆ: 4/7ರ 0ಎ–22ಗು, ಸರ್ವೆ ಸಂಖ್ಯೆ: 4/8ರ 0ಎ–20ಗು, 4/9ರ 0ಎ–17ಗು, 4/10ರ 0ಎ–17ಗು, 4/11ರ 0ಎ–35½ಗು 4/12ರ 0ಎ–35¼ಗು, ಮತ್ತು ಸರ್ವೆ ಸಂಖ್ಯೆ:4/17ರ 0ಎ–03ಗು **ಒಟ್ಟಾರೆ 06ಎ–04ಗು** ಮತ್ತು ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ, ಬಿ.ಎಂ. ಕಾವಲ್ ಗ್ರಾಮದ ಸರ್ವೆ ಸಂಖ್ಯೆ:100ರ **ಒಟ್ಟು 01ಎ–38ಗು** ವಿಸ್ತೀರ್ಣದ ಜಮೀನುಗಳನ್ನು ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ "**ವ್ಯವಸಾಯ**" ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ಜಮೀನುಗಳನ್ನು ಅನುಮೋದಿತ ಮಹಾಯೋಜನೆಯಲ್ಲಿ **ವ್ಯವಸಾಯ** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.

1) ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸುಸಜ್ಜಿತವಾಗಿ ಅಭಿವೃದ್ಧಿ ಹೊಂದಿದ ನಿವೇಶನಗಳು ಯೋಗ್ಯ ಬೆಲೆಯಲ್ಲಿ ಲಭ್ಯವಾಗುತ್ತವೆ.
2) ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಎಲ್ಲಾ ವರ್ಗದ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3) ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ.
4) ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ.
5) ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ, ಬೆಂಗಳೂರು ನಗರ ವಾಸಿಗಳಿಗೆ ವಸತಿ ನಿವೇಶನ / ಮನೆ ಹೊಂದಲು ಅನುಕೂಲವಾಗುತ್ತದೆ ಮತ್ತು ಅವಕಾಶ ಕಲ್ಪಿಸಿದಂತಾಗುತ್ತದೆ.

ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

ವಾಸಾಸಂಇ/ವಾಪ/1854/MAA /24–25

ಕರ್ನಾಟಕ ಉಚ್ಚ ನ್ಯಾಯಾಲಯ,
ಉಚ್ಚ ನ್ಯಾಯಾಲಯ ಕಟ್ಟಡಗಳು, ಬೆಂಗಳೂರು–560 001

ಹೆಚ್.ಸಿ.ಎಲ್.3/2024 ದಿನಾಂಕ: 04.09.2024

ಮರು–ಸಂಕ್ಷಿಪ್ತ ಟೆಂಡರ್ ಅಧಿಸೂಚನೆ

ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಮತ್ತು ಇತರ ವಿಭಾಗೀಯ ಪೀಠಗಳಾದ ಧಾರವಾಡ ಮತ್ತು ಕಲಬುರಗಿ ಗ್ರಂಥಾಲಯಗಳಿಗೆ ಕಾನೂನು ಪುಸ್ತಕಗಳನ್ನು ಖರೀದಿ ಮಾಡಲು ನಿರ್ಧರಿಸಿದ್ದು, ಆದ್ದರಿಂದ ಟೆಂಡರನ್ನು karnataka Public Procurement Portal ಮೂಲಕ ಆಹ್ವಾನಿಸಲಾಗಿದೆ. ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ 19.09.2024ರ ಸಂಜೆ 4.00 ಗಂಟೆಯೊಳಗೆ ಆಸಕ್ತಿಯುಳ್ಳ ಪ್ರಕಾಶಕರು / ಏಜೆಂಟರು ಟೆಂಡರ್ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗಾಗಿ https://kppp.karnataka.gov.in/#/portal/searchTender/live ಜಾಲತಾಣದ ಮೂಲಕ ಪಡೆದುಕೊಳ್ಳಬಹುದಾಗಿದೆ.

ಸಹಿ/– ರಿಜಿಸ್ಟ್ರಾರ್
(ಆಡಳಿತ)

ವಾಸಾಸಂಇ/ಉನಿ–ಸಿ.ಪಿ/1859/ಕೆಎಸ್‌ಎಂಸಿಎ/2024–25

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಬೆವಿಕಂ, ಇವರು ಕೆಪಿಪಿ ಪೋರ್ಟಲ್ ಮೂಲಕ ವಿಚಾರಣೆ ಸಂಖ್ಯೆ: ಸಿಇಇ/**ಬೆಂ.ಮ.ಕ್ಷೇ.ವಲಯ/ದಕ್ಷಿಣ/24–25/ವಿಚಾರಣೆ ಸಂಖ್ಯೆ:07** ಬೆವಿಕಂ, ಬಿಎಂಎಜಡ್, ದಕ್ಷಿಣ, ದಕ್ಷಿಣ ವೃತ್ತ, ಹೆಚ್‌ಎಸ್‌ಆರ್ ವಿಭಾಗ, ಎಸ್–20 ಉಪವಿಭಾಗದಡಿಯಲ್ಲಿ ಐಟಿಐ ಬಡಾವಣೆ ಓ & ಎಂ ಘಟಕದ ಹೆಚ್‌ಎಸ್‌ಆರ್ ಬಡಾವಣೆ ಸೆಕ್ಟರ್–7, ಬೊಮ್ಮನಹಳ್ಳಿ, ರಾಜೀವ್ ಗಾಂಧಿನಗರ ಭಾಗಗಳಲ್ಲಿ ಅಡಚನೆಗಳನ್ನು ಕಡಿಮೆಗೊಳಿಸಲು ಹೆಚ್‌ಎಸ್‌ಆರ್ ಎಂಯುಎಸ್‌ಎಸ್ ಎಫ್–1 ಫೀಡರ್‌ನ ಹೆಚ್‌ಟಿ ಸಂಪರ್ಕಜಾಲವನ್ನು ಟೋಟಲ್ ಟರ್ನ್ ಕೀ ಆಧಾರದಲ್ಲಿ ಬಲವರ್ಧನೆ ಮಾಡುವುದು

ಬಿಡ್ ದಾಖಲೆಗಳು ದಿನಾಂಕ: **09.09.2024**ಸಂಜೆ **4:00** ಗಂಟೆಯಿಂದ **23.09.2024** ಸಂಜೆ **4:00** ಗಂಟೆಯವರೆಗೆ ಲಭ್ಯವಿರುವುದು. ಬಿಡ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **23.09.2024** ರಂದು ಸಂಜೆ **4:00** ಗಂಟೆಯವರೆಗೆ. ಬಿಡ್ ದಾಖಲೆಗಳನ್ನು ದಿನಾಂಕ: **25.09.2024**ರ ಸಂಜೆ **4:00** ಗಂಟೆಗೆ ತೆರೆಯಲಾಗುವುದು.

ಟೆಂಡರ್‌ಗಳನ್ನು ನಮ್ಮ ವೆಬ್‌ಸೈಟ್ ಅಲ್ಲಿ ಇರುವು ಕೆಪಿಪಿ ಪೋರ್ಟಲ್ ಮೂಲಕ ಅಥವಾ ಟೆಂಡರಿಂಗ್ ವೆಬ್‌ಸೈಟ್ **https://kppp.karnataka.gov.in** ಗೆ ಭೇಟಿ ನೀಡುವುದರ ಮೂಲಕ ಪಡೆದುಕೊಳ್ಳಬಹುದು. ಇತರೆ ಯಾವುದೇ ಇ–ಪಾವತಿ ವಿಚಾರಣೆಗಾಗಿ ಕೆಪಿಪಿಪಿ ಸಹಾಯವಾಣಿ ಸಂ: **080-23010900 / 22340948** ಅಥವಾ support@eprochelpdesk.comಗೆ ಸಂಪರ್ಕಿಸಬಹುದು.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/–
ಮುಖ್ಯ ಇಂಜಿನಿಯರ್ (ವಿದ್ಯುತ್),
ಸಿ,ಓ&ಎಮ್, ಬೆಂ.ಮ.ಕ್ಷೇ.ವ
ದಕ್ಷಿಣ, ಬೆವಿಕಂ

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ

(ಕರ್ನಾಟಕ ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆ)
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 069.
ದೂರವಾಣಿ: +91–80–22977666/276/433/216/217 ಟೆಲಿ–ಫ್ಯಾಕ್ಸ್:080–26534625/477
ಇ–ಮೇಲ್: director.sjicr@gmail.com

ಅಲ್ಪಾವಧಿ ಇ–ಟೆಂಡರ್ ಅಧಿಸೂಚನೆ

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು ಇವರು, ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ದ್ವಿ–ಲಕೋಟೆ ಪದ್ಧತಿಯನ್ವಯ ಈ ಕೆಳಕಂಡ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಟೆಂಡರ್ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ	ವಿವರಗಳು
1	ಎಸ್‌ಜೆಐಸಿಆರ್/2024–25/IND006 ದಿನಾಂಕ:05.09.2024	ಕೆಳಗಿನ ವೈದ್ಯಕೀಯ/ಸಾಮಾನ್ಯ ಉಪಕರಣೆಗಳ ಪೂರೈಕೆ: 1) 01 ಸಂಖ್ಯೆಯ 500 LPH RO ಪ್ಲಾಂಟ್‌ನ ಪೂರೈಕೆ, ಪರೀಕ್ಷೆ ಮತ್ತು ಕಾರ್ಯಾರಂಭ. 2) 01 ಸಂಖ್ಯೆಯ 500 LPH DM ಪ್ಲಾಂಟ್‌ನ ಪೂರೈಕೆ, ಪರೀಕ್ಷೆ ಮತ್ತು ಕಾರ್ಯಾರಂಭ. 3) 02 ಸಂಖ್ಯೆಯ ಎಲಿಸಾ ರೀಡರ್ ಮತ್ತು ವಾಷರ್

ಟೆಂಡರ್‌ದಾರರು ಟೆಂಡರ್ ದಸ್ತಾವೇಜುಗಳನ್ನು **https://kppp.karnataka.gov.in** ವೆಬ್‌ಸೈಟ್‌ನಿಂದ **ದಿನಾಂಕ : 06.09.2024** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ : **17.09.2024ರ ಸಂಜೆ 4.00 ಗಂಟೆಯವರೆಗೆ.**

1. ಪೂರ್ವಬಾವಿ ಸಭೆಯ ದಿನಾಂಕ: **11.09.2024ರ ಬೆಳಿಗ್ಗೆ 11:30 ಗಂಟೆಗೆ.**
2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **11.09.2024 ಸಂಜೆ 4:00 ಗಂಟೆಗೆ.**
3. ಇ.ಎಂ.ಡಿ. : ಟೆಂಡರ್ ದಾಖಲೆಯಲ್ಲಿ ಉಲ್ಲೇಖಿಸಲಾಗಿದೆ
4. ಹೆಚ್ಚಿನ ವಿವರಗಳಿಗಾಗಿ ನಮ್ಮ ವೆಬ್‌ಸೈಟ್: **www.jayadevacardiology.com** ನ್ನು ನೋಡಬಹುದು.

ಟೆಂಡರನ್ನು ಯಾವುದೇ ಕಾರಣ ನೀಡದೆ ಭಾಗಶಃ/ಪೂರ್ಣವಾಗಿ ಒಪ್ಪಿಕೊಳ್ಳುವ/ತಿರಸ್ಕರಿಸುವ / ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಕಾಯ್ದಿರಿಸಿದೆ.

ಸಹಿ/–
ಮುಖ್ಯ ಆಡಳಿತಾಧಿಕಾರಿಗಳು.

ಕರ್ನಾಟಕ ಸರ್ಕಾರ

ಪುರಸಭೆ ಕಾರ್ಯಾಲಯ ಭಾಲ್ಕಿ

ಪುಸಭಾ/15ನೇ ಹಣಕಾಸು/ಸಿಆರ್– /2024–25 ದಿನಾಂಕ: 02–09–2024

:: ಟೆಂಡರ್ ಪ್ರಕಟಣೆ ::

1) ಕಾಮಗಾರಿ / ಸರಕು / ಸೇವೆಯ ವಿವರ: Construction of CC Road and Drain in Ward No. 03, 04, 05, 06, 08, 12, 13, 14, 15, 17, 18, 19, 20, 21, 22, 22.1 23.1 and 26 in Bhalki Town. Work Indent No: **DMA/2024-25/RD/WORK_INDENT28751**, 2) ಕಾಮಗಾರಿ / ಸರಕು / ಸೇವೆಯ ಅಂದಾಜು ಮೊತ್ತ : e-portal ನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ: e-portal ನಲ್ಲಿ ನಮೂದಿಸಿದಂತೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: e-portal ನಲ್ಲಿ ನಮೂದಿಸಿದಂತೆ, 5) ಟೆಂಡರ ಫಾರಂ ಪಡೆಯಲು ಅಂತಿಮ ದಿನಾಂಕ & ಭರ್ತಿ ಮಾಡಿ ಸಲ್ಲಿಸಲು : **16-09-2024 upto 04.00 PM**, 6) ಟೆಂಡರ ತೆರೆಯುವ ದಿನಾಂಕ : **17-09-2024 at 04.30 PM**, 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ: ಮುಖ್ಯಾಧಿಕಾರಿಗಳು ಪುರಸಭೆ ಭಾಲ್ಕಿ ಇ–ಮೇಲ್: ka.bhalki.tmc@gmail.com, 9) ಅಂತರಜಾಲ ತಾಣದ ವಿಳಾಸ : https://kppp.karnataka.gov.in

ಸಹಿ/– ಮುಖ್ಯಾಧಿಕಾರಿ
ಪುರಸಭೆ ಭಾಲ್ಕಿ

ವಾ.ಸಾ.ಸಂ.ಇ/ಬೀದರ/149/ಕೆ.ಎಸ್.ಎಂ.ಸಿ.&ಎ/2024–25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ದ್ವಿ–ಹಂತದ ಟೆಂಡರ್ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ಕಾಮಗಾರಿಗಳ ವಿವರ	ಕಾಮಗಾರಿಗಿಟ್ಟ ಮೊತ್ತ / ಇಎಂಡಿ ಮೊತ್ತ
	ಮುಖ್ಯ ಅಭಿಯಂತರರ ಕಛೇರಿ (ದಕ್ಷಿಣ), 7ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು – 560 009	
	ಸಂ: ಬೆಂ.ಜ.ಮಂ/ಪ್ರಮುಅ/ಮುಅ(ದ)/ಅಮುಅ(ದ)–I/ಉಮುಅ(ನಿ)–I/ತಾಂಸ(ದ)/3429/2024–25	ದಿನಾಂಕ:03.09.2024
1	ಸಕಾನಿಅ(ದ 1–1) ಉಪ ವಿಭಾಗದ ಕೊತ್ತನೂರು ದಿಣ್ಣೆ ಸೇವಾ ಠಾಣೆ ವ್ಯಾಪ್ತಿಯ ಆರ್‌ಬಿಐ ಲೇಔಟ್, ಮಹೇಂದ್ರ ಸಿಂಗ್ ಲೇಔಟ್, ವಾರ್ಡ್ ನಂ.195 – ಕೋಣನಕುಂಟೆ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ 300ಮಿಮೀ ವ್ಯಾಸದ ಆರ್‌ಸಿಸಿ ಎನ್‌ಪಿ3 ಪೈಪ್‌ಲೈನ್ ಮತ್ತು 230ಮಿಮೀ ವ್ಯಾಸದ ಒಳಚರಂಡಿ ಕೊಳವೆಮಾರ್ಗವನ್ನು ಒದಗಿಸುವುದು ಮತ್ತು ಅಳವಡಿಸುವುದು.	ರೂ. 188.83 ಲಕ್ಷಗಳು / ರೂ. 2.83 ಲಕ್ಷಗಳು
	ಸಂ: ಬೆಂ.ಜ.ಮಂ/ಪ್ರಮುಅ/ಮುಅ(ದ)/ಅಮುಅ(ದ)–I/ಉಮುಅ(ನಿ)–I/ತಾಂಸ(ದ)/3432/2024–25	ದಿನಾಂಕ:03.09.2024
2	ಸಕಾನಿಅ(ದ 1–2) ಉಪ ವಿಭಾಗ ಅಡಿಯಲ್ಲಿ ಬರುವ ಹೆಚ್‌ಎಸ್‌ಆರ್ ಲೇಔಟ್ ಸೇವಾ ಠಾಣೆ ವ್ಯಾಪ್ತಿಯ 450ಮಿಮೀ ವ್ಯಾಸದ ಡಿಐ ನೀರಿನ ಮಾರ್ಗವನ್ನು ಒದಗಿಸುವ ಮತ್ತು ಅಳವಡಿಸುವ ಮೂಲಕ ಹೆಚ್‌ಎಸ್‌ಆರ್ ಲೇಔಟ್ ಜಿಎಲ್‌ಆರ್ ಅನ್ನು 4ನೇ ಘಟ್ಟ 2ನೇ ಹಂತದ ಲೈನ್‌ಗೆ ಸಂಪರ್ಕಿಸುವುದು.	ರೂ. 105.96 ಲಕ್ಷಗಳು / ರೂ. 1.59 ಲಕ್ಷಗಳು
	ಸಂ: ಬೆಂ.ಜ.ಮಂ/ಪ್ರಮುಅ/ಮುಅ(ದ)/ಅಮುಅ(ದ)–I/ಉಮುಅ(ನಿ)–I/ತಾಂಸ(ದ)/3434/2024–25	ದಿನಾಂಕ:03.09.2024
3	ಸಕಾನಿಅ(ದ 1–3) ಉಪ ವಿಭಾಗದ ನಾರಾಯಣನಗರ ಸೇವಾ ಠಾಣೆ ವ್ಯಾಪ್ತಿಯ ಜೆಪಿ ನಗರ 9 ನೇ ಹಂತ 7 ನೇ ಬ್ಲಾಕ್, ಸೌಧಾಮಿನಿ ಲೇಔಟ್, ಕೋಣನಕುಂಟೆಯಲ್ಲಿ ಹಾಲಿ ಇರುವ 230ಮಿಮೀ ವ್ಯಾಸದ ಹೂಳು ತುಂಬಿರುವ ಒಳಚರಂಡಿ ಮಾರ್ಗವನ್ನು 400ಮಿಮೀ ವ್ಯಾಸದ ಆರ್‌ಸಿಸಿ, 300ಮಿಮೀ ಆರ್‌ಸಿಸಿ ಎನ್‌ಪಿ3 ಕೊಳವೆಮಾರ್ಗ ಮತ್ತು 230ಮಿಮೀ ವ್ಯಾಸದ ಜಿಎಸ್‌ಡಬ್ಲ್ಯೂ ಮಾರ್ಗಕ್ಕೆ ಬದಲಾಯಿಸುವುದು.	ರೂ. 214.43 ಲಕ್ಷಗಳು / ರೂ. 3.22 ಲಕ್ಷಗಳು
	ಸಂ: ಬೆಂ.ಜ.ಮಂ/ಪ್ರಮುಅ/ಮುಅ(ದ)/ಅಮುಅ(ದ)–I/ಉಮುಅ(ನಿ)–I/ತಾಂಸ(ದ)/3438/2024–25	ದಿನಾಂಕ:03.09.2024
4	ಸಕಾನಿಅ(ದ 1–1) ಉಪ ವಿಭಾಗದ ಅರೆಕೆರೆ ಮೈಕೋ ಲೇಔಟ್ ಸೇವಾ ಠಾಣೆ ವ್ಯಾಪ್ತಿಯ ಸಂತೃಪ್ತಿ ನಗರ, ನೃಪತುಂಗ ನಗರ, ಮಂಜುನಾಥ ಲೇಔಟ್, ನಟರಾಜ ಲೇಔಟ್, ಅರೆಕೆರೆ ಮೈಕೋ ಲೇಔಟ್, ವಾರ್ಡ್ ನಂ.195–ಕೋಣನಕುಂಟೆ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ 300ಮಿಮೀ ವ್ಯಾಸದ ಆರ್‌ಸಿಸಿ ಪೈಪ್‌ಲೈನ್ ಮತ್ತು 230ಮಿಮೀ ವ್ಯಾಸದ ಒಳಚರಂಡಿ ಕೊಳವೆಮಾರ್ಗವನ್ನು ಒದಗಿಸುವುದು ಮತ್ತು ಅಳವಡಿಸುವುದು.	ರೂ. 210.65 ಲಕ್ಷಗಳು / ರೂ. 3.16 ಲಕ್ಷಗಳು
	ಸಂ: ಬೆಂ.ಜ.ಮಂ/ಪ್ರಮುಅ/ಮುಅ(ದ)/ಅಮುಅ(ದ)–I/ಉಮುಅ(ನಿ)–I/ತಾಂಸ(ದ)/3449/2024–25	ದಿನಾಂಕ:03.09.2024
5	ಸಕಾನಿಅ(ದ 1–2) ಉಪ ವಿಭಾಗದ ಹೆಚ್‌ಎಸ್‌ಆರ್ ಲೇಔಟ್ ಸೇವಾ ಠಾಣೆ ವ್ಯಾಪ್ತಿಯ 6ನೇ ಸೆಕ್ಟರ್ ಹೆಚ್‌ಎಸ್‌ಆರ್ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹಳೆಯ 100ಮಿಮೀ ವ್ಯಾಸದ ಸಿಐ ನೀರು ಸರಬರಾಜು ಮಾರ್ಗವನ್ನು 100ಮಿಮೀ ವ್ಯಾಸದ ಡಿಐ ಮಾರ್ಗ ಆಗಿ ಬದಲಾಯಿಸುವುದು.	ರೂ. 207.26 ಲಕ್ಷಗಳು / ರೂ. 3.11 ಲಕ್ಷಗಳು

ಮೇಲಿನ ಎಲ್ಲಾ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **20.09.2024ರ ಮಧ್ಯಾಹ್ನ 3.00 ಗಂಟೆಯವರೆಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: **23.09.2024 ರ ಸಂಜೆ 4.00 ಗಂಟೆಯ ನಂತರ.**

ಸಹಿ/–
ಮುಖ್ಯ ಅಭಿಯಂತರರು(ದಕ್ಷಿಣ)

ಟೆಂಡರ್ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದಕ್ಕೆ ಸಂಬಂಧಿಸಿದ ವಿವರಗಳನ್ನು **https://kppp.karnataka.gov.in** ಗೆ ಭೇಟಿ ನೀಡುವ ಮೂಲಕ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ಮೇಲಿನ ಸಹಿದಾರರ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ವಾಸಾಸಂಇ/ವಾಪ್ರ/ಜಿಎ/1835/2024–25

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಳಗಾವಿ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಳಗಾವಿ.

E-MAIL ID:dobcmbelgaumm@gmail.com Telephone: 0831-2407221

ನಂ:ಜಿಹಿಎ/ಹೋಮಿಜಿ/ಸಿಆರ್– 05.06/2024–25 ದಿನಾಂಕ: 03–09–2024.

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೆಳಗಾವಿ ಜಿಲ್ಲೆಯ ಅಧೀನದಲ್ಲಿ ಬರುವ ವಿದ್ಯಾರ್ಥಿನಿಲಯಗಳು/ಆಶ್ರಮ ಶಾಲೆ/ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ 2024–25 ನೇ ಸಾಲಿನ ಹೊರಮೂಲ ಸಿಬ್ಬಂದಿ ಸೇವೆಯನ್ನು ಪೂರೈಸುವ ಏಜೆನ್ಸಿಗಳನ್ನು ಒಂದು ವರ್ಷದ ಮಟ್ಟಿಗೆ ಅಥವಾ ಮುಂದಿನ ಆದೇಶದ ವರೆಗೆ ಆಯ್ಕೆ ಮಾಡುವುದಕ್ಕಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, ಆಸಕ್ತ ಅರ್ಜಿದಾರರು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 03–10–2024 ವಾಗಿರುತ್ತದೆ. ವಿವರವನ್ನು ಇಲಾಖೆಯ ವೆಬ್ ಸೈಟ್:– https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ:0831–2407221 ನ್ನು ಸಂಪರ್ಕಿಸಬಹುದು.

ಸಹಿ/–ಜಿಲ್ಲಾ ಅಧಿಕಾರಿಗಳು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಳಗಾವಿ.

ಸಹಿ/–ಜಿಲ್ಲಾಧಿಕಾರಿಗಳು
ಬೆಳಗಾವಿ ಜಿಲ್ಲೆ, ಬೆಳಗಾವಿ

DIPR/BGM/RO-NO-755/KSMCA/2024-25

ಕರ್ನಾಟಕ ಸರ್ಕಾರ

ಪುರಸಭೆ ಕಾರ್ಯಾಲಯ ಬಸವನಬಾಗೇವಾಡಿ

ಕ್ರ.ಸಂ:ಪುಸಬಾ/ಲೋ.ವಿ/2024–25 ದಿನಾಂಕ:04.09.2024

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಮುಖಾಂತರ ಮಾತ್ರ)

ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ ಬಸವನ ಬಾಗೇವಾಡಿ ಪುರಸಭೆ ವ್ಯಾಪ್ತಿಯಲ್ಲಿ ಸನ್ 2023–24 ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನದಡಿಯಲ್ಲಿ 1 ಸಂಖ್ಯೆ ಪ್ಯಾಕೇಜಿನ ಕಾಮಗಾರಿಗಳನ್ನು ಟೆಂಡರ ಕರೆಯಲಾಗಿದ್ದು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಸಿವ್ಹಿಲ್ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಬಿಡ್‌ದಾರರು ಟೆಂಡರ್‌ಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್ at https://kppp.karnataka.gov.in ಕಿಲ್ಲೇರಿ (ಇಎಂಡಿ) ಮತ್ತು ಟೆಂಡರ್ ಫೀಸ್‌ಗಳನ್ನು ಕೆಪಿಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿದಂತೆ ಪಾವತಿಸಿ ಭಾಗವಹಿಸಬಹುದಾಗಿದೆ. ಪ್ಯಾಕೇಜ್ ಇಂಡೆಂಟ್ ಈ ಕೆಳಗಿನಂತಿವೆ.

1) DMA/2024-25/BD/WORK_INDENT28353
1) ಟೆಂಡರ್ ಪ್ರಿ ಬಿಡ್ ಮೀಟಿಂಗ್ **ದಿನಾಂಕ: 20.09.2024** ರ ಸಂಜೆ 4.00 ಗಂಟೆವರೆಗೆ.
2) ಟೆಂಡರ್ ಕುರಿತು ಆಕ್ಷೇಪಣೆಗಾಗಿ ಕೊನೆಯ **ದಿನಾಂಕ: 23.09.2024** ರಂದು ಸಂಜೆ 4.00 ಗಂಟೆಯವರೆಗೆ.
3) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 25.09.2024** ರಂದು ಸಂಜೆ 5.00 ಗಂಟೆಯವರೆಗೆ.
4) ಟೆಂಡರ್ ತಾಂತ್ರಿಕವಾಗಿ ತೆರೆಯುವ **ದಿನಾಂಕ: 27.09.2024** ರಂದು ಬೆಳಿಗ್ಗೆ 11.0 ಗಂಟೆವರೆಗೆ.
5) ಟೆಂಡರ್ ಆರ್ಥಿಕವಾಗಿ ತೆರೆಯುವ **ದಿನಾಂಕ: 30.09.2024** ರಂದು ಬೆಳಿಗ್ಗೆ 11.0 ಗಂಟೆವರೆಗೆ.ನಿಗದಿಪಡಿಸಲಾಗಿದೆ.

ಸಹಿ/– ಮುಖ್ಯಾಧಿಕಾರಿ,
ಪುರಸಭೆ
ಬಸವನಬಾಗೇವಾಡಿ

ಸಹಿ/– ಆಡಳಿತಾಧಿಕಾರಿಗಳು,
ಪುರಸಭೆ
ಬಸವನಬಾಗೇವಾಡಿ

ವಾಸಾಸಂಇ/ವಿಜಯಪುರ/225/ಕೆಎಸ್‌ಎಂಸಿಎ/2024–25

ನಗರಸಭಾ ಕಾರ್ಯಾಲಯ, ತಿಪಟೂರು

ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ, ದೂ: 08134–250785, E-mail:itstaff_ulb_tiptur@yahoo.co.in, www.tipturcity.mrc.gov.in

ನಂ.ನ.ಸ.ತಿ/ಕಂ.ಶಾ/ಸಿ.ಆರ್/ /2024–25 ದಿನಾಂಕ: 31.08.2024

ಟೆಂಡರ್/ಕೊಟೇಷನ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ಅಧ್ಯಾದೇಶ 1999 – 2000ರ ನಿಯಮಗಳಂತೆ ನಗರಸಭೆಯ ವಿವಿದ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅರ್ಹ ದರ್ಜೆಯ ಗುತ್ತಿಗೆದಾರರು ಗುತ್ತಿಗೆದಾರರಿಂದ ಹಾಗೂ ಸರಬರಾಜು ರವರುಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು KPPP Portal ವೆಬ್‌ಸೈಟ್‌ನಲ್ಲಿ (https://kppp. karnataka.gov.in) ಟೆಂಡರ್‌ಗಳನ್ನು ಸಲ್ಲಿಸಬಹುದು. (ಹೆಚ್ಚಿನ ಮಾಹಿತಿಗಳ ಅಗತ್ಯವಿದ್ದಲ್ಲಿ ಕಛೇರಿಯಿಂದ ಪಡೆಯಬಹುದು). ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಅಥವಾ ತಿದ್ದುಪಡಿ ಇದಲ್ಲಿ KPPP Portal ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು.

ಕ್ರ ಸಂ	ಇಂಡಂಟ್ ನಂಬರ್	ಅಂದಾಜು ಮೊತ್ತ ರೂ.ಲಕ್ಷ	ಇ.ಎಂ.ಡಿ ರೂಗಳಲ್ಲಿ	ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ	ಟೆಂಡರ್ ತೆರೆಯುವ ಕಡೆಯ ದಿನಾಂಕ
1	DMA/2024-25/OW/ WORK_INDENT28518 (ST)	4,35,000/-	5,438.00	18.09.2024	20.09.2024
2	DMA/2024-25/OW/ WORK_INDENT28525 (SC)	2,00,000/-	2,500.00	18.09.2024	20.09.2024
3	DMA/2024-25/OW/ WORK_INDENT28507 (SC)	3,29,000/-	4,113.00	18.09.2024	20.09.2024
4	DMA/2024-25/OW/ WORK_INDENT28514	10,00,000/-	25,000.00	18.09.2024	20.09.2024
5	DMA/2024-25/OW/ WORK_INDENT28541	1,82,000/-	4,550.00	18.09.2024	20.09.2024
6	DMA/2024-25/OW/ WORK_INDENT28549	5,54,000/-	13,850.00	18.09.2024	20.09.2024
7	DMA/2024-25/OW/ WORK_INDENT28556	13,66,000/-	34,150.00	18.09.2024	20.09.2024
8	DMA/2024-25/IND3283	4,72,000/-	11,800.00	18.09.2024	20.09.2024
9	DMA/2023-24/OW/WORK_INDENT4740/ CALL-2	7,00,000/-	17,500.00	18.09.2024	20.09.2024
10	DMA/2024-25/IND3250	5,00,000/-	12,500.00	18.09.2024	20.09.2024
11	DMA/2024-25/OW/WORK_INDENT29065	2,00,000/-	5,000.00	18.09.2024	20.09.2024

ಕರ್ನಾಟಕ ಪುರಸಭಾ ಕಾಯ್ದೆ 1964 ನಿಯಮ 347ರಂತೆ ಕೆಲಸ ನಿರ್ವಹಿಸಲು ಕೊಟೇಷನ್ ಆಹ್ವಾನಿಸಲಾಗಿದೆ.

1	ವಾರ್ಡ್ ನಂ. 23 ರ ಬೋವಿ ಶಾಲೆ ಪಕ್ಕದಲ್ಲಿ ಇರುವ ಆರ್.ಓ Plant ನ್ನು ದುರಸ್ಥಿ ಪಡಿಸಲು ಪರಿಶೀಲಿಸಿ ಕೊಟೇಷನ್ ಸಲ್ಲಿಸುವುದು.
2	ವಾರ್ಡ್ ನಂ. 27 ರ ವಿವೇಕಾನಂದನಗರದಲ್ಲಿ ಇರುವ ಆರ್.ಓ Plant ನ್ನು ದುರಸ್ಥಿ ಪಡಿಸಲು ಪರಿಶೀಲಿಸಿ ಕೊಟೇಷನ್ ಸಲ್ಲಿಸುವುದು.
3	ವಾರ್ಡ್ ನಂ. 13 ರ ಕೆ.ಹೆಚ್.ಬಿ ಕಾಲೋನಿಯಲ್ಲಿ ಇರುವ ಆರ್.ಓ Plant ನ್ನು ದುರಸ್ಥಿ ಪಡಿಸಲು ಪರಿಶೀಲಿಸಿ ಕೊಟೇಷನ್ ಸಲ್ಲಿಸುವುದು.
4	ಈಡೇನಹಳ್ಳಿ ವೆಟ್‌ವಲ್ ಪಂಪ್‌ಹೌಸ್‌ನ ಮೋಟಾರ್ ಪಂಪ್‌ಗಳ 2 ಸಂಖ್ಯೆ 60 ಹೆಚ್.ಪಿ Soft Starters ಗಳನ್ನು ದುರಸ್ಥಿ ಪಡಿಸಲು ಪರಿಶೀಲಿಸಿ ಕೊಟೇಷನ್ ಸಲ್ಲಿಸುವುದು.
5	ವಾರ್ಡ್ ನಂ. 17 ಗಾಂಧಿ ಪಾರ್ಕ್ ಒಳಗಡೆ ಮಕ್ಕಳ ಆಟಿಕೆ ಸಾಮಾಗ್ರಿಗಳನ್ನು ಅಳವಡಿಸಲು ಕೊಟೇಷನ್ ಸಲ್ಲಿಸುವುದು

ಸೂಚನೆ: ಕೊಟೇಷನ್ ಪ್ರಕಟಣೆಯು ದಿನಪತ್ರಿಕೆಯಲ್ಲಿ ಪ್ರಕಟಣೆ ಆದ 7 ದಿನಗಳ ಒಳಗೆ ಸಂಜೆ 5.30 ರ ಒಳಗೆ ಹಾಗೂ ಕೊನೆಯ ದಿನ ಸರ್ಕಾರಿ ರಜೆ ಬಂದಲ್ಲಿ ಮುಂದಿನ ದಿನ ಕಚೇರಿಗೆ ಕೊಟೇಷನ್ ಸಲ್ಲಿಸುವುದು.

DIPR/TUM/304/KSMCA/2024-25 ಸಹಿ/– ಪೌರಾಯುಕ್ತರು, ನಗರಸಭೆ, ತಿಪಟೂರು.

ಸಾರಿಗೆ ಇಲಾಖೆ

ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ,
ಬೆಂಗಳೂರು (ಉತ್ತರ), ಯಶವಂತಪುರ, ಬೆಂಗಳೂರು

ಸಾರಿಗೆ ಇಲಾಖೆ TRANSPORT DEPARTMENT

ಸಂ.: ಪ್ರಾಸಾಅ/ಬೆಂ(ಉ)/ಹರಾಜು/2024–25 ದಿನಾಂಕ: 02.09.2024

ಟೆಂಡರ್ ಕಂ ಸಾರ್ವಜನಿಕ ಬಹಿರಂಗ ಹರಾಜು ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಕಂಡ ಮೋಟಾರು ವಾಹನಗಳನ್ನು ತನಿಖಾ ಸಿಬ್ಬಂದಿಯವರು ತನಿಖೆಗೆ ಒಳಪಡಿಸಿರುವಾಗ, ತೆರಿಗೆ ಪಾವತಿಸದ ಪುರಾವೆಗಳನ್ನು ಹಾಗು ಇನ್ನಿತರ ಮೂಲ ದಾಖಲಾತಿಗಳನ್ನು ಹಾಜರುಪಡಿಸದೇ ಇರುವ ಕಾರಣ ಸದರಿ ವಾಹನಗಳನ್ನು ಮುಟ್ಟುಗೋಲು ಹಾಕಿಕೊಂಡು ಸುರಕ್ಷತೆಗಾಗಿ ಯಶವಂತಪುರ ಬಿ.ಎಂ.ಟಿ.ಸಿ. ಡಿಪೋ ಹಾಗೂ ಪೀಣ್ಯ ಡಿ.ಎಲ್. ಟ್ರ್ಯಾಕ್ ಆವರಣಗಳಲ್ಲಿ ನಿಲುಗಡೆ ಮಾಡಲಾಗಿದೆ. ತೆರಿಗೆ ಪಾವತಿಸಿದ ದಾಖಲೆಗಳೊಂದಿಗೆ ವಾಹನ ಚಾಲಕರಾಗಲೀ, ಇಲ್ಲವೇ ಮಾಲೀಕರಾಗಲೀ ಅಥವಾ ಹಣಕಾಸು ನೆರವುದಾರರಾಗಲೀ (HPA) ಈ ಕಛೇರಿಗೆ ಹಾಜರಾಗಿ ವಾಹನಗಳನ್ನು ಬಿಡುಗಡೆಮಾಡಿಕೊಳ್ಳಲು ಮುಂದೆ ಬಂದಿರುವುದಿಲ್ಲ. ದೀರ್ಘ ಕಾಲದಿಂದ ವಾಹನಗಳನ್ನು ಬಿಡುಗಡೆ ಮಾಡಿಸಿಕೊಂಡು ಹೋಗದೆ ಇರುವುದರಿಂದ ಈ ಕೆಳಕಂಡ ವಾಹನಗಳನ್ನು ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆ ಸೆಕ್ಷನ್–11 (ಎ) (2)ರ ಅನ್ವಯ ಕ್ರಮ ಸಂಖ್ಯೆ 1 ರಿಂದ 27ರ ವರೆಗಿನ ವಾಹನಗಳನ್ನು ಬಹಿರಂಗ ಹರಾಜುಮಾಡಿ ಬಾಕಿ ಇರುವ ತೆರಿಗೆ ಹಾಗೂ ದಂಡವನ್ನು ಸರ್ಕಾರಕ್ಕೆ ಜಮಾ ಮಾಡಬೇಕಾಗಿರುವುದರಿಂದ ಈ ಕೆಳಕಂಡ ವಾಹನಗಳನ್ನು ಬಹಿರಂಗ ಹರಾಜಿನಲ್ಲಿ ವಿಲೇವಾರಿ ಮಾಡಲು ಈ ಪ್ರಕಟಣೆ ನೀಡಲಾಗಿದೆ.

ಹರಾಜು ನಡೆಯುವ ಸ್ಥಳ: ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಬೆಂಗಳೂರು (ಉತ್ತರ), ಯಶವಂತಪುರ, ಬೆಂಗಳೂರು ಇಲ್ಲಿ ದಿನಾಂಕ: 24.09.2024ರಂದು ಪೂರ್ವಾಹ್ನ 11:00 ಗಂಟೆಗೆ.

ಕ್ರ. ಸಂ.	ವಾಹನ ಸಂಖ್ಯೆ	ವಾಹನ ವರ್ಗ	ವಾಹನ ನಿಲುಗಡೆಯ ಸ್ಥಳ	ಬಾಕಿ ದಂಡ / ತೆರಿಗೆ ಮೊತ್ತ ರೂ.ಗಳಲ್ಲಿ	ಷರಾ
1	KA527696	MGV	ಪೀಣ್ಯಾ ಡಿ.ಎಲ್. ಟ್ರಾಕ್	67,661/-	ಮರು ನೋಂದಣಿ
2	KA05B4167	MAXI CAB	ಪೀಣ್ಯಾ ಡಿ.ಎಲ್. ಟ್ರಾಕ್	6,000/-	ನಿಶ್ಕ್ರಿಯಗೊಳಿಸಲು
3	KA04AA6735	MAXI CAB	ಪೀಣ್ಯಾ ಡಿ.ಎಲ್. ಟ್ರಾಕ್	56,730/-	ಮರು ನೋಂದಣಿ
4	KA04MG6964	MAXI CAB	ಪೀಣ್ಯಾ ಡಿ.ಎಲ್. ಟ್ರಾಕ್	1,07,890/-	ಮರು ನೋಂದಣಿ
5	KA06C2056	MAXI CAB	ಪೀಣ್ಯಾ ಡಿ.ಎಲ್. ಟ್ರಾಕ್	58,581/-	ಮರು ನೋಂದಣಿ
6	KA05D0706	MGV	ಪೀಣ್ಯಾ ಡಿ.ಎಲ್. ಟ್ರಾಕ್	48,669/-	ನಿಶ್ಕ್ರಿಯಗೊಳಿಸಲು
7	KA01AC5471	M/CAB	ಪೀಣ್ಯಾ ಡಿ.ಎಲ್. ಟ್ರಾಕ್	19,894/-	ಮರು ನೋಂದಣಿ
8	KA501288	M/CAB	ಪೀಣ್ಯಾ ಡಿ.ಎಲ್. ಟ್ರಾಕ್	64,902/-	ನಿಶ್ಕ್ರಿಯಗೊಳಿಸಲು
9	KA05AC2010	A/R	ಪೀಣ್ಯಾ ಡಿ.ಎಲ್. ಟ್ರಾಕ್	20,000/-	ಮರು ನೋಂದಣಿ
10	KA01A5379	EIB	ಪೀಣ್ಯಾ ಡಿ.ಎಲ್. ಟ್ರಾಕ್	22,272/-	ನಿಶ್ಕ್ರಿಯಗೊಳಿಸಲು
11	KA03AB5070	M/CAB	ಪೀಣ್ಯಾ ಡಿ.ಎಲ್. ಟ್ರಾಕ್	26,992/-	ಮರು ನೋಂದಣಿ
12	KA03A3067	A/R	ಪೀಣ್ಯಾ ಡಿ.ಎಲ್. ಟ್ರಾಕ್	8,850/-	ನಿಶ್ಕ್ರಿಯಗೊಳಿಸಲು
13	KA05AE9484	MAXI CAB	ಪೀಣ್ಯಾ ಡಿ.ಎಲ್. ಟ್ರಾಕ್	13,500/-	ಮರು ನೋಂದಣಿ
14	KA03B2461	A/R	ಪೀಣ್ಯಾ ಡಿ.ಎಲ್. ಟ್ರಾಕ್	12,000/-	ನಿಶ್ಕ್ರಿಯಗೊಳಿಸಲು
15	KA02 AB 7873	M/CAB	ಪೀಣ್ಯಾ ಡಿ.ಎಲ್. ಟ್ರಾಕ್	48,564/-	ಮರು ನೋಂದಣಿ
16	KA06A5905	LGV	ಪೀಣ್ಯಾ ಡಿ.ಎಲ್. ಟ್ರಾಕ್	17,500/-	ನಿಶ್ಕ್ರಿಯಗೊಳಿಸಲು
17	KA419432	MAXI CAB	ಪೀಣ್ಯಾ ಡಿ.ಎಲ್. ಟ್ರಾಕ್	56,730/-	ಮರು ನೋಂದಣಿ
18	KA04ED4034	2W	ಪೀಣ್ಯಾ ಡಿ.ಎಲ್. ಟ್ರಾಕ್	3,500/-	ನಿಶ್ಕ್ರಿಯಗೊಳಿಸಲು
19	KA02B6724	A/R	ಬಿ.ಎಂ.ಟಿ.ಸಿ. ಡಿಪೋ, ಯಶವಂತಪುರ	7,950/-	ನಿಶ್ಕ್ರಿಯಗೊಳಿಸಲು
20	KA047697	A/R	ಬಿ.ಎಂ.ಟಿ.ಸಿ. ಡಿಪೋ, ಯಶವಂತಪುರ	8,100/-	ನಿಶ್ಕ್ರಿಯಗೊಳಿಸಲು
21	KA05AB7756	A/R	ಬಿ.ಎಂ.ಟಿ.ಸಿ. ಡಿಪೋ, ಯಶವಂತಪುರ	8,600/-	ನಿಶ್ಕ್ರಿಯಗೊಳಿಸಲು
22	KA25A5530	A/R	ಬಿ.ಎಂ.ಟಿ.ಸಿ. ಡಿಪೋ, ಯಶವಂತಪುರ	8,850/-	ನಿಶ್ಕ್ರಿಯಗೊಳಿಸಲು
23	KA03B4278	A/R	ಬಿ.ಎಂ.ಟಿ.ಸಿ. ಡಿಪೋ, ಯಶವಂತಪುರ	11,850/-	ನಿಶ್ಕ್ರಿಯಗೊಳಿಸಲು
24	KA02B9061	A/R	ಬಿ.ಎಂ.ಟಿ.ಸಿ. ಡಿಪೋ, ಯಶವಂತಪುರ	2,100/-	ನಿಶ್ಕ್ರಿಯಗೊಳಿಸಲು
25	KA05B4589	A/R	ಬಿ.ಎಂ.ಟಿ.ಸಿ. ಡಿಪೋ, ಯಶವಂತಪುರ	8,850/-	ನಿಶ್ಕ್ರಿಯಗೊಳಿಸಲು
26	KA05A0964	A/R	ಬಿ.ಎಂ.ಟಿ.ಸಿ. ಡಿಪೋ, ಯಶವಂತಪುರ	3,850/-	ನಿಶ್ಕ್ರಿಯಗೊಳಿಸಲು
27	KA02B6469	A/R	ಬಿ.ಎಂ.ಟಿ.ಸಿ. ಡಿಪೋ, ಯಶವಂತಪುರ	8,100/-	ನಿಶ್ಕ್ರಿಯಗೊಳಿಸಲು

ಮೇಲ್ಕಂಡ ವಾಹನಗಳು ಎಲ್ಲಿದೆಯೋ, ಹೇಗಿದೆಯೋ ಅದೇ ಸ್ಥಿತಿಯಲ್ಲಿ ದಿನಾಂಕ: **24.09.2024** ರಂದು ಈ ಕಛೇರಿಯಲ್ಲಿ **ಪೂರ್ವಾಹ್ನ 11:00 ಗಂಟೆಗೆ** ಹರಾಜು ಮಾಡಲಾಗುವುದು, ಈ ಹರಾಜಿನಲ್ಲಿ ಭಾಗವಹಿಸಲು ಆಸಕ್ತಿ ಉಳ್ಳವರು ವಾಹನ ಇರುವ ಸ್ಥಳದಲ್ಲಿಯೇ ಪರಿಶೀಲಿಸಿ ಬಹಿರಂಗ ಹರಾಜಿನಲ್ಲಿ ಕಛೇರಿಯಲ್ಲಿ ಭಾಗವಹಿಸಬಹುದು.

ಹರಾಜಿನ ಷರತ್ತುಗಳು ಮತ್ತು ನಿಬಂಧನೆಗಳು: (1) ದಿನಾಂಕ: **24.09.2024 ರಂದು ಪೂರ್ವಾಹ್ನ 11:00 ಗಂಟೆಗೆ** ಪ್ರಾರಂಭವಾಗುವ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ದಿನಾಂಕ: **23.09.2024 ರಂದು ಅಪರಾಹ್ನ 3:00 ರಿಂದ 5:30** ರೊಳಗೆ ತಮ್ಮ ಹೆಸರುಗಳನ್ನು **ರೂ. 25,000/–** ರಂತೆ ಪ್ರತ್ಯೇಕವಾಗಿ ಮುಂಗಡ ಇಎಂಡಿ ಮೊತ್ತವನ್ನು **ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬೆಂಗಳೂರು(ಉತ್ತರ)** ಇವರಿಗೆ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಡೆದ ಡಿಡಿ ಮೂಲಕ ಪಾವತಿ ಮಾಡಿ ತಮ್ಮ ಹೆಸರು ಮತ್ತು ಜೆ.ಎಸ್.ಟಿ / ಫೋಟೋ ಐಡಿ ಹೊಂದಿರುವ ವಿಳಾಸದ ವಿವರಗಳನ್ನು ನೋಂದಾಯಿಸಿ ಹರಾಜಿನಲ್ಲಿ ಭಾಗವಹಿಸಬಹುದು. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ದಿನಾಂಕ:**24.09.2024**ರ **ಪೂರ್ವಾಹ್ನ 10:30** ರಿಂದ ಹರಾಜು ಪ್ರಕ್ರಿಯೆ ಪ್ರಾರಂಭವಾಗುವವರೆಗೆ ಪ್ರತಿ ವಾಹನಕ್ಕೆ ಪ್ರತ್ಯೇಕವಾಗಿ ಬಿಡ್ ಸಲ್ಲಿಸಬಹುದುಗಿದ್ದು ಸಲ್ಲಿಸಲಾಗುವ ಪ್ರತಿಯೊಂದು ವಾಹನದ ಬಿಡ್‌ನ ಜೊತ ಬಿಡ್‌ನಲ್ಲಿ ನಮೂದಿಸಿರುವ ಶೇಕಡ 25% ಕ್ಕಿಂತ ಮೇಲ್ಪಟ್ಟ ಮೊತ್ತದ ಡಿ.ಡಿ.ಯನ್ನು **ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬೆಂಗಳೂರು(ಉತ್ತರ)** ರವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಡೆದು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವುದು. (2) ಬಿಡ್ಡುದಾರರು ಕಡ್ಡಾಯವಾಗಿ ನಮ್ಮ ಭಾವಚಿತ್ರ ಇರುವ ಗುರುತಿನ ಚೀಟಿ, ಮೊಬೈಲ್ ಸಂಖ್ಯೆ ಹಾಗೂ ವಿಳಾಸ ಪುರಾವೆಯನ್ನು ಹಾಜರುಪಡಿಸುವುದು. (3) ಯಶಸ್ವಿ ಬಿಡ್‌ದಾರರು ಹರಾಜು ಮೌಲ್ಯದ ಶೇಕಡ 50% ರಷ್ಟು ಹಣವನ್ನು ಸ್ಥಳದಲ್ಲಿಯೇ ಪಾವತಿಸಬೇಕು ಮತ್ತು ಉಳಿದ ಹಣವನ್ನು ಹರಾಜು ದಿನಾಂಕ ದಿಂದ 07 ದಿನಗಳ ಒಳಗಾಗಿ ಸಂದಾಯ ಮಾಡಿ ಹಾಗೂ GST ಅನ್ನು ತಮ್ಮ GSTTIN ನಂಬರಿಗೆ ಪಾವತಿಸಿ, ತಮ್ಮ ಸ್ವಂತ ಖರ್ಚಿನಿಂದ ವಾಹನವನ್ನು ಸುಪರ್ದಿಗೆ ಪಡೆಯುವುದು, ತಪ್ಪಿದಲ್ಲಿ ಪಾವತಿಸಿದ ಶೇಕಡ 50/– ರಷ್ಟು ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (4) ವಾಹನಗಳನ್ನು ಮೇಲ್ಕಾಣಿಸಿದ ಜಾಗದಲ್ಲಿ ನಿಲುಗಡೆ ಮಾಡಲಾಗಿದ್ದು ಕಛೇರಿಯ ಕೆಲಸದ ವೇಳೆಯಲ್ಲಿ ಪರಿಶೀಲಿಸಬಹುದು, (5) ಖರೀದಿಸಿದ ವಾಹನದ ದಾಖಲಾತಿಗಳ ಶುಲ್ಕ, ತೆರಿಗೆ ಇತ್ಯಾದಿಗಳನ್ನು ಬಿಡ್‌ದಾರರೇ ಭರಿಸತಕ್ಕದ್ದು, (6) ಬಿಡ್‌ದಾರರು ವಾಹನ ಖರೀದಿಸಿದ ಮೌಲ್ಯಕ್ಕೆ ನಿಯಮಾನುಸಾರ GST ಮತ್ತಿತರ ಯಾವುದೇ ತೆರಿಗೆ ಶುಲ್ಕ ಭರಿಸತಕ್ಕದ್ದು. (7) ವಿಲೇವಾರಿ ಮಾಡುವ ವಾಹನಗಳು ಎಲ್ಲಿವೆಯೋ, ಹೇಗಿವೆಯೋ, ಹಾಗೇ ಅದೇ ಯಾಂತ್ರಿಕ ಸ್ಥಿತಿಯಲ್ಲಿ ಹರಾಜು ಮಾಡಲಾಗುವುದು. (8) ನೋಂದಣಿಯಾಗದೇ/ವರ್ಗಾವಣೆಗಾಗಿ ಇರುವ ವಾಹನಗಳನ್ನು ಬಿಡ್ಡುದಾರರು ಬಿಡ್ಡು ಮೊತ್ತವನ್ನು ಪಾವತಿಸಿದ ನಂತರ ನಿಯಮಾನುಸಾರ ಮೂಲ ಇನ್ವಾಯ್ಸ್ ನಂತೆ ತೆರಿಗೆ, ಸೆಸ್, ದಂಡ ಪಾವತಿಸುವುದರೊಂದಿಗೆ ಹರಾಜಿನ ಬಿಡ್ ಮೊತ್ತವನ್ನು ಸಹ ಭರಿಸಿ ನೋಂದಾಯಿಸಿಕೊಳ್ಳಬೇಕಾಗುತ್ತದೆ/ ವರ್ಗಾವಣೆ ಮಾಡಿಕೊಳ್ಳಬೇಕಾಗಿರುತ್ತದೆ. (9) ಹರಾಜು ಪ್ರಕ್ರಿಯೆ ನಡೆಯುವ ಸಮಯದಲ್ಲಿ ಸಂಬಂಧಪಟ್ಟ ವಾಹನಗಳ ಮಾಲೀಕರು ಅಥವಾ ಆರ್ಥಿಕ ನೆರವುದಾರರು ತೆರಿಗೆ ಮತ್ತು ದಂಡ ಪಾವತಿಸಿದರೆ ಅಂತಹ ವಾಹನಗಳನ್ನು ಹರಾಜಿನಿಂದ ಕೈ ಬಿಡಲಾಗುವುದು. (10) ಹರಾಜಿನಲ್ಲಿ ಯಾವುದೇ ಸವಾಲನ್ನು ಅಂಗೀಕರಿಸುವ/ಮುಂದೂಡುವ ರದ್ದು ಪಡಿಸುವ/ತಿರಸ್ಕರಿಸುವ ತೀರ್ಮಾನ ನಿರ್ಧಾರವನ್ನು ತೆಗೆದುಕೊಳ್ಳಲು ಪ್ರಾದೇಶಿಕ ಸಾರಿಗೆ ಅಧಿಕಾರಿ, ಬೆಂಗಳೂರು (ಉತ್ತರ) 560022 ರವರು ಅಧಿಕಾರ ಹೊಂದಿರುತ್ತಾರೆ. (11) ನಿಶ್ಚಿಯೆಗೊಳಿಸುವ ವಾಹನಗಳನ್ನು ಅಧಿಕಾರಿಗಳ ಸಮ್ಮುಖದಲ್ಲಿಯೇ ತುಂಡರಿಸಿದ ನಂತರ ಬಿಡ್ಡುದಾರರು ಪಡೆದುಕೊಳ್ಳುವುದು. ಈ ಸಂಬಂಧ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಅಧಿಕಾರಿಗಳನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 080–23376039, 9449864004

ಸಹಿ/–
ಪ್ರಾದೇಶಿಕ ಸಾರಿಗೆ ಅಧಿಕಾರಿ, ಬೆಂಗಳೂರು (ಉತ್ತರ)
ಯಶವಂತಪುರ, ಬೆಂಗಳೂರು–560022

ವಾಸಾಸಂಇ/ವಾಪ್ರ/ಎಲ್‌ಸಿ/1836/2024–25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ತಮ್ಮ ಕೆಲಸವನ್ನು ಚೆನ್ನಾಗಿ ಮಾಡಬೇಕೆಂದು ಬಯಸುವವರು, ಮೊದಲು ಅದಕ್ಕೆ ಸಂಬಂಧಿಸಿದ ಹತಾರಗಳನ್ನು ಸಿದ್ಧಪಡಿಸಿಕೊಳ್ಳಬೇಕು.

–ಕನ್‌ಫ್ಯೂಷಿಯಸ್

ಮಣಿಪುರದಲ್ಲಿ ಸಂಘರ್ಷ ತೀವ್ರ ಮರೀಚಿಕೆಯಾದ ಸಹಜ ಜೀವನ

ಮಣಿಪುರದಲ್ಲಿನ ಸಂಘರ್ಷವು ಈಚಿನ ಕೆಲವು ತಿಂಗಳಲ್ಲಿ ಕಂಡಿದ್ದಕ್ಕಿಂತ ಈಗ ತೀವ್ರಗೊಂಡಿದೆ. ಉಗ್ರಗಾಮಿಗಳು ಅಲ್ಲಿ ನಾಗರಿಕ ಪ್ರದೇಶಗಳ ಮೇಲೆ ರಾಕೆಟ್‌ಚಾಲಿತ ಗ್ರೆನೇಡ್‌ಗಳನ್ನು (ಆರ್‌ಪಿಜಿ) ಮತ್ತು ಅತ್ಯಾಧುನಿಕ ಡ್ರೋನ್‌ಗಳನ್ನು ಬಳಸಿ ದಾಳಿ ನಡೆಸಿದ್ದಾರೆ. ಶಂಕಿತ ಕುಕಿ ಉಗ್ರರು ಇಂಫಾಲ್ ಪಶ್ಚಿಮ ಜಿಲ್ಲೆಯಲ್ಲಿ ಇರುವ ಮೈತೇಯಿ ಸಮುದಾಯದವರ ಗ್ರಾಮವೊಂದರ ಮೇಲೆ ಭಾನುವಾರ ಬಾಂಬ್ ದಾಳಿ ನಡೆಸಿದ್ದಾರೆ. ಇದು ಕುಕಿ ಸಮುದಾಯದವರು ಬಹುಸಂಖ್ಯೆಯಲ್ಲಿ ಇರುವ ಕಾಂಗ್‌ಪೋಕ್‌ಪಿ ಜಿಲ್ಲೆಯ ಗಡಿಗೆ ಸನಿಹದಲ್ಲಿ ಇದೆ. ಈ ದಾಳಿಯಲ್ಲಿ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ, ಕೆಲವರಿಗೆ ಗಾಯಗಳಾಗಿವೆ. ಜಿಲ್ಲೆಯ ಇನ್ನೊಂದು ಪ್ರದೇಶದಲ್ಲಿ ಇದೇ ರೀತಿಯಲ್ಲಿ ಮಂಗಳವಾರ ಬಾಂಬ್ ದಾಳಿ ನಡೆದಿದೆ. ಅಲ್ಲದೆ, ಗುಂಡಿನ ಚಕಮಕಿ ನಡೆದ ವರದಿಗಳೂ ಇವೆ. ದಾಳಿ ನಡೆಸಲು ಆರ್‌ಪಿಜಿ ಹಾಗೂ ಡ್ರೋನ್‌ಗಳನ್ನು ಬಳಸಿರುವುದರ ಪರಿಣಾಮವಾಗಿ, ರಾಜ್ಯದಲ್ಲಿನ ಸಂಘರ್ಷವು ಕದನ ಭೂಮಿಯಲ್ಲಿನ ಸಂಘರ್ಷದಂತೆ ಗೋಚರಿಸುವಂತಾಗಿದೆ. ನೆರೆಯ ಮ್ಯಾನ್ಮಾರ್‌ನಲ್ಲಿ ಸೇನಾ ಆಡಳಿತ ಹಾಗೂ ಬಂಡುಕೋರರ ನಡುವೆ ಸಂಘರ್ಷ ನಡೆಯುತ್ತಿದೆ. ಇನ್ನೊಂದು ನೆರೆ ದೇಶ ಬಾಂಗ್ಲಾದಲ್ಲಿಯೂ ಪರಿಸ್ಥಿತಿ ಬಹಳ ಬಿಗುವಿನಿಂದ ಕೂಡಿದೆ. ಮಣಿಪುರದಲ್ಲಿ ನಡೆದಿರುವ ದಾಳಿಗಳ ಹಿಂದೆ ತರಬೇತಿ ಪಡೆದಿರುವ, ತಾಂತ್ರಿಕ ಪರಿಣತಿ ಹೊಂದಿರುವ ವ್ಯಕ್ತಿಗಳ ಪಾತ್ರ ಇರುವುದನ್ನು ಮಣಿಪುರ ಪೊಲೀಸರು ಗುರುತಿಸಿದ್ದಾರೆ. ಯುದ್ಧಭೂಮಿಯಲ್ಲಿ ನಡೆಯುವಂತಹ ಸ್ವರೂಪದ ಸಂಘರ್ಷವು ಇನ್ನಷ್ಟು ಪ್ರದೇಶಗಳಿಗೆ ವಿಸ್ತರಣೆ ಕಂಡಿದ್ದೇ ಆದಲ್ಲಿ, ಪರಿಸ್ಥಿತಿಯನ್ನು ನಿಯಂತ್ರಿಸುವುದು ಬಹಳ ಕಷ್ಟದ ಕೆಲಸವಾಗಲಿದೆ.

ರಾಜ್ಯದಲ್ಲಿ ಪರಿಸ್ಥಿತಿಯು ಸಹಜ ಸ್ಥಿತಿಗೆ ಮರಳುತ್ತಿದೆ ಎಂಬ ಹೇಳಿಕೆಗಳಿಗೆ ಆಧಾರ ಇಲ್ಲ ಎಂದು ಅನ್ನಿಸುತ್ತಿದೆ. ಜನರ ಜೀವನವು ಇನ್ನಷ್ಟು ಹೆಚ್ಚು ಸಂಘರ್ಷದ ಸ್ಥಿತಿಯತ್ತ ಜಾರುತ್ತಿದೆ

ಮುಂದಿನ ಆರು ತಿಂಗಳಲ್ಲಿ ರಾಜ್ಯದಲ್ಲಿ ಶಾಂತಿ ಮರುಸ್ಥಾಪನೆ ಆಗಲಿದೆ ಎಂದು ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರು ಕಳೆದ ವಾರವಷ್ಟೇ ಹೇಳಿದ್ದರು. ತಾವು ರಾಜ್ಯದ ಎಲ್ಲ ಸಮುದಾಯಗಳ ನಾಯಕ ಎಂದೂ ರಾಜ್ಯವನ್ನು ಮತ್ತು ರಾಜ್ಯದ ಜನರನ್ನು ರಕ್ಷಿಸುವುದು ತಮ್ಮ ಕರ್ತವ್ಯವೆಂದೂ ಅವರು ಹೇಳಿದ್ದರು. ಆದರೆ ಈಗಿನ ಘಟನೆಗಳು, ಜನರ ಜೀವ ಹಾಗೂ ಆಸ್ತಿಯನ್ನು ರಕ್ಷಿಸುವಲ್ಲಿ ಅವರು ವಿಫಲರಾಗಿದ್ದಾರೆ ಎಂಬುದನ್ನು ತೋರಿಸಿಕೊಟ್ಟಿವೆ. ಕಳೆದ ವರ್ಷದ ಮೇ 3ರಂದು ಹಿಂಸಾಚಾರ ಶುರುವಾದಾಗಿನಿಂದ ನಡೆದಿರುವ ಹಲವು ಘಟನೆಗಳಲ್ಲಿಯೂ ಈ ವೈಫಲ್ಯವು ಎದ್ದುಕಂಡಿದೆ. ಕೆಲವು ಪ್ರದೇಶಗಳಲ್ಲಿ ಹಿಂಸಾಚಾರ ನಡೆಯುತ್ತಿರುವ ಹಾಗೂ ಅದು ಇತರ ಪ್ರದೇಶಗಳಿಗೂ ವಿಸ್ತರಿಸುವ ಅಪಾಯ ಇರುವ ಕಾರಣಕ್ಕೆ, ಆಡಳಿತಾರೂಢ ಬಿಜೆಪಿಯಲ್ಲಿನ ಒಂದು ವರ್ಗವು ರಾಜ್ಯದಲ್ಲಿನ ಕೇಂದ್ರೀಯ ಪಡೆಗಳನ್ನು ಹಿಂದಕ್ಕೆ ಕರೆಸಿಕೊಳ್ಳಬೇಕು ಹಾಗೂ ಭದ್ರತಾ ಪಡೆಗಳ ನಿಯಂತ್ರಣ ಅಧಿಕಾರವನ್ನು ಮುಖ್ಯಮಂತ್ರಿ ಕಚೇರಿಗೆ ನೀಡಬೇಕು ಎಂಬ ಆಗ್ರಹವನ್ನು ಮಂಡಿಸಿದೆ. ಈ ರೀತಿ ಆದಲ್ಲಿ ಎದುರಾಗಬಹುದಾದ ಪರಿಸ್ಥಿತಿಯನ್ನು ಬಹಳ ಸುಲಭವಾಗಿ ಊಹಿಸಿಕೊಳ್ಳಬಹುದು. ಏಕೆಂದರೆ, ಮುಖ್ಯಮಂತ್ರಿಯವರೇ ಆ ರಾಜ್ಯದಲ್ಲಿನ ಸಮಸ್ಯೆಯ ಒಂದು ಭಾಗ ಎಂದು ಪರಿಗಣಿಸಲಾಗಿದೆ.

ಮುಖ್ಯಮಂತ್ರಿಯವರು ನೇಮಕ ಮಾಡಿದ್ದ ದೂತರು ನಡೆಸಿದ ಮಾತುಕತೆಯಲ್ಲಿ ಮಹತ್ವದ ಬೆಳವಣಿಗೆ ಆಗಿದೆ ಎಂದು ಹೇಳಲಾಗಿತ್ತು. ಆದರೆ, ಈಗ ಸಂಘರ್ಷವು ತೀವ್ರಗೊಂಡಿರುವುದನ್ನು ಹಾಗೂ ಹಿಂಸಾಚಾರವು ಉಲ್ಬಣಿಸಿರುವುದನ್ನು ಗಮನಿಸಿದರೆ, ರಾಜ್ಯದಲ್ಲಿ ಪರಿಸ್ಥಿತಿಯು ಶಾಂತವಾಗುತ್ತದೆ, ಸಹಜ ಸ್ಥಿತಿ ಮರಳುತ್ತದೆ ಎಂಬ ಹೇಳಿಕೆಗಳಿಗೆ ಆಧಾರ ಇಲ್ಲ ಎಂದು ಅನ್ನಿಸುತ್ತಿದೆ. ರಾಜ್ಯವು ಕುಕಿ ಸಮುದಾಯದವರು ಹಾಗೂ ಮೈತೇಯಿ ಸಮುದಾಯದವರ ಪ್ರದೇಶಗಳ ನಡುವೆ ಒಡೆದುಹೋಗಿದೆ. ಎರಡೂ ಸಮುದಾಯಗಳ ನಡುವೆ ದ್ವೇಷ ಮೂಡಿದೆ. ನೆಲೆ ಕಳೆದುಕೊಂಡ 60 ಸಾವಿರಕ್ಕೂ ಹೆಚ್ಚು ಮಂದಿ ನಿರಾಶ್ರಿತರ ಶಿಬಿರಗಳಲ್ಲಿ ಇದ್ದಾರೆ. ಅವರಿಗೆ ಜೀವನವು ಸಹಜವಾಗಿ ಉಳಿದಿಲ್ಲ. ಸರ್ಕಾರದ ಶಸ್ತ್ರಾಗಾರಗಳಿಂದ ಲೂಟಿ ಮಾಡಲಾಗಿರುವ ಐದು ಸಾವಿರ ಶಸ್ತ್ರಾಸ್ತ್ರಗಳು ಸಮುದಾಯಗಳ ನಡುವೆ ಇವೆ. ರಾಜ್ಯದ ಜನರ ಜೀವನವು ಇನ್ನಷ್ಟು ಹೆಚ್ಚು ಸಂಘರ್ಷದ ಪರಿಸ್ಥಿತಿಯತ್ತ ಜಾರುತ್ತಿದೆ. ಹೀಗಿದ್ದರೂ ಮಣಿಪುರವೆಂಬ ರಾಜ್ಯವು ತನಗೆ ಮುಖ್ಯವಲ್ಲ ಎಂಬಂತೆ ಕೇಂದ್ರ ಸರ್ಕಾರವು ನಡೆದುಕೊಂಡಿದೆ.

ದಿನದ ಟ್ವೀಟ್

ಇದೆಂಥಾ ಸ್ಥಿತಿ?

ಮಾತು ಹೊರಡದಂತಾಗಿದೆ. ಆಂಬುಲೆನ್ಸ್ ಸೇವೆ ಇಲ್ಲದ್ದರಿಂದ ಅಸ್ವಸ್ಥ ಮಕ್ಕಳನ್ನು ಹೆಗಲ ಮೇಲೆ ಹೊತ್ತು ಮಹಾರಾಷ್ಟ್ರದ ಗಡ್‌ಚಿರೋಲಿಯ ಆಸ್ಪತ್ರೆಯತ್ತ ಸಾಗಿದ ದಂಪತಿ. 15 ಕಿ.ಮೀ. ನಡಿಗೆಯ ಮಧ್ಯದಲ್ಲಿ ಮಕ್ಕಳು ಮೃತಪಟ್ಟಿದ್ದಾರೆ.

ಶಿವ್ ಅರೂರ್, ಪತ್ರಕರ್ತ, ಲೇಖಕ

ಕಿಡಿನುಡಿ

ಇದು, ವ್ಯಕ್ತಿಗಳಿಗೆ ಅಪಾಯ ಉಂಟು ಮಾಡುವುದು ಮಾತ್ರವಲ್ಲ ನಗರದ ಹೆಸರಿಗೂ ಕಳಂಕ ತರುತ್ತದೆ. ಈ ಕೃತ್ಯ ಎಸಗಿದ ಚಾಲಕನ ವಿರುದ್ಧ ಬೆಂಗಳೂರು ನಗರ ಪೊಲೀಸರು ತ್ವರಿತ ಕ್ರಮ ಕೈಗೊಳ್ಳಬೇಕು. ಅಂತಹ ನಡವಳಿಕೆ ಒಪ್ಪತಕ್ಕದ್ದಲ್ಲ ಹಾಗೂ ಸಹಿಸಲು ಅಸಾಧ್ಯ ಎಂಬ ಕಠಿಣ ಸಂದೇಶ ರವಾನಿಸಬೇಕಾದುದು ಅಗತ್ಯ.

(ಬೆಂಗಳೂರಿನಲ್ಲಿ ಆಟೊ ಚಾಲಕನೊಬ್ಬ ರೈಡ್ ರದ್ದುಪಡಿಸಿದ ಮಹಿಳೆಯೊಬ್ಬರ ಕೆನ್ನೆಗೆ ಹೊಡೆದಿರುವ ಪ್ರಕರಣಕ್ಕೆ ಪ್ರತಿಕ್ರಿಯೆ)

ಅಮಿತ್ ಮಿಶ್ರಾ, ಉದ್ಯಮಿ

25 ವರ್ಷಗಳ ಹಿಂದೆ

ಸೋಮವಾರ, 6-9-1999

• ಮೊದಲ ಹಂತ: ಶೇ 55 ಮತದಾನ

ನವದೆಹಲಿ, ಸೆ. 5– ಆಂಧ್ರ ಪ್ರದೇಶ, ಜಮ್ಮು ಮತ್ತು ಕಾಶ್ಮೀರ ಹಾಗೂ ಪಂಜಾಬ್‌ನ ಕೆಲವೆಡೆ ಹಿಂಸಾಚಾರ ನಡೆದಿದ್ದು, ಉಳಿದಂತೆ ಹದಿನಾರು ರಾಜ್ಯಗಳ 145 ಲೋಕಸಭೆ ಕ್ಷೇತ್ರಗಳಿಗೆ ಮತ್ತು ಕರ್ನಾಟಕದ 115, ಆಂಧ್ರ ಪ್ರದೇಶದ 84 ಮತ್ತು ಮಹಾರಾಷ್ಟ್ರದ 144 ವಿಧಾನಸಭೆ ಕ್ಷೇತ್ರಗಳಿಗೆ ಇಂದು ನಡೆದ ಮೊದಲ ಹಂತದ ಚುನಾವಣೆಯಲ್ಲಿ ಶೇ 55ರಷ್ಟು ಮತದಾನ ನಡೆದಿದೆ.

ಮೊದಲ ಹಂತದ ಚುನಾವಣೆಯಲ್ಲಿ ಒಟ್ಟು 16.6 ಕೋಟಿ ಮತದಾರರು ಇದ್ದು, ಶೇ 55ರಷ್ಟು ಮಾತ್ರ ಮತದಾನ ನಡೆದಿದೆ. ಡಿಯು ಮತ್ತು ದಾಮನ್ ಲೋಕಸಭೆ ಕ್ಷೇತ್ರದಲ್ಲಿ ಶೇ 70ರಷ್ಟು ಮತದಾನ ನಡೆದಿರುವುದಾಗಿ ಮುಖ್ಯ ಚುನಾವಣಾ ಆಯುಕ್ತ ಮನೋಹರ್ ಸಿಂಗ್ ಗಿಲ್ ಇಂದು ವರದಿಗಾರರಿಗೆ ತಿಳಿಸಿದರು.

• ಗಾಳಿಯಲ್ಲಿ ಗುಂಡು, ಕರ್ಫ್ಯೂ, ಮತಪೆಟ್ಟಿಗೆಗೆ ನೀರು

ಬೆಂಗಳೂರು, ಸೆ. 5– ಚನ್ನಪಟ್ಟಣದಲ್ಲಿ ಗುಂಪು ಗಲಭೆಯಲ್ಲಿ ತೊಡಗಿದ್ದ ಜನರನ್ನು ಚದುರಿಸಲು ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿದ, ರಾಯಚೂರಿನ ಎರಡು ಕಡೆ ಮತಪೆಟ್ಟಿಗೆಗೆ ನೀರು ಸುರಿದ ಘಟನೆ ಹಾಗೂ ಚಿತ್ರದುರ್ಗ, ಬೀದರ್, ಕೋಲಾರ ಹಾಗೂ ಕಲ್ಬುರ್ಗಿಯಲ್ಲಿ ನಡೆದ ಕೆಲವು ಅಹಿತಕರ ಘಟನೆಗಳನ್ನು ಹೊರತುಪಡಿಸಿದರೆ ಉಳಿದಂತೆ ರಾಜ್ಯದಲ್ಲಿ ಮತದಾನ ಶಾಂತಿಯುತವಾಗಿ ನಡೆದಿದೆ.

ಸೂಕ್ಷ್ಮ ಪ್ರದೇಶವೆಂದು ಗುರುತಿಸಲಾದ ಚನ್ನಪಟ್ಟಣದಲ್ಲಿ ಗಲಭೆಯಲ್ಲಿ ತೊಡಗಿದ್ದ ಎರಡು ಗುಂಪುಗಳನ್ನು ಚದುರಿಸಲು ಅಲ್ಲಿಯ ಡಿವೈಎಸ್ಪಿ ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ. ರಾತ್ರಿ ಕರ್ಫ್ಯೂ ಹಾಗೂ 144ನೇ ಸೆಕ್ಷನ್ ಅನ್ವಯ ನಿಷೇಧಾಜ್ಞೆಯನ್ನು ವಿಧಿಸಲಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 6-9-1974

• ಲೋಕಸಭೆಯಲ್ಲಿ ಭಾರಿ ಕೋಲಾಹಲ ವೇದಿಕೆಗೆ ವಿರೋಧಿಗಳ ಮುತ್ತಿಗೆ

ನವದೆಹಲಿ, ಸೆ. 5– ಆಮದು ಲೈಸೆನ್ಸ್ ಹಗರಣದ ಸಂಬಂಧದಲ್ಲಿ ಸ್ವತಂತ್ರ ಪಕ್ಷದ ನಾಯಕ ಪಿಲೂಮೋದಿ ಅವರು ಮಂಡಿಸಿದ್ದ ನಿರ್ಣಯವನ್ನು ಲೋಕಸಭೆ ತಿರಸ್ಕರಿಸಿತು.

ನಿರ್ಣಯ ತಿರಸ್ಕೃತವಾದ ಬಳಿಕ ಸಭೆಯಲ್ಲಿ ಕೋಲಾಹಲ ಉಂಟಾಯಿತು. ಕೋಪೋದ್ರಿಕ್ತರಾದ ವಿರೋಧ ಪಕ್ಷದ ಸದಸ್ಯರು ವೇದಿಕೆಯತ್ತ ಧಾವಿಸಿದರು. ಅಧ್ಯಕ್ಷರನ್ನು ಸುತ್ತುವರಿಯಲು ಪ್ರಯತ್ನಿಸಿದರು.

ಸಂಸತ್ ಸದಸ್ಯರನ್ನು ಟೀಕಿಸಿದ ಹಿಂದಿ ವಾರಪತ್ರಿಕೆ 'ಪ್ರತಿಪಕ್ಷ'ದ ವಿರುದ್ಧ ಕಾಂಗ್ರೆಸ್ ಸದಸ್ಯ ವಸಂತ ಎಸ್. ಅವರು ನಿರ್ಣಯವನ್ನು ಮಂಡಿಸುವುದಕ್ಕೆ ವಿರೋಧ ಪಕ್ಷದವರು ವಿರೋಧ ಮಾಡಿದರು. ಸಂಜೆ 6 ಗಂಟೆಯಾಗಿದ್ದರಿಂದ ಸಭೆಯನ್ನು ಮುಂದೂಡುವಂತೆಯೂ ಅವರು ಒತ್ತಾಯಿಸಿದರು.

• ಸಿಮೆಂಟ್, ಉಕ್ಕು ಅಕ್ರಮ ಮಾರಾಟ ಕಂಟ್ರಾಕ್ಟರ್ ವಿರುದ್ಧ ಕ್ರಮ

ಬೆಂಗಳೂರು, ಸೆ. 5– ನಗರದಲ್ಲಿ ನಿರ್ಮಾಣ ಹಂತದಲ್ಲಿದ್ದ ಎರಡು ಹರಿಜನ ವಿದ್ಯಾರ್ಥಿ ನಿಲಯಗಳಿಗೆ ಸೇರಿದ ಸಿಮೆಂಟ್ ಮತ್ತು ಉಕ್ಕು ನಾಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದ ಕಂಟ್ರಾಕ್ಟರ್ ವಿರುದ್ಧ ವಿಶ್ವಾಸದ್ರೋಹ ಆಪಾದನೆಯ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

ದಾಸ್ತಾನು ಮಳಿಗೆಯಲ್ಲಿ 11 ಟನ್‌ಗಳಷ್ಟು ಉಕ್ಕು ಮತ್ತು 2,902 ಚೀಲ ಸಿಮೆಂಟ್ ಕೊರತೆ ಇದ್ದುದು ಜಾಗೃತ ಆಯೋಗದವರು ನಡೆಸಿದ ತನಿಖೆಯಿಂದ ಗೊತ್ತಾಗಿದೆ ಎಂದು ಲೋಕೋಪಯೋಗಿ ಖಾತೆ ಸಚಿವ ಎಚ್.ಎಂ. ಚನ್ನಬಸಪ್ಪ ಅವರು ಇಂದು ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕ ರಾಮಕೃಷ್ಣ ಹೆಗಡೆ ಅವರಿಗೆ ತಿಳಿಸಿದರು.

ಬಹುಮತ ಕೊರತೆಯ ಸಂಕಷ್ಟ ಮತ್ತು ಮಿತ್ರಪಕ್ಷಗಳನ್ನು ನಿಭಾಯಿಸುವ ಸವಾಲು

ಯೂ–ಟರ್ನ್ ಪ್ರಸಂಗ ಹೇಳುವುದೇನು?

ವಿಶ್ಲೇಷಣೆ

ಬಿ.ಎಸ್. ಅರುಣ್

ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಏಕೀಕೃತ ಪಿಂಚಣಿ ವ್ಯವಸ್ಥೆಯನ್ನು (ಯುಪಿಎಸ್) ಜಾರಿಗೆ ತರುವುದಾಗಿ ಹೇಳಿದ್ದರ ಬೆನ್ನಲ್ಲೇ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಯುಪಿಎಸ್‌ನ 'ಯು' ಅಕ್ಷರವು ಕೇಂದ್ರ ಸರ್ಕಾರದ 'ಯೂ–ಟರ್ನ್' ನೀತಿಯನ್ನು ಪ್ರತಿನಿಧಿಸುತ್ತದೆ ಎಂದಿದ್ದು ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಪ್ರಚಾರ ಪಡೆದುಕೊಂಡಿತು. ಸತತ ಮೂರನೇ ಅವಧಿಗೆ ಮೂರು ತಿಂಗಳ ಹಿಂದೆ ಕೇಂದ್ರದಲ್ಲಿ ಅಧಿಕಾರ ಹಿಡಿದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಈ ಅವಧಿಯಲ್ಲಿ ಈವರೆಗೆ ಮೂರು ಪ್ರಸ್ತಾವಗಳನ್ನು ಹಿಂಪಡೆದು ತೀವ್ರ ಮುಜುಗರ ಅನುಭವಿಸಿದೆ.

ಇವುಗಳೆಂದರೆ, ದೀರ್ಘಾವಧಿ ಬಂಡವಾಳ ವೃದ್ಧಿ ತೆರಿಗೆ ಮತ್ತು ಅದಕ್ಕೆ ಸಂಬಂಧಿಸಿದ ಇಂಡೆಕ್ಸೇಷನ್ ನಿಯಮ, ಪ್ರಸಾರ ಸೇವೆಗಳ (ನಿಯಂತ್ರಣ) ಮಸೂದೆ ಮತ್ತು ಕೇಂದ್ರ ಸರ್ಕಾರದ ವಿವಿಧ ಸಚಿವಾಲಯಗಳಿಗೆ ಅಧಿಕಾರಿಗಳ ಲ್ಯಾಟರಲ್ ಎಂಟ್ರಿ ನೇಮಕಾತಿ ವಿಚಾರ. ಇದರ ಜತೆಗೆ ಹಿಂದಿನ ಸಂಸತ್ ಅಧಿವೇಶನದಲ್ಲಿ ಮಂಡಿಸಲಾದ ವಕ್ಫ್ ಮಸೂದೆ ತಿದ್ದುಪಡಿಯನ್ನು ಪರಿಶೀಲನೆಗಾಗಿ ಸಂಸತ್ತಿನ ಜಂಟಿ ಸದನ ಸಮಿತಿಗೆ (ಜೆಪಿಸಿ) ಒಪ್ಪಿಸಿದ್ದು ಅಧಿಕಾರಾರೂಢ ಬಿಜೆಪಿಗೆ ನುಂಗಲಾರದ ತುತ್ತಾಗಿರಬಹುದು.

ಇದೇ ಮೊದಲ ಬಾರಿ ಕೇಂದ್ರದಲ್ಲಿ ಮೋದಿ ನಾಯಕತ್ವದ ಬಿಜೆಪಿಯು ಮಿತ್ರಪಕ್ಷಗಳ ಮೇಲೆ ಅವಲಂಬಿತವಾಗಿದೆ ಹಾಗೂ 10 ವರ್ಷಗಳಲ್ಲಿ ಪ್ರಥಮ ಬಾರಿಗೆ ಸಂಸತ್ತಿನಲ್ಲಿ ವಿರೋಧ ಪಕ್ಷಗಳು ಶಕ್ತಿಯುತವಾಗಿವೆ. ವಿರೋಧ ಪಕ್ಷಗಳಿಗೆ ಹಿಂದೆ ಆಡಳಿತ ಪಕ್ಷವನ್ನು ಬಗ್ಗಿಸುವುದು ಅಷ್ಟು ಸುಲಭವಾಗಿರಲಿಲ್ಲ. ಎನ್‌ಡಿಎ ಮತ್ತೆ ಅಧಿಕಾರಕ್ಕೆ ಬಂದಿದ್ದರೂ 2024ರ ಚುನಾವಣೆಯು ದೇಶದ ರಾಜಕೀಯವನ್ನು ಬಹಳಷ್ಟು ಮಟ್ಟಿಗೆ ಬದಲಾಯಿಸಿದೆ. ಹೋದ ಬಾರಿ ಗೆದ್ದಿದ್ದ 60ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಈ ಬಾರಿ ಸೋತ ಬಿಜೆಪಿ, ಲೋಕಸಭೆಯಲ್ಲಿ 240 ಸ್ಥಾನಗಳಿಗೆ ತೃಪ್ತಿಪಟ್ಟುಕೊಳ್ಳುವಂತಾಯಿತು.

ಬದಲಾದ ಈ ಪರಿಸ್ಥಿತಿಯನ್ನು ವಿರೋಧ ಪಕ್ಷಗಳು ಸಂಪೂರ್ಣವಾಗಿ ಉಪಯೋಗಿಸಿಕೊಂಡಂತೆ ಕಾಣುತ್ತದೆ. ಅದು ಆಗಬೇಕು ಕೂಡ. ಇಲ್ಲದಿದ್ದರೆ ಸಂಸತ್ತಿನಲ್ಲಿ ವಿರೋಧ ಪಕ್ಷಗಳಿದ್ದೂ ಪ್ರಯೋಜನವಾದರೂ ಏನು? ಆದರೆ ಮೋದಿಯವರಿಗೆ ಇದು ಹೊಸದು. ತಾವು 13 ವರ್ಷಗಳ ಕಾಲ ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ಅಥವಾ ಪ್ರಧಾನಿಯಾಗಿ ಹಿಂದಿನ 10 ವರ್ಷಗಳಲ್ಲಿ ಅವರಿಗೆ ಮಿತ್ರಪಕ್ಷಗಳನ್ನು ನಿಭಾಯಿಸುವ ಅನಿವಾರ್ಯ ಇರಲಿಲ್ಲ. ಮೊದಲ ಬಾರಿಗೆ ಈಗ ಸಮ್ಮಿಶ್ರ ಸರ್ಕಾರವನ್ನು ಮುನ್ನಡೆಸುವ, ಅಂದರೆ ಮಿತ್ರಪಕ್ಷಗಳನ್ನು ಜತೆಯಲ್ಲಿ ಕರೆದೊಯ್ಯುವ ಹಾಗೂ ಅವುಗಳ ನಾಯಕರನ್ನು ಗೌರವಯುತವಾಗಿ ನಡೆಸಿಕೊಳ್ಳುವ ಜವಾಬ್ದಾರಿ ಬಿದ್ದಿದೆ. ಇದರ ಜತೆಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರ ಉತ್ಸಾಹಭರಿತವಾದ, ಆಡಳಿತ ಪಕ್ಷವನ್ನು ಕಟ್ಟಿಹಾಕುವಂತಹ ಹರಿತವಾದ ವಾದಗಳು ಸರ್ಕಾರವನ್ನು ಅನೇಕ ಸಲ ಪೇಚಿಗೆ ಸಿಲುಕಿಸಿವೆ.

ಯುಪಿಎಸ್ ಜಾರಿ ಮಾಡಿದರೆ ಯೂ–ಟರ್ನ್ ಹೇಗಾಗುತ್ತದೆ? 2022ರ ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸೋತು, ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿಯಿತು. ಆಗ ಜಾರಿಯಲ್ಲಿದ್ದ 'ರಾಷ್ಟ್ರೀಯ ಪಿಂಚಣಿ ಯೋಜನೆ'ಗೆ (ಎನ್‌ಪಿಎಸ್) ಬಿಜೆಪಿಯ ಬೆಂಬಲವಿತ್ತು. ತಾನು ಅಧಿಕಾರಕ್ಕೆ ಬಂದರೆ ಹಳೆಯ ಯೋಜನೆಯನ್ನು ಮತ್ತೆ ಜಾರಿಗೊಳಿಸುವುದಾಗಿ ಕಾಂಗ್ರೆಸ್ ಆಶ್ವಾಸನೆ ಕೊಟ್ಟಿತ್ತು. ಆದರೆ ತನಗೆ ಇಲ್ಲಾದ ಸೋಲಿಗೆ ಹಾಗೂ ಲೋಕಸಭೆ ಚುನಾವಣೆಯಲ್ಲಿ ಬಹುಮತ ಗಳಿಸುವುದರಲ್ಲಿ ವಿಫಲವಾದುದಕ್ಕೆ ಒಂದು ಮುಖ್ಯ ಕಾರಣ ಪಿಂಚಣಿ ಯೋಜನೆ ಎಂದು ಭಾವಿಸಿದ ಎನ್‌ಡಿಎ ಸರ್ಕಾರ, ಈ ಯೋಜನೆಯನ್ನು ಪರಿಷ್ಕರಿಸಿ ಯುಪಿಎಸ್ ಜಾರಿಗೆ ತಂದಿದೆ. ಇದನ್ನೇ ಖರ್ಗೆ ಯೂ–ಟರ್ನ್ ಎಂದು ಕರೆದಿರುವುದು.

ಕೇಂದ್ರ ಸರ್ಕಾರವು ಹಿಂಪಡೆದ ಇನ್ನೊಂದು ತೀರ್ಮಾನ ಅಧಿಕಾರಿಗಳ ಲ್ಯಾಟರಲ್ ಎಂಟ್ರಿ. ಅಂದರೆ, ಕೇಂದ್ರ ಸೇವೆಗಳಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಪರಿಣತಿ ಹೊಂದಿರುವವರನ್ನು ಹಾಗೂ ಖಾಸಗಿ ವಲಯದವರನ್ನು ಸರ್ಕಾರಿ ಇಲಾಖೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವುದು. ಇದೇನೂ ಹೊಸದಲ್ಲ ಅಥವಾ ತಪ್ಪು ಕೂಡ ಅಲ್ಲ. ಜವಾಹರಲಾಲ್ ನೆಹರೂ ಪ್ರಧಾನಿ ಆಗಿದ್ದ ಅವಧಿಯಿಂದಲೂ ಈ ರೀತಿಯ ನೇಮಕಾತಿ ನಡೆಯುತ್ತ ಬಂದಿದೆ. ಆರ್ಥಿಕ ತಜ್ಞ ಕೂಡ ಆಗಿರುವ ಮನಮೋಹನ್ ಸಿಂಗ್, ಅರ್ಥಶಾಸ್ತ್ರಜ್ಞ ಮೋಂಟೆಕ್ ಸಿಂಗ್ ಅಹ್ಲುವಾಲಿಯ, ಸಾರ್ವಜನಿಕ ವಲಯದ ಪಿತಾಮಹ ಎಂದೇ ಹೆಸರಾಗಿರುವ ವಿ.ಕೃಷ್ಣಮೂರ್ತಿ, ವಿದ್ಯುತ್ ಕ್ಷೇತ್ರದಲ್ಲಿ ಮಹತ್ವದ ಸುಧಾರಣೆ ತರಲು ಕಾರಣರಾದ ಆರ್.ವಿ. ಶಾಹಿ, ರಿಸರ್ವ್ ಬ್ಯಾಂಕಿನ ಗವರ್ನರ್ ಆಗಿದ್ದ ಐ.ಜಿ. ಪಟೇಲ್ ಅವರಂತಹವರು ಕೇಂದ್ರ ಸರ್ಕಾರದ ಉನ್ನತ ಹಂತದ ಕಾರ್ಯದರ್ಶಿ ಹುದ್ದೆಯನ್ನು ನಿರ್ವಹಿಸಿದವರು.

ಆದರೆ ಈಗ ಇದಕ್ಕೆ ಅಡ್ಡ ಬಂದಿದ್ದು ಮೀಸಲಾತಿ. ರಾಹುಲ್ ಗಾಂಧಿ ಹಾಗೂ ಎನ್‌ಡಿಎ ಮಿತ್ರಪಕ್ಷಗಳಾದ ಜೆಡಿಯು ಮತ್ತು ಎಲ್‌ಜೆಪಿ ನಾಯಕರು ಲ್ಯಾಟರಲ್ ಎಂಟ್ರಿಯಲ್ಲಿ ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದವರಿಗೆ ಪ್ರಾತಿನಿಧ್ಯ ಇರಬೇಕೆಂದು ಆಗ್ರಹಿಸಿದರು. ತನ್ನ '400 ಪಾರ್' ಹೇಳಿಕೆಯ ಪರಿಣಾಮವಾಗಿ ಸಂವಿಧಾನ ಬದಲಾವಣೆ ಹಾಗೂ ಮೀಸಲಾತಿ ರದ್ದತಿಯ ಹುನ್ನಾರ ನಡೆದಿದೆ ಎಂದು ಮೇಲ್ಕಂಡ ವರ್ಗಗಳಿಗೆ ಅನ್ನಿಸಿದೆ, ಹೀಗಾಗಿ ಲೋಕಸಭಾ ಚುನಾವಣೆಯಲ್ಲಿ ಅವು ತನ್ನ ವಿರುದ್ಧ ಮತ ಚಲಾಯಿಸಿರಬಹುದೆಂದು ಬಿಜೆಪಿ ಭಾವಿಸಿದೆ.



ಇದಕ್ಕೆ ಪೂರಕವಾಗಿಯೋ ಎನ್ನುವಂತೆ ಸದ್ಯದಲ್ಲೇ ನಾಲ್ಕು ರಾಜ್ಯಗಳ ಚುನಾವಣೆಗಳು ಜರುಗಲಿವೆ. ವಿರೋಧ ಪಕ್ಷಗಳು ಇದನ್ನೇ ದೊಡ್ಡ ಪ್ರಚಾರದ ಸಂಗತಿಯನ್ನಾಗಿ ಬಳಸಿಕೊಳ್ಳುವ ಸಾಧ್ಯತೆ ಇತ್ತು. ಈ ವಿಷಯಕ್ಕೆ ಸಂಬಂಧಿಸಿದ ಖಾತೆ ಪ್ರಧಾನಿಯ ನೇರ ಅಧೀನದಲ್ಲಿಯೇ ಇದೆ. ದಲಿತ ಸಂಘಟನೆಗಳು ಆಗಸ್ಟ್ 21ರಂದು ಈ ವಿಷಯವಾಗಿ 'ಭಾರತ್ ಬಂದ್' ಕೂಡ ಘೋಷಿಸಿದ್ದವು. ಈ ಎಲ್ಲ ಕಾರಣಗಳಿಂದ, ಲ್ಯಾಟರಲ್ ಎಂಟ್ರಿಗೆ ಜಾಹೀರಾತು ಹೊರಡಿಸಿದ ಮೂರು ದಿನಗಳಲ್ಲೇ ಸರ್ಕಾರ ಇದನ್ನು ವಾಪಸ್ ಪಡೆಯಿತು.

ಈ ಬಾರಿಯ ಬಜೆಟ್‌ನ ಪ್ರಮುಖ ಅಂಶಗಳಲ್ಲಿ ಷೇರುಗಳ ಮೇಲೆ ದೀರ್ಘಾವಧಿ ಬಂಡವಾಳ ವೃದ್ಧಿ ತೆರಿಗೆ ಮತ್ತು ಇಂಡೆಕ್ಸೇಷನ್ (ಹಣದುಬ್ಬರದ ಪ್ರಮಾಣವನ್ನು ಪರಿಗಣಿಸಿ ತೆರಿಗೆ ಲೆಕ್ಕ ಮಾಡುವುದು) ಅನುಕೂಲಗಳನ್ನು ರದ್ದುಪಡಿಸುವ ಪ್ರಸ್ತಾವವೂ ಸೇರಿದೆ. ಇದಕ್ಕೆ ವ್ಯಾಪಕ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಈ ಪ್ರಸ್ತಾವವನ್ನು ಹಿಂದಕ್ಕೆ ಪಡೆಯಲಾಯಿತು.

ಮಾಹಿತಿ ಮತ್ತು ಪ್ರಸಾರ ಸಚಿವಾಲಯ ತರಬೇಕೆಂದಿದ್ದ ಪ್ರಸಾರ ಸೇವೆಗಳ (ನಿಯಂತ್ರಣ) ಮಸೂದೆಯ ಕರಡನ್ನು ಕೂಡ ಸರ್ಕಾರ ವಾಪಸ್ ಪಡೆಯಿತು. ಈ ಕರಡು ಮಸೂದೆಯ ಪ್ರಕಾರ, ಒಟಿಟಿ ಅಥವಾ ಡಿಜಿಟಲ್ ಸುದ್ದಿ ಪ್ರಸಾರಕರು ಇದರ ವ್ಯಾಪ್ತಿಯಲ್ಲಿ ಬರುತ್ತಾರೆ. ಸಮೂಹ ಮಾಧ್ಯಮದಲ್ಲಿ ಬಿಜೆಪಿಯ ಹೊಗಳುಭಟರೇ ಹೆಚ್ಚಾಗಿರುವ ಕಾರಣಕ್ಕೆ ಜನ ಆನ್‌ಲೈನ್ ಮೂಲಕ ವಿಷಯ ಪ್ರಸ್ತುತಪಡಿಸುವವರು ಅಥವಾ 'ಸೋಷಿಯಲ್ ಮೀಡಿಯ ಇನ್‌ಫ್ಲೂಯೆನ್ಸರ್ಸ್' ಮೂಲಕ ಸುದ್ದಿ ಪಡೆಯುವುದು ಹಿಂದಿನ ಚುನಾವಣೆಯ ಸಮಯದಲ್ಲಿ ಜಾಸ್ತಿಯಾಯಿತು ಎಂದು ಸಮೀಕ್ಷೆಯೊಂದು ಹೇಳುತ್ತದೆ. ಈ ಕರಡು ಮಸೂದೆಯ ಒಂದು ಮೂಲ ಉದ್ದೇಶ ಈ ಸ್ವಾತಂತ್ರ್ಯವನ್ನು ಹತ್ತಿಕ್ಕುವುದು ಎಂಬುದು ಕೆಲವರ ಅಭಿಪ್ರಾಯ.

ವಕ್ಫ್ ಮಸೂದೆ ತಿದ್ದುಪಡಿಯು ಸಂಸತ್‌ನಲ್ಲಿ ವಿರೋಧ ಪಕ್ಷಗಳಿಂದ ತೀವ್ರ ವಿರೋಧ ಎದುರಿಸಬೇಕಾಯಿತು. ತಿದ್ದುಪಡಿಯ ಬಗ್ಗೆ ಬಿಜೆಪಿಯ ಮಿತ್ರಪಕ್ಷಗಳಾದ ಜೆಡಿಯು ಹಾಗೂ ತೆಲುಗುದೇಶಂ ಆತಂಕ ವ್ಯಕ್ತಪಡಿಸಿದವು. ಹೀಗಾಗಿ, ಅದನ್ನು ಜೆಪಿಸಿ ಪರಿಶೀಲನೆಗೆ ಒಪ್ಪಿಸಲು ಸರ್ಕಾರ ಸಮ್ಮತಿಸಿತು. ಈ ಹಿಂದೆ ಮೋದಿ ನೇತೃತ್ವದ ಸರ್ಕಾರವು ಕರಡು ಮಸೂದೆಯನ್ನು ಜೆಪಿಸಿಗೆ ವಹಿಸಲು ಒಪ್ಪಿದ್ದು ಬಹುಶಃ ಒಂದೇ ಒಂದು ಬಾರಿ. ಹಿಂದಿನ ಲೋಕಸಭೆಯಲ್ಲಿ ಮಂಡಿಸಲಾದ 'ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ಮಸೂದೆ'ಯನ್ನು ಸರ್ಕಾರವು ಜೆಪಿಸಿಯ ಪರಿಶೀಲನೆಗೆ ಒಪ್ಪಿಸಿತ್ತು. ಅದು ಸೂಚಿಸಿದ್ದ 81 ಬದಲಾವಣೆಗಳೊಂದಿಗೆ ಹೋದ ವರ್ಷ ಇದು ಅಂಗೀಕಾರವಾಯಿತು.

ಈ ಹಿಂದೆ ಇನ್ನೂ ಕೆಲವು ಮಸೂದೆಗಳನ್ನು ವಾಪಸ್ ಪಡೆಯಲಾಗಿತ್ತು. ಅವುಗಳೆಂದರೆ, ಕೃಷಿ ಮಸೂದೆಗಳು ಮತ್ತು ಭೂಸ್ವಾಧೀನಕ್ಕೆ ಸಂಬಂಧಿಸಿದ ಮಸೂದೆ. ಕೃಷಿ ಮಸೂದೆಗಳಂತೂ ಭಾರಿ ಪ್ರತಿರೋಧಕ್ಕೆ ಕಾರಣವಾಗಿದ್ದವು. ಸಂಸತ್ತಿನಲ್ಲಿ ಮಂಡಿಸಿದ ಒಂದು ವರ್ಷದ ನಂತರ, 2022ರ ಉತ್ತರಪ್ರದೇಶ ವಿಧಾನಸಭಾ ಚುನಾವಣೆಗೆ ಮೂರು ತಿಂಗಳ ಮುನ್ನ, ಮೋದಿ ನೇತೃತ್ವದ ಸರ್ಕಾರ ಇವುಗಳನ್ನು ವಾಪಸ್ ಪಡೆಯಿತು.

ಇದು ಎನ್‌ಡಿಎ ಸರ್ಕಾರದ 'ಯೂ–ಟರ್ನ್' ಗಾಥೆ.

ಚುರುಮುರಿ



ಸ್ವರ್ಗಕ್ಕೆ ದಾರಿ!

• ಬಿ.ಎನ್.ಮಲ್ಲೇಶ್

ಹರಟೆಕಟ್ಟೆಗೆ ಬಹಳ ಜೋಶ್‌ನಿಂದ ಬಂದ ತೆಪರೇಸಿ 'ಕಿಂಬೋಹೋ ಸರ್ವಭ್ರಾಹ ಕುಶಲಂವಾ?' ಎಂದ. ಮಂಜಮ್ಮಗೆ ಅರ್ಥವಾಗಲಿಲ್ಲ. ಗುಡ್ಡೆ, ದುಬ್ಬೀರ ಮುಖ ಮುಖ ನೋಡಿಕೊಂಡರು.

'ಏನೋ ಹಂಗಂದ್ರೆ? ಯಾವ ಭಾಷೆ ಅದು?' ಕೊಟ್ರೇಶಿ ಕೇಳಿದ.

'ಏತತ್ ಸಂಸ್ಕೃತಂ ಭವಂತಹ ಮೂರ್ಖಾಹ ನ ಜಾನಂತೀ' ಎಂದ ತೆಪರೇಸಿ.

'ಮೋಸ್ಟ್‌ಲೀ ಏನೋ ಬೈದಂಗಾತಪ' ಎಂದ ಗುಡ್ಡೆ. ಮಂಜಮ್ಮಗೆ ಸಿಟ್ಟು ಬಂತು. 'ನಿನ್ ಮಕ ನಾಯಿ ನೆಕ್ಕ, ಅದೇನು ನೆಟ್ಟಗೆ ಬೊಗಳೋ' ಎಂದಳು.

'ಅರ್ಥ ಆಗ್ಲಿಲ್ವಾ? ಮೊದ್ಲು ಕೇಳಿದ್ದು 'ಏನ್ರಲೆ ಎಲ್ಲ ಪಾಡದೀರಾ' ಅಂತ. ಆಮೇಲೆ ಹೇಳಿದ್ದು 'ಇದು ಸಂಸ್ಕೃತ, ನಿಮ್ಮಂಥ ದಡ್ಡರಿಗೆ ಅರ್ಥ ಆಗಲ್ಲ ಅಂತ. ನಾನು ಸಂಸ್ಕೃತ ಕಲೀತಿದೀನಿ' ತೆಪರೇಸಿ ನಕ್ಕ.

'ಹೌದಾ? ಮಾಡಾಕೆ ಬೇರೆ ಕೆಲ್ಸ ಇರ್ಲಿಲ್ವಾ?' ಗುಡ್ಡೆ ಕೇಳಿದ.

'ಸಂಸ್ಕೃತ ಕಲೀದಿದ್ರೆ ಸ್ವರ್ಗಕ್ಕೆ ಪ್ರವೇಶ ಇಲ್ಲಂತೆ, ಗುರುಗಳು ಹೇಳಿದ್ದು ಗೊತ್ತಿಲ್ವಾ?'

'ಲೇಯ್ ಆ ತಗಡು ಸ್ವರ್ಗಕ್ಕೆ ಹೋಗಿ ಏನ್ ಮಾಡ್ತೀಯಲೆ. ಅಲ್ಲಿ ರಂಭೆ, ಊರ್ವಶಿ ಎಲ್ಲ ಮುದುಕರಾಗಿದಾರಂತೆ, ಸೋಮರಸ ಬಿಟ್ರೆ ಬೇರೆ ಬ್ರಾಂಡ್ ಸಿಗಲ್ಲಂತೆ' ಗುಡ್ಡೆ ನಕ್ಕ.

'ನೋಡು, ಸ್ವರ್ಗ, ನರಕ ಎಲ್ಲ ಇಲ್ಲೇ ಇರೋದು, ಆದ್ರೂ ನಿಂಗೆ ಮೇಲಿನ ಸ್ವರ್ಗನೇ ಬೇಕು ಅಂದ್ರೆ ನಿನ್ ಹೆಂಡ್ತಿ ದಾರಿ ತೋರಿಸ್ತಾಳೆ ಹೋಗು. 'ನಾರಿ ಸ್ವರ್ಗಕ್ಕೆ ದಾರಿ' ಅಂತ ಕೇಳಿಲ್ವ?' ದುಬ್ಬೀರ ಅನುಭವದ ಮಾತಾಡಿದ.

'ಅವನೆಂಡ್ತಿನಾ? ಸೀದಾ ನರಕಾನೇ ತೋರ್ಸೋದು' ಕೊಟ್ರಿ ಕಿಸಕ್ಕೆಂದ.

'ಯಾಕಲೆ? ಹೆಂಗೈತಿ ಮೈಯಾಗೆ?' ತೆಪರೇಸಿಗೆ ಸಿಟ್ಟು ಬಂತು.

'ಶಾಂತಿ, ಶಾಂತಿ... ಶಾನ್ತಿರ ಶಾನ್ತಸ್ಯ ಕುತಂ ಸ್ವರ್ಗಂ' ಎಂದ ಪರ್ಮೇಶಿ.

'ಏನೋ ನಿಂಗೂ ಸಂಸ್ಕೃತ ಬರುತ್ತಾ? ಏನು ಹಂಗಂದ್ರೆ?'

'ಶಾಂತಿ ಇಲ್ಲದವನಿಗೆ ಸ್ವರ್ಗವಿಲ್ಲ ಅಂತ' ಪರ್ಮೇಶಿ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

ಚರ್ಚೆ

ಪುಸ್ತಕೋದ್ಯಮ: ಮುಳುವಾಗುತ್ತಿದೆ 'ಗಿಮಿಕ್'

ಗಟ್ಟಿ ಸಾಹಿತ್ಯದ ವಿನಾ ಲೇಖಕರು, ಪ್ರಕಾಶಕರ ಯಾವುದೇ ಗಿಮಿಕ್ ಲೇಖಕನನ್ನು ಜನಪ್ರಿಯ ಸಾಹಿತಿಯನ್ನಾಗಿಸುವುದಾಗಲಿ, ಪುಸ್ತಕೋದ್ಯಮಕ್ಕೆ ನೆರವಾಗುವುದಾಗಲಿ ಮಾಡಲಾರದು

• ರಾಜಕುಮಾರ ಕುಲಕರ್ಣಿ

ಕನ್ನಡ ಪುಸ್ತಕೋದ್ಯಮ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಪುಸ್ತಕ ಪ್ರಕಾಶಕ ಸೃಷ್ಟಿ ನಾಗೇಶ್ ತಮ್ಮ ಲೇಖನದ (ಚರ್ಚೆ, ಸೆ. 2) ಮೂಲಕ ಬೆಳಕು ಚೆಲ್ಲುವ ಪ್ರಯತ್ನ ಮಾಡಿದ್ದಾರೆ. ಅವರು ಹೇಳಿದಂತೆ, ಕೆಲವು ಪ್ರಭಾವಶಾಲಿ ಪ್ರಕಾಶಕರು ಮಾತ್ರ ಗ್ರಂಥಾಲಯ ಇಲಾಖೆಗೆ ಪುಸ್ತಕಗಳನ್ನು ಪೂರೈಸಿ ಹಣ ಮಾಡಿಕೊಳ್ಳುತ್ತಿದ್ದಾರೆ ಎನ್ನುವ ಮಾತು ಸತ್ಯಕ್ಕೆ ಹತ್ತಿರವಾಗಿದೆ. ಪ್ರಬಲ ಪ್ರಕಾಶಕರು ತಾವು ಹಣ ಗಳಿಸುವ ಉಮೇದಿನಲ್ಲಿ ಸಣ್ಣಪುಟ್ಟ ಪ್ರಕಾಶನ ಸಂಸ್ಥೆಗಳನ್ನು ಮೂಲೆಗುಂಪಾಗಿಸುತ್ತಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಪ್ರಕಾಶಕರ ನಡುವೆ ಅನಾರೋಗ್ಯಕರ ಸ್ಪರ್ಧೆ ಏರ್ಪಟ್ಟಿರುವುದು ಸುಳ್ಳಲ್ಲ. ಕೆಲವು ಪ್ರಕಾಶಕರು ಗ್ರಂಥಾಲಯ ಇಲಾಖೆಯನ್ನು ತಮ್ಮ ಕಪಿಮುಷ್ಟಿಯಲ್ಲಿ ಇಟ್ಟುಕೊಂಡಿದ್ದಾರೆ. ಪ್ರಭಾವಶಾಲಿಗಳು ಹತ್ತಾರು ಪ್ರಕಾಶನ ಸಂಸ್ಥೆಗಳ ಹೆಸರಿನಲ್ಲಿ ಪುಸ್ತಕಗಳನ್ನು ಪ್ರಕಟಿಸಿ ಗ್ರಂಥಾಲಯ ಇಲಾಖೆಗೆ ಪೂರೈಸುತ್ತಿದ್ದಾರೆ. ಒಬ್ಬ ಪ್ರಕಾಶಕ ಹತ್ತು ಹೆಸರುಗಳಿಂದ ಪುಸ್ತಕಗಳನ್ನು ಇಲಾಖೆಗೆ ಪೂರೈಸಿದರೆ ಆಗ ಒಂಬತ್ತು ಪ್ರಕಾಶಕರ ಅವಕಾಶಗಳನ್ನು ಕಸಿದುಕೊಂಡಂತೆ ಆಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಪ್ರಾಮಾಣಿಕವಾಗಿ ಒಂದೇ ಪ್ರಕಾಶನ ಸಂಸ್ಥೆಯ ಹೆಸರಿನಿಂದ ಪುಸ್ತಕಗಳನ್ನು ಪ್ರಕಟಿಸುತ್ತಿರುವ ಪ್ರಕಾಶಕರು ಬದುಕುಳಿಯುವುದಾದರೂ ಹೇಗೆ ಸಾಧ್ಯ?

ಇನ್ನು ಕೆಲವು ಪ್ರಕಾಶಕರು ಪುಸ್ತಕ ಪ್ರಕಾಶನವನ್ನು ಪುಸ್ತಕೋದ್ಯಮವಾಗಿಸಲು ಹಲವಾರು ತಂತ್ರಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಪುಸ್ತಕ ಬಿಡುಗಡೆ, ಮಾರಾಟ, ಚರ್ಚೆ, ಸಂವಾದ ಹೊಸ ಪರಿವೇಷದಲ್ಲಿ ಕಾಣಿಸತೊಡಗಿವೆ. ಪುಸ್ತಕ ಬಿಡುಗಡೆ ಕಾರ್ಯಕ್ರಮಕ್ಕೆ ಔತಣಕೂಟಗಳ ಮೆರುಗು ನೀಡಲಾಗುತ್ತಿದೆ. ಇದನ್ನೆಲ್ಲ ಆರ್ಥಿಕವಾಗಿ ಬಲಶಾಲಿಗಳಾದ ಪ್ರಕಾಶಕರು ಮಾತ್ರ ಮಾಡಲು ಸಾಧ್ಯ. ಹೀಗಾಗಿ, ಬಲಶಾಲಿಗಳಲ್ಲದವರು ಒಂದೆರಡು ಪುಸ್ತಕಗಳ ಪ್ರಕಟಣೆಯಲ್ಲೇ ಹೈರಾಣಾಗಿ ಪುಸ್ತಕ ಪ್ರಕಟಣೆಯ ಕೆಲಸವನ್ನೇ ಕೈಬಿಡುತ್ತಿದ್ದಾರೆ.

ಪ್ರತಿ ಪ್ರಕಾಶಕನೂ ಗ್ರಂಥಾಲಯ ಅವಲಂಬಿತನೆ ಎನ್ನುವುದು ಒಪ್ಪುವಂತಹ ಮಾತು. ಈ ವಿಷಯದಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆ ತನ್ನ ಯೋಜನೆ ಮತ್ತು ನಿಯಮಗಳಲ್ಲಿ ಬಹಳಷ್ಟು ಬದಲಾವಣೆ ತರುವ ಅಗತ್ಯವಿದೆ. ಒಂದು ಪ್ರಕಾಶನ ಸಂಸ್ಥೆಯಿಂದ ಒಂದೊಂದು ಪುಸ್ತಕದ ಮುನ್ನೂರು ಪ್ರತಿಗಳನ್ನು ಮಾತ್ರ ಇಲಾಖೆ ಖರೀದಿಸುತ್ತದೆ. ಆಯ್ಕೆ ಸಮಿತಿಯು ಪ್ರಕಾಶನ ಸಂಸ್ಥೆ ಒಂದು ವರ್ಷದಲ್ಲಿ ಪ್ರಕಟಿಸಿದ ಎಲ್ಲ ಪುಸ್ತಕಗಳನ್ನು ಆಯ್ಕೆ ಮಾಡಲಾರದು. ಆಯ್ಕೆಗೆಂದು ಕಳುಹಿಸಿದ ಪುಸ್ತಕಗಳಲ್ಲಿ ಯಾವುದೋ ಮಾನದಂಡವನ್ನಾಧರಿಸಿ ಕೆಲವು ಪುಸ್ತಕಗಳನ್ನು ಮಾತ್ರ ಆಯ್ಕೆ ಮಾಡಲಾಗುತ್ತದೆ. ಒಂದರ್ಥದಲ್ಲಿ ಇದು ಕುಂಭಕರ್ಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತೆ. ಇಲಾಖೆಯ ಈ ನಡೆಯನ್ನು ಗಮನಿಸಿಯೇ ಕೆಲವು ಪ್ರಕಾಶಕರು ತಾವು ಒಂದು ವರ್ಷದಲ್ಲಿ ಪ್ರಕಟಿಸಿದ ಒಟ್ಟು ಪುಸ್ತಕಗಳನ್ನು ಬೇರೆ ಬೇರೆ ಪ್ರಕಾಶನ ಸಂಸ್ಥೆಗಳ ಹೆಸರಿನಡಿ ಆಯ್ಕೆಗೆ ಕಳುಹಿಸುತ್ತಾರೆ. ಇದು ಇಲಾಖೆಗೆ ಗೊತ್ತಿಲ್ಲದ ಸತ್ಯವೇನಲ್ಲ.

ಇಂದು ಪ್ರಕಾಶಕರು ಮಾತ್ರವಲ್ಲ ಹೊಸ ಲೇಖಕರೂ ಸಂಕಷ್ಟದ ಹಾದಿಯಲ್ಲಿ ನಿಂತಿದ್ದಾರೆ. ಪ್ರಕಾಶಕರು ಹೊಸ ಲೇಖಕರ ಪುಸ್ತಕಗಳನ್ನು ಪ್ರಕಟಿಸಲು ಮುಂದೆ ಬರುತ್ತಿಲ್ಲ. ಹೊಸ ಲೇಖಕರು ಗೌರವಧನದ ಯಾವ ನಿರೀಕ್ಷೆಯೂ ಇಲ್ಲದೆ, ಯಾರಾದರೂ ತಮ್ಮ ಪುಸ್ತಕಗಳನ್ನು ಪ್ರಕಟಿಸಿದರೆ ಸಾಕು ಎನ್ನುವ ಮನಃಸ್ಥಿತಿಗೆ ತಲುಪಿದ್ದಾರೆ. ಸ್ಥಾಪಿತ ಹಾಗೂ ಜನಪ್ರಿಯ ಲೇಖಕರ ಪುಸ್ತಕಗಳನ್ನು ಪ್ರಕಟಿಸಲು ಮುಂದಾಗುವ ಪ್ರಕಾಶಕರಿಗೆ ಹೊಸ ಲೇಖಕರ ಪುಸ್ತಕಗಳನ್ನು ಪ್ರಕಟಿಸಲು ಬಂಡವಾಳ ಹೂಡುವ ಧೈರ್ಯ ಇಲ್ಲವಾಗಿದೆ. ಹಾಕಿದ ಬಂಡವಾಳ ವಾಪಸ್ ಆಗಲು ಹೆಚ್ಚಿನ ಪ್ರಕಾಶಕರು ನೆಚ್ಚಿಕೊಂಡಿರುವುದು ಗ್ರಂಥಾಲಯ ಇಲಾಖೆಯನ್ನು. ಅಲ್ಲಿಯೂ ನೂರೆಂಟು ರಾಜಕೀಯಗಳಿವೆ. ಪುಸ್ತಕಗಳನ್ನು ಪೂರೈಸಿ ಹಣ ಪಡೆಯುವುದು ಒಂದು ಹರಸಾಹಸದ ಕೆಲಸ. ಜೊತೆಗೆ ಗ್ರಂಥಾಲಯ ಇಲಾಖೆಗೆ ಪುಸ್ತಕಗಳನ್ನು ಪೂರೈಸಲು ಪ್ರಬಲ ಪ್ರಕಾಶನ ಸಂಸ್ಥೆಗಳೊಂದಿಗೆ ಸ್ಪರ್ಧೆಗೆ ಇಳಿಯಬೇಕಾದ ವಾತಾವರಣ ನಿರ್ಮಾಣವಾಗಿದೆ. ಇಲ್ಲಿ ಪ್ರಭಾವಶಾಲಿ ಪ್ರಕಾಶಕ ಮಾತ್ರ ಸ್ಪರ್ಧೆಯಲ್ಲಿ ಗೆಲುವು ಸಾಧಿಸುತ್ತಾನೆ.



ಇನ್ನು ಕೆಲವು ಲೇಖಕರು ಸ್ವತಃ ಪ್ರಕಾಶಕರಾಗಿ ಪುಸ್ತಕಗಳನ್ನು ಪ್ರಕಟಿಸುತ್ತಿದ್ದಾರೆ. ಅಚ್ಚರಿಯ ಸಂಗತಿ ಎಂದರೆ, ಪುಸ್ತಕ ಪ್ರಕಟಿಸಿದ ನಾಲ್ಕೈದು ತಿಂಗಳಲ್ಲಿ ಎರಡನೇ ಮುದ್ರಣವನ್ನು ಹೊರತರುತ್ತಿದ್ದಾರೆ. ಓದುಗರ ನಿರುತ್ಸಾಹ, ಗ್ರಂಥಾಲಯ ಇಲಾಖೆಯ ಅಸಹಕಾರ, ಪುಸ್ತಕ ಮಳಿಗೆಗಳ ಕೊರತೆಯ ನಡುವೆ ಕೆಲವು ಲೇಖಕರು ಕಡಿಮೆ ಅವಧಿಯಲ್ಲಿ ಎರಡನೇ ಮುದ್ರಣವನ್ನು ತರುತ್ತಿದ್ದಾರೆ. ಬರೀ ಇನ್ನೂರು, ಮುನ್ನೂರು ಪ್ರತಿಗಳನ್ನು ಪ್ರಕಟಿಸಿ, ಮೊದಲ ಮುದ್ರಣದ ಪ್ರತಿಗಳೆಲ್ಲ ಖಾಲಿಯಾದವು ಎನ್ನುವಂತಹ ವಾತಾವರಣವನ್ನು ಸೃಷ್ಟಿಸುತ್ತಿದ್ದಾರೆ ಎಂದು ನಾಗೇಶ್ ತಮ್ಮ ಲೇಖನದಲ್ಲಿ ಉಲ್ಲೇಖಿಸಿದ್ದಾರೆ. ಇಂತಹ ಕೃತ್ಯಗಳು ಆ ಲೇಖಕನನ್ನು ಜನಪ್ರಿಯ ಸಾಹಿತಿಯನ್ನಾಗಿ ರೂಪಿಸುವುದಾಗಲಿ ಮತ್ತು ಪುಸ್ತಕೋದ್ಯಮಕ್ಕೆ ನೆರವಾಗುವುದಾಗಲಿ ಮಾಡಲಾರವು. ಕೊನೆಗೂ ಓದುಗರ ವಲಯದಲ್ಲಿ ಹೆಚ್ಚು ದಿನಗಳ ಕಾಲ ನೆನಪಿನಲ್ಲಿ ಉಳಿಯುವುದು ಗಟ್ಟಿ ಸಾಹಿತ್ಯವೇ ವಿನಾ ಇಂತಹ ಗಿಮಿಕ್‌ಗಳಲ್ಲ. ಲೇಖಕರು ಮತ್ತು ಪ್ರಕಾಶಕರ ಇಂತಹ ಗಿಮಿಕ್‌ಗಳು ಪ್ರಕಾಶನ ಸಂಸ್ಥೆಗಳಿಗೆ ಮುಳುವಾಗುತ್ತಿವೆ.

ಪುಸ್ತಕಗಳ ಮಾರಾಟದ ವಿಷಯದಲ್ಲಿ ಪ್ರಕಾಶಕರ ನಡುವೆ ಒಂದು ಸೌಹಾರ್ದ ವಾತಾವರಣ ಸೃಷ್ಟಿಯಾಗಬೇಕು. ಆ ಮೂಲಕ ಪ್ರಕಾಶಕ ಮತ್ತು ಲೇಖಕ ಬೆಳೆಯುವಂತಾಗಬೇಕು. ಸದ್ಯದ ಸಂದರ್ಭದಲ್ಲಿ ಇಂತಹದ್ದೊಂದು ವಾತಾವರಣ ಸೃಷ್ಟಿಯಾಗುವ ಯಾವ ಸುಳಿವೂ ಗೋಚರಿಸುತ್ತಿಲ್ಲ.

ವಾಚಕರ ವಾಣಿ

ಸಾಹಿತ್ಯ ಸಮ್ಮೇಳನ: ಸಾಹಿತ್ಯಲೋಕದವರೇ ಅಧ್ಯಕ್ಷರಾಗಲಿ

ಮಂಡ್ಯದಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಆಯ್ಕೆಗೆ ಸಂಬಂಧಿಸಿದಂತೆ ಕನ್ನಡ ಸಾಹಿತ್ಯ ಪರಿಷತ್ತು ಸಾಹಿತ್ಯೇತರರ ಕಡೆ ಒಲವು ತೋರಿ, ಕೆಲವರ ಹೆಸರನ್ನು ಪ್ರಸ್ತಾಪಿಸಿದೆ. ಈ ವ್ಯಕ್ತಿಗಳು ಅವರವರ ಕ್ಷೇತ್ರಗಳಲ್ಲಿ ಮಾಡಿರುವ ಸಾಧನೆಯ ಬಗ್ಗೆ ನಾಡಿಗೆ ಹೆಮ್ಮೆ ಮತ್ತು ಗೌರವ ಇದೆ. ಆದರೆ ಸಾಹಿತ್ಯ ಸಮ್ಮೇಳನ ಸಂಪೂರ್ಣವಾಗಿ ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಸಾಹಿತ್ಯದ ಚರ್ಚೆಗೆ ಮೀಸಲಾದ ನುಡಿ ಸಂಭ್ರಮ ಎಂಬುದನ್ನು ಕಸಾಪ ಮರೆಯಬಾರದು. ಹೊಸತನಕ್ಕೆ ನಾಂದಿ ಹಾಡುವ ಭರದಲ್ಲಿ ಅಕ್ಷರ ಜಾತ್ರೆಯ ಘನತೆಗೆ ಧಕ್ಕೆ ತರಬಾರದು. ಸಾಹಿತ್ಯ ಕ್ಷೇತ್ರದವರನ್ನೇ ಅಧ್ಯಕ್ಷರನ್ನಾಗಿ ಆಯ್ಕೆ ಮಾಡುವುದು ಎಲ್ಲ ದೃಷ್ಟಿಯಿಂದಲೂ ಹೆಚ್ಚು ಔಚಿತ್ಯ ಮತ್ತು ಅರ್ಥಪೂರ್ಣ. ಇದನ್ನು ಕಸಾಪ ಮನದಟ್ಟು ಮಾಡಿಕೊಳ್ಳಬೇಕು.

ಲೋಕೇಶ ಬೆಕ್ಕಳಲೆ, ಮಂಡ್ಯ

ರಸ್ತೆ ಅತಿಕ್ರಮಿಸುವ 'ಅಕ್ರಮಾದಿತ್ಯರು'

ಬೆಂಗಳೂರು ನಗರದಲ್ಲಿ ಪ್ರಮುಖ ರಾಜಕಾಲುವೆಗಳ ಇಕ್ಕೆಲಗಳಲ್ಲಿ 30ರಿಂದ 40 ಅಡಿ ವಿಸ್ತೀರ್ಣದ ರಸ್ತೆಯನ್ನು ನಿರ್ಮಿಸುವುದಾಗಿ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ರಾಜಕಾಲುವೆಗಳ ಇಕ್ಕೆಲಗಳಲ್ಲಿ ಹೊಸದಾಗಿ ರಸ್ತೆಗಳನ್ನು ನಿರ್ಮಿಸಬೇಕಾಗಿಲ್ಲ. ಇದ್ದ ರಸ್ತೆಗಳನ್ನು ಅತಿಕ್ರಮಿಸಿಕೊಂಡವರಿಂದ ಬಿಡಿಸಿಕೊಂಡರೆ ಸಾಕು. ರೈಲು ಮಾರ್ಗ, ವಿದ್ಯುತ್ ಹೈಟೆನ್ಷನ್ ಮಾರ್ಗ ಹಾಗೂ ರಾಜಕಾಲುವೆಗಳ ಎರಡೂ ಬದಿಗಳಲ್ಲಿ 30ರಿಂದ 40 ಅಡಿ ವಿಸ್ತೀರ್ಣದ ರಸ್ತೆಗಳನ್ನು ಅದಾಗಲೇ ನಿರ್ಮಿಸಲಾಗಿರುತ್ತದೆ. ಇದನ್ನು ಬಫರ್ ಜೋನ್ ಎನ್ನುತ್ತಾರೆ. ಈ ಪ್ರದೇಶಗಳನ್ನು ಸ್ವಚ್ಛಗೊಳಿಸಲು, ದುರಸ್ತಿ ಮಾಡಲು ಜೆಸಿಬಿ, ಟ್ರ್ಯಾಕ್ಟರ್, ಲಾರಿಯಂತಹ ವಾಹನಗಳು ಸಂಚರಿಸಲು ಅನುಕೂಲವಾಗಲೆಂದು ಈ ಬಫರ್ ಜೋನ್‌ಗಳನ್ನು ನಿರ್ಮಿಸಲಾಗಿರುತ್ತದೆ.

ಒಂದುವೇಳೆ ಅವು ಮಾಯವಾಗಿದ್ದರೆ ಅವುಗಳನ್ನು 'ಅಕ್ರಮಾದಿತ್ಯರು' ರಾಜಾರೋಷವಾಗಿ ಅತಿಕ್ರಮಿಸಿಕೊಂಡಿದ್ದಾರೆಂದೇ ಅರ್ಥ! ಅಂತಹವರ ವಿರುದ್ಧ ಕ್ರಮ ಕೈಗೊಂಡು ಆ ರಸ್ತೆಗಳನ್ನು ತೆರವುಗೊಳಿಸಿದರೆ ರಾಜಕಾಲುವೆಯನ್ನು ಉಳಿಸಿದಂತಾಗುತ್ತದೆ, ಅದರೊಂದಿಗೆ ಸಾರ್ವಜನಿಕರ ಸಂಚಾರಕ್ಕೂ ಅನುಕೂಲವಾಗುತ್ತದೆ.

ಪಿ.ಜೆ.ರಾಘವೇಂದ್ರ, ಮೈಸೂರು

ಪ್ರಶಸ್ತಿ ನೀಡಿಕೆ: ಬೇಡ ಎಡಬಿಡಂಗಿತನ

ಪ್ರಶಸ್ತಿಗಳನ್ನು ನೀಡುವ ಮೊದಲು ಕೂಲಂಕಷವಾಗಿ ಪರಿಶೀಲಿಸಬೇಕು. ಕೊಡದಿದ್ದರೆ ನಡೆಯುತ್ತದೆ. ಆದರೆ ಪ್ರಕಟಿಸಿ ನಂತರ ಹಿಂಪಡೆಯುವ ಸರ್ಕಾರದ ನಿರ್ಧಾರ ಸರಿಯಲ್ಲ (ಪ್ರ.ವಾ., ಸೆ. 5). ಹೀಗೆ ಮಾಡಿದರೆ, ಒಂದು ರೀತಿಯಲ್ಲಿ ಸರ್ಕಾರ ತನ್ನ ಮೇಲೆ ತಾನೇ ಅವಿಶ್ವಾಸ ಮಂಡಿಸಿದಂತೆ. ಹೆಸರು ಘೋಷಣೆಯಾಗಿದ್ದವರ ಮಾನಸಿಕ ತೊಳಲಾಟವು ಅವರಿಗೆ ನೀಡುವ ಹಿಂಸೆಯೇ ಸರಿ. ಸರ್ಕಾರದಿಂದ ಈ ತೆರನಾದ ಎಡಬಿಡಂಗಿತನ ಬೇಡ.

ಅನಿಲಕುಮಾರ ಮುಗಳಿ, ಧಾರವಾಡ

ಗಣೇಶೋತ್ಸವದಲ್ಲಿ ಮಕ್ಕಳು ತೊಡಗಲಿ

ಸಾರ್ವಜನಿಕ ಗಣೇಶೋತ್ಸವದಲ್ಲಿ ಮಕ್ಕಳು ಭಾಗವಹಿಸುವಂತೆ ಪೋಷಕರು ಪ್ರೋತ್ಸಾಹಿಸುವುದು ಒಳಿತು. ಮಕ್ಕಳು ತಮ್ಮ ಬಡಾವಣೆಯ ಸಾರ್ವಜನಿಕ ಗಣೇಶೋತ್ಸವದ ಉಸ್ತುವಾರಿ ವಹಿಸಿಕೊಳ್ಳಲು ಹೋದರೆ ಪೋಷಕರು ತಡೆಯಬಾರದು. ಏಕೆಂದರೆ, ಈ ಹಬ್ಬ ಬರೀ ಸಂಪ್ರದಾಯ ಪಾಲನೆಯನ್ನಲ್ಲ, ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್, ಟೀಮ್‌ವರ್ಕ್ ಮತ್ತು ಸಮಸ್ಯೆ ಪರಿಹರಿಸುವಂತಹ ಅಮೂಲ್ಯವಾದ ಜೀವನ ಕೌಶಲಗಳನ್ನೂ ಕಲಿಸುತ್ತದೆ.

ಗಣೇಶೋತ್ಸವದ ತಯಾರಿಯಲ್ಲಿ ನಿರತರಾದ ಮಕ್ಕಳು ಅಥವಾ ಯುವಕರ ಗುಂಪು ನಿಜಕ್ಕೂ ಸಂಘಟನೆಯ ರೂಪದಲ್ಲಿ ಕಾರ್ಯೋನ್ಮುಖವಾಗುತ್ತದೆ. ಮಂಟಪಕ್ಕೆ ಸರಿಯಾದ ಸ್ಥಳವನ್ನು ಆಯ್ಕೆ ಮಾಡುವುದರಿಂದ ಮೊದಲಾಗಿ, ನಿಧಿ ಸಂಗ್ರಹಿಸುವುದು, ಸೂಕ್ತ ಕಾನೂನು ನಿಯಮ ಪಾಲಿಸಲು ಅನುಮತಿ ಪಡೆಯುವುದು, ವಿವಿಧ ವೆಚ್ಚಗಳ ಬಜೆಟ್ ತಯಾರಿ, ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಯ ನೀಲನಕ್ಷೆ... ಹೀಗೆ ಈ ಎಲ್ಲಾ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಪ್ರಾಯೋಗಿಕ ಅನುಭವವನ್ನು ಪಡೆಯುತ್ತದೆ. ಬಹುಶಃ ಯಾವುದೇ ಶಾಲೆ ಅಥವಾ ವಿಶ್ವವಿದ್ಯಾಲಯವೂ ಕಲಿಸದ ಜೀವನ ಕೌಶಲಗಳನ್ನು ಮಕ್ಕಳು ಇಲ್ಲಿ ಕಲಿಯುತ್ತಾರೆ.

ಮಕ್ಕಳು ಸಮುದಾಯದಲ್ಲಿ ಬೆರೆತು, ಜನರೊಂದಿಗೆ ಮಾತನಾಡುತ್ತಾ ಹಬ್ಬಕ್ಕೆ ಚಂದಾ ಮತ್ತು ಕೊಡುಗೆಗಳನ್ನು ಕೇಳುವುದರಿಂದ ಒಂದು ರೀತಿಯ ಹಣಕಾಸಿನ ನಿರ್ವಹಣೆ ಮತ್ತು ನಿಧಿ ಸಂಗ್ರಹಿಸುವಲ್ಲಿನ ನೈಜ ಪ್ರಪಂಚದ ಅರಿವು ಅವರಿಗಾಗುತ್ತದೆ. ಮಾತುಕತೆಯ ಕಲೆಯನ್ನೂ ಕಲಿಸುತ್ತದೆ. ಇದುವೇ ಕಾಲೇಜು ಮತ್ತು ಶಾಲೆಗಳು ಬೋಧಿಸುವ ಮಾರ್ಕೆಟಿಂಗ್ ಕೌಶಲ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಅವಶ್ಯವಾಗಿರುವ ಪ್ರಮುಖ ಜೀವನಕೌಶಲವೆಂದರೆ ಅದು ನಾಯಕತ್ವ. ಅಲಂಕಾರ, ಪ್ರಸಾದ ತಯಾರಿ, ಗಣ್ಯರನ್ನು ಆಹ್ವಾನಿಸುವಂತಹ ಚಟುವಟಿಕೆಗಳಿಂದ ಮಕ್ಕಳು ತಂಡವನ್ನು ಹೇಗೆ ಮುನ್ನಡೆಸಬೇಕು, ನಿರ್ಧಾರಗಳನ್ನು ತೆಗೆದುಕೊಳ್ಳುವುದು ಹಾಗೂ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದು ಹೇಗೆ ಎಂಬುದನ್ನು ಕಲಿಯುತ್ತಾರೆ. ಈ ಸಂದರ್ಭದಲ್ಲಿ ಯಾವುದೇ ಬಗೆಯ ಅಹಿತಕರ ಘಟನೆ ನಡೆಯದಂತೆ ಪೋಷಕರಿಂದ ಸೂಕ್ತ ಮುನ್ನೆಚ್ಚರಿಕೆ ಮತ್ತು ಮಾರ್ಗದರ್ಶನ ಅವಶ್ಯ.

ಉದಯ ಆರಾಧ್ಯ ಟಿ.ಎಸ್., ತೂಬಗೆರೆ, ದೊಡ್ಡಬಳ್ಳಾಪುರ

ಈಡುಗಾಯಿ!

ಹಗರಣಗಳಿಂದ
ಹಣ್ಣುಗಾಯಿ
ನೀರುಗಾಯಿ!
ವಿಚಾರವಂತರೂ
ಕುಂಕುಮ ಹಚ್ಚಿ
ಒಡೆಯುವರು
ಚಾಮುಂಡಿಗೆ
ಈಡುಗಾಯಿ!

ಎಲ್.ಎನ್.ಪ್ರಸಾದ್
ತುರುವೇಕೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬ್ರೂನೈ ಸುಲ್ತಾನ ವಿಲಾಸಿ ಜೀವನ

ಅವರು ಒಂದು ಪುಟ್ಟ ದೇಶದ ದೊರೆ. ಆದರೆ, ಅವರ ಕೀರ್ತಿ ದೊಡ್ಡದು. ಆ ಕೀರ್ತಿಗೆ ಕಾರಣ ಆ ರಾಜನ ಬಳಿ ಇರುವ ಸಂಪತ್ತು ಮತ್ತು ಅವರ ಐಷಾರಾಮಿ ಜೀವನ ಶೈಲಿ. ಗಿನ್ನಿಸ್ ದಾಖಲೆ ಸೇರಿರುವ ಅರಮನೆ, ಅವರ ಬಳಿ ಇರುವ ಕಾರುಗಳು, ಕಟ್ಟಿಸಿರುವ ಮಸೀದಿ ಎಲ್ಲವೂ ಆ ಸುಲ್ತಾನನ ಸಿರಿವಂತಿಕೆಯ ಪ್ರತೀಕಗಳಂತಿವೆ. ಅವರ ಹೆಸರು ಹಸನಲ್ ಬೊಲ್ಕಿಯಾ. ಅವರ ಅಷ್ಟೈಶ್ವರ್ಯ, ವೈಭೋಗದ ಬಗ್ಗೆ ತಿಳಿಯುತ್ತಾ ಹೋದಂತೆ ಅದು ದಂತಕತೆಯಂತೆ ಭಾಸವಾಗುತ್ತದೆ

• ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.

ಜಗತ್ತಿನ ಭೂಪಟದಲ್ಲಿರುವ ಪುಟ್ಟ ದೇಶ ಬ್ರೂನೈ. ರಾಜಮನೆತನದ ಆಡಳಿತಕ್ಕೆ ಒಳಪಟ್ಟ ಆಗ್ನೇಯ ಏಷ್ಯಾದಲ್ಲಿರುವ ಈ ರಾಷ್ಟ್ರಕ್ಕೆ ಎರಡು ದಿನಗಳ ಹಿಂದೆಯಷ್ಟೆ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡಿ ವಾಪಸ್ ಆಗಿದ್ದಾರೆ. ನಮ್ಮ ಕೆಲವು ತಾಲ್ಲೂಕು ಕೇಂದ್ರಗಳಿಗಿಂತಲೂ ಪುಟ್ಟದಾದ ಈ ದೇಶದ ದೊರೆ, ಸುಲ್ತಾನ್ ಹಸನಲ್ ಬೊಲ್ಕಿಯಾ. ವಿಲಾಸಿ ಜೀವನ ಶೈಲಿಯಿಂದಾಗಿ ಸದಾ ಸುದ್ದಿಯಲ್ಲಿರುವ ಈ ಸುಲ್ತಾನ, ಜಗತ್ತಿನ ಶ್ರೀಮಂತರ ಪಟ್ಟಿಯಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುತ್ತಾರೆ. ಅವರ ಆಸ್ತಿಯ ಮೌಲ್ಯ ಅಂದಾಜು ₹2.35 ಲಕ್ಷ ಕೋಟಿ (2,800 ಕೋಟಿ ಡಾಲರ್)!

ಅವರ ಸಂಪತ್ತಿಗೆ ತಕ್ಕಂತೆ ಅವರ ಅರಮನೆ ಕೂಡ ದೊಡ್ಡದೇ. ಬ್ರೂನೈನ ರಾಜಧಾನಿಯಾದ ಬಂದಾರ್ ಸೆರಿ ಬೆಗವಾನ್‌ನಲ್ಲಿರುವ ಇಸ್ತಾನಾ ನೂರುಲ್ ಇಮಾನ್ ಜಗತ್ತಿನ ಅತಿ ದೊಡ್ಡ ಅರಮನೆ ಎಂದು ಹೆಸರಾಗಿದ್ದು, ಗಿನ್ನಿಸ್ ದಾಖಲೆಗೆ ಕೂಡ ಪಾತ್ರವಾಗಿದೆ. ಅರಮನೆಯ ಮೇಲೆ ಹೊಂಬಣ್ಣ ಸೂಸುವ, 24 ಕ್ಯಾರೆಟ್ ಬಂಗಾರದ ಗುಮ್ಮಟವು ಅದರ ವೈಭವಕ್ಕೆ ಸಾಕ್ಷಿ.

ಚಿನ್ನದ ಬಗ್ಗೆ ಅವರಿಗೆ ಇನ್ನಿಲ್ಲದ ಮೋಹ. ಅವರ ಅರಮನೆಯ ಪೀಠೋಪಕರಣ ಚಿನ್ನದ ಲೇಪನ ಹೊಂದಿವೆ. ನಗರದಲ್ಲಿರುವ ಮಸೀದಿಯ ಗುಮ್ಮಟಕ್ಕೂ ಚಿನ್ನದ ಲೇಪನ ಮಾಡಲಾಗಿದೆ. 30 ಬಂಗಾಳದ ಹುಲಿಗಳು ಮತ್ತು ಇತರ ಪಕ್ಷಿ ಪ್ರಭೇದಗಳಿರುವ ಖಾಸಗಿ ಪ್ರಾಣಿ ಸಂಗ್ರಹಾಲಯವೂ ಇಲ್ಲಿದೆ. 7000 ಕ್ಕೂ ಹೆಚ್ಚು ಕಾರುಗಳು, ದುಬಾರಿ ವಿಮಾನಗಳ ಒಡೆಯರಾಗಿರುವ ಅವರು, ಪೈಲಟ್ ಲೈಸೆನ್ಸ್ ಕೂಡ ಹೊಂದಿದ್ದಾರೆ. ಕ್ಷೌರ ಮಾಡಿಸುವುದಕ್ಕಾಗಿ ಪ್ರತಿ ಬಾರಿ ಸ್ವಂತ ವಿಮಾನದಲ್ಲಿ ಲಂಡನ್‌ಗೆ ತೆರಳುವ ಅವರು ಕೇಶ ವಿನ್ಯಾಸಕಾರನಿಗೆ ₹16.80 ಲಕ್ಷ ಪಾವತಿಸುತ್ತಾರಂತೆ!

ಹಸನಲ್ ಬೊಲ್ಕಿಯಾ ಬ್ರೂನೈನ 29ನೇ ಸುಲ್ತಾನರಾಗಿ 1968ರ ಆಗಸ್ಟ್ 1ರಂದು ಪಟ್ಟವೇರಿದರು. ಬ್ರಿಟನ್ ರಾಣಿ ಎಲಿಜಬೆತ್ –2 ನಂತರ ಅತಿ ದೀರ್ಘ ಕಾಲ ಅಧಿಕಾರದಲ್ಲಿರುವ ದೊರೆ ಎಂಬ ಖ್ಯಾತಿ ಗಳಿಸಿದ್ದಾರೆ. 600 ವರ್ಷಗಳಿಂದ ಇವರ ವಂಶಜರೇ ದೇಶವನ್ನು ಆಳುತ್ತಿದ್ದಾರೆ ಎನ್ನಲಾಗುತ್ತಿದೆ.

19ನೇ ಶತಮಾನದಲ್ಲಿ ಬ್ರಿಟಿಷರ ಆಧಿಪತ್ಯಕ್ಕೆ ಒಳಪಟ್ಟಿದ್ದ ದೇಶವು 1984ರಲ್ಲಿ ಸ್ವಾತಂತ್ರ್ಯ ಪಡೆಯಿತು. ಬ್ರಿಟಿಷರ ನಿರ್ಗಮನದ ನಂತರ ಹಸನಲ್ ಬೊಲ್ಕಿಯಾ ಅವರು ದೇಶವನ್ನು ವ್ಯಾಪಕವಾಗಿ ಸುತ್ತಿ ಜನರನ್ನು ತಮ್ಮತ್ತ ಸೆಳೆದುಕೊಳ್ಳುವ ಮೂಲಕ ತಮ್ಮ ಅಧಿಕಾರ ಸ್ಥಾಪಿಸಿದ್ದರು.

ಸಿರಿವಂತಿಕೆಗೆ ಏನು ಕಾರಣ?: ರಾಜನಷ್ಟೇ ಅಲ್ಲ, ಈ ಪುಟ್ಟ ದೇಶದ ಪ್ರಜೆಗಳೂ ಕೂಡ ಶ್ರೀಮಂತರೇ. ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯ ಪ್ರಕಾರ, ಬ್ರೂನೈನ ಜನರ ವಾರ್ಷಿಕ ತಲಾ ಆದಾಯ ₹30,22,882. ಜಗತ್ತಿನ ಅತ್ಯಂತ ಶ್ರೀಮಂತ ರಾಷ್ಟ್ರಗಳಲ್ಲೊಂದಾಗಿರುವ ಬ್ರೂನೈನಲ್ಲಿ ಜನರು ಆದಾಯ ತೆರಿಗೆ ಪಾವತಿಸುವುದಿಲ್ಲ. ರಾಜ ಪ್ರಜೆಗಳಿಗೆ ಮನೆ ಮತ್ತು ಇತರ ಮೂಲಸೌಕರ್ಯಗಳನ್ನು ಉಚಿತವಾಗಿ ಒದಗಿಸುತ್ತಾರೆ.

ರಾಜನ ವೈಭೋಗ ಮತ್ತು ಐಷಾರಾಮಿತನದ ಹಿಂದಿರುವುದು ತೈಲ ಮತ್ತು ಅನಿಲ ನಿಕ್ಷೇಪಗಳು. ಸುಲ್ತಾನನಾದ ಹಸನಲ್ ಬೊಲ್ಕಿಯಾ ದೇಶದ ಮೇಲೆ ನಿರಂಕುಶ ಅಧಿಕಾರ ಹೊಂದಿದ್ದು, ಸಂಸತ್ ಆಗಲಿ, ಇತರೆ ಮಂತ್ರಿಗಳಾಗಲಿ ಅವರ ಅಧೀನರಾಗಿರುತ್ತಾರೆ. ದೇಶದ ಪ್ರಧಾನಿ, ರಕ್ಷಣಾ ಸಚಿವ, ಹಣಕಾಸು ಸಚಿವ ಎಲ್ಲವೂ ಸುಲ್ತಾನನೇ. ಇಲ್ಲಿ ಅವರು ಹೇಳಿದ್ದೇ ಶಾಸನ, ಮಾಡಿದ್ದೇ ಕಾನೂನು. ದೇಶದಲ್ಲಿ1962ರಲ್ಲಿ ಹೇರಲಾಗಿದ್ದ ತುರ್ತು ಪರಿಸ್ಥಿತಿ ಇಂದಿಗೂ ಜಾರಿಯಲ್ಲಿದೆ. ಭಿನ್ನಮತ, ವಿರೋಧ, ಪ್ರತಿಭಟನೆಗಳಿಗೆ ಇಲ್ಲಿ ಅವಕಾಶವಿಲ್ಲ. ವಾಕ್ ಸ್ವಾತಂತ್ರ್ಯವಾಗಲಿ, ಪತ್ರಿಕಾ ಸ್ವಾತಂತ್ರ್ಯವಾಗಲಿ ಇಲ್ಲ.

ಮುಸ್ಲಿಂ ರಾಷ್ಟ್ರ : ದೇಶದಲ್ಲಿ ಹಿಂದೆ ಬೌದ್ಧ ಮತ್ತು ಹಿಂದೂ ಧರ್ಮಗಳ ಪ್ರಭಾವವೂ ಸ್ವಲ್ಪ ಇತ್ತು. ದೇಶದ ದೊರೆಗಳು 14ನೇ ಶತಮಾನದಲ್ಲಿ ಮುಸ್ಲಿಂ ಧರ್ಮಕ್ಕೆ ಮತಾಂತರಗೊಂಡ ನಂತರ ಇದು ಮುಸ್ಲಿಂ ದೇಶವಾಯಿತು. ಇಲ್ಲಿ ಶೇ 80ರಷ್ಟು ಮುಸ್ಲಿಮರಿದ್ದಾರೆ. ಮಲಯ ಭಾಷೆ, ಸಂಸ್ಕೃತಿ, ಪದ್ಧತಿ ಇಲ್ಲಿ ಆಚರಣೆಯಲ್ಲಿದೆ.

2014ರಲ್ಲಿ ದೇಶದ ದಂಡ ಸಂಹಿತೆಗೆ ಷರಿಯಾ ಕಾನೂನನ್ನು ಅಳವಡಿಸಿಕೊಳ್ಳುವ ಮೂಲಕ, ಷರಿಯಾ ಕಾನೂನನ್ನು ಅಳವಡಿಸಿಕೊಂಡ ಆಗ್ನೇಯ ಏಷ್ಯಾದ ಮೊದಲ ದೇಶ ಎಂದು ಬ್ರೂನೈ ಗುರುತಿಸಿಕೊಂಡಿತ್ತು. 2019ರಲ್ಲಿ ಮತ್ತಷ್ಟು ಕಠಿಣ ಕಾನೂನು ಜಾರಿ ಮಾಡಿತು. ವ್ಯಭಿಚಾರ, ಸಲಿಂಗ ಕಾಮದಂಥ ಕೆಲವು ಅಪರಾಧಗಳಿಗೆ, ಕೈಕಾಲು ಮುರಿಯುವುದು ಮತ್ತು ಕಲ್ಲು ಹೊಡೆದು ಸಾಯಿಸುವುದರಂಥ ಕ್ರೂರ ಶಿಕ್ಷೆಗಳು ಅದರಲ್ಲಿದ್ದವು. ಅವಕ್ಕೆ ವಿಶ್ವಸಂಸ್ಥೆಯೂ ಸೇರಿದಂತೆ ಜಾಗತಿಕ ಮಟ್ಟದಲ್ಲಿ ತೀವ್ರ ವಿರೋಧ ವ್ಯಕ್ತವಾಗಿದ್ದರಿಂದ ಆ ಕಾನೂನು ಜಾರಿಗೆ ಬರಲಿಲ್ಲ.

ಬ್ರೂನೈ ರಾಜಧಾನಿ ಬಂದಾರ್ ಸೆರಿ ಬೆಗವಾನ್‌ನಲ್ಲಿರುವ ಚಿನ್ನ ಲೇಪಿತ ಗೋಪುರವಿರುವ ಮಸೀದಿಯಲ್ಲಿ ನಡೆದಿದ್ದ ಸುಲ್ತಾನನ ಮಕ್ಕಳ ಮದುವೆಗಳು ಬ್ರೂನೈನ ಅದ್ದೂರಿತನ, ಐಷಾರಾಮಿ ಬದುಕು ಮತ್ತು ಕಣ್ಣುಕುಕ್ಕುವ ಸಂಪತ್ತನ್ನು ಜಗತ್ತಿನ ಮುಂದಿಟ್ಟಿದ್ದವು. 2017ರಲ್ಲಿ ನಡೆದಿದ್ದ ಸುಲ್ತಾನನ ಪಟ್ಟಾಭಿಷೇಕದ ಸುವರ್ಣಮಹೋತ್ಸವ ಹಿಂದೆಂದೂ ಕಂಡು ಕೇಳರಿಯದ ರೀತಿಯಲ್ಲಿ ವೈಭವಯುತವಾಗಿ ನಡೆದಿತ್ತು.

ಆಡಳಿತದಲ್ಲಿ ಚಾಣಾಕ್ಷರಾಗಿರುವ ಸುಲ್ತಾನ, ಪ್ರತಿಕೂಲ ಪರಿಸ್ಥಿತಿಯನ್ನು ಸಮರ್ಥವಾಗಿ ನಿರ್ವಹಿಸುವುದಕ್ಕೆ ಹೆಸರುವಾಸಿ. ಕಿರಿಯ ಸೋದರ ಜಾಫ್ರಿ ಬೊಲ್ಕಿಯಾ ಹಣಕಾಸು ಸಚಿವರಾಗಿದ್ದಾಗ (1990ರಲ್ಲಿ) ಕೋಟ್ಯಂತರ ರೂಪಾಯಿ ಅವ್ಯವಹಾರ ಮಾಡಿದ್ದಾರೆ ಎನ್ನುವ ಆರೋಪಗಳು ಕೇಳಿ ಬಂದಿದ್ದವು. ಅದು ಸುಲ್ತಾನ ಮತ್ತು ತಮ್ಮನ ನಡುವೆ ಮನಸ್ತಾಪಕ್ಕೆ ಕಾರಣವಾಗಿತ್ತು. ತಮ್ಮನನ್ನು ಅಧಿಕಾರದಿಂದಲೂ ಅವರು ಕಿತ್ತೊಗೆದಿದ್ದರು.

ಐದು ದಶಕಗಳಿಗಿಂತಲೂ ಹೆಚ್ಚು ಕಾಲದಿಂದ ಸುಲ್ತಾನನ ಪಟ್ಟದಲ್ಲಿರುವ ಹಸನಲ್‌ಗೆ ಈಗ 77 ವರ್ಷ ವಯಸ್ಸು. ವಿರೋಧವೇ ಇಲ್ಲದ ಸರ್ವಾಧಿಕಾರಿ. ಇತ್ತೀಚಿನ ವರ್ಷಗಳಲ್ಲಿ ಅವರ ಜನಪ್ರಿಯತೆಗೆ ಕುಂದು ತರುವ ಕೆಲವು ವಿದ್ಯಮಾನಗಳು ಘಟಿಸಿವೆ.

ಅರಮನೆಯಲ್ಲಿ ಏನೇನಿದೆ?

21.5 ಲಕ್ಷ ಚದರ ಅಡಿ ಇಸ್ತಾನಾ ನೂರುಲ್ ಇಮಾನ್ ಅರಮನೆಯ ವಿಸ್ತೀರ್ಣ

1,788 ಕೊಠಡಿಗಳು

257 ಸ್ನಾನದ ಕೋಣೆಗಳು

5 ಈಜುಕೊಳಗಳು

5,000 ಬ್ಯಾಂಕ್ವೆಟ್ ಹಾಲ್‌ನಲ್ಲಿ ಏಕಕಾಲಕ್ಕೆ ಕುಳಿತುಕೊಳ್ಳಬಹುದಾದ ಅತಿಥಿಗಳ ಸಂಖ್ಯೆ

₹11,760 ಕೋಟಿ ನಿರ್ಮಾಣದ ಅಂದಾಜು ವೆಚ್ಚ

ಬ್ರೂನೈ ರಾಜಧಾನಿ ಬಂದಾರ್ ಸೆರಿ ಬೆಗವಾನ್ ನಲ್ಲಿರುವ ಚಿನ್ನಲೇಪಿತ ಗೊಮ್ಮಟವಿರುವ ಸುಲ್ತಾನ್ ಒಮರ್ ಅಲಿ ಸೈಫುದ್ದೀನ್ ಮಸೀದಿ

ಕರಗುತ್ತಿದೆ ಸಂಪತ್ತು

ಬ್ರೂನೈನ ಶ್ರೀಮಂತಿಕೆಗೆ ಮೂಲ ಕಾರಣವಾದ ತೈಲ ನಿಕ್ಷೇಪಗಳು ಕರಗುತ್ತಿದೆ. ದೇಶವು ಭವಿಷ್ಯದಲ್ಲಿ ಸಂಕಷ್ಟಕ್ಕೆ ಈಡಾಗಬಹುದು ಎಂದು ಎಚ್ಚರಿಸಿರುವ ತಜ್ಞರು, ಇನ್ನು ಎರಡು ದಶಕಗಳಲ್ಲಿ ತೈಲದ ನಿಕ್ಷೇಪ ಖಾಲಿಯಾಗಬಹುದು ಎಂದು ಹೇಳಿದ್ದಾರೆ.

ಇಂಧನ ಬೆಲೆಗಳ ಏರಿಳಿತವೂ ಬ್ರೂನೈನ ಆರ್ಥಿಕ ಬೆಳವಣಿಗೆಗೆ ತೊಡಕಾಗಿದೆ. ದೇಶದ ಯುವಜನತೆಯಲ್ಲಿ ನಿರುದ್ಯೋಗ ಹೆಚ್ಚಾಗುತ್ತಿದೆ.

ಈ ಸವಾಲನ್ನು ಎದುರಿಸುವುದಕ್ಕಾಗಿ ಹಸನಲ್ ಬೊಲ್ಕಿಯಾ 'ಸರ್ಕಾರ ವಿಷನ್ –2035' ಎನ್ನುವ ಯೋಜನೆ ರೂಪಿಸಿದ್ದಾರೆ. ಹೈಡ್ರೋಕಾರ್ಬನ್ಸ್ ಮೇಲಿನ ಅವಲಂಬನೆ ಕಡಿಮೆ ಮಾಡಿ, ದೇಶವನ್ನು ಹೊಸ ದಿಕ್ಕಿನಲ್ಲಿ ಮುನ್ನಡೆಸಬೇಕು ಎನ್ನುವುದು ಅದರ ಉದ್ದೇಶ. ಆದರೆ, ಯೋಜನೆ ಅಷ್ಟಾಗಿ ಪ್ರಗತಿ ಕಂಡಿಲ್ಲ.

ಬ್ರೂನೈ: ಏನು, ಎತ್ತ?

5,765 ಚದರ ಕಿ.ಮೀ ಒಟ್ಟು ವಿಸ್ತೀರ್ಣ

4.92 ಲಕ್ಷ ಜನಸಂಖ್ಯೆ

₹30.22 ಲಕ್ಷ ಜನರ ತಲಾ ಆದಾಯ

14 ಸಾವಿರ ಬ್ರೂನೈನಲ್ಲಿ ನೆಲೆಸಿರುವ ಭಾರತೀಯರು

1984 ಬ್ರಿಟಿಷರಿಂದ ಸ್ವಾತಂತ್ರ ಪಡೆದ ವರ್ಷ

ಆಧಾರ: ಪಿಟಿಐ, ಬಿಬಿಸಿ, ಅಮೆರಿಕದ ಸಿಐಎ ವೆಬ್‌ಸೈಟ್, ಬ್ರೂನೈ ರಾಜಮನೆತನ, ಟೂರಿಸಂ ವೆಬ್‌ಸೈಟ್

ಪತ್ನಿ ಸಲೇಹಾ ಅವರೊಂದಿಗೆ ಹಸನಲ್ ಬೊಲ್ಕಿಯಾ

3 ಮದುವೆ, 12 ಮಕ್ಕಳು

ಬ್ರೂನೈ ರಾಜಮನೆತನದ ಅಧಿಕೃತ ವೆಬ್‌ಸೈಟ್ ಪ್ರಕಾರ, ಹಸನಲ್ ಅವರಿಗೆ ಒಬ್ಬರೇ ಪತ್ನಿ ಇದ್ದು, ಐವರು ಪುತ್ರರು, ಏಳು ಹೆಣ್ಣುಮಕ್ಕಳು ಇದ್ದಾರೆ. ಆದರೆ, ಅವರು ಈವರೆಗೆ ಮೂರು ಮದುವೆಯಾಗಿದ್ದು, ಎರಡನೇ ಮತ್ತು ಮೂರನೇ ಪತ್ನಿಯರಿಂದ ದೂರವಾಗಿದ್ದಾರೆ ಎಂದು ಮಾಧ್ಯಮಗಳ ವರದಿಗಳು ಹೇಳುತ್ತವೆ.

1965ರಲ್ಲಿ ತಮ್ಮ 19ನೇ ವರ್ಷದಲ್ಲಿ ಸಂಬಂಧಿ ಪೆಂಗಿರನ್ ಅನಾಕ್ ಸಲೇಹಾ ಅವರನ್ನು ವರಿಸಿದ್ದರು. 1981ರಲ್ಲಿ ಗಗನಸಖಿಯಾಗಿದ್ದ ಮರಿಯಮ್ ಎಂಬುವವರನ್ನು ಮದುವೆಯಾಗಿದ್ದರು. 2003ರಲ್ಲಿ ಈ ಸಂಬಂಧ ಮುರಿದು ಬಿದ್ದಿತ್ತು. 2005ರಲ್ಲಿ ತಮಗಿಂತ 33 ವರ್ಷ ಕಿರಿಯರಾಗಿದ್ದ ಮಲೇಷ್ಯಾದ ಟಿವಿ ನಿರೂಪಕಿ ಅಝ್ರಿನಾಜ್ ಮಝುರ್ ಹಕೀಂ ಅವರನ್ನು ಮದುವೆಯಾಗಿದ್ದರು. 2010ರಲ್ಲಿ ವಿಚ್ಛೇದನ ಪಡೆದಿದ್ದರು.

ಕಾರುಗಳ ಮೋಹಿ

ಚಿನ್ನಲೇಪಿತ ರೋಲ್ಸ್ ರಾಯ್ಸ್ ಕಾರು (ಚಿತ್ರಕೃಪೆ: ಯುಟ್ಯೂಬ್ ವಿಡಿಯೊ ಚಿತ್ರ)

ಸುಲ್ತಾನನಿಗೆ ವಿಪರೀತ ಕಾರುಗಳ ಹುಚ್ಚು. ಅವರು ಹೊಂದಿರುವಷ್ಟು ಕಾರುಗಳನ್ನು ಜಗತ್ತಿನಲ್ಲಿ ಯಾರೂ ಹೊಂದಿಲ್ಲ. 7000 ಕಾರುಗಳು ಅವರ ಬಳಿ ಇವೆ ಎಂದು ಅಂದಾಜಿಸಲಾಗಿದೆ. ಈ ಕಾರುಗಳ ಮೌಲ್ಯವೇ ₹42 ಸಾವಿರ ಕೋಟಿ.

ದುಬಾರಿ ರೋಲ್ಸ್ ರಾಯ್ಸ್ ಕಾರುಗಳೇ 600ರಷ್ಟಿವೆ. 2011ರಲ್ಲೇ ಅವರು 500ಕ್ಕೂ ಹೆಚ್ಚು ರೋಲ್ಸ್ ರಾಯ್ಸ್ ಕಾರುಗಳನ್ನು ಹೊಂದಿದ್ದರು. ಗಿನ್ನಿಸ್ ದಾಖಲೆಯನ್ನೂ ಬರೆದಿದ್ದರು. 24 ಕ್ಯಾರೆಟ್ ಚಿನ್ನ ಲೇಪಿತ ರೋಲ್ಸ್ ರಾಯ್ಸ್ ಕಾರು ಕೂಡ ಇದ್ದು, ಇದು ಕೂಡ ಗಿನ್ನಿಸ್ ದಾಖಲೆಗೆ ಸೇರಿದೆ. ಮದುವೆ ಸೇರಿದಂತೆ ವಿಶೇಷ ಸಮಾರಂಭಗಳಲ್ಲಿ ನಡೆಯುವ ವೈಭವೋಪೇತ ಮೆರವಣಿಗೆಯಲ್ಲಿ ಈ ಕಾರೇ ಪ್ರಮುಖ ಆಕರ್ಷಣೆ.

ಮಾಧ್ಯಮ ವರದಿಗಳ ಪ್ರಕಾರ, 450 ಫೆರಾರಿ ಕಾರುಗಳು, 380 ಬೆಂಟ್ಲಿ ಕಾರುಗಳು, ಪೋಶೆ, ಲ್ಯಾಂಬೊರ್ಗಿನಿ, ಮರ್ಸಿಡಿಸ್ ಬೆಂಜ್, ಮೆಕ್‌ಕ್ಲಾರನ್ ಸೇರಿದಂತೆ ಜಗತ್ತಿನ ಅತ್ಯಂತ ದುಬಾರಿ, ಐಷಾರಾಮಿ ಎಲ್ಲ ಕಾರುಗಳ ಸಂಗ್ರಹ ಸುಲ್ತಾನನ ಬಳಿ ಇವೆ.

ಸ್ವತಃ ಪೈಲಟ್ ಆಗಿರುವ ಸುಲ್ತಾನ್ ಬಳಿ ಎರಡು ಬೋಯಿಂಗ್, ಒಂದು ಏರ್‌ಬಸ್ ವಿಮಾನಗಳಿವೆ. ಹೆಲಿಕಾಪ್ಟರ್‌ಗಳನ್ನೂ ಹೊಂದಿದ್ದಾರೆ. ಒಂದು ವಿಮಾನವನ್ನು 'ಹಾರಡುವ ಅರಮನೆ' ಎಂದು ಕರೆಯಲಾಗುತ್ತಿದ್ದು, ಚಿನ್ನಲೇಪಿತ ಒಳಾಂಗಣ ವಿನ್ಯಾಸ ಹೊಂದಿದೆ ಎಂದು ಹೇಳುತ್ತವೆ ವರದಿಗಳು.

ಸಿನಿ ಬಿಟ್ಸ್

ಕರ್ಕಿ ಚಿತ್ರದ ಟ್ರೇಲರ್ ಬಿಡುಗಡೆ

ತಮಿಳಿನಲ್ಲಿ 90ರ ದಶಕದಲ್ಲಿ 'ಸೂರ್ಯನ್', 'ಐ ಲವ್ ಇಂಡಿಯಾ', 'ಇಂದು', 'ಕಲ್ಲೂರಿ ವಾಸಲ್' ಮುಂತಾದ ಸೂಪರ್ ಹಿಟ್ ಚಿತ್ರಗಳನ್ನು ನಿರ್ದೇಶಿಸಿದವರು ಪವಿತ್ರನ್. ಅವರು ಕನ್ನಡದಲ್ಲಿ ಮೊದಲ ಬಾರಿಗೆ ನಿರ್ದೇಶನ ಮಾಡಿರುವ 'ಕರ್ಕಿ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಮರಿಸೆಲ್ವರಾಜ್ ನಿರ್ದೇಶನದ 'ಪರಿಯೆರುಂ ಪೆರುಮಾಳ್' ಚಿತ್ರದ ರಿಮೇಕ್ ಇದಾಗಿದೆ.

'ಪರಿಯೆರುಂ ಪೆರುಮಾಳ್' ತಮಿಳಿನಲ್ಲಿ ಸಂಚಲನ ಮೂಡಿಸಿದ್ದ ಚಿತ್ರ. ಸಾಕಷ್ಟು ಸೂಕ್ಷ್ಮ ವಿಷಯಗಳನ್ನು ಹೊಂದಿರುವ ಆ ಚಿತ್ರವನ್ನು ಕನ್ನಡದ ನೆಲಕ್ಕೆ ಅಗತ್ಯವಾದ ಒಂದಷ್ಟು ಬದಲಾವಣೆಯೊಂದಿಗೆ ನಿರ್ಮಿಸಿದ್ದೇವೆ. ನಮ್ಮ ನಡುವೆಯೇ ನಡೆಯುವ ನೈಜ ಕಥೆ. ಇಲ್ಲಿ ಯಾವುದನ್ನೂ ವೈಭವೀಕರಿಸದೆ, ನೈಜವಾಗಿ ಎಲ್ಲವನ್ನೂ ಪ್ರೇಕ್ಷಕರ ಮುಂದಿಡುವ ಕೆಲಸ ಮಾಡಿದ್ದೇವೆ. ಈ ತಿಂಗಳಿನಲ್ಲಿಯೇ ಚಿತ್ರ ತೆರೆಗೆ ಬರಲಿದೆ' ಎಂದರು ನಿರ್ದೇಶಕ ಪವಿತ್ರನ್.

ವಿತರಕ ಮತ್ತು ಉದ್ಯಮಿ ಪ್ರಕಾಶ್ ಪಳನಿ, 'ಕರ್ಕಿ' ಚಿತ್ರವನ್ನು ನಿರ್ಮಿಸಿದ್ದಾರೆ. ಈ ಹಿಂದೆ 'ವಾಟ್ಸಾಪ್ ಲವ್', 'ರಾಜರಾಣಿ' ಮುಂತಾದ ಚಿತ್ರಗಳಲ್ಲಿ ನಾಯಕನಾಗಿ ನಟಿಸಿರುವ ಜಯಪ್ರಕಾಶ್ (ಜೆ.ಪಿ) ರೆಡ್ಡಿ 'ಕರ್ಕಿ' ಚಿತ್ರದ ನಾಯಕ. ಅವರಿಗೆ ಮಲಯಾಳಿ ಬೆಡಗಿ ಮೀನಾಕ್ಷಿ ಜೋಡಿಯಾಗಿದ್ದಾರೆ. ಉಳಿದಂತೆ ಸಾಧು ಕೋಕಿಲ, ಬಲ ರಾಜವಾಡಿ, ಯತಿರಾಜ್, ಮಿಮಿಕ್ರಿ ಗೋಪಿ ಮೊದಲಾದವರು ಚಿತ್ರದಲ್ಲಿದ್ದಾರೆ. ಚಿತ್ರಕ್ಕೆ ಹೃಷಿಕೇಶ ಛಾಯಾಚಿತ್ರಗ್ರಹಣ, ಕ್ರೇಜಿಮೈಂಡ್ಸ್ ಶ್ರೀ ಸಂಕಲನ, ಅರ್ಜುನ್ ಜನ್ಯ ಸಂಗೀತವಿದೆ.

ಮೀನಾಕ್ಷಿ

ತಿಂಗಳಾಂತ್ಯದಲ್ಲಿ 'ಜಂಬೂಸರ್ಕಸ್'

'ಬುಲ್ ಬುಲ್', 'ಕೃಷ್ಣ', 'ಚೆಲ್ಲಾಟ' ಮೊದಲಾದ ಸಿನಿಮಾಗಳನ್ನು ನಿರ್ದೇಶಿಸಿದ್ದ ಜನಪ್ರಿಯ ನಿರ್ದೇಶಕ ಎಂ.ಡಿ. ಶ್ರೀಧರ್ ವಿರಾಮದ ಬಳಿಕ ನಿರ್ದೇಶಿಸಿರುವ 'ಜಂಬೂಸರ್ಕಸ್' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

'ಕುಟುಂಬ ಕುಳಿತು ನೋಡಬಹುದಾದ ಹಾಸ್ಯಮಯ ಚಿತ್ರವಿದು. ಬಹಳ ಕಷ್ಟಪಟ್ಟು ಚಿತ್ರ ಮುಗಿಸಿ ಬಿಡುಗಡೆ ಹಂತ ತಲುಪಿದ್ದೇವೆ. ಇದೇ ತಿಂಗಳ ಮೂರನೇ ಅಥವಾ ಕೊನೆಯ ವಾರ ಚಿತ್ರ ತೆರೆಗೆ ಬರಲಿದೆ. ಸಣ್ಣ ಬಜೆಟ್‌ನಲ್ಲಿ ನಿರ್ಮಿಸಿದ ಚಿತ್ರ. ಹೀಗಾಗಿ ಪ್ರಮೋಷನ್ ಕೂಡ ದೊಡ್ಡ ಮಟ್ಟದಲ್ಲಿ ಮಾಡಲು ಸಾಧ್ಯವಾಗುತ್ತಿಲ್ಲ' ಎಂದರು ನಿರ್ದೇಶಕ ಎಂ.ಡಿ.ಶ್ರೀಧರ್.

ಹಾಸ್ಯದೊಂದಿಗೆ ಡ್ರಾಮಾ ಕಥೆ ಹೊಂದಿರುವ ಚಿತ್ರಕ್ಕೆ 'ಖುಷಿ' ಸುರೇಶ್ ಅವರು ಮಹತಿ ಕಂಬೈನ್ಸ್ ಮೂಲಕ ಬಂಡವಾಳ ಹೂಡಿದ್ದಾರೆ. ಪ್ರವೀಣ್ ತೇಜ್ ನಾಯಕನಾಗಿದ್ದು, ಅಂಜಲಿ ಎಸ್.ಅನೀಶ್ ನಾಯಕಿಯಾಗಿದ್ದಾರೆ.

'ಜನಕ್ಕೆ ಅಂತಿಮವಾಗಿ ಮನರಂಜನೆ ಬೇಕು ಎಂಬುದು ಇತ್ತೀಚೆಗೆ ಗೆಲ್ಲುತ್ತಿರುವ ಚಿತ್ರಗಳಿಂದ ಸ್ಪಷ್ಟವಾಗುತ್ತಿದೆ. ಭರಪೂರ ಮನರಂಜನೆ ಹೊಂದಿರುವ ಚಿತ್ರವಿದು. 20 ವರ್ಷಗಳಿಂದ ಶ್ರೀಧರ್ ಅವರ ಜೊತೆ ಕೆಲಸ ಮಾಡಿಕೊಂಡು ಬಂದಿರುವೆ. ಒಳ್ಳೆ ಮನಸ್ಸು ಹೊಂದಿರುವ ಮಲೆನಾಡಿಗರೆಲ್ಲ ಸೇರಿ ನಿರ್ಮಿಸಿರುವ ಚಿತ್ರವಿದು. ಚಿತ್ರದ ಹಾಡುಗಳು ಈಗಾಗಲೇ ಹಿಟ್ ಆಗಿವೆ. ಚಿತ್ರ ಕೂಡ ಯಶಸ್ವಿಯಾಗುತ್ತದೆ ಎಂಬ ಭರವಸೆಯಿದೆ' ಎಂದರು ಗೀತಸಾಹಿತಿ ಕವಿರಾಜ್.

ವಾಸುಕಿ ವೈಭವ್ ಈ ಚಿತ್ರಕ್ಕೆ ಸಂಗೀತ ನೀಡಿದ್ದಾರೆ. ಕೃಷ್ಣ ಕುಮಾರ್ (ಕೆ.ಕೆ) ಛಾಯಾಚಿತ್ರಗ್ರಹಣ, ಜ್ಞಾನೇಶ್ ಸಂಕಲನವಿದೆ.

ಅಂಜಲಿ ಎಸ್.ಅನೀಶ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಸಾಹಸಿಗನ ಬದುಕು

ನುಡಿ ಬೆಳಗು – ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ | 17

ಅಮೆರಿಕದೊಳಗ ಅರಿಜೋನಾ ಅಂತ ಒಂದು ಪ್ರಾಂತ್ಯ ಇದೆ. ಅಲ್ಲಿ ಒಂದು ದಂಪತಿಗೆ ಮಗು ಹುಟ್ಟಿತು. ಹುಟ್ಟುವಾಗಲೇ ಆ ಮಗುವಿಗೆ ಎರಡೂ ಕೈಗಳು ಇರಲಿಲ್ಲ. ಆ ಹೆಣ್ಣು ಮಗುವಿಗೆ ಜೆಸ್ಸಿಕಾ ಅಂತ ಹೆಸರಿಟ್ಟರು. ಆ ಮಗು ಬೆಳೆತಾ ಬೆಳಿತಾ ಕಾಲಿನಲ್ಲಿ ಬರೆಯುವುದನ್ನು ಕಲಿಯಿತು. ಕಾಲಿನಿಂದಲೇ ಜಳಕಾ ಮಾಡೋದು, ಕಾಲಿನಿಂದಲೇ ಚಮಚ ಹಿಡಕೊಂಡು ಊಟ ಮಾಡೋದು ಕಲೀತು. 10ನೇ ತರಗತಿ ರಿಸಲ್ಟ್ ಬಂದಾಗ ಆಕಿ ಇಡೀ ಶಾಲೆಗೆ ಮೊದಲಿಗಳಾಗಿದ್ದಳು. ಕರಾಟೆ ಕಲಿತಳು. ಕರಾಟೆ ಬ್ಲ್ಯಾಕ್ ಬೆಲ್ಟ್‌ನಲ್ಲಿಯೂ ಪ್ರಥಮ ಸ್ಥಾನ ಪಡೆದಳು.

ಆಕಿ ಒಂದು ಕನಸು ಕಂಡಳು. ತಾನು ವಿಮಾನ ಹಾರಿಸಬೇಕು ಎಂಬುದು ಆಕಿಯ ಕನಸು. ಪೈಲಟ್ ಆಗಬೇಕು ಅಂತ ಅರ್ಜಿ ಹಾಕಿದರೆ 'ನಿನಗೆ ಕೈಗಳಿಲ್ಲ. ಅದಕ್ಕೆ ಪೈಲಟ್ ತರಬೇತಿಗೆ ಅವಕಾಶ ಕೊಡಲ್ಲ' ಅಂತ ಸರ್ಕಾರ ಅರ್ಜಿ ತಿರಸ್ಕರಿಸಿತು. ಆದರೂ ಆಕಿ ಸುಮ್ಮನೆ ಕೂಡಲಿಲ್ಲ. ನ್ಯಾಯಾಲಯದ ಮೊರೆ ಹೋದಳು. ನ್ಯಾಯಾಲಯದಿಂದ ಅನುಮತಿ ಪಡೆದು ವಿಮಾನ ಹಾರಾಟದ ತರಬೇತಿ ಪಡೆದು ವಿಮಾನ ಹಾರಿಸಿದಳು. ಎರಡೂ ಕೈಗಳು ಇಲ್ಲದೆ ವಿಮಾನ ಹಾರಿಸಿದ ಜಗತ್ತಿನ ಮೊದಲ ಮಹಿಳೆ ಜಸ್ಸಿಕಾ ಕಾಕ್ಸ್. ಇದು ಗೆಲುವಿನ ಭಾಷೆ.

ನಮ್ಮ ಹಾಗೆ ಆಕೆ ಜ್ಯೋತಿಷಿ ಬಳಿ ಹೋಗಲಿಲ್ಲ. ಅಂಗೈನಲ್ಲಿರುವ ರೇಖಿ ನೋಡಿ ಬದುಕಲಿಲ್ಲ. ಮುಂಗೈ ಒಳಗಿನ ಬಲವನ್ನು ನಂಬಿ ಬದುಕಿದಳು. ಇದು ಸಾಹಸಿಗನ ಬದುಕು. ಭೂಮಿಯ ಮೇಲೆ ಮನುಷ್ಯ ಬದುಕಬೇಕಾದರೆ ಸಾಹಸದ ಭಾಷೆಯೇ ಗೆಲುವಿನ ಭಾಷೆ ಆಗಬೇಕು. ಅದು ಜೀವನವನ್ನು ಕಟ್ಟುತ್ತದೆ. ಸಾವಿನ ಸಂದರ್ಭದಲ್ಲಿಯೂ ಗೆಲುವಿನ ಉತ್ಸಾಹ ಇರಬೇಕು.

ನಾವು ಈಗ ಸ್ವಾತಂತ್ರ್ಯದ ಸುಖ ಅನುಭವಿಸುತ್ತಿದ್ದೇವೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಹೀಗೆ ಸುಮ್ಮನೆ ಬಂತೇನು? ಸಾವಿರ ಸಾವಿರ ಜನ, ಸಾವಿರ ಸಾವಿರ ಮಕ್ಕಳು ಇದಕ್ಕಾಗಿ ಪ್ರಾಣ ತೆತ್ತಿದ್ದಾರೆ. 1947ಕ್ಕಿಂತ ಮುಂಚೆ ಸರ್ಕಾರಿ ಕಚೇರಿ ಮೇಲೆ ತ್ರಿವರ್ಣ ಧ್ವಜ ಹಾರಿಸುವಂತಿರಲಿಲ್ಲ. ಆಗ 6–7ನೇ ಕ್ಲಾಸ್ ಓದುತ್ತಿರುವ ಹುಡುಗನೊಬ್ಬ ಬ್ರಿಟಿಷರ ಕಚೇರಿ ಮೇಲೆ ತ್ರಿವರ್ಣ ಧ್ವಜ ಹಾರಿಸಿದ. ಅವನ ಮೇಲೆ ಬ್ರಿಟಿಷರು ಗುಂಡು ಹಾರಿಸಿದರು. ಗಾಯಗೊಂಡ ಆತನನ್ನು ಆಸ್ಪತ್ರೆಗೆ ಸೇರಿಸಲಾಯಿತು. ಆತನಿಗೆ ಪ್ರಜ್ಞೆ ಬಂದಾಗ ತಾನು ಇಲ್ಲೇಕೆ ಇದ್ದೇನೆ ಎಂದು ಕೇಳಿದ. ಬ್ರಿಟಿಷ್ ಪೊಲೀಸರು ಗುಂಡು ಹಾರಿಸಿದ್ದನ್ನು ಆತನಿಗೆ ತಿಳಿಸಲಾಯಿತು.

'ಬ್ರಿಟಿಷರು ಹಾರಿಸಿದ ಗುಂಡು ನನ್ನ ಎದ್ಯಾಗಿಂದ ಹೋಗೈತೋ ಅಥವಾ ಬೆನ್ನಾಗಿಂದ ಹೋಗೈತೋ' ಎಂದು ಕೇಳಿದ ಬಾಲಕ. 'ಎದ್ಯಾಗಿಂದಲಾದರೂ ಬರಲಿ, ಬೆನ್ನಾಗಿಂದಲಾದರೂ ಬರಲಿ, ಅದರಾಗೇನೈತಿ ವ್ಯತ್ಯಾಸ' ಅಂತ ಕೇಳಿದರು ವೈದ್ಯರು. 'ಗುಂಡು ಬೆನ್ನಾಗೆ ಹೋಗಿದ್ದರೆ ನಾನು ಬ್ರಿಟಿಷರಿಗೆ ಹೆದರಿ ಓಡುವಾಗ ಅವರು ಗುಂಡು ಹಾರಿಸಿದರು ಎಂಬ ತಪ್ಪು ಸಂದೇಶ ದೇಶದ ಜನರಿಗೆ ಹೋಗತ್ತೈತಿ. ಅದು ನನಗೆ ಇಷ್ಟವಿಲ್ಲ. ಗುಂಡು ನನ್ನ ಎದೆಯಾಗೆ ಹೊಕ್ಕಿದ್ದರೆ ಸಂತಸದಿಂದ ಪ್ರಾಣ ಬಿಡ್ತೀನಿ. ಯಾಕಂದರ ಈ ಹುಡುಗ ಬ್ರಿಟಿಷರ ಗುಂಡಿಗೆ ಎದೆಯೊಡ್ಡಿ ಸಾವನ್ನಪ್ಪಿದ ಎಂಬ ಸಂದೇಶ ಜನರಿಗೆ ಹೋಗ್ತದಲ್ಲ ಅದಕ್ಕೆ' ಎಂದ ಹುಡುಗ.

ಸಾವಿನಂಚಿನಲ್ಲೂ ಗೆಲುವಿನ ಭಾಷೆ ಇದು. ಇದು ಬದುಕನ್ನು ಕಟ್ಟುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶುಕ್ರವಾರ ಸೆಪ್ಟೆಂಬರ್ 6, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ತೃತೀಯ ಗಂ. 15-02 ನಕ್ಷತ್ರ: ಹಸ್ತ ಗಂ. 9-25 ಯೋಗ: ಶುಕ್ಲ (ಶುಕ್ರ) ಗಂ. 22-15 ಕರಣ: ಗರ ಗಂ. 15-02, ಸಿಂಹ ಮಾಸದ 20 ನೇ ದಿನ, ಮಳೆನಕ್ಷತ್ರ: ಪೂರ್ವಫಲ್ಗುಣಿ 3.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-23 ಸೂರ್ಯಾಸ್ತ : 06-34
ಮುಸ್ಲಿಂ ದಿನಾಂಕ : 02 ರಬಿಉಲ್ಲಾವಲ್
ದಿನ ವಿಶೇಷ : ಸ್ವರ್ಣ ಗೌರಿ ವ್ರತ, ಹರಿತಾಲಿಕಾ ಗೌರಿ ತೃತೀಯ, ಅದೃಷ್ಟ ಸಂಖ್ಯೆ : 5, 2

ಮೇಷ: ಯಾವುದರಲ್ಲಾದರೂ ಗೆಲುವು ಬಯಸುತ್ತಿದ್ದರೆ, ಆಲಸ್ಯವನ್ನು ಬಿಟ್ಟು ಗುರಿ ತಲುಪಲು ಶ್ರಮಿಸಬೇಕು. ಕೆಲಸದ ಗುಣಮಟ್ಟ ಹೆಚ್ಚಿಸಿಕೊಳ್ಳುವ ಸಲುವಾಗಿ ಕಾರ್ಯಾಗಾರಗಳಲ್ಲಿ ಭಾಗವಹಿಸುವಿರಿ.

ವೃಷಭ: ಪತ್ತೇದಾರಿ ಕೆಲಸ ಮಾಡುವವರು ಕಾನೂನುಬಾಹಿರ ಮಾರ್ಗಗಳನ್ನು ಅನುಸರಿಸದಂತೆ ಕೆಲಸ ಮಾಡಿ. ಪ್ರೀತಿಯ ಜೀವನದಲ್ಲಿ ಅನೇಕ ದೀರ್ಘ ಕಾಲೀನ ಬದಲಾವಣೆಗಳಾಗಬಹುದು. ವೃಥಾ ಅಲೆದಾಟದಿಂದ ಆಯಾಸ ಆಗುವುದು.

ಮಿಥುನ: ಸಂಗೀತಾಭ್ಯಾಸಿಗರಿಗೆ ದೊಡ್ಡ ವೇದಿಕೆಯಲ್ಲಿ ಗಾಯನ ಪ್ರದರ್ಶಿಸುವ ಅವಕಾಶ ದೊರೆಯುತ್ತದೆ. ಸಹೋದರ ಸಹೋದರಿಯರನ್ನು ಹೊಗಳಿದ ಕಾರಣ ನೀವು ಮುನಿಸಿಕೊಳ್ಳುವ ಸಾಧ್ಯತೆ ಇದೆ.

ಕರ್ಕಾಟಕ: ಜಾಹೀರಾತುಗಳಲ್ಲಿ ತೋರಿಸಿದ್ದನ್ನು ಪರಿಶೀಲಿಸದೇ ನಂಬಿ ಹಣವ್ಯಯ ಮಾಡಿದಲ್ಲಿ ಮೋಸ ಹೋಗುವುದು ಕಟ್ಟಿಟ್ಟ ಬುತ್ತಿ. ಖಾದ್ಯಗಳ ತಯಾರಕರಿಗೆ ಬೇಡಿಕೆ ಬರುವುದು. ಸಮಸ್ಯೆಗಳೆಲ್ಲಾ ಬಗೆಹರಿಯಲಿವೆ.

ಸಿಂಹ: ಗೃಹಿಣಿಯರು ದೇವರಿಗೆ ವಿಶೇಷವಾಗಿ ಪೂಜೆ ಪುನಸ್ಕಾರವನ್ನು ನಡೆಸುವ ಮೂಲಕ ಪುಣ್ಯ ಸಂಪಾದನೆಯನ್ನು ಮಾಡುವಿರಿ. ಹಿರಿಯರೊಂದಿಗೆ ವಿನಯವನ್ನು ಬಿಟ್ಟು ಮಾತನಾಡಿದಲ್ಲಿ ಗೌರವವನ್ನು ನೀವೇ ಕಳೆದುಕೊಳ್ಳುವಿರಿ.

ಕನ್ಯಾ: ಬೇರೆಯವರ ತಪ್ಪುಗಳನ್ನು ಎತ್ತಿ ಹಿಡಿಯುವ ವ್ಯಕ್ತಿತ್ವ ಎಲ್ಲರ ದೂಷಣೆಗೆ ಒಳಗಾಗುವುದು. ಆರ್ಥಿಕವಾಗಿ ಲೇವಾದೇವಿ ವ್ಯವಹಾರದಲ್ಲಿ ಜಾಗರೂಕತೆ ಇರಲಿ. ಯಾರೊಂದಿಗೂ ವಾಗ್ವಾದ ಬೇಡ. ಧನಾಗಮವಿದೆ.

ತುಲಾ: ಉದಯೋನ್ಮುಖ ಸಾಹಿತಿಗಳಿಗೆ ಚಿಂತನಾಶೀಲತೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಬೇಕೆಂಬ ಹಿತ ಸಲಹೆಗಳು ಅಭಿಮಾನಿಗಳ ಕಡೆಯಿಂದ ಬರಬಹುದು. ಧಾರ್ಮಿಕ ಕಾರ್ಯಕ್ರಮವನ್ನು ಸ್ವತಃ ಮಾಡುವಿರಿ.

ವೃಶ್ಚಿಕ: ಇತರರ ಸಹಾಯವನ್ನು ಅಪೇಕ್ಷಿಸುವುದಕ್ಕಿಂತ ಕೆಲಸವನ್ನು ಆದಷ್ಟು ನೀವೇ ಮಾಡಿಕೊಳ್ಳುವುದು ಉತ್ತಮ. ನೇರ ನಡೆ-ನುಡಿಯು ವ್ಯವಹಾರವನ್ನು ಕುಂಠಿತಗೊಳಿಸಬಹುದು. ವನಸ್ಪತಿ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ.

ಧನು: ಕುಟುಂಬದಲ್ಲಾಗಲಿ ಅಥವಾ ಕಾರ್ಯಕ್ಷೇತ್ರದಲ್ಲಾಗಲಿ ಅಭಿಪ್ರಾಯವನ್ನು ಬಹಿರಂಗವಾಗಿ ತಿಳಿಸಲು ಸಂಕೋಚ ಮಾಡಿದರೆ ನಷ್ಟವಾಗುತ್ತದೆ. ಸ್ನೇಹಿತರಿಂದ ಅಪೇಕ್ಷಿಸುವ ಸಹಕಾರವು ನಿಮಗೆ ಸಿಗಲಿದೆ.

ಮಕರ: ಕಾರ್ಯವು ಮಧ್ಯದಲ್ಲಿ ನಿಲ್ಲುವ ಸಾಧ್ಯತೆ ಇರುವುದರಿಂದ ದೃಢವಾದ ನಿರ್ಧಾರ ಮಾಡಿದ ನಂತರವಷ್ಟೇ ಹೊಸ ಕಾರ್ಯಾರಂಭ ಮಾಡುವುದು ಒಳ್ಳೆಯದು. ಸಮಸ್ಯೆಗಳಿದ್ದರೂ ಮಾತುಕತೆಯ ಮೂಲಕ ಪರಿಹರಿಸಿಕೊಳ್ಳಿರಿ.

ಕುಂಭ: ಹಣ ಬೆಳವಣಿಗೆಗಾಗಿ ಹೂಡಿಕೆ ಮಾಡುವುದಿದ್ದರೆ ನಂಬಿಕಸ್ಥರಿಂದ ಕೇಳಿ ತಿಳಿದು ನಂತರವಷ್ಟೇ ಮಾಡಿ. ರಾಜಕೀಯ ವ್ಯಕ್ತಿಗಳು ಜನಾನುರಾಗ ಹೆಚ್ಚಿಸಿಕೊಳ್ಳುವುದು ಅನಿವಾರ್ಯ.

ಮೀನ: ಜೀವನವು ಮೇಲ್ನೋಟಕ್ಕೆ ಎಲ್ಲರ ಕಣ್ಣಿಗೂ ಉತ್ತಮವಾಗಿ ಕಂಡು ಬಂದರೂ ಒಳಗಿನ ಸತ್ಯಾಂಶ ನಿಮಗೆ ಮಾತ್ರ ತೋರುವುದು. ಚರ ಆಸ್ತಿಯನ್ನು ಸಂಪಾದನೆ ಮಾಡುವ ಕನಸು ಈಡೇರುವ ಅವಕಾಶಗಳು ಇರುತ್ತವೆ.

ಪದಬಂಧ 5795

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕಾಲುನಡಿಗೆಯಲ್ಲಿ ಸಾಗುವವನು ತಿರುಗಿದ್ದಾನೆ (4)
3.ಕುದುರೆಯ ಲಾಯ (4)
4.ರಕ್ತವನ್ನು ಹೀಗೂ ಹೇಳುವರು (3)
5.ಅಪ್ಪನ ಈ ರೂಪ ಬಲು ವಿರಳ! (4)
7.ಸ್ವಂತ ಹಳ್ಳಿಯಲ್ಲಿ ಉಲ್ಟಾ ಕಾಣುತ್ತಿದೆ (3)
9.ವಶಕ್ಕೆ ಸಿಕ್ಕಿರುವ ಹಣ (2)
10.ಬೆರೆತಾಗ ಕಾಣಿಸಿದ್ದು ನಾಲ್ಕು ಪಾವಿನ ಒಂದು ಅಳತೆ (2)
13.ಸೂರ್ಯನ ಕಾವು (3)
14.ವಿಲಾಸಪ್ರಿಯತೆಯಿದು (4)
15.ವಿರಾಟರಾಜನ ಸೇನಾಪತಿ (3)
16.ಗಡಿಯಿಂದ ಹೊರಗೆ ಹಾಕುವುದು (4)
17. ವಿವರಗಳಿಂದ ಕೂಡಿದ ಹೇಳಿಕೆ (4)

ಮೇಲಿಂದ ಕೆಳಕ್ಕೆ
2.ಪಾರು ನಡೆಸಿದ ಮೇಲ್ವಿಚಾರಣೆ (4)
3.ರಾಜನ ಗೃಹ (4)
6.ಬೇರೆಯವರನ್ನು ಅವಲಂಬಿಸಿರುವುದು (5)
8.ವೇತನವಿಲ್ಲದೆ ಸ್ವಪ್ರೇರಣೆಯಿಂದ ಕೆಲಸ ಮಾಡುವವನು (5)
11.ಹಾಲಿನಿಂದ ಮಾಡಿದ ಪಾಯಸ (4)
12.ಮರದ ಹತ್ತಿರವಿರುವ ಪಚ್ಚೆ (4)



5794ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಲೋಹಚುಂಬಕ 3.ಕೌರವ
5.ಟಿಸಿಲು 7.ಆರ್ಯಭಟ
9.ಕರುಳು 10.ಕಂಪನ
11.ರಾಣಿವಾಸ 14.ಕೈಲಾಸ
16.ಸನ್ನದು 17.ರತ್ನಖಚಿತ

ಮೇಲಿಂದ ಕೆಳಕ್ಕೆ
1.ಲೋಲಕ 2.ಕಟ
3.ಕೌಲು 4.ವನಭೋಜನ
6.ಧೈರ್ಯ 7.ಆಳು
8.ಭರಣಿ 9.ಕನಕದಾಸ
10.ಕಂಠ 12.ವಾಲಿ 13.ಪರಾತ
14.ಕೈದು 15.ಸರ

ಸುಡೊಕು 6180

	4					6		1
9		1				2	7	
	7				4			8
		4		3		1		2
2	8		6	9				
		7			8		6	5
	5			1		4		7
		6	8		2		3	
4	2			5		8		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6179 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ಷೇರುಪೇಟೆ ವಹಿವಾಟು ▼ 151



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	25,198
ಇಂದಿನ ಅಂತ್ಯ	25,145
▼	53
ದಿನದ ಕನಿಷ್ಠ	25,127

ಎನ್.ಆರ್.ಪುರ ರಬ್ಬರ್

ಆರ್ಎಸ್ಎಸ್-4	₹226
ಆರ್ಎಸ್ಎಸ್-5	₹220
ಗುಡ್ ಲಾಟ್	₹206

(ಪ್ರತಿ ಕೆ.ಜಿಗೆ)

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹520
12 ಕ್ಕೆ	₹70
ಮೈಸೂರು	
100ಕ್ಕೆ	₹522

ಮುಂದಿನ ವಾರದಿಂದ ಬೆಂಗಳೂರಿನಲ್ಲೂ ಮಾರಾಟ: ಪ್ರಲ್ಹಾದ ಜೋಶಿ

ರಿಯಾಯಿತಿ ದರದಲ್ಲಿ ಈರುಳ್ಳಿ

ನವದೆಹಲಿ (ಪಿಟಿಐ): ಈರುಳ್ಳಿ ಬೆಲೆ ಏರಿಕೆಯನ್ನು ನಿಯಂತ್ರಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಗ್ರಾಹಕರಿಗೆ ರಿಯಾಯಿತಿ ದರದಲ್ಲಿ ಈರುಳ್ಳಿ ಮಾರಾಟ ಮಾಡಲು ಆರಂಭಿಸಿದೆ. ದೆಹಲಿ-ಎನ್‌ಸಿಆರ್ ಮತ್ತು ಮುಂಬೈನಲ್ಲಿ ಪ್ರತಿ ಕೆ.ಜಿಗೆ ₹35ರಂತೆ ಈರುಳ್ಳಿಯ ಚಿಲ್ಲರೆ ಮಾರಾಟಕ್ಕೆ ಕೇಂದ್ರ ಗುರುವಾರ ಚಾಲನೆ ನೀಡಿದೆ.

ರಾಷ್ಟ್ರೀಯ ಸಹಕಾರ ಗ್ರಾಹಕರ ಮಹಾಮಂಡಳ (ಎನ್‌ಸಿಸಿಎಫ್) ಹಾಗೂ ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಒಕ್ಕೂಟವು (ನಾಫೆಡ್) 4.7 ಲಕ್ಷ ಟನ್ ಈರುಳ್ಳಿ ದಾಸ್ತಾನು ಹೊಂದಿವೆ. ಈ ಏಜೆನ್ಸಿಗಳು ತಮ್ಮ ಸ್ವಂತ ಮಳಿಗೆಗಳು ಮತ್ತು ಸಂಚಾರಿ ವಾಹನಗಳ ಮೂಲಕ ಈರುಳ್ಳಿಯ ಚಿಲ್ಲರೆ ಮಾರಾಟ ಮಾಡುತ್ತಿವೆ. ದೆಹಲಿ-ಎನ್‌ಸಿಆರ್ ಮತ್ತು ಮುಂಬೈನ ಪರೇಲ್ ಮತ್ತು ಮಲಾಡ್‌ನಲ್ಲಿ 38 ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ಈರುಳ್ಳಿ ಮಾರಾಟ ಮಾಡಲಾಗುವುದು ಎಂದು ಕೇಂದ್ರ ತಿಳಿಸಿದೆ.

ಕೇಂದ್ರೀಯ ಭಂಡಾರ, ಮದರ್ ಡೈರಿಯ ಸಫಲ್, ಇ-ಕಾಮರ್ಸ್ ವೇದಿಕೆಗಳಲ್ಲಿಯೂ ಈರುಳ್ಳಿಯನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತದೆ. ಈರುಳ್ಳಿಯ ಚಿಲ್ಲರೆ ಬೆಲೆ ನವದೆಹಲಿಯಲ್ಲಿ ಪ್ರತಿ ಕೆ.ಜಿಗೆ ₹60 ಇದೆ.

ಈರುಳ್ಳಿ ಚಿಲ್ಲರೆ ಮಾರಾಟಕ್ಕೆ ಚಾಲನೆ ನೀಡಿದ ಬಳಿಕ ಮಾತನಾಡಿದ ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ, 'ಆಹಾರ ಹಣದುಬ್ಬರವನ್ನು ನಿಯಂತ್ರಣದಲ್ಲಿಡುವುದು ಸರ್ಕಾರದ ಆದ್ಯತೆಯಾಗಿದೆ. ಮೊದಲ ಹಂತವಾಗಿ ದೆಹಲಿ–ಎನ್‌ಸಿಆರ್ ಮತ್ತು ಮುಂಬೈನಲ್ಲಿ ಈರುಳ್ಳಿ ಮಾರಾಟಕ್ಕೆ ಚಾಲನೆ ನೀಡಲಾಗಿದೆ. ಸೆಪ್ಟೆಂಬರ್ 2ನೇ ವಾರದಿಂದ ಎರಡನೇ ಹಂತದಲ್ಲಿ ಕೋಲ್ಕತ್ತ, ಗುವಾಹಟಿ, ಹೈದರಾಬಾದ್, ಚೆನ್ನೈ, ಬೆಂಗಳೂರು, ಅಹಮದಾಬಾದ್ ಮತ್ತು ರಾಯ್‌ಪುರದಲ್ಲಿ ಮಾರಾಟ ಮಾಡಲಾಗುವುದು. ಮೂರನೇ ವಾರದಿಂದ ದೇಶದೆಲ್ಲೆಡೆ ಮಾರಾಟ ಆರಂಭಿಸಲಾಗುವುದು' ಎಂದು ಹೇಳಿದ್ದಾರೆ.

ಎನ್‌ಸಿಸಿಎಫ್ ಮತ್ತು ನಾಫೆಡ್ ಪ್ರತಿ ಕೆ.ಜಿಗೆ ಸರಾಸರಿ ₹28ರಂತೆ ಈರುಳ್ಳಿಯನ್ನು ರೈತರಿಂದ ಖರೀದಿಸಿವೆ.

ಬೆಂಗಳೂರಲ್ಲಿ ಕೆ.ಜಿ ಈರುಳ್ಳಿ ದರ ₹60

ಪ್ರಜಾವಾಣಿ ವಾರ್ತೆ

ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಬರುತ್ತಿರುವ ಗುಣಮಟ್ಟದ ದೊಡ್ಡ ಗಾತ್ರದ ಈರುಳ್ಳಿ ಕ್ವಿಂಟಲ್‌ಗೆ ₹4,800ಕ್ಕೆ ಮುಟ್ಟಿದೆ. ರಾಜ್ಯದ ಚಿತ್ರದುರ್ಗ ಮತ್ತು ಹಗರಿಬೊಮ್ಮನಹಳ್ಳಿಯಿಂದ ಮಾತ್ರ ಈರುಳ್ಳಿ ಪೂರೈಕೆ ಯಾಗುತ್ತಿದೆ. ಕಡಿಮೆ ಆವಕದಿಂದ ದರ ಏರಿಕೆಯಾಗಿದ್ದು, ಚಿಲ್ಲರೆ ಮಾರುಕಟ್ಟೆಯಲ್ಲಿ ಕೆ.ಜಿ ಈರುಳ್ಳಿ ಧಾರಣೆ ₹60 ದಾಟಿದೆ ಎಂದು ಯಶವಂತಪುರ ಎಪಿಎಂಸಿಯ ಈರುಳ್ಳಿ ವರ್ತಕ ಜಿ. ಲೋಕಪ್ಪ ಹೇಳುತ್ತಾರೆ.

ಹೆಚ್ಚಿನ ಮಳೆ ಮತ್ತು ಮೋಡ ಕವಿದ ವಾತಾವರಣದಿಂದ ಈರುಳ್ಳಿ ಬೆಳೆ ಕುಂಠಿತವಾಗಿದೆ. ಇದು ದರ ಹೆಚ್ಚಳಕ್ಕೆ ಕಾರಣವಾಗಿದೆ. ಇದರಿಂದಾಗಿ ಈ ವರ್ಷದ ಅಂತ್ಯದ ವೇಳೆಗೂ ಈರುಳ್ಳಿ ಬೆಲೆ ಕಡಿಮೆಯಾಗುವುದು ಅನುಮಾನವಾಗಿದೆ. ರಾಜಸ್ಥಾನದಿಂದ ಈರುಳ್ಳಿ ಬಂದರೆ ದರ ಕಡಿಮೆಯಾಗ ಬಹುದು ಎಂದು ಅವರು 'ಪ್ರಜಾವಾಣಿ'ಗೆ ಗುರುವಾರ ತಿಳಿಸಿದ್ದಾರೆ.

ಆದಿಶಕ್ತಿಯ ಆರಾಧನೆಯ ಪರ್ವ

• ನಚಿಕೇತ್ ಹೆಗಡೆ

ಇಂದು ಗೌರೀಹಬ್ಬ

ಸನಾತನ ದರ್ಶನ ಪರಂಪರೆಗಳಲ್ಲಿ ಪ್ರಾಚೀನವಾದದ್ದು ಸಾಂಖ್ಯದರ್ಶನ. ಈ ದರ್ಶನದ ಪ್ರಕಾರ ಪ್ರಪಂಚದ ಸೃಷ್ಟಿಯಾಗುವುದು ಎರಡು ತತ್ತ್ವಗಳ ಮಿಲನದಿಂದಾಗಿ. ಒಂದು ಪ್ರಕೃತಿ; ಇನ್ನೊಂದು ಪುರುಷ. ಇವುಗಳಲ್ಲಿ ಪ್ರಕೃತಿಯು ಸೃಷ್ಟಿಗೆ ಬೇಕಾದ ಸಕಲ ಸಾಮಗ್ರಿಗಳನ್ನೂ ಒಳಗೊಂಡಿರುತ್ತದೆ. ಆದರೆ ಅದು ಜಡ; ತಾನಾಗಿಯೇ ಪರಿವರ್ತನೆಯನ್ನು ಹೊಂದಿ ಏನನ್ನೂ ಸೃಷ್ಟಿಸಲಾರದು; ಅದಕ್ಕೆ ಪುರುಷನ ಸಹಾಯ ಬೇಕು. ಪುರುಷತತ್ತ್ವವಾದರೋ ಚೈತನ್ಯಯುಕ್ತವಾದದ್ದು. ಆದರೆ ಅದರೊಳಗೆ ಸೃಷ್ಟಿಸಾಮಗ್ರಿಗಳಿಲ್ಲ. ಇಬ್ಬರಲ್ಲಿಯೂ ಒಂದೊಂದು ನ್ಯೂನತೆಗಳುಂಟಲ್ಲ! ಏನು ಮಾಡಬೇಕು – ಎಂದು ಕೇಳಿದರೆ, 'ಕುಂಟನನ್ನು ಕುರುಡ ಹೊತ್ತಂತೆ', ಪ್ರಕೃತಿಯು ಪುರುಷನೊಂದಿಗೆ ಸೇರಬೇಕು. ಆಗಲೇ ಸೃಷ್ಟಿಯಾಗುವುದು.

ಇದೇ ಬೃಹತ್ತಾದ, ಮಹತ್ತಾದ ತತ್ತ್ವವನ್ನು ಪುರಾಣಗಳು ಶಿವ ಮತ್ತು ಪಾರ್ವತಿಯರ ಸಂಯೋಗದ ಮುಖಾಂತರ ಚಿತ್ರಿಸಿಕೊಡುತ್ತವೆ. ಶಿವನು ಪುರುಷ; ಪಾರ್ವತಿಯು ಪ್ರಕೃತಿ, ಶಕ್ತಿ. ಜಗತ್ತಿನ ಸೃಷ್ಟಿಗೆ ಕಾರಣಳಾದ ಅಂಥ ಪಾರ್ವತಿಯನ್ನು ಪರಂಪರೆ 'ಆದಿಶಕ್ತಿ' ಎನ್ನುವುದಾಗಿ ಕರೆದು ಗೌರವಿಸಿದೆ. ಪಾರ್ವತಿಗೆ ಅಥವಾ ಶಕ್ತಿಗೆ ಇರುವ ಮಹತ್ತ್ವ ಎಷ್ಟೆಂದರೆ 'ಶಿವಃ ಶಕ್ತ್ಯಾ ಯುಕ್ತೋ ಯದಿ ಭವತಿ ಶಕ್ತಃ ಪ್ರಭವಿತುಂ ನ ಚೇದೇವಂ ದೇವೋ ನ ಖಲು ಕುಶಲಃ ಸ್ಪಂದಿತುಮಪಿ ' (ಶಿವನು ಶಕ್ತಿಯೊಂದಿಗೆ ಸೇರಿದರೆ ಮಾತ್ರ ಜಗತ್ಕಾರಣನಾಗಲು ಶಕ್ತನಾಗುತ್ತಾನೆ; ಇಲ್ಲವಾದರೆ ಮಿಸುಕಾಡಲೂ ಆರ) ಎನ್ನುವಷ್ಟು! ಇನ್ನು ಶಾಕ್ತಪರಂಪರೆಗಂತೂ ಆಕೆಯೇ ಪರದೈವ. ಹೀಗಿರುವುದರಿಂದ ಆಕೆಯನ್ನು ಆ ಪರಂಪರೆಯು ಉಗ್ರ, ಯೋಗ ಮತ್ತು ಭೋಗಾದಿ ರೂಪಗಳಲ್ಲಿ ಆರಾಧಿಸುತ್ತದೆ. ಆದರೆ ದೇವಿ ಮಾತ್ರ ಯಾವ ಪರಂಪರೆಗೂ, ಕಲ್ಪಿಗೂ ತನ್ನನ್ನು ತಾನು ಸೀಮಿತವಾಗಿರಿಸಿಕೊಳ್ಳದೆ ವರ್ಷಕ್ಕೊಮ್ಮೆ ಎಲ್ಲರ ಮನೆಗೂ ಬರುತ್ತಿರುತ್ತಾಳೆ. ಅಂಥ ಒಂದು ದಿನವೇ 'ಗೌರೀತದಿಗೆ' ಎನ್ನುವುದಾಗಿ ಆಚರಿಸಲ್ಪಡುವ ಭಾದ್ರಪದ ಶುದ್ಧ ತೃತೀಯಾ.

ಒಂದು ತುಂಡು ಎಲೆಯನ್ನೂ ತಿನ್ನದೆ, ವರ್ಷಾನುಗಟ್ಟಲೆ ಶಿವನಿಗಾಗಿ ತಪಿಸಿ 'ಅಪರ್ಣಾ' ಎಂದೇ ಹೆಸರಾದ ಆದರ್ಶ ಕನ್ಯೆಯೂ, ವಿವಾಹವಾದ ನಂತರವೂ ಗಂಡನ ಏಕಾಂತ ತಪಕ್ಕೆ ಕೊಂಚವೂ ಭಂಗ ಬಾರದಂತೆ ಜಗತ್ತಿನ ವ್ಯವಹಾರವನ್ನು ನಡೆಸಿಕೊಂಡು ಹೋಗುತ್ತಿರುವ ಮಹಾಸಾಧ್ವಿಯೂ ಆದ ಪಾರ್ವತಿಯ ಈ ಹಬ್ಬ ವಿವಾಹವಾಗಿರುವ ಸ್ತ್ರೀಯರಿಗೂ, ವಿವಾಹಾಕಾಂಕ್ಷಿಗಳಾದ ಕನ್ಯೆಯರಿಗೂ ಬಹಳ ಮೆಚ್ಚಿನ ಹಬ್ಬ. ಉತ್ತರ ಭಾರತದ ಉತ್ತರ ಪ್ರದೇಶ, ಜಾರ್ಖಂಡ್ ಇತ್ಯಾದಿ ಕಡೆಗಳಲ್ಲೆಲ್ಲ ಈ ದಿನ ಗೌರಿಯ ಮೂರ್ತಿಯನ್ನು ಸ್ಥಾಪಿಸಿ, ಪೂಜಿಸಿ ಇನ್ನೂ ವಿವಾಹವಾಗದಿರುವ ಕನ್ಯೆಯರಿಗೆ 'ಯೋಗ್ಯನಾದ ಗಂಡ ಸಿಗಲಿ' ಎನ್ನುವುದಾಗಿಯೂ, ಈಗಾಗಲೇ ವಿವಾಹವಾಗಿರುವವರಿಗೆ ಅವರ 'ಸೌಮಾಂಗಲ್ಯ ಭದ್ರವಾಗಿರಲಿ' ಎಂದೂ ಈ ಹೊತ್ತಿನಲ್ಲಿ ಬಾಗಿನ ನೀಡಿ ಹಾರೈಸುವ ಸಂಪ್ರದಾಯವಿದೆ.

ಕೃಷಿಪ್ರಧಾನ ಕುಟುಂಬಗಳಿರುವ ಹವ್ಯಕರಲ್ಲಿ ಗೌರಿಯ ಮೂರ್ತಿಯನ್ನು ಪ್ರತಿಷ್ಠಾಪಿಸುವ ಸಂಪ್ರದಾಯವಿಲ್ಲ; ಆ ಹೊತ್ತು ತಾವು ಬೆಳೆದ ತರಕಾರಿಗಳ ಮತ್ತು ಹಣ್ಣುಗಳ (ಬಳ್ಳಿಗಳ) 'ಫಲವಾಳಿಗೆ'ಯನ್ನು ಕಟ್ಟುವ, ಅದನ್ನೇ ಗೌರಿಯೆಂದು ಆರಾಧಿಸುವ ಪದ್ಧತಿಯಿದೆ. ಸಂಪ್ರದಾಯಗಳ, ಆಚರಣೆಗಳಲ್ಲಿನ ಮತ್ತು ಅವುಗಳ ಹಿಂದಿರುವ ಕಲ್ಪನೆಗಳಲ್ಲಿ ಎಷ್ಟು ಸರಳವಾದ ಸೌಂದರ್ಯವಿರುತ್ತದೆ ಎನ್ನುವುದಕ್ಕೂ ಗೌರೀತದಿಗೆ ಒಂದು ನಿದರ್ಶನವೇ ಸರಿ. ಏಕೆಂದರೆ ಆಕೆ ವರ್ಷಕ್ಕೊಮ್ಮೆ ತನ್ನ ತವರಿಗೆ ಬಂದಂತೆ ತದಿಗೆಯಂದು ನಮ್ಮೆಲ್ಲರ ಮನೆಗೆ ಬರುತ್ತಾಳಷ್ಟೇ? ಅಂಥ ಪಾರ್ವತಿಯನ್ನು ಮರುದಿನ ಚತುರ್ಥಿಯಂದು, ಮಗನಾದ ಗಣಪತಿಯು ಬಂದು ಮರಳಿ ಕರೆದೊಯ್ಯುತ್ತಾನೆ ಎನ್ನುವುದು ಸಂಪ್ರದಾಯ ರೂಪಿಸಿಕೊಂಡಿರುವ ಒಂದು ಚಂದದ ಕಥೆ! ❖

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹275-429
ದ್ವಿತಳಿ (ಬಿ.ವಿ)	₹366-651

ವಿನಿಮಯ ದರ

$ ಡಾಲರ್	83.97
£ ಪೌಂಡ್	110.50
€ ಯುರೊ	93.17
¥ ಯೆನ್ (100ಕ್ಕೆ)	58

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಶ್ರೀಮತಿ ನಂಜಮ್ಮ
ನಿಧನ : 06-09-2021
ಲೇಟ್ ಶ್ರೀ ರಾಮಣ್ಣನವರ ಪತ್ನಿ
(ಸಂಸ್ಥಾಪಕರು: ಪಲ್ಲವಿ ಕನ್‌ಸ್ಟ್ರಕ್ಷನ್ಸ್)
ಸದಾ ನಿಮ್ಮ ನೆನಪಿನಲ್ಲಿರುವ....
ಡಾ. ಸಿ ರಾಮಚಂದ್ರ, ಡಾ. ಪಲ್ಲವಿ ವಿ.ಆರ್.
ಕುಮಾರಿ ಸಂಹಿತಾ ರಾಮಚಂದ್ರ, ಹಾಗೂ
ಕುಮಾರಿ ಅನ್ವಿತಾ ರಾಮಚಂದ್ರ ಬಂಧು-ಮಿತ್ರರು

'ಹಿಂದೂಗಳ ಮೇಲಿನ ದಾಳಿ: ಅಪಪ್ರಚಾರ ನಡೆಸುತ್ತಿದೆ ಭಾರತ'

ಮೊಹಮ್ಮದ್ ಯೂನಸ್

ಢಾಕಾ (ಪಿಟಿಐ): 'ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆದ ದಾಳಿಯ ಬಗ್ಗೆ ಭಾರತ ಮಾಡುತ್ತಿರುವ ಪ್ರಚಾರ 'ಉತ್ಪ್ರೇಕ್ಷೆಯಿಂದ ಕೂಡಿದೆ. ಹಿಂದೂಗಳ ಮೇಲಿನ ದಾಳಿ ರಾಜಕೀಯ ಕಾರಣಕ್ಕಾಗಿ ನಡೆದಿದೆಯೇ ಹೊರತು ಕೋಮುದ್ವೇಷಕ್ಕಾಗಿ ಅಲ್ಲ. ಈ ವಿಚಾರವನ್ನು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರಿಗೂ ತಿಳಿಸಿದ್ದೇನೆ' ಎಂದು ಬಾಂಗ್ಲಾದೇಶದ ಹಂಗಾಮಿ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್ ಹೇಳಿದರು.

ಪಿಟಿಐ ಸುದ್ದಿ ಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು, 'ಹಿಂದೂಗಳ ಮೇಲೆ ನಡೆದ ದಾಳಿಗೆ ಹಲವು ಆಯಾಮಗಳಿವೆ. ಶೇಕ್ ಹಸೀನಾ ಮತ್ತು ಅವಾಮಿ ಲೀಗ್ ವಿರುದ್ಧ ದೇಶದಲ್ಲಿ ದಂಗೆ ಎದ್ದಿತ್ತು. ಇದೇ ವೇಳೆ ಹಸೀನಾ ಅವರನ್ನು ಬೆಂಬಲಿಸುವವರ ಮೇಲೆಯೂ ದಾಳಿಯಾಗಿದೆ. ಹಿಂದೂಗಳು ಹಸೀನಾ ಅವರ ಬೆಂಬಲಿಗರು ಎಂಬ ಗ್ರಹಿಕೆ ನಮ್ಮಲ್ಲಿದೆ. ಈ ಕಾರಣಕ್ಕಾಗಿಯೇ ದಾಳಿ ನಡೆದಿದೆ. ಹಾಗೆಂದ ಮಾತ್ರಕ್ಕೆ ಇದನ್ನು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ' ಎಂದು ವಿವರಿಸಿದರು.

ಹಳಸಿದ ಬಾಂಧವ್ಯ: 'ಭಾರತದೊಂದಿಗಿನ ಸಂಬಂಧವು ಹಳಸಿದೆ. ಇದನ್ನು ಸರಿಪಡಿಸಿಕೊಳ್ಳಲು ಎರಡೂ ದೇಶಗಳು ಯತ್ನಿಸಬೇಕಿದೆ. ಹಸೀನಾ ಅವರನ್ನು ಬಿಟ್ಟು ಬಾಂಗ್ಲಾದೇಶದಲ್ಲಿ ಇರುವವರೆಲ್ಲಾ ಇಸ್ಲಾಂ ಮೂಲಭೂತವಾದಿಗಳು. ಇವರೆಲ್ಲರೂ ಸೇರಿ ದೇಶವನ್ನು ಮತ್ತೊಂದು ಅಫ್ಘಾನಿಸ್ತಾನ ಮಾಡಿಬಿಡುತ್ತಾರೆ ಎಂಬೆಲ್ಲಾ ಸಂಕಥನಗಳಿಂದ ಭಾರತ ಹೊರಬರಬೇಕು. ಎಲ್ಲರಂತೆಯೇ ನಾವೂ ನೆರೆಯ ರಾಷ್ಟ್ರ ಎಂದು ತಿಳಿಯಬೇಕು. ಇದೇ ಎರಡೂ ದೇಶಗಳ ಸಂಬಂಧವು ಉತ್ತಮಗೊಳ್ಳಲು ಇರುವ ದಾರಿ' ಎಂದರು.

'ಹಸೀನಾ ಮೌನವಾಗಿರಬೇಕು'

'ಶೇಕ್ ಹಸೀನಾ ಅವರನ್ನು ಹಸ್ತಾಂತರಿಸಿ ಎಂದು ನಾವು ಮನವಿ ಮಾಡುವವರೆಗೂ ಅವರು ನಿಮ್ಮಲ್ಲಿಯೇ ಆಶ್ರಯ ಪಡೆಯಲಿ. ಆದರೆ, ಅಲ್ಲಿಯವರೆಗೂ ಅವರು ಮೌನವಾಗಿರಬೇಕು ಎಂಬುದು ನಮ್ಮ ಷರತ್ತು. ಇದನ್ನು ನಾವು ಭಾರತಕ್ಕೆ ಬಹಳ ದೃಢವಾಗಿ ಮತ್ತು ಸ್ಪಷ್ಟವಾಗಿ ಹೇಳಿದ್ದೇವೆ. ಭಾರತದಲ್ಲಿ ಕೂತು ಬಾಂಗ್ಲಾದೇಶಕ್ಕೆ ನಿರ್ದೇಶನ ನೀಡುವುದು, ರಾಜಕೀಯ ಹೇಳಿಕೆಗಳನ್ನು ನೀಡುವುದನ್ನು ಅವರು ನಿಲ್ಲಿಸಬೇಕು' ಎಂದು ಹಂಗಾಮಿ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್ ಹೇಳಿದರು.

'ಹಸೀನಾ ಅವರು ನಮ್ಮ ದೇಶಕ್ಕೆ ಸಂಬಂಧಿಸಿ ಹೇಳಿಕೆ ನೀಡುವುದಕ್ಕೆ ಅವರೇನು ಸುಮ್ಮನೇ ಭಾರತದಲ್ಲಿ ಹೋಗಿ ಕುಳಿತಿಲ್ಲ. ಇಲ್ಲಿ ಎದ್ದ ದಂಗೆ, ಜನರ ಆಕ್ರೋಶದ ಕಾರಣಕ್ಕಾಗಿ ಅವರು ಭಾರತಕ್ಕೆ ಓಡಿ ಹೋಗಿದ್ದಾರೆ. ಅವರು ಹೇಳಿಕೆ ನೀಡುವುದಕ್ಕೆ ಅವಕಾಶ ನೀಡುತ್ತಿರುವುದು, ಬಾಂಗ್ಲಾದೇಶದೊಂದಿಗೆ ಭಾರತ ತೋರುತ್ತಿರುವ ಸ್ನೇಹಪರ ನಡವಳಿಕೆ ಅಲ್ಲ' ಎಂದು ಟೀಕಿಸಿದರು.

'ಅದಾನಿಯೊಂದಿಗಿನ ಒಪ್ಪಂದ: ಮರುಪರಿಶೀಲನೆ ಕುರಿತು ಚಿಂತನೆ'

'ಭಾರತದೊಂದಿಗಿನ ದ್ವಿಪಕ್ಷೀಯ ಒಪ್ಪಂದಗಳ ಕುರಿತು ಪ್ರಮುಖವಾಗಿ ಉದ್ಯಮಿ ಗೌತಮ್ ಅದಾನಿ ಅವರೊಂದಿಗಿನ ವಿದ್ಯುತ್ ಯೋಜನೆಯ ಒಪ್ಪಂದವನ್ನು ಮರುಪರಿಶೀಲಿಸಬೇಕು ಎಂಬ ಒತ್ತಾಯವಿದೆ. ಕರಾರಿನಲ್ಲಿ ಏನಿದೆ, ಕಾಮಗಾರಿ ಹೇಗೆ ನಡೆಯುತ್ತಿದೆ ಎಂಬುದನ್ನು ಪರಿಶೀಲಿಸಲಾಗುತ್ತದೆ. ಸಮಸ್ಯೆಗಳಿದ್ದರೆ ಪ್ರಶ್ನಿಸಲಾಗುತ್ತದೆ. ಈಗಲೇ ಏನನ್ನೂ ಹೇಳಲು ಸಾಧ್ಯವಿಲ್ಲ' ಎಂದು ಮೊಹಮ್ಮದ್ ಯೂನಸ್ ತಿಳಿಸಿದರು.

ಸೆಬಿ ಅಧ್ಯಕ್ಷೆ ಮಾಧವಿ ಬುಚ್ ವಿರುದ್ಧದ ಆರೋಪ

ಸ್ವತಂತ್ರ ತನಿಖೆಗೆ ಕಾಂಗ್ರೆಸ್ ಆಗ್ರಹ

ನವದೆಹಲಿ (ಪಿಟಿಐ): ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಅಧ್ಯಕ್ಷೆ ಮಾಧವಿ ಪುರಿ ಬುಚ್ ವಿರುದ್ಧದ ಆರೋಪಗಳ ಕುರಿತ ಸ್ವತಂತ್ರ ತನಿಖೆಗೆ ಕಾಂಗ್ರೆಸ್ ಗುರುವಾರ ಒತ್ತಾಯಿಸಿದೆ.

ಸೆಬಿ ಅಧ್ಯಕ್ಷೆ ವಿರುದ್ಧದ ಆರೋಪಗಳು ವಿದೇಶಿ ಹೂಡಿಕೆದಾರರ ಕಳವಳಕ್ಕೆ ಕಾರಣವಾಗಿದ್ದು, ಭಾರತದ ಷೇರು ಮಾರುಕಟ್ಟೆ ಬಗ್ಗೆಯೇ ಅನುಮಾನ ಮೂಡುವಂತೆ ಮಾಡಿದೆ. ರಾಷ್ಟ್ರೀಯ ಹಿತಾಸಕ್ತಿಯ ದೃಷ್ಟಿಯಿಂದ ತನಿಖೆ ಕೈಗೊಳ್ಳುವುದು ಅಗತ್ಯ ಎಂದು ಪ್ರತಿಪಾದಿಸಿದೆ.

'ಅಮೆರಿಕದ ಶಾರ್ಟ್ ಸೆಲ್ಲರ್ ಕಂಪನಿ ಹಿಂಡೆನ್‌ಬರ್ಗ್ ರಿಸರ್ಚ್, ಆಗಸ್ಟ್ 10ರಂದು ಸೆಬಿ ಅಧ್ಯಕ್ಷೆ ಮತ್ತು ಅವರ ಕುಟುಂಬದ ವಿರುದ್ಧ ಆರೋಪಗಳನ್ನು ಮಾಡಿತ್ತು. ಅದಾನಿ ಸಮೂಹ ವಹಿವಾಟು ನಡೆಸುತ್ತಿದ್ದ ವಿದೇಶಿ 'ಶೆಲ್' ಕಂಪನಿಗಳಲ್ಲಿ ಮಾಧವಿ ಅವರು ಪಾಲುದಾರಿಕೆ ಹೊಂದಿದ್ದಾರೆ ಎಂದಿತ್ತು. ಅದಕ್ಕೆ ಸಾಕ್ಷ್ಯಾಧಾರಗಳೂ ಇವೆ ಎಂದು ಹೇಳಿತ್ತು. ಸಂಶೋಧನಾ ಸಂಸ್ಥೆಯೊಂದು ಈ ಆರೋಪಗಳನ್ನು ಮಾಡಿದೆಯೇ ಹೊರತು, ಯಾವುದೇ ರಾಜಕೀಯ ಪಕ್ಷ ಮಾಡಿದ್ದಲ್ಲ. ಈ ಆರೋಪಗಳಿಗೆ ಸಂಬಂಧಿಸಿದಂತೆ ಮೋದಿ ಸರ್ಕಾರದ ಸಚಿವರೊಬ್ಬರು ಪ್ರತಿಕ್ರಿಯೆ ನೀಡಿದ್ದಾರೆ' ಎಂದು ಕಾಂಗ್ರೆಸ್‌ನ ವೃತ್ತಿಪರರ ಘಟಕದ ಅಧ್ಯಕ್ಷ ಪ್ರವೀಣ್ ಚಕ್ರವರ್ತಿ ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಸೆಬಿಯಲ್ಲಿರುವ ವ್ಯಕ್ತಿಯೊಬ್ಬರ ವಿರುದ್ಧ ವಿದೇಶದ ಸಂಸ್ಥೆಯೊಂದು ಆರೋಪಗಳನ್ನು ಮಾಡಿದಾಗ ಸಚಿವರು ಏಕೆ ಪ್ರತಿಕ್ರಿಯಿಸಬೇಕು' ಎಂದು ಅವರು ಪ್ರಶ್ನಿಸಿದರು.

ಸೆಬಿ ಸಿಬ್ಬಂದಿ ಪ್ರತಿಭಟನೆ

ಮುಂಬೈ (ಪಿಟಿಐ): ಮಾಧವಿ ಪುರಿ ಬುಚ್ ಅವರು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಸೆಬಿಯ ಸಿಬ್ಬಂದಿ, ಇಲ್ಲಿನ ಕೇಂದ್ರ ಕಚೇರಿಯ ಹೊರಗೆ ಗುರುವಾರ ಪ್ರತಿಭಟನೆ ನಡೆಸಿದರು.

ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್‌ನಲ್ಲಿರುವ ಕಟ್ಟಡದ ಬಳಿ ಸೇರಿದ 200ಕ್ಕೂ ಹೆಚ್ಚು ಸಿಬ್ಬಂದಿ ಮೌನ ಪ್ರತಿಭಟನೆ ನಡೆಸಿದರು. ಸುಮಾರು 90 ನಿಮಿಷದ ಪ್ರತಿಭಟನೆ ಬಳಿಕ ಅವರು ಸ್ಥಳದಿಂದ ತೆರಳಿದರು. ಪ್ರತಿಭಟನೆಯಲ್ಲಿ ಪಾಲ್ಗೊಂಡ ಯಾವುದೇ ಸಿಬ್ಬಂದಿ ಮಾಧ್ಯಮದ ಜತೆ ಮಾತನಾಡಲಿಲ್ಲ.

ಮಾರಾಟವಾಗದ ₹122 ಕೋಟಿ ಮೌಲ್ಯದ ಹಾಲಿನ ಉತ್ಪನ್ನ: ರೇವಣ್ಣ

ಪ್ರಜಾವಾಣಿ ವಾರ್ತೆ

ಹಾಸನ: 'ಹಾಸನ ಹಾಲು ಒಕ್ಕೂಟದಲ್ಲಿ ₹122 ಕೋಟಿ ಮೌಲ್ಯದ ಹಾಲಿನ ಮೌಲ್ಯವರ್ಧಿತ ಉತ್ಪನ್ನಗಳು ಮಾರಾಟವಾಗದೇ ಉಳಿದಿವೆ. ಹೀಗಾಗಿ ಹಾಲು ಉತ್ಪಾದಕರಿಗೆ ಮೂರು ವಾರಗಳ ಹಣ ನೀಡಲು ಸಾಧ್ಯವಾಗಿಲ್ಲ' ಎಂದು ಹಾಸನ ಹಾಲು ಒಕ್ಕೂಟದ ಅಧ್ಯಕ್ಷ, ಶಾಸಕ ಎಚ್‌.ಡಿ. ರೇವಣ್ಣ ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಒಕ್ಕೂಟದಿಂದ ನಿತ್ಯ 4 ಲಕ್ಷದಿಂದ 4.5 ಲಕ್ಷ ಲೀಟರ್ ಹಾಲನ್ನು ಮೌಲ್ಯವರ್ಧನೆಗೆ ಕಳುಹಿಸಲಾಗುತ್ತಿದೆ. ಬೇಡಿಕೆ ಕಡಿಮೆಯಾಗಿದ್ದರಿಂದ 3,800 ಟನ್ ಹಾಲಿನ ಪೌಡರ್ ಹಾಗೂ 1,246 ಟನ್ ಬೆಣ್ಣೆ ಮಾರಾಟವಾಗದೇ ದಾಸ್ತಾನು ಉಳಿದಿದೆ' ಎಂದು ತಿಳಿಸಿದ್ದಾರೆ.

'ಉತ್ಪನ್ನಗಳು ಮಾರಾಟವಾಗದೇ ಒಕ್ಕೂಟವು ನಷ್ಟ ಅನುಭವಿಸುವಂತಾಗಿದೆ. ವಾರ್ಷಿಕವಾಗಿ ಒಕ್ಕೂಟದಿಂದ ಕೆಎಂಎಫ್‌ಗೆ ₹15 ಕೋಟಿ ತೆರಿಗೆ ಪಾವತಿಸಲಾಗುತ್ತಿದೆ. ಸದ್ಯಕ್ಕೆ ನಷ್ಟದಲ್ಲಿರುವುದರಿಂದ ಹಾಲಿನ ಉತ್ಪನ್ನಗಳ ಮಾರಾಟ ಮೇಲೆ ಕೆಎಂಎಫ್ ವಿಧಿಸುತ್ತಿರುವ ಶೇ 6 ರಷ್ಟು ಮಾರಾಟ ತೆರಿಗೆಯನ್ನು ಕೆಲ ತಿಂಗಳು ಕೈಬಿಡುವಂತೆ ಕೆಎಂಎಫ್‌ಗೆ ಮನವಿ ಮಾಡಲಾಗುವುದು' ಎಂದು ತಿಳಿಸಿದರು.

ಅಕ್ಟೋಬರ್‌ನಲ್ಲಿ 20 ಹೊಸ ಮಳಿಗೆ: ಮಲಬಾರ್

ನವದೆಹಲಿ (ಪಿಟಿಐ): ಜಾಗತಿಕ ವಿಸ್ತರಣೆಯಭಾಗವಾಗಿ ಅಕ್ಟೋಬರ್‌ನಲ್ಲಿ 20 ಹೊಸ ಮಳಿಗೆಗಳನ್ನು ಆರಂಭಿಸುವುದಾಗಿ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಗುರುವಾರ ತಿಳಿಸಿದೆ.

ಉತ್ತರಪ್ರದೇಶದಲ್ಲಿ 3, ನವದೆಹಲಿ, ಮಹಾರಾಷ್ಟ್ರ, ಕರ್ನಾಟಕ ಮತ್ತು ರಾಜಸ್ಥಾನದಲ್ಲಿ ತಲಾ 2, ಒಡಿಶಾ, ತೆಲಂಗಾಣ, ಪಶ್ಚಿಮ ಬಂಗಾಳ ಮತ್ತು ಪಂಜಾಬ್‌ನಲ್ಲಿ ತಲಾ ಒಂದು ಮಳಿಗೆ ಆರಂಭಿಸಲಾಗುವುದು. ಶಾರ್ಜಾ, ಕತಾರ್, ಸೌದಿ ಅರೇಬಿಯಾ ಮತ್ತು ಉತ್ತರ ಅಮೆರಿಕದಲ್ಲಿಯೂ ಮಳಿಗೆ ಆರಂಭಿಸುವುದಾಗಿ ತಿಳಿಸಿದೆ. ಪ್ರಸ್ತುತ ಮಲಬಾರ್ ಗೋಲ್ಡ್ 13 ದೇಶಗಳಲ್ಲಿ 335 ಮಳಿಗೆಗಳನ್ನು ಹೊಂದಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-40500
ಹಳತು	40500-47500
ಚಿತ್ರದುರ್ಗ	
ಅಪಿ	46600-47000
ಬೆಟ್ಟೆ	33100-33500
ಕೆಂಪುಗೋಟು	27100-27500
ರಾಶಿ	46100-46500
ಕುಮಟ	
ಚಿಪ್ಪು	20199-27550
ಕೋಕ	8209-24099
ಹಳೆಚಾಲಿ	33259-39899
ಹೊಸಚಾಲಿ	33050-35509
ಪುತ್ತೂರು	
ಹೊಸತು	36000-40500
ಸಾಗರ	
ಬಿಳಿಗೋಟು	15099-24599
ಚಾಲಿ	26899-32711
ಕೋಕ	12699-19699
ಕೆಂಪುಗೋಟು	14899-26899
ರಾಶಿ	34599-47509
ಸಿಪ್ಪೆಗೋಟು	9299-16300
ಕಾರ್ಕಳ	
ಹೊಸತು	25000-40500
ಹಳತು	30000-47500
ಶಿವಮೊಗ್ಗ	
ಬೆಟ್ಟೆ	47699-54719
ಗೊರಬಲು	17009-33969
ರಾಶಿ	25138-48099
ಸರಕು	49100-82910
ಸಿದ್ದಾಪುರ	
ಬಿಳಿಗೋಟು	24699-28699
ಚಾಲಿ	30569-34799
ಕೋಕ	20489-22109
ಕೆಂಪುಗೋಟು	21889-21889
ರಾಶಿ	43599-45299
ತಟ್ಟಿಬೆಟ್ಟೆ	27889-40189
ಶಿರಸಿ	
ಬೆಟ್ಟೆ	22702-34699
ಬಿಳಿಗೋಟು	24169-29799
ಚಾಲಿ	32455-36301
ಕೆಂಪುಗೋಟು	10899-16099
ರಾಶಿ	38699-46189
ಯಲ್ಲಾಪುರ	
ಬಿಳಿಗೋಟು	15899-29612
ಚಾಲಿ	30201-36263
ಕೋಕ	4899-22799
ಕೆಂಪುಗೋಟು	15900-25699
ರಾಶಿ	37200-55609
ತಟ್ಟಿಬೆಟ್ಟೆ	26699-36654

ಭಾರತ- ಸಿಂಗಪುರ ಸಂಬಂಧ ಇನ್ನಷ್ಟು ಗಟ್ಟಿ; 4 ಒಪ್ಪಂದಗಳಿಗೆ ಸಹಿ

ಕಾರ್ಯತಂತ್ರದ ಪಾಲುದಾರಿಕೆಗೆ ಒಪ್ಪಿಗೆ

ಸಿಂಗಪುರ (ಪಿಟಿಐ): ಭಾರತ ಮತ್ತು ಸಿಂಗಪುರ ತಮ್ಮ ದ್ವಿಪಕ್ಷೀಯ ಸಂಬಂಧವನ್ನು 'ಸಮಗ್ರ ಕಾರ್ಯತಂತ್ರದ ಪಾಲುದಾರಿಕೆ'ಗೆ ಏರಿಸಲು ಒಪ್ಪಿಕೊಂಡಿದ್ದು, ಸೆಮಿಕಂಡಕ್ಟರ್ ಕ್ಷೇತ್ರದ ಸಹಭಾಗಿತ್ವ ಸೇರಿದಂತೆ ನಾಲ್ಕು ಒಪ್ಪಂದಗಳಿಗೆ ಸಹಿ ಹಾಕಿದವು.

ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಸಿಂಗಪುರ ಪ್ರಧಾನಿ ಲಾರೆನ್ಸ್ ವಾಂಗ್ ಜತೆ ಮಾತುಕತೆ ನಡೆಸಿದ್ದು, ಉಭಯ ದೇಶಗಳ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಲು ನಿರ್ಧರಿಸಿದರು.

'ಭಾರತ–ಸಿಂಗಪುರ ನಡುವಣ ಸಂಬಂಧದಲ್ಲಿ ಹೊಸ ಅಧ್ಯಾಯ ಆರಂಭಗೊಂಡಿದ್ದು, ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯನ್ನು ಸ್ಥಾಪಿಸಲಾಗಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು 'ಎಕ್ಸ್'ನಲ್ಲಿ ಹೇಳಿದ್ದಾರೆ.

'ಸುಧಾರಿತ ಉತ್ಪಾದನೆ, ಸಂಪರ್ಕ, ಡಿಜಿಟಲೀಕರಣ, ಆರೋಗ್ಯ ಮತ್ತು ಔಷಧ, ಕೌಶಲಾಭಿವೃದ್ಧಿ ಹಾಗೂ ಸುಸ್ಥಿರ ಅಭಿವೃದ್ಧಿ ಒಳಗೊಂಡಂತೆ ದ್ವಿಪಕ್ಷೀಯ ಸಂಬಂಧದ ವಿವಿಧ ಆಯಾಮಗಳ ಬಗ್ಗೆ ವಿಸ್ತೃತ ಚರ್ಚೆ ನಡೆಯಿತು' ಎಂದು ತಿಳಿಸಿದ್ದಾರೆ.

'ಉಭಯ ದೇಶಗಳ ನಡುವಣ ದ್ವಿಪಕ್ಷೀಯ ಸಂಬಂಧವು ಹೊಂದಿರುವ ಶಕ್ತಿ ಮತ್ತು ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು, ಈ ಸಹಭಾಗಿತ್ವವನ್ನು ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಗೆ ಏರಿಸಲು ನಿರ್ಧರಿಸಲಾಯಿತು. ಇದು ಭಾರತದ 'ಆ್ಯಕ್ಟ್ ಈಸ್ಟ್' ನೀತಿಗೆ ಉತ್ತೇಜನವನ್ನು ನೀಡಲಿದೆ' ಎಂದಿದ್ದಾರೆ.

ಭಾರತದೊಳಗೆ ಹಲವು 'ಸಿಂಗಪುರ': 'ನಾವು ಭಾರತದೊಳಗೆ ಹಲವು 'ಸಿಂಗಪುರ' ನಿರ್ಮಿಸುವ ಗುರಿಯನ್ನು ಹೊಂದಿದ್ದೇವೆ. ಅದನ್ನು ಈಡೇರಿಸಲು ಸಿಂಗಪುರ ಸರ್ಕಾರವು ಸಹಕಾರ ನೀಡುತ್ತಿರುವುದು ಸಂತಸ ತಂದಿದೆ' ಎಂದು ವಾಂಗ್ ಜತೆಗಿನ ಮಾತುಕತೆಯ ಬಳಿಕ ಪ್ರಧಾನಿ ಮೋದಿ ಹೇಳಿದರು.

'ಪ್ರಜಾಸತ್ತಾತ್ಮಕ ಮೌಲ್ಯಗಳಲ್ಲಿ ಹೊಂದಿರುವ ಸಮಾನ ರೀತಿಯ ನಂಬಿಕೆಯು ನಮ್ಮ ಸಂಬಂಧವನ್ನು ಇನ್ನಷ್ಟು ಬಲಗೊಳಿಸುತ್ತದೆ. ನನ್ನ ಮೂರನೇ ಅವಧಿಯ ಆರಂಭದಲ್ಲೇ ಸಿಂಗಪುರಕ್ಕೆ ಭೇಟಿ ನೀಡುವ ಅವಕಾಶ ಸಿಕ್ಕಿರುವುದಕ್ಕೆ ಸಂತಸ ಉಂಟಾಗಿದೆ' ಎಂದರು.

ಭಾರತ ಮತ್ತು ಸಿಂಗಪುರ ನಡುವಿನ ಕಾರ್ಯತಂತ್ರದ ಪಾಲುದಾರಿಕೆಯನ್ನು ಒತ್ತಿ ಹೇಳಿದ ಪ್ರಧಾನಿ, 'ಕಳೆದ 10 ವರ್ಷಗಳಲ್ಲಿ ನಮ್ಮ ವ್ಯಾಪಾರ ಸಂಬಂಧ ದ್ವಿಗುಣಗೊಂಡಿದೆ. ಪರಸ್ಪರ ಹೂಡಿಕೆಯು ಸುಮಾರು ಮೂರು ಪಟ್ಟು ಹೆಚ್ಚಾಗಿದೆ' ಎಂದು ತಿಳಿಸಿದರು.



ಪ್ರಧಾನಿ ನರೇಂದ್ರ ಮೋದಿ ಅವರು ಸಿಂಗಪುರದ ಪ್ರಧಾನಿ ಲಾರೆನ್ಸ್ ವಾಂಗ್ ಅವರೊಂದಿಗೆ ಸಿಂಗಪುರದ ಎಇಎಂ ಹೋಲ್ಡಿಂಗ್ಸ್ ಕಂಪನಿಗೆ ಭೇಟಿ ನೀಡಿದರು —ಪಿಟಿಐ ಚಿತ್ರ

'ತಿರುವಳ್ಳುವರ್ ಸಾಂಸ್ಕೃತಿಕ ಕೇಂದ್ರ ಸ್ಥಾಪನೆ'

ಭಾರತವು ವಿದೇಶಗಳಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ತಿರುವಳ್ಳುವರ್ ಸಾಂಸ್ಕೃತಿಕ ಕೇಂದ್ರದ ಮೊದಲ ಕೇಂದ್ರವು ಸಿಂಗಪುರದಲ್ಲಿ ತಲೆ ಎತ್ತಲಿದೆ ಎಂದು ಪ್ರಧಾನಿ ಮೋದಿ ಅವರು ಘೋಷಿಸಿದರು.

> ಸಿಂಗಪುರದಲ್ಲಿ ನೆಲೆಸಿರುವ ಭಾರತೀಯ ಮೂಲದ 3.5 ಲಕ್ಷ ಜನರು ಎರಡೂ ದೇಶಗಳ ನಡುವಣ ಬಾಂಧವ್ಯಕ್ಕೆ ಭದ್ರ ಬುನಾದಿಯಾಗಿದ್ದಾರೆ
> **ನರೇಂದ್ರ ಮೋದಿ,** ಪ್ರಧಾನಿ

'ಭಾರತದ ಮೊದಲ ತಿರುವಳ್ಳುವರ್ ಸಾಂಸ್ಕೃತಿಕ ಕೇಂದ್ರವು ಸಿಂಗಪುರದಲ್ಲಿ ಶೀಘ್ರದಲ್ಲೇ ಉದ್ಘಾಟನೆಗೊಳ್ಳಲಿದೆ ಎಂಬುದನ್ನು ನಿಮಗೆ ತಿಳಿಸಲು ಸಂತಸವಾಗುತ್ತಿದೆ. ಮಹಾನ್ ಸಂತ ಕವಿಯಾಗಿದ್ದ ತಿರುವಳ್ಳುವರ್ ಅವರು ಜಗತ್ತಿನ ಅತ್ಯಂತ ಪ್ರಾಚೀನ ಭಾಷೆಗಳಲ್ಲಿ ಒಂದೆನಿಸಿರುವ ತಮಿಳಿನಲ್ಲಿ ಮಾರ್ಗದರ್ಶಿ ಚಿಂತನೆಗಳನ್ನು ಒದಗಿಸಿದರು. ಅವರ ಕೃತಿ 'ತಿರುಕ್ಕುರಲ್', ಸುಮಾರು 2,000 ವರ್ಷಗಳ ಹಿಂದೆ ರಚಿಸಲ್ಪಟ್ಟಿದೆಯಾದರೂ, ಅದರಲ್ಲಿನ ವಿಚಾರಗಳು ಇಂದಿಗೂ ಪ್ರಸ್ತುತವಾಗಿವೆ' ಎಂದು ಹೇಳಿದರು.

ಎರಡೂ ದೇಶಗಳ ನಡುವೆ ವ್ಯಾಪಾರ ಮತ್ತು ಹೂಡಿಕೆಯ ಉತ್ತೇಜನಕ್ಕೆ ಸಿಂಗಪುರದಲ್ಲಿ 'ಇನ್ವೆಸ್ಟ್ ಇಂಡಿಯಾ' ಕಚೇರಿಯನ್ನು ತೆರೆಯುವುದಾಗಿಯೂ ಪ್ರಕಟಿಸಿದರು.

ವಾಂಗ್ ನಾಯಕತ್ವ; ಮೋದಿ ಮೆಚ್ಚುಗೆ

- ಸಿಂಗಪುರದ ನಾಲ್ಕನೇ ತಲೆಮಾರಿನ ನಾಯಕತ್ವದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಮೋದಿ, ಲಾರೆನ್ಸ್ ವಾಂಗ್ ನೇತೃತ್ವದಲ್ಲಿ ಸಿಂಗಪುರದ ಅಭಿವೃದ್ಧಿಯ ವೇಗ ಹೆಚ್ಚಲಿದೆ ಎಂದು ಹೇಳಿದರು.
- ಭಾರತ-ಸಿಂಗಪುರ ನಡುವಣ ಸಂಬಂಧವು 2025ರಲ್ಲಿ ತನ್ನ 60ನೇ ವರ್ಷ ಆಚರಿಸಲಿದೆ. ಈ ಸಂದರ್ಭವನ್ನು ಸ್ಮರಣೀಯವನ್ನಾಗಿಸಲು, ಉಭಯ ದೇಶಗಳು ಕ್ರಿಯಾ ಯೋಜನೆಯೊಂದನ್ನು ರೂಪಿಸಬೇಕೆಂದು ಮೋದಿ ಕರೆ ನೀಡಿದರು.
- ಕಳೆದ 10 ವರ್ಷಗಳಲ್ಲಿ ಸಿಂಗಪುರದ 17 ಉಪಗ್ರಹಗಳನ್ನು ಭಾರತದ ನೆಲದಿಂದ ಉಡಾವಣೆ ಮಾಡಲಾಗಿದೆ ಎಂದು ತಿಳಿಸಿದರು.
- ಮೋದಿ ಅವರು ಸಿಂಗಪುರದ ಅಧ್ಯಕ್ಷ ಥರ್ಮನ್ ಷಣ್ಮುಗರತ್ನಂ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Teachers/ Professors

ಉಪನ್ಯಾಸಕರ ನೇಮಕಾತಿ
ಕುವೆಂಪು ಶಿಕ್ಷಣ ಸಂಸ್ಥೆ
ಬೂವನಹಳ್ಳಿ, ಹಾಸನ ತಾ॥ 573201
ಎರಡನೇ ಕರೆ
ಕುವೆಂಪು ಪದವಿ ಪೂರ್ವ ಕಾಲೇಜು, ಹಾಸನ. ರಾಜೀನಾಮೆಯಿಂದ ತೆರವಾಗಿರುವ ಉಪನ್ಯಾಸಕ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ತೀರ್ಮಾನಿಸಿದೆ. ಸದರಿ ಕಾಲೇಜು ಅನುದಾನಕ್ಕೆ ಒಳಪಟ್ಟಿದ್ದು, ಈ ಕೆಳಕಂಡಂತೆ ಮೀಸಲಾತಿ ಅನ್ವಯ ನೇಮಕಾತಿ ಮಾಡಿಕೊಳ್ಳಲಾಗುವುದು.
1) ಆಂಗ್ಲಭಾಷಾ ಉಪನ್ಯಾಸಕರು 1 ಹುದ್ದೆ, ಪ್ರವರ್ಗ–1.
2) ಸಮಾಜಶಾಸ್ತ್ರ ಉಪನ್ಯಾಸಕರು 1 ಹುದ್ದೆ, ಸಾಮಾನ್ಯ ವರ್ಗ. (ಗ್ರಾಮೀಣ ಮಹಿಳಾ ಅಭ್ಯರ್ಥಿ)
ಪ್ರವರ್ಗ–1 ಅಭ್ಯರ್ಥಿಗಳು 500 ರೂ., ಸಾಮಾನ್ಯ ವರ್ಗದ ಅಭ್ಯರ್ಥಿಗಳು 1000ರೂ ಡಿ.ಡಿ ತೆಗೆದು ಈ ಮೇಲ್ಕಂಡ ವಿಳಾಸಕ್ಕೆ ದಿನಾಂಕ: 27–09–2024ರ ಒಳಗೆ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು.
ಕಾರ್ಯದರ್ಶಿ
ದೂರವಾಣಿ: 9844806001

Marketing & Sales

ಕೆಲಸ: ಮಾರಾಟ ಅಧಿಕಾರಿ! ಬೀದಿ ವ್ಯಾಪಾರಿಗಳಿಗೆ ಸಾಲವನ್ನು ಉತ್ತೇಜಿಸಿ, ಸಂಬಂಧಗಳನ್ನು ನಿರ್ಮಿಸಿ ಮತ್ತು ಗುರಿಗಳನ್ನು ಸಾಧಿಸಿ. 'ಹೌದು' ಎಂಬ WhatsApp ಸಂದೇಶವನ್ನು ಕಳುಹಿಸುವ ಮೂಲಕ ಈಗಲೇ ಅನ್ವಯಿಸಿ +91 96063 06541.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

04.11.2024 05.12.2024 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 04.11.2024 18.11.2024 05.12.2024 12.12.2024 ದುಬೈ,ಅಬುದಾಬಿ 5 ದಿನಗಳು. 14.10.2024 21.11.2024 02.12.2024 ನೇಪಾಳ,ಅಯೋಧ್ಯ 9 ದಿನಗಳು. 22.10.2024 23.11.2024 ಭೂತಾನ್ 8 ದಿನಗಳು. 17.10.2024 24.11.2024 14.12.2024 ಶ್ರೀಲಂಕಾ 6 ದಿನಗಳು. 24.10.2024 30.11.2024 ಅಸ್ಸಾಂ ಮೇಘಾಲಯ 9 ದಿನಗಳು. 22.10.2024 26.11.2024 10.12.2024 ಗುಜರಾತ್/ ಉಜ್ಜಯಿನಿ 8/11 ದಿನಗಳು. 14.10.2024 24.11.2024 07.12.2024 ರಾಜಸ್ಥಾನ್ 10 ದಿನಗಳು. 14.10.2024 18.11.2024 ಮಧ್ಯಪ್ರದೇಶ 10 ದಿನಗಳು. 08.11.2024 04.12.2024 ಕಾಶಿ,ಗಯಾ ಅಯೋಧ್ಯ 7 ದಿನಗಳು. ಸಂಪರ್ಕಿಸಿ. ಜೈನ್ ಟ್ರಾವಲ್ಸ್ ಬೆಂಗಳೂರು-03. 9448402248 7022547922

22.9.2024, 4.10.2024 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್ 3.10.2024 ಶಿರಡಿ/ ಮಹಾರಾಷ್ಟ್ರ ಜ್ಯೋತಿರ್ಲಿಂಗ ಪ್ರವಾಸ 12.10.2024 ಅಯೋಧ್ಯಾ, ಕಾಶಿ, ಗಯಾ, ಪ್ರಯಾಗ್‌ರಾಜ್ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ). 9845035349, 9482435755

ಶ್ರೀರಾಜರಾಜೇಶ್ವರಿ ಟೂರ್ಸ್ ಅಂಡ್ ಯಾತ್ರಾ, ಗಿರೀಶ್ ನೆಲಮಂಗಲ, 9743895346, 21.02.2025, 7 ದಿನಗಳು. ವಿಮಾನದಲ್ಲಿ ಅಯೋಧ್ಯ ಕಾಶಿ ನೇಪಾಳ 36500/-.

ವಿಮಾನ ಎಸಿ ಬಸ್ಸಿನಲ್ಲಿ 17.10.2024 ದ್ವಾರಕಾ,ಸೋಮನಾಥ್ ನಿಷ್ಕಳಂಕ ಮಹಾದೇವ ಮಹಾಕಾಳೇಶ್ವರ ಓಂಕಾರೇಶ್ವರ್ 23.09.2024 23.10.2024 ಚಾರ್‌ಧಾಮ್ ಪ್ರವಾಸ 19.09.2024 ಪಿತ್ರಪಕ್ಷ ಪ್ರಯುಕ್ತ ಕಾಶಿ,ಬುದ್ಧಗಯಾ ಅಯೋಧ್ಯಾ 26.09.2024 ನೇಪಾಳ,ಮುಕ್ತಿನಾಥ ಪೋಕ್ರಾ,ಲುಂಬಿನಿ. ದಕ್ಷಿಣ ಮತ್ತು ಮಧ್ಯಭಾರತ ಅಂದ್ರ ಪ್ರವಾಸಗಳಿಗೆ ಸಂಪರ್ಕಿಸಿ ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು4. 26574131 8431888138 8262573686 8317446683

CONNECT
ಕರ್ನಾಟಕ ಇಂಜಿನೀಯರ್ಸ್ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ಸಿ.ಎ. ಸೈಟ್ ನಂ.1, 8ನೇ ಮುಖ್ಯ ರಸ್ತೆ, 2ನೇ ಅಡ್ಡ ರಸ್ತೆ, ಕಮಲಾನಗರ, ಬೆಂಗಳೂರು–560079.
ವಸತಿ ಬಡಾವಣೆ ನಿರ್ಮಿಸುವ ಬಗ್ಗೆ
ಈಗಾಗಲೇ ಇಂಜಿನೀಯರ್ಸ್ ಎನ್‌ಕ್ಲೇವ್–1 ಮತ್ತು ಇಂಜಿನೀಯರ್ಸ್ ಎನ್‌ಕ್ಲೇವ್–2 ಬಡಾವಣೆಗಳನ್ನು ಯಶ್ವಸಿಯಾಗಿ ನಿರ್ಮಿಸಲಾಗುತ್ತಿದ್ದು ಮುಂದುವರೆದು ಹೊಸಬಡಾವಣೆ ನಿರ್ಮಿಸುವುದಕ್ಕಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಸರಹದ್ದಿನಲ್ಲಿ ವಸತಿ ಬಡಾವಣೆ ನಿರ್ಮಿಸಲು ಸ್ಪಷ್ಟ ದಾಖಲೆ ಹೊಂದಿರುವ ಸುಮಾರು 30 ರಿಂದ 50 ಎಕರೆ ಜಮೀನಿನ ಅವಶ್ಯಕತೆ ಇರುವ ಪ್ರಯುಕ್ತ ಜಮೀನಿನ ಮಾಲೀಕರು ಮೇಲ್ಕಂಡ ವಿಳಾಸಕ್ಕೆ ವಿವರಗಳೊಂದಿಗೆ ಸಂಪರ್ಕಿಸಲು ಕೋರಿದೆ.
ಶ್ರೀ. ಎಸ್. ರಾಮಕೃಷ್ಣ
ಅಧ್ಯಕ್ಷರು
ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :
ಶ್ರೀ. ಎಸ್. ರಾಮಕೃಷ್ಣ, ಅಧ್ಯಕ್ಷರು : 9448057856
ಶ್ರೀ. ಕೆ. ಚಂದ್ರಯ್ಯ, ನಿರ್ದೇಶಕರು : 9448355437

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
@50/-* PER WORDS
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
7795158424
9900428036
*Conditions apply

ಸಚಿವ, ಶಾಸಕ ರಾಜೀನಾಮೆ • ಪಕ್ಷೇತರರಾಗಿ ರಂಜಿತ್ ಚೌಟಾಲಾ ಸ್ಪರ್ಧೆ

ಹರಿಯಾಣ: ಬಿಜೆಪಿಗೆ ಬಂಡಾಯದ ಬಿಸಿ

ಚಂಡೀಗಢ (ಪಿಟಿಐ): ಹರಿಯಾಣ ವಿಧಾನಸಭೆ ಚುನಾವಣೆಗೆ 67 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿದ ಹಿಂದೆಯೇ ಬಿಜೆಪಿಯಲ್ಲಿ ಬಂಡಾಯ ಕಾಣಿಸಿಕೊಂಡಿದೆ. ಟಿಕೆಟ್ ವಂಚಿತರಾಗಿರುವ ಸಚಿವ ರಂಜಿತ್ ಸಿಂಗ್ ಚೌಟಾಲಾ ಮತ್ತು ಶಾಸಕ ಲಕ್ಷ್ಮಣ್ ದಾಸ್ ನಾಪಾ ಅವರು ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ.

ಮಾಜಿ ಪ್ರಧಾನಿ ದೇವಿಲಾಲ್ ಅವರ ಪುತ್ರರೂ ಆದ ಚೌಟಾಲಾ, ಬೆಂಬಲಿಗರ ಸಭೆಯ ಬಳಿಕ, 'ನಾನು ಚೌಧರಿ ದೇವಿಲಾಲ್ ಅವರ ಪುತ್ರ. ಅದೇ ವರ್ಚಸ್ಸಿದೆ. ಪಕ್ಷೇತರನಾಗಿ ಸ್ಪರ್ಧಿಸಲು ತೀರ್ಮಾನಿಸಿದ್ದೇನೆ' ಎಂದು ಪ್ರಕಟಿಸಿದರು.

ಇವರು ರಾನಿಯಾ ಕ್ಷೇತ್ರದಿಂದ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಲು ಬಯಸಿದ್ದರು. ಆದರೆ, ಪಕ್ಷ ಆ ಕ್ಷೇತ್ರಕ್ಕೆ ಶಿಶ್‌ಪಾಲ್ ಕಾಂಬೋಜ್‌ರನ್ನು ಆಯ್ಕೆ ಮಾಡಿದೆ.

ಟಿಕೆಟ್ ನಿರಾಕರಣೆಗೆ ಪ್ರತಿಭಟನೆಯಾಗಿ ರಾಜೀನಾಮೆ ಸಲ್ಲಿಸಿರುವ ನಾಪಾ, ಮಾಜಿ ಮುಖ್ಯಮಂತ್ರಿ ಭೂಪಿಂದರ್ ಸಿಂಗ್ ಹೂಡಾ ಅವರ ಜೊತೆ ಚರ್ಚಿಸಿದರು. ಬಳಿಕ, ಬೆಂಬಲಿಗರೊಂದಿಗೆ ಕಾಂಗ್ರೆಸ್ ಸೇರುವುದಾಗಿ ಪ್ರಕಟಿಸಿದರು.

ಟಿಕೆಟ್ ಆಕಾಂಕ್ಷಿಯಾಗಿದ್ದ ಬಿಜೆಪಿ ಒಬಿಸಿ ಮೋರ್ಚಾದ ಅಧ್ಯಕ್ಷ, ಮಾಜಿ ಸಚಿವ ಕರಣ್ ದೇವ್ ಕಾಂಬೋಜ್ ಅವರು ಟಿಕೆಟ್ ಹಂಚಿಕೆಯಲ್ಲಿ ನನ್ನನ್ನು ಕಡೆಗಣಿಸಲಾಗಿದೆ ಎಂದು ದೂರಿದ್ದು, ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ರಾನಿಯಾ ಕ್ಷೇತ್ರದ ಪಕ್ಷೇತರ ಶಾಸಕರಾಗಿದ್ದ ರಂಜಿತ್ ಚೌಟಾಲಾ, ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಲೋಕಸಭೆ ಚುನಾವಣೆಗೆ ಹಿಸ್ಸಾರ್ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಪರಾಭವಗೊಂಡಿದ್ದರು.

67 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿ ಬಿಜೆಪಿ ಪ್ರಕಟಿಸಿರುವ ಮೊದಲ ಪಟ್ಟಿಯಲ್ಲಿ ಸಚಿವ ಸಂಜಯ್ ಸಿಂಗ್, ಮಾಜಿ ಸಚಿವ ಸಂದೀಪ್ ಸಿಂಗ್ ಸೇರಿದಂತೆ ಕೆಲ ಶಾಸಕರ ಹೆಸರು ಇಲ್ಲ.

ಮೊದಲ ಪಟ್ಟಿಯಲ್ಲಿ ಪ್ರಕಟಿಸಿರುವಂತೆ ಬಿಜೆಪಿ ಮುಖ್ಯಮಂತ್ರಿ ನಾಯಬ್ ಸಿಂಗ್ ಸೈನಿ ಅವರನ್ನು ಲಾಡ್ವಾ ಕ್ಷೇತ್ರದಿಂದ ಕಣಕ್ಕಿಳಿಸಲಿದೆ.

ಸದ್ಯ ಅವರು ಕರ್ನಾಲ್ ಕ್ಷೇತ್ರ ಪ್ರತಿನಿಧಿಸುತ್ತಿದ್ದಾರೆ. ಈಚೆಗೆ ಪಕ್ಷ ಸೇರಿದ್ದ ಹಲವರಿಗೆ ಟಿಕೆಟ್ ದೊರೆತಿದೆ.

ರಾಜ್ಯದಲ್ಲಿ ಸದ್ಯ ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿರುವ ಬಿಜೆಪಿ ಹಲವು ಕ್ಷೇತ್ರಗಳಲ್ಲಿ ತೀವ್ರ ಸ್ಪರ್ಧೆ ಎದುರಿಸುತ್ತಿದೆ. ಹಲವು ಕ್ಷೇತ್ರಗಳಲ್ಲಿ ಆಡಳಿತ ವಿರೋಧಿ ಅಲೆಯ ಲಾಭ ಪಡೆಯುವ ನಿರೀಕ್ಷೆಯಲ್ಲಿ ಪ್ರತಿಪಕ್ಷ ಕಾಂಗ್ರೆಸ್ ಇದೆ.

'2 ಕ್ಷೇತ್ರಗಳಿಂದ ಸ್ಪರ್ಧೆ ದೌರ್ಬಲ್ಯವಲ್ಲ'

ಬುದ್ಗಂ, ಜಮ್ಮು ಮತ್ತು ಕಾಶ್ಮೀರ (ಪಿಟಿಐ): 'ಎರಡು ಕ್ಷೇತ್ರಗಳಿಂದ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುತ್ತಿರುವುದು ದೌರ್ಬಲ್ಯದ ಸೂಚನೆಯಲ್ಲ. ಪಕ್ಷ ಹೊಂದಿರುವ ಪ್ರಾಬಲ್ಯದ ಸಂಕೇತ' ಎಂದು ನ್ಯಾಷನಲ್ ಕಾನ್ಫರೆನ್ಸ್ ಉಪಾಧ್ಯಕ್ಷ ಒಮರ್ ಅಬ್ದುಲ್ಲಾ ಹೇಳಿದ್ದಾರೆ.

ಒಮರ್ ಅವರು ಗಂದೇರ್‌ಬಲ್, ಬುದ್ಗಂ ಕ್ಷೇತ್ರಗಳಿಂದ ನಾಮಪತ್ರ ಸಲ್ಲಿಸಿದ್ದಾರೆ. 'ಸದ್ಯ ನ್ಯಾಷನಲ್ ಕಾನ್ಫರೆನ್ಸ್ ಪರ ಅಲೆ ಇದೆ. ಮೈತ್ರಿಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದು ಆಶಿಸಿದರು.

'ಕಾಶ್ಮೀರದವರು ಗುಲಾಮರಲ್ಲ'

ಶ್ರೀನಗರ (ಪಿಟಿಐ): 'ಜಮ್ಮು ಮತ್ತು ಕಾಶ್ಮೀರದ ನಿವಾಸಿಗಳೇ ಈ ನೆಲದ ಮಾಲೀಕರು. ಅವರು ಕೇಂದ್ರ ಸರ್ಕಾರದ ಗುಲಾಮರಲ್ಲ' ಎಂದು ಮಾಜಿ ಮುಖ್ಯಮಂತ್ರಿ, ನ್ಯಾಷನಲ್ ಕಾನ್ಫರೆನ್ಸ್ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಪ್ರತಿಪಾದಿಸಿದ್ದಾರೆ.

'ನಾವು ಅವರ ಗುಲಾಮರಲ್ಲ ಎಂದು ಸ್ಪಷ್ಟಪಡಿಸಲು ಬಯಸುತ್ತೇನೆ' ಎಂದು ಬಡ್ಗಾಂ ಜಿಲ್ಲೆಯಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಪ್ರಜಾ ಮತ
ಜನತಂತ್ರದ ಹಬ್ಬ

ತೆಲಂಗಾಣ: ಆರು ನಕ್ಸಲರ ಹತ್ಯೆ

ಹೈದರಾಬಾದ್ (ಪಿಟಿಐ): ನಕ್ಸಲರು ಹಾಗೂ ಪೊಲೀಸರ ಮಧ್ಯೆ ಭದ್ರಾದ್ರಿ ಕೊತ್ತಗೂಡೆಂ ಜಿಲ್ಲೆಯಲ್ಲಿ ಗುರುವಾರ ನಡೆದ ಗುಂಡಿನ ದಾಳಿಯಲ್ಲಿ ಇಬ್ಬರು ಮಹಿಳೆಯರು, ಗುಂಪಿನ ನಾಯಕ ಸೇರಿ ಒಟ್ಟು ಆರು ನಕ್ಸಲರು ಮೃತಪಟ್ಟಿದ್ದಾರೆ.

ದಾಳಿ ವೇಳೆ, ತೆಲಂಗಾಣದ ನಕ್ಸಲ ನಿಗ್ರಹ ತಂಡ 'ಗ್ರೇಹೌಂಡ್ಸ್'ನ ಇಬ್ಬರು ಕಮಾಂಡರ್‌ಗಳು ಗಾಯಗೊಂಡಿದ್ದಾರೆ.

'ಮೋತೆ ಗ್ರಾಮದಲ್ಲಿ ಪೊಲೀಸರು ಗಸ್ತು ತಿರುಗುತ್ತಿದ್ದ ವೇಳೆ, ಬೆಳಿಗ್ಗೆ ಸುಮಾರು 6.45ರ ಹೊತ್ತಿಗೆ ಗುಂಡಿನ ದಾಳಿ ಆರಂಭವಾಗಿದೆ. ನಕ್ಸಲರು ಏಕಾಏಕಿ ಪೊಲೀಸರ ಮೇಲೆ ದಾಳಿ ಆರಂಭಿಸಿದರು. ಗಾಯಗೊಂಡ ಇಬ್ಬರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರು ಅಪಾಯದಿಂದ ಪಾರಾಗಿದ್ದಾರೆ' ಎಂದು ಪೊಲೀಸರು ಗುರುವಾರ ತಿಳಿಸಿದರು.

'ಮೃತರು ಭದ್ರಾದ್ರಿ ಕೊತ್ತಗೂಡೆಂ–ಅಲ್ಲೂರಿ ಸೀತಾರಾಮರಾಜು ವಿಭಾಗೀಯ ಸಮಿತಿಯವರು. ಮೃತರ ಗುರುತು ಇದುವರೆಗೂ ಪತ್ತೆಯಾಗಿಲ್ಲ. ಆದರೆ, ಅವರಲ್ಲಿ ಒಬ್ಬರು ಸಂಘಟನೆಯ ನಾಯಕರಾಗಿದ್ದರು ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ' ಎಂದು ವಿವರಿಸಿದರು.

ಕೋಟಾ: ನೀಟ್ ಆಕಾಂಕ್ಷಿ ಆತ್ಮಹತ್ಯೆ

ಕೋಟಾ (ರಾಜಸ್ಥಾನ, ಪಿಟಿಐ): ಇಲ್ಲಿ 'ನೀಟ್– ಯುಜಿ'ಗೆ ಸಿದ್ಧತೆ ನಡೆಸುತ್ತಿದ್ದ 21 ವರ್ಷದ ವಿದ್ಯಾರ್ಥಿ ಕೊಠಡಿಯಲ್ಲಿ ಬುಧವಾರ ರಾತ್ರಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಉತ್ತರ ಪ್ರದೇಶದ ಮಥುರಾ ಜಿಲ್ಲೆಯ ಬರ್ಸಾನದ ನಿವಾಸಿಯಾದ ಪರಶುರಾಮ ಜಾತವ್ (21) ಮೃತ ವಿದ್ಯಾರ್ಥಿ.

'ನನ್ನ ಮಗನ ಸಾವಿಗೆ ನೀಟ್– ಯುಜಿ 2024ರ ಹಗರಣ ಕಾರಣ' ಎಂದು ಮೃತ ವಿದ್ಯಾರ್ಥಿಯ ತಂದೆ ಖಚರ್ಮಲ್ ಆರೋಪಿಸಿದ್ದಾರೆ.

ಈ ಮೂಲಕ, ಕೋಟಾದಲ್ಲಿ ಪ್ರಸಕ್ತ ಸಾಲಿನ ಜನವರಿಯಿಂದ ಇಲ್ಲಿಯವರೆಗೆ ಒಟ್ಟು 14 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಂತಾಗಿದೆ.

'ಮಹಾರಾಷ್ಟ್ರ ಜನರ ಕ್ಷಮೆ ಕೋರಲಿ'

ಪ್ರಧಾನಿ ನರೇಂದ್ರ ಮೋದಿಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆಗ್ರಹ

ಸಾಂಗ್ಲಿ(ಮಹಾರಾಷ್ಟ್ರ) (ಪಿಟಿಐ): ಸಿಂಧುದುರ್ಗ ಜಿಲ್ಲೆಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ಕುಸಿದ ಘಟನೆಗೆ ಮಾತ್ರವಲ್ಲದೆ ನೋಟು ರದ್ದತಿ, ಜಿಎಸ್‌ಟಿ ಮತ್ತು ರೈತ ವಿರೋಧಿ ಮಸೂದೆಗಳಿಗಾಗಿ ಪ್ರಧಾನಿ ನರೇಂದ್ರ ಮೋದಿ ಕ್ಷಮೆ ಯಾಚಿಸಬೇಕು ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಗುರುವಾರ ಹೇಳಿದ್ದಾರೆ.

ಆಗಸ್ಟ್ 26 ರಂದು ರಾಜ್‌ಕೋಟ್ ಕೋಟೆಯಲ್ಲಿನ ಪ್ರತಿಮೆ ಕುಸಿದಿರುವುದರಿಂದ 17ನೇ ಶತಮಾನದ ಮಹಾರಾಜ ಶಿವಾಜಿ ಅವರಿಗೆ ಅಗೌರವ ಉಂಟಾಗಿದೆ. ಇದಕ್ಕಾಗಿ ಮೋದಿ ಅವರು ಮಹಾರಾಷ್ಟ್ರದ ಪ್ರತಿ ನಾಗರಿಕರಲ್ಲೂ ಕ್ಷಮೆ ಕೋರಬೇಕು ಎಂದು ರಾಹುಲ್ ಹೇಳಿದ್ದಾರೆ.

ಪಕ್ಷದ ನಾಯಕರಾಗಿದ್ದ ದಿವಂಗತ ಪತಂಗರಾವ್ ಕದಂ ಅವರ ಪ್ರತಿಮೆ ಉದ್ಘಾಟಿಸಿದ ನಂತರ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದರು.

ಮಹಾರಾಷ್ಟ್ರದ ಬಿಜೆಪಿ-ಶಿವಸೇನೆ-ಎನ್‌ಸಿಪಿ ಸರ್ಕಾರವು ಶಿವಾಜಿ ಮಹಾರಾಜರ ಪ್ರತಿಮೆಯ ಕುಸಿತದಿಂದ ಜನರ ಕೆಂಗಣ್ಣಿಗೆ ಗುರಿಯಾಗಿರುವ ಹಿನ್ನೆಲೆಯಲ್ಲಿ, ಪ್ರಧಾನಿ ಮೋದಿ ಅವರು ಈ ಘಟನೆಯಿಂದ ರಾಜ್ಯದ ಜನರ ಭಾವನೆಗಳಿಗೆ ನೋವುಂಟಾಗಿರುವುದಕ್ಕೆ ಶಿವಾಜಿ ಮಹಾರಾಜರ ಅನುಯಾಯಿಗಳ ಕ್ಷಮೆಯಾಚಿಸುವುದಾಗಿ ಹೇಳಿದ್ದರು.

'ಶಿವಾಜಿ ಪ್ರತಿಮೆ ನಿರ್ಮಾಣದ ಗುತ್ತಿಗೆಯನ್ನು ಯಾವುದೇ ಅರ್ಹತೆ ಇಲ್ಲದ ಆರ್‌ಎಸ್‌ಎಸ್ ವ್ಯಕ್ತಿಗೆ ನೀಡಿದ್ದಕ್ಕಾಗಿ ಅಥವಾ ಈ ಪ್ರಕ್ರಿಯೆಯಲ್ಲಿ ಆಗಿರುವ ಭ್ರಷ್ಟಾಚಾರಕ್ಕಾಗಿ ಕ್ಷಮೆ ಕೋರಿರುವುದೇ ಎಂದು ಪ್ರಧಾನಿಯವರನ್ನು ನಾನು ಪ್ರಶ್ನಿಸಲು ಬಯಸುವೆ' ಎಂದು ರಾಹುಲ್ ಹೇಳಿದರು.

'ಎಲ್ಲ ಗುತ್ತಿಗೆಗಳನ್ನು ಅದಾನಿ ಮತ್ತು ಅಂಬಾನಿಗಳಿಗೆ ಏಕೆ ನೀಡಲಾಗಿದೆ ಮತ್ತು ಕೇವಲ ಈ ಇಬ್ಬರಿಗಾಗಿ ಸರ್ಕಾರವನ್ನು ಏಕೆ ನಡೆಸಲಾಗುತ್ತಿದೆ ಎನ್ನುವುದಕ್ಕೂ ಮೋದಿ ಉತ್ತರಿಸಬೇಕು. 'ಈ ಇಬ್ಬರ' ಲಾಭಕ್ಕಾಗಿ ಸಣ್ಣ ಮತ್ತು ಮಧ್ಯಮ ವ್ಯವಹಾರಗಳನ್ನು ಮುಗಿಸ-ಲಾಗುತ್ತಿದೆ. ಅದಾನಿ ಮತ್ತು ಅಂಬಾನಿ ಗುಂಪುಗಳು ಉದ್ಯೋಗ ಸೃಷ್ಟಿಸಲು ಸಾಧ್ಯವಿಲ್ಲ' ಎಂದು ಅವರು ವಾಗ್ದಾಳಿ ಮಾಡಿದರು.

ಉದ್ಧವ್ ಗೈರು: ರಾಹುಲ್ ಗಾಂಧಿ ಪಾಲ್ಗೊಂಡಿದ್ದ ಸಾಂಗ್ಲಿ ಜಿಲ್ಲೆಯ ಸಭೆಗೆ ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಗೈರಾಗಿದ್ದರು.

'ಪ್ರತಿಮೆ ಕುಸಿತದಿಂದ ದೇಶಕ್ಕೆ ಅವಮಾನ'

'ಶಿವಾಜಿ ಮಹಾರಾಜರ ಪ್ರತಿಮೆ ನೆಲಸಮವಾಗಿರುವುದು ರಾಜ್ಯ ಮತ್ತು ದೇಶಕ್ಕೆ ಮಾಡಿದ ಅವಮಾನವಾಗಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು. ಕದಂ ಅವರ ಪ್ರತಿಮೆಯನ್ನು ರಾಮ್ ಸುತಾರ್ ಅವರು ನಿರ್ಮಿಸಿದ್ದಾರೆ. ಅವರೊಬ್ಬ ನಿಪುಣ ಶಿಲ್ಪಿ ಎಂದು ಖರ್ಗೆ ಬಣ್ಣಿಸಿದರು.

'ಎಂವಿಎ ಮಹಾರಾಷ್ಟ್ರದಲ್ಲಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಒಗ್ಗಟ್ಟಿನಿಂದ ಹೋರಾಡಲಿದೆ. ಎಲ್ಲ ನಿಜವಾದ ಎನ್‌ಸಿಪಿ ಮತ್ತು ಶಿವಸೇನೆ ನಾಯಕರು ನಮ್ಮೊಂದಿಗಿದ್ದಾರೆ. ನಕಲಿಗಳು ಇನ್ನೊಂದು ಬದಿಯಲ್ಲಿದ್ದಾರೆ' ಎಂದು ಹೇಳಿದರು.

ಪಕ್ಷದ ಕಾರ್ಯಕರ್ತೆ- ಟಿಡಿಪಿ ಶಾಸಕನ ಖಾಸಗಿ ಕ್ಷಣಗಳ ವಿಡಿಯೊ ಬಹಿರಂಗ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಆಂಧ್ರಪ್ರದೇಶ ಚಿತ್ತೂರು ಜಿಲ್ಲೆ ಸತ್ಯವೇಡು ವಿಧಾನಸಭಾ ಕ್ಷೇತ್ರದ ಟಿಡಿಪಿ ಶಾಸಕ ಕೋನೇಟಿ ಆದಿಮೂಲಂ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಕೇಳಿ ಬಂದಿದೆ. ಪಕ್ಷದ ಮಹಿಳಾ ಘಟಕದ ಅಧ್ಯಕ್ಷೆಯೇ ಈ ಆರೋಪ ಮಾಡಿದ್ದಾರೆ.

'ಶಾಸಕ ಆದಿಮೂಲಂ ನನಗೆ ನಿರಂತರವಾಗಿ ಲೈಂಗಿಕ ಕಿರುಕುಳ ನೀಡಿದ್ದಾರೆ' ಎಂದು ಆರೋಪಿಸಿರುವ ಮಹಿಳೆ, ಶಾಸಕನೊಂದಿಗೆ ತಾನು ಕಳೆದ ಖಾಸಗಿ ಕ್ಷಣಗಳನ್ನು ಪೆನ್ ಕ್ಯಾಮೆರಾ ಬಳಸಿ ಚಿತ್ರೀಕರಿಸಿದ್ದಾರೆ.

ಈ ವಿಡಿಯೊ ಗುರುವಾರ ಬಹಿರಂಗಗೊಂಡಿದ್ದು, ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿದೆ. ಇದರ ಬೆನ್ನಲ್ಲೇ, 66 ವರ್ಷದ ಆದಿಮೂಲಂ ಅವರನ್ನು ಪಕ್ಷದಿಂದ ಅಮಾನತು ಮಾಡಲಾಗಿದೆ.

'ಶಾಸಕ ಕಳೆದ ಕೆಲ ತಿಂಗಳಿನಿಂದ ನನಗೆ ನಿರಂತರವಾಗಿ ಕಿರುಕುಳ ನೀಡುತ್ತಿದ್ದ. ಕೊನೆಗೆ, ಆತನ ಲೈಂಗಿಕ ಆಸೆ ಪೂರೈಸಲು ಒಪ್ಪಿಕೊಳ್ಳಬೇಕಾಯಿತು. ಶಾಸಕನ ಕಿರುಕುಳ ಸಹಿಸಿಕೊಳ್ಳಲಾಗದೇ, ಆತನೊಂದಿಗಿನ ಖಾಸಗಿ ಕ್ಷಣ ಗಳನ್ನು ಚಿತ್ರೀಕರಿಸಿ, ಬಹಿರಂಗಗೊಳಿಸಿದೆ' ಎಂದು 36 ವರ್ಷದ ಮಹಿಳೆ ಆರೋಪಿಸಿದ್ದಾರೆ.

ಈ ವಿಡಿಯೊಗಳನ್ನು ಜುಲೈನಲ್ಲಿ ಚಿತ್ರೀಕರಿಸಿದ್ದು ಎನ್ನಲಾಗಿದೆ.

'ಆದಿಮೂಲಂ ಪಕ್ಷಕ್ಕೆ ಸೇರ್ಪಡೆಯಾದಾಗ, ನಾನು ಮಾತ್ರವಲ್ಲ, ಟಿಡಿಪಿಯ ಹಲವು ಮುಖಂಡರು ವಿರೋಧ ವ್ಯಕ್ತಪಡಿಸಿದ್ದರು. ಆದರೆ, ಅವರಿಗೆ ಸತ್ಯವೇಡು ಕ್ಷೇತ್ರದಿಂದ ಟಿಕೆಟ್ ನೀಡಲಾಯಿತು. ಎನ್.ಚಂದ್ರಬಾಬು ನಾಯ್ಡು ಅವರು ಮುಖ್ಯಮಂತ್ರಿಯಾ-ಗಬೇಕಾದರೆ, ಟಿಡಿಪಿ ಗೆಲ್ಲಬೇಕು ಎಂಬ ದೃಷ್ಟಿಯಿಂದ ಅವರ ಗೆಲುವಿಗೆ ಶ್ರಮಿಸಿದೆ' ಎಂದು ಮಹಿಳೆ ಹೇಳಿದ್ದಾರೆ.

'ಚುನಾವಣೆ ಮುಗಿದ ನಂತರ, ಆದಿಮೂಲಂ ನನಗೆ ಕಿರುಕುಳ ನೀಡಲು ಆರಂಭಿಸಿದರು. ತಿರುಪತಿಯ ಹೋಟೆಲ್‌ನಲ್ಲಿ ನಾನು ಮತ್ತು ಆದಿಮೂಲಂ ಎರಡು ಬಾರಿ ಭೇಟಿಯಾಗಿದ್ದವು. ಎರಡು ಬಾರಿಯೂ ಆತ ನನಗೆ ಲೈಂಗಿಕ ಕಿರುಕುಳ ನೀಡಿದ್ದರು. ಆತ ಕಿರುಕುಳ ನೀಡುವುದು ನಿಲ್ಲಲಿಲ್ಲ. ಮಧ್ಯರಾತ್ರಿಯೂ ಕರೆ ಮಾಡುತ್ತಿದ್ದರು' ಎಂದಿದ್ದಾರೆ.

'ಶಾಸಕನೊಬ್ಬ ಮಧ್ಯರಾತ್ರಿಯೂ ಕರೆ ಮಾಡುತ್ತಿದ್ದ ಬಗ್ಗೆ ಪ್ರಶ್ನಿಸಿದ ಪತಿಗೆ, ವಿಷಯ ವಿವರಿಸಿದೆ' ಎಂದಿದ್ದಾರೆ.

ಆದಿಮೂಲಂ 2019ರಲ್ಲಿ ಇದೇ ಕ್ಷೇತ್ರದಿಂದ ವೈಎಸ್‌ಆರ್ ಕಾಂಗ್ರೆಸ್‌ನಿಂದ ಗೆದ್ದಿದ್ದರು. ಪರಿಶಿಷ್ಟ ಜಾತಿಗೆ ಮೀಸಲಾದ ಸತ್ಯವೇಡು ಕ್ಷೇತ್ರದಿಂದ ಈ ಬಾರಿ ಸ್ಪರ್ಧಿಸಲು ಪಕ್ಷದ ಮುಖ್ಯಸ್ಥ ವೈ.ಎಸ್. ಜಗನ್‌ಮೋಹನ್ ರೆಡ್ಡಿ ಟಿಕೆಟ್ ನಿರಾ-ಕರಿಸಿದ್ದರು. ಹೀಗಾಗಿ, ಟಿಡಿಪಿ ಸೇರಿದ್ದ ಆದಿಮೂಲಂ, ಸತ್ಯವೇಡು ಕ್ಷೇತ್ರದಿಂದ ಮತ್ತೆ ಗೆದ್ದು ಬಂದಿದ್ದರು.

ಪ್ರತಿಮೆ ಕುಸಿತ: ಶಿಲ್ಪಿ, ಸಲಹೆಗಾರ ಪೊಲೀಸ್ ಕಸ್ಟಡಿಗೆ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ಸಿಂಧೂದುರ್ಗ ಜಿಲ್ಲೆಯ ರಾಜ್‌ಕೋಟ್‌ನಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ಕುಸಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಲಾಗಿರುವ ಜಯದೀಪ್ ಆಪ್ಟೆ ಮತ್ತು ಚೇತನ್ ಪಾಟೀಲ ಅವರನ್ನು ನ್ಯಾಯಾಲಯ ಇದೇ 10ರವರೆಗೆ ಪೊಲೀಸ್ ಕಸ್ಟಡಿಗೆ ವಹಿಸಿದೆ.

ಠಾಣೆ ಮೂಲದ ಆಪ್ಟೆ ಅವರು ಶಿಲ್ಪಿ ಮತ್ತು ಗುತ್ತಿಗೆದಾರರಾಗಿದ್ದರೆ, ಕೊಲ್ಹಾಪುರ ಮೂಲದ ಪಾಟೀಲ ಅವರು ನಿರ್ಮಾಣ ಕ್ಷೇತ್ರದ ಸಲಹೆಗಾರ. ಶಿವಾಜಿ ಪ್ರತಿಮೆ ಆಗಸ್ಟ್ 26ರಂದು ಕುಸಿದಿತ್ತು. ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಮಹಾರಾಷ್ಟ್ರದಲ್ಲಿ ಇದು ರಾಜಕೀಯ ಪಕ್ಷಗಳ ವಾಗ್ವಾದಕ್ಕೆ ಕಾರಣವಾಗಿದೆ.

ಸನ್ಮಾನ.. ಭುವನೇಶ್ವರದ ಶಾಲೆಯೊಂದರಲ್ಲಿ ಗುರುವಾರ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆಯಲ್ಲಿ ವಿದ್ಯಾರ್ಥಿಗಳು ಶಿಕ್ಷಕಿಯರಿಗೆ ಆರತಿ ಬೆಳಗಿ, ಸನ್ಮಾನಿಸಿದರು –ಪಿಟಿಐ ಚಿತ್ರ

ಕರ್ನಾಟಕದ ಆರು ಶಿಕ್ಷಕರಿಗೂ ಗೌರವ

82 ಶಿಕ್ಷಕರಿಗೆ ರಾಷ್ಟ್ರೀಯ ಪ್ರಶಸ್ತಿ ಪ್ರದಾನ

ನವದೆಹಲಿ (ಪಿಟಿಐ): ಕರ್ನಾಟಕದ ಆರು ಶಿಕ್ಷಕರು ಸೇರಿದಂತೆ ದೇಶದ 82 ಶಿಕ್ಷಕರಿಗೆ ಪ್ರಸಕ್ತ ಸಾಲಿನ ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಗುರುವಾರ ಪ್ರದಾನ ಮಾಡಿದರು.

ಬೆಂಗಳೂರಿನ ಸಂಜಯನಗರದ ಡ್ಯಾಫೋಡಿಲ್ಸ್ ಇಂಗ್ಲಿಷ್ ಶಾಲೆಯ ಶಿಕ್ಷಕ ಎಚ್.ವಿ.ನರಸಿಂಹ ಮೂರ್ತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಲ್ಲಸಂದ್ರ– ಕಮ್ಮಗೊಂಡನಹಳ್ಳಿ ಕೇಂದ್ರೀಯ ವಿದ್ಯಾಲಯದ ಅಶೋಕ್ ಸೇನ್‌ಗುಪ್ತಾ, ಮೈಸೂರು ಜಿಲ್ಲೆ ಹುಣಸೂರಿನ ಸರ್ಕಾರಿ ಪಿ.ಯು ಕಾಲೇಜಿನ ಎಚ್.ಎನ್. ಗಿರೀಶ್, ದೊಡ್ಡಬಳ್ಳಾಪುರದ ಬಾಶೆಟ್ಟಿಹಳ್ಳಿ ಸರ್ಕಾರಿ ಶಾಲೆಯ ಆರ್. ನಾರಾಯಣಸ್ವಾಮಿ ಪ್ರಶಸ್ತಿ ಪಡೆದ ಕರ್ನಾಟಕದ ಶಿಕ್ಷಕರಾಗಿದ್ದಾರೆ.

ಅಲ್ಲದೆ ಬೆಂಗಳೂರು ವಿಶ್ವ ವಿದ್ಯಾಲಯದ ಅರ್ಥಶಾಸ್ತ್ರ ಪ್ರಾಧ್ಯಾಪಕ ಡಾ. ಎಸ್.ಆರ್.ಕೇಶವ, ಕ್ರೈಸ್ಟ್ ವಿಶ್ವವಿದ್ಯಾಲಯದ 'ಸ್ಕೂಲ್ ಆಫ್ ಆರ್ಕಿಟೆಕ್ಚರ್'ನ ಪ್ರಾಧ್ಯಾಪಕರಾದ ಡಾ. ಅನಿತಾ ಸುಶೀಲನ್ ಅವರೂ ರಾಷ್ಟ್ರಪತಿ ಅವರಿಂದ ಪ್ರಶಸ್ತಿ ಸ್ವೀಕರಿಸಿದರು.

ವಿದ್ಯಾರ್ಥಿಗಳ ಕಲಿಕೆಯನ್ನು ಸುಧಾರಿಸುವುದರ ಜತೆಗೆ, ಮಕ್ಕಳ ಭವಿಷ್ಯದ ಪ್ರಗತಿಗೆ ಗಣನೀಯ ಕೊಡುಗೆ ನೀಡಿರುವ ಶಿಕ್ಷಕರ ಸಾಧನೆಯನ್ನು ಗುರುತಿಸಿ ಪ್ರತಿ ವರ್ಷ ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿ ನೀಡಲಾಗುತ್ತದೆ.

ಪ್ರಶಸ್ತಿಯು ₹50,000 ನಗದು, ಪ್ರಮಾಣ ಪತ್ರ ಮತ್ತು ಬೆಳ್ಳಿ ಪದಕವನ್ನು ಒಳಗೊಂಡಿರುತ್ತದೆ. ಪ್ರಶಸ್ತಿ ವಿಜೇತರಿಗೆ ಪ್ರಧಾನಿ ಜತೆಗೆ ಸಂವಾದ ನಡೆಸುವ ಅವಕಾಶವೂ ದೊರೆಯುತ್ತದೆ.

ಶಿಕ್ಷಣ ಸಚಿವಾಲಯದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ದೇಶದಾದ್ಯಂತ 50 ಶಿಕ್ಷಕರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡುತ್ತದೆ. ಇದಕ್ಕಾಗಿ ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಆಯ್ಕೆ ಪ್ರಕ್ರಿಯೆ ನಡೆಯುತ್ತದೆ.

ಪ್ರಶಸ್ತಿಗೆ ಆಯ್ಕೆಯಾದ 50 ಶಿಕ್ಷಕರು 28 ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶ ಹಾಗೂ ಆರು ಸಂಘಟನೆಗಳಿಗೆ ಸೇರಿದವರು. ಈ ಪೈಕಿ 34 ಪುರುಷರು ಮತ್ತು 16 ಮಹಿಳೆಯರು. ಅವರಲ್ಲಿ ಇಬ್ಬರು ಅಂಗವಿಕಲ ಶಿಕ್ಷಕರಾಗಿದ್ದರೆ, ಒಬ್ಬರು ಸಿಡಬ್ಲ್ಯುಎಸ್‌ಎನ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇವರಲ್ಲದೆ ಉನ್ನತ ಶಿಕ್ಷಣ ಇಲಾಖೆಯ 16 ಮತ್ತು ಕೌಶಲಾಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯದ 16 ಶಿಕ್ಷಕರಿಗೂ ಪ್ರಶಸ್ತಿ ನೀಡಿ ಗೌರವಿಸಲಾಗಿದೆ ಎಂದು ಶಿಕ್ಷಣ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಈ ಮೊದಲು ಶಾಲಾ ಶಿಕ್ಷಕರಿಗೆ ಮಾತ್ರ ನೀಡಲಾಗುತ್ತಿದ್ದ ಈ ಪ್ರಶಸ್ತಿಯನ್ನು ಉನ್ನತ ಶಿಕ್ಷಣ ಮತ್ತು ಪಾಲಿಟೆಕ್ನಿಕ್ ಶಿಕ್ಷಕರಿಗೂ ನೀಡಬೇಕು ಎಂದು ಕಳೆದ ವರ್ಷ ನಿರ್ಧರಿಸಲಾಗಿತ್ತು.

ಮಧ್ಯಪ್ರದೇಶ: ಕುಡಿದ ಅಮಲಿನಲ್ಲಿ ವಿದ್ಯಾರ್ಥಿನಿಯ ಕೂದಲು ಕತ್ತರಿಸಿದ ಶಿಕ್ಷಕ

ರತ್‌ಲಾಮ್, ಮಧ್ಯಪ್ರದೇಶ (ಪಿಟಿಐ): ಕುಡಿದ ಮತ್ತಿನಲ್ಲಿದ್ದ ಶಿಕ್ಷಕರೊಬ್ಬರು ವಿದ್ಯಾರ್ಥಿನಿಯ ಕೂದಲು ಕತ್ತರಿಸಿದ ಘಟನೆ ಮಧ್ಯಪ್ರದೇಶದ ರತ್‌ಲಾಮ್ ಜಿಲ್ಲೆಯಲ್ಲಿ ಗುರುವಾರ ನಡೆದಿದೆ. ಶಿಕ್ಷಕರ ದಿನದಂದೇ ಈ ಕೃತ್ಯ ನಡೆದಿದ್ದು, ತಕ್ಷಣವೇ ಅವರನ್ನು ಅಮಾನತುಗೊಳಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ದುರ್ವರ್ತನೆ ತೋರಿದ ಶಿಕ್ಷಕ ವೀರ್‌ಸಿಂಗ್ ಮೇಧಾ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು' ಜಿಲ್ಲಾಧಿಕಾರಿ ರಾಜೇಶ್ ಬಾಥಾಮ್ ತಿಳಿಸಿದರು.

ಜಿಲ್ಲಾ ಕೇಂದ್ರದಿಂದ 40 ಕಿ.ಮೀ ದೂರದಲ್ಲಿರುವ ಸೆಮಲ್‌ಖೇಡಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರೊಬ್ಬರು ವಿದ್ಯಾರ್ಥಿನಿಯ ಕೂದಲು ಕತ್ತರಿಸಿದ ವೇಳೆ ಕಣ್ಣೀರಿಡುತ್ತಿದ್ದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಸಿಟ್ಟಿಗೆದ್ದ ಗ್ರಾಮಸ್ಥರು ಶಿಕ್ಷಕರನ್ನು ತರಾಟೆಗೆ ತೆಗೆದುಕೊಂಡಿದ್ದರು. ಈ ವೇಳೆ ಗ್ರಾಮಸ್ಥರೊಂದಿಗೂ ಜಗಳ ಮಾಡಿದ್ದರು. 'ಬೇಕಿದ್ದರೆ ವಿಡಿಯೊ ಮಾಡಿ, ನನ್ನನ್ನು ಯಾರೂ ಏನೂ ಮಾಡಲು ಸಾಧ್ಯವಿಲ್ಲ' ಎಂದು ಧಮ್ಕಿ ಹಾಕಿದ್ದರು.

ಶಿಕ್ಷಕರನ್ನು ತಕ್ಷಣವೇ ಅಮಾನತುಗೊಳಿಸುವಂತೆ ಬುಡಕಟ್ಟು ಇಲಾಖೆಯ ಸಹಾಯಕ ಆಯುಕ್ತ ರಂಜನಾ ಸಿಂಗ್ ಸೂಚಿಸಿದ್ದರು.

'ಬಾಲಕಿಯ ಹೇಳಿಕೆ ಆಧರಿಸಿ, ಪ್ರಾಥಮಿಕ ತನಿಖೆ ನಡೆಸಿದ ಬಳಿಕ ಶಿಕ್ಷಕರನ್ನು ಅಮಾನತುಗೊಳಿಸಲಾಗಿದೆ' ಎಂದು ಜಿಲ್ಲಾಧಿಕಾರಿ ಸ್ಪಷ್ಟಪಡಿಸಿದ್ದಾರೆ.

ರಕ್ಷಣಾ ಇಲಾಖೆ ಮಾಹಿತಿ ಕಳ್ಳತನಕ್ಕೆ ಯತ್ನ

ನವದೆಹಲಿ(ಪಿಟಿಐ): 'ಫಿಶಿಂಗ್' ಮೂಲಕ, ರಕ್ಷಣಾ ಸಚಿವಾಲಯದ ವೆಬ್‌ಸೈಟ್ ಅನ್ನು ಹೋಲುವ ಜಾಲತಾಣ ಅಭಿವೃದ್ಧಿಪಡಿಸಿ, ಸೂಕ್ಷ್ಮ ಮತ್ತು ಮಹತ್ವದ ದಾಖಲೆಗಳ ಕಳ್ಳತನಕ್ಕೆ ನಡೆಸಿದ ಯತ್ನವನ್ನು ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್‌ಐಸಿ) ಪತ್ತೆ ಮಾಡಿದೆ.

ಮಾಹಿತಿ ಕಳುವು ಮಾಡಲು ಅಭಿವೃದ್ಧಿಪಡಿಸಿದ್ದ ಎರಡು 'ಫಿಶಿಂಗ್ ಲಿಂಕ್'ಗಳನ್ನು ಎನ್‌ಐಸಿ ಗುರುತಿಸಿದ್ದು, ಸಂಬಂಧಪಟ್ಟ ಇಲಾಖೆಗಳಿಗೆ ಈ ಕುರಿತು ಸಲಹೆ ನೀಡಿದೆ.

ವಿಶ್ವಾಸಾರ್ಹ ಸಂಸ್ಥೆಗಳ ಹೆಸರು ಬಳಸಿಕೊಂಡು ಸುಳ್ಳು ಸಂದೇಶ, ಇ–ಮೇಲ್‌ಗಳ ಮೂಲಕ ಲಿಂಕ್ ಕಳಿಸಿ, ಆ ಮೂಲಕ ನಡೆಸುವ ಮೋಸದ ವ್ಯವಹಾರವನ್ನು 'ಫಿಶಿಂಗ್' ಎನ್ನುತ್ತಾರೆ.

'ಎನ್‌ಐಸಿ ಪತ್ತೆ ಮಾಡಿದ್ದ ಎರಡೂ ಫಿಶಿಂಗ್ ಲಿಂಕ್'ಗಳಿಗೆ ಲಾಗಿನ್ ಆದಾಗ, ಅವುಗಳು ರಕ್ಷಣಾ ಇಲಾಖೆಯ ವೆಬ್‌ಸೈಟ್ (www.mod.gov.in) ತೋರಿಸಿದವು. ಬಳಕೆದಾರರು ಅದನ್ನು ರಕ್ಷಣಾ ಸಚಿವಾಲಯದ ಅಧಿಕೃತ ವೆಬ್‌ಸೈಟ್ ಎಂದೇ ನಂಬುವಂತೆ ಮಾಡುವುದು ವಂಚಕ ಉದ್ದೇಶವಾಗಿತ್ತು' ಎಂದು ಎನ್‌ಐಸಿ ತಿಳಿಸಿದೆ.

ಮುಷೀರ್ ಖಾನ್ ಸೂಪರ್ ಶತಕ

ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿ: ಖಲೀಲ್, ಆಕಾಶದೀಪ್, ಆವೇಶ್ ಮಿಂಚು

• ಗಿರೀಶ ದೊಡ್ಡಮನಿ

ಬೆಂಗಳೂರು: ಮುಂಬೈ ಹುಡುಗ ಮುಷೀರ್ ಖಾನ್ ಅವರಿಗೆ ಇನ್ನಷ್ಟೇ 20 ವರ್ಷ ವಯಸ್ಸು ತುಂಬಬೇಕಿದೆ. ಆದರೆ ಹಲವು ವರ್ಷ ಆಡಿರುವ ಅನುಭವಿಗಳಿಗೆ ಇರುವಷ್ಟೇ ಪ್ರಬುದ್ಧತೆ ಈ ಹುಡುಗನ ಆಟದಲ್ಲಿದೆ. ಗುರುವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅವರು ದಾಖಲಿಸಿದ ಶತಕವೇ ಈ ಮಾತಿಗೆ ಸಾಕ್ಷಿ.

ಇಲ್ಲಿ ಆರಂಭವಾದ ದುಲೀಪ್ ಟ್ರೋಫಿ ಟೂರ್ನಿಯ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿ 94 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿದ್ದ ಭಾರತ ಬಿ ತಂಡವು 79 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 202 ರನ್ ಗಳಿಸಲು ಕಾರಣರಾಗಿದ್ದು ಮುಷೀರ್.

ಶುಭಮನ್ ಗಿಲ್ ನಾಯಕತ್ವದ ಭಾರತ ಎ ತಂಡವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕನ ಯೋಜನೆಯನ್ನು ಬೌಲರ್‌ಗಳು ಅಚ್ಚುಕಟ್ಟಾಗಿ ಅನುಷ್ಠಾನಗೊಳಿಸಿದರು. ಮಧ್ಯಮ ವೇಗಿಗಳಾದ ಖಲೀಲ್ ಅಹಮದ್, ಆಕಾಶದೀಪ್ ಮತ್ತು ಆವೇಶ್ ಖಾನ್ ತಲಾ ಎರಡು ವಿಕೆಟ್ ಗಳಿಸಿದರು. ಆರಂಭಿಕ ಬ್ಯಾಟರ್, ನಾಯಕ ಅಭಿಮನ್ಯು ಈಶ್ವರನ್ (13; 42ಎಸೆತ) 13ನೇ ಓವರ್‌ನಲ್ಲಿ ಔಟಾದಾಗ ಕ್ರೀಸ್‌ಗೆ ಬಂದ ಮುಷೀರ್ ತಾಳ್ಮೆಯಿಂದ ಬ್ಯಾಟ್ ಬೀಸಿದರು. ರನ್ ಗಳಿಕೆಗೆ ಅವಸರ ಮಾಡಲಿಲ್ಲ. ಆದರೆ ಇನ್ನೊಂದು ಬದಿಯಲ್ಲಿ ಅವರಿಗೆ ಹೆಚ್ಚು ಬೆಂಬಲ ಸಿಗಲಿಲ್ಲ.

ಅದರಲ್ಲೂ ಊಟದ ವಿರಾಮದ ಹೊತ್ತಿಗೆ ಕೇವಲ ಎರಡು ವಿಕೆಟ್ ಪತನವಾಗಿದ್ದವು. ಆ ಸಂದರ್ಭದಲ್ಲಿ ಕ್ರೀಸ್‌ನಲ್ಲಿ ಮುಷೀರ್ ಅವರಿಗೆ ಅಣ್ಣ ಸರ್ಫರಾಜ್ ಖಾನ್ ಜೊತೆಯಾಗಿದ್ದರು. ಕ್ರೀಡಾಂಗಣದ ಒಂದು ಗ್ಯಾಲರಿಯಲ್ಲಿ ಸೇರಿದ್ದ ಪ್ರೇಕ್ಷಕರು ಅಣ್ಣ–ತಮ್ಮನ ದೊಡ್ಡ ಜೊತೆಯಾಟ ನೋಡುವ ನಿರೀಕ್ಷೆಯಲ್ಲಿ-ದ್ದರು. ಆದರೆ ಅದು ಈಡೇರಲಿಲ್ಲ.

ವಿರಾಮದ ನಂತರ ಆವೇಶ್ ಖಾನ್ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಸರ್ಫರಾಜ್ ಬಿದ್ದರು. ನಂತರ ನಾಲ್ವರು ಬ್ಯಾಟರ್‌ಗಳು ಅವರನ್ನು ಹಿಂಬಾಲಿಸಿದರು. ಇದರಿಂದಾಗಿ ತಂಡವು ಮೂರಂಕಿ ಮೊತ್ತ ಮುಟ್ಟುವುದೇ ಅನುಮಾನವಾಗಿ ಕಂಡಿತು.

ಆದರೆ ಛಲ ಬಿಡದೇ ಗಟ್ಟಿಯಾಗಿ ನಿಂತ ಮುಷೀರ್ ದಿಟ್ಟ ಆಟವಾಡಿದರು. ಅವರಿಗೆ ನವದೀಪ್ ಸೈನಿ ತಕ್ಕ ಜೊತೆ ನೀಡಿದರು. ದಿನದಾಟದ ಅಂತ್ಯಕ್ಕೆ ಮುರಿಯದ ಎಂಟನೇ ವಿಕೆಟ್ ಜೊತೆಯಾಟದಲ್ಲಿ 108 ರನ್ ಸೇರಿಸಿದರು.

'ಸೈನಿ ಕ್ರೀಸ್‌ಗೆ ಬಂದ ಕೂಡಲೇ ನನ್ನಲ್ಲಿ ಆತ್ಮವಿಶ್ವಾಸ ತುಂಬಿದರು. ತಾವು ವಿಕೆಟ್ ಪತನವಾಗದಂತೆ ನೋಡಿಕೊಂಡು ಬೆಂಬಲ ನೀಡುವುದಾಗಿ ಹೇಳಿದರು. ಯಾವುದೇ ರೀತಿಯ ಅವಸರ, ಆತಂಕ ಬೇಡ ಎಂದು ಬೆನ್ನುತಟ್ಟಿದರು. ನನಗಿಂತ ಹೆಚ್ಚು ಅನುಭವಿಯಾಗಿರುವ ಸೈನಿ ತಾವು ಹೇಳಿದಂತೆಯೇ ನಡೆದುಕೊಂಡರು. ಅದರಿಂದಾಗಿ ಉಪಯುಕ್ತ ಜೊತೆಯಾಟವಾಡಲು ಸಾಧ್ಯವಾಯಿತು' ಎಂದು ಮುಷೀರ್, ದಿನದಾಟದ ನಂತರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಮುಷೀರ್ 118 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಆದರೆ ಚಹಾ ವಿರಾಮದ ನಂತರ ಕ್ರೀಸ್‌ಗೆ ಮರಳಿದ ಅವರ ಆಟಕ್ಕೆ ವೇಗ ಸೇರಿಕೊಂಡಿತು. ಈ ಅವಧಿಯಲ್ಲಿ ತಾವು ಎದುರಿಸಿದ ಖಾನ್ 87 ಎಸೆತಗಳಲ್ಲಿ 50 ರನ್ ಸೂರೆ ಮಾಡಿದರು.

ಟ್ರೋಫಿಯಲ್ಲಿ ಪದಾರ್ಪಣೆ ಮಾಡಿದ ಪಂದ್ಯದಲ್ಲಿಯೇ ಶತಕ ದಾಖಲಿಸಿದರು. ಡ್ರೆಸಿಂಗ್ ಕೋಣೆಯಲ್ಲಿದ್ದ ಸರ್ಫರಾಜ್ ಕುಣಿದು ಕುಪ್ಪಳಿಸಿದರು. ಚಪ್ಪಾಳೆ ತಟ್ಟಿ ತಮ್ಮನನ್ನು ಅಭಿನಂದಿಸಿದರು.

ಇತ್ತ ಮೈದಾನದಲ್ಲಿ ಆಗಸದತ್ತ ಬ್ಯಾಟ್ ಬೀಸಿ ಮೇಲಕ್ಕೆ ಜಿಗಿದು ಸಂಭ್ರಮಿಸಿದ ಮುಷೀರ್ ತಮ್ಮ ಅಣ್ಣನ ಅಭಿನಂದನೆ ಸ್ವೀಕರಿಸಿದರು.

ಹೋದ ವರ್ಷ ಮುಷೀರ್, ರಣಜಿ ಟೂರ್ನಿಯಲ್ಲಿ ಮುಂಬೈ ಪರ ಆಡಿದ್ದರು. 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯಲ್ಲಿ ಆಡಿ ಬಂದ ನಂತರ ರಣಜಿಗೆ ಪದಾರ್ಪಣೆ ಮಾಡಿದ್ದರು. ಆರು ಪಂದ್ಯಗಳಲ್ಲಿ 529 ರನ್ ಗಳಿಸಿದ್ದರು. ಅದರಲ್ಲಿ ಒಂದು ದ್ವಿಶತಕ, ಶತಕ ಮತ್ತು ಅರ್ಧಶತಕಗಳಿದ್ದವು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಬಿ: 79 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 202 (ಯಶಸ್ವಿ ಜೈಸ್ವಾಲ್ 30, ಅಭಿಮನ್ಯು ಈಶ್ವರನ್ 13, ಮುಷೀರ್ ಖಾನ್ ಔಟಾಗದೆ 105, ನವದೀಪ್ ಸೈನಿ ಔಟಾಗದೆ 29, ಖಲೀಲ್ ಅಹಮದ್ 39ಕ್ಕೆ2, ಆಕಾಶದೀಪ್ 28ಕ್ಕೆ2, ಆವೇಶ್ ಖಾನ್ 42ಕ್ಕೆ2) ವಿರುದ್ಧ– ಭಾರತ ಎ ತಂಡ

ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಮುಷೀರ್ ಖಾನ್ ಶತಕ ಗಳಿಸಿ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

ವೈಶಾಖ ದಾಳಿಗೆ ಕುಸಿದ ಭಾರತ ಡಿ ತಂಡ

ಅನಂತಪುರ: ಭಾರತ ಸಿ ತಂಡದಲ್ಲಿರುವ ಕರ್ನಾಟಕದ ವೇಗಿ ವೈಶಾಖ ವಿಜಯ ಕುಮಾರ್ (19ಕ್ಕೆ3) ದಾಳಿ ಮುಂದೆ ಭಾರತ ಡಿ ತಂಡವು ಅಲ್ಪಮೊತ್ತಕ್ಕೆ ಕುಸಿಯಿತು. ರೂರಲ್ ಡೆವಲಪ್‌ಮೆಂಟ್ ಟ್ರಸ್ಟ್ ಕ್ರೀಡಾಂಗಣದಲ್ಲಿ ಗುರುವಾರ ಆರಂಭವಾದ ದುಲೀಪ್ ಟ್ರೋಫಿ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಡಿ ತಂಡವು 48.3 ಓವರ್‌ಗಳಲ್ಲಿ 164 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ತಂಡದ ಅಕ್ಷರ್ ಪಟೇಲ್ (86; 118ಎ, 4X6, 6X6) ಅವರು ಏಕಾಂಗಿ ಹೋರಾಟ ಮಾಡಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಡಿ: 48.3 ಓವರ್‌ಗಳಲ್ಲಿ 164 (ಅಕ್ಷರ್ ಪಟೇಲ್ 86, ಸಾರಾಂಶ್ ಜೈನ್ 13, ಅರ್ಷದೀಪ್ ಸಿಂಗ್ 13, ಅನ್ಶುಲ್ ಕಾಂಬೋಜ್ 47ಕ್ಕೆ2, ವೈಶಾಖ ವಿಜಯಕುಮಾರ್ 19ಕ್ಕೆ3, ಹಿಮಾಂಶು ಚೌಹಾಣ 22ಕ್ಕೆ2) ಭಾರತ ಸಿ: 33 ಓವರ್‌ಗಳಲ್ಲಿ 4ಕ್ಕೆ91 (ಬಾಬಾ ಇಂದ್ರಜೀತ್ ಔಟಾಗದೆ 15, ಅಭಿಷೇಕ್ ಪೊರೆಲ್ ಔಟಾಗದೆ 32, ಹರ್ಷಿತ್ ರಾಣಾ 13ಕ್ಕೆ2, ಅಕ್ಷರ್ ಪಟೇಲ್ 16ಕ್ಕೆ2)

ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿ

ಧ್ರುವ್–ನಿಶ್ಚಿತ್ ಜುಗಲ್‌ಬಂದಿ

ಪ್ರಜಾವಾಣಿ ವಾರ್ತೆ

ಮೈಸೂರು: ದಿನವಿಡೀ ಎದುರಾಳಿ ಬೌಲರ್‌ಗಳನ್ನು ಬಿಡದಂತೆ ಕಾಡಿದ ಪಿ. ಧ್ರುವ್ (191; 414 ಎ, 4X16) ಹಾಗೂ ನಿಶ್ಚಿತ್ ಪೈ (151; 264 ಎ, 4X14, 6X3) ಜೋಡಿಯು ಒಡಿಶಾ ಕ್ರಿಕೆಟ್ ಸಂಸ್ಥೆ ವಿರುದ್ಧದ ಪಂದ್ಯದಲ್ಲಿ ಎರಡನೇ ದಿನದಂತ್ಯಕ್ಕೆ ಕೆಎಸ್‌ಸಿಎ ಕೋಲ್ಟ್ಸ್ ತಂಡವನ್ನು ಸುಸ್ಥಿತಿಯಲ್ಲಿ ಇರಿಸಿದೆ.

ಇಲ್ಲಿನ ಎಸ್‌ಜೆಸಿಇ ಮೈದಾನದಲ್ಲಿ ನಡೆಯುತ್ತಿರುವ ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಕೆಎಸ್‌ಸಿಎ ಕೋಲ್ಟ್ಸ್ ಗುರುವಾರ 9 ವಿಕೆಟ್‌ಗಳಿಗೆ 584 ರನ್ ಗಳಿಸಿ ಡಿಕ್ಲೇರ್ ಮಾಡಿತು. ಗುರಿ ಬೆನ್ನತ್ತಿದ ಒಡಿಶಾ ತಂಡವು 17 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದೆ.

ಬುಧವಾರ ದಿನದಂತ್ಯಕ್ಕೆ ಅಜೇಯರಾಗಿ ಉಳಿದಿದ್ದ ಧ್ರುವ್ ಹಾಗೂ ನಿಶ್ಚಿತ್ ಜೋಡಿಯು ಪಂದ್ಯದ ಎರಡನೇ ದಿನದಂದು ಸಂಜೆವರೆಗೂ ಒಡಿಶಾ ಬೌಲರ್‌ಗಳ ತಾಳ್ಮೆ ಪರೀಕ್ಷಿಸಿತು. 9ನೇ ವಿಕೆಟ್ ಜೊತೆಯಾಟದಲ್ಲಿ 297 ರನ್ (525 ಎಸೆತ) ಕಲೆ ಹಾಕಿತು. ಪಂದ್ಯದ ಉದ್ದಕ್ಕೂ ತಾಳ್ಮೆಯಿಂದ ಆಡಿದ ಧ್ರುವ್ ದ್ವಿಶತಕದ ಹೊಸ್ತಿಲಲ್ಲಿ ಎಡವಿದ್ದು, ವಿಪ್ಲವ್ ಸಾಮಂತ್ರೆ ಎಸೆತದಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಕ್ರೀಸ್‌ನ ಮತ್ತೊಂದೆಡೆ, ಆಗಾಗ್ಗೆ ಸಿಕ್ಸರ್ ಸಿಡಿಸುತ್ತ ಸಾಥ್ ನೀಡುತ್ತಿದ್ದ ನಿಶ್ಚಲ್ ಅಜೇಯರಾಗಿ ಉಳಿದರು.

ದೊಡ್ಡ ಗುರಿ ಬೆನ್ನತ್ತಿದ ಒಡಿಶಾ ತಂಡವನ್ನು ಕೆಎಸ್‌ಸಿಎ ಬೌಲರ್‌ಗಳಾದ ಧನುಷ್ ಗೌಡ ಹಾಗೂ ಎನ್. ಸಮರ್ಥ್ ಸಂಜೆಯ ಬೆಳಕಲ್ಲಿ ಕಾಡಿದ್ದು, 7 ಓವರ್‌ಗಳಲ್ಲೇ 3 ವಿಕೆಟ್ ಉರುಳಿಸಿದರು.

ಸಂಕ್ಷಿಪ್ತ ಸ್ಕೋರ್: ಎಸ್‌ಜೆಸಿಇ ಕ್ರೀಡಾಂಗಣ: ಕೆಎಸ್‌ಸಿಎ ಕೋಲ್ಟ್ಸ್: 162.3 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 584 ಡಿಕ್ಲೇರ್ (ಪಿ. ಧ್ರುವ್ 191, ನಿಶ್ಚಿತ್ ಪೈ ಔಟಾಗದೇ 151. ಸೂರ್ಯಕಾಂತ್ ಪ್ರಧಾನ್ 88ಕ್ಕೆ 4, ಸುನಿಲ್ ರೌಲ್ 79ಕ್ಕೆ 2). **ಒಡಿಶಾ:** 7 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 17 (ಸುಮಿತ್ ಶರ್ಮಾ ಔಟಾಗದೇ 4. ಧನುಷ್ ಗೌಡ 10ಕ್ಕೆ 2 , ಎನ್. ಸಮರ್ಥ್ 7ಕ್ಕೆ 1).

ಕರ್ನಾಟಕ ಕೋಲ್ಟ್ಸ್ ಪರ 297 ರನ್ ಜೊತೆಯಾಟದ ಪ್ರದರ್ಶನ ನೀಡಿದ ತಂಡದ ನಿಶ್ಚಿತ್ ಪೈ (151) ಹಾಗೂ ಪಿ. ಧ್ರುವ್ (191 ರನ್) – ಪ್ರಜಾವಾಣಿ ಚಿತ್ರ: ಅನೂಪ್ ರಾಫ್ ಟಿ.

ಕುತೂಹಲ ಘಟ್ಟದಲ್ಲಿ ಪಂದ್ಯ

ಮಾನಸಗಂಗೋತ್ರಿಯ ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣದಲ್ಲಿ ನಡೆದಿರುವ ಬರೋಡಾ ಕ್ರಿಕೆಟ್ ಸಂಸ್ಥೆ ಹಾಗೂ ಡಾ. ಡಿ.ವೈ. ಪಾಟೀಲ ಕ್ರಿಕೆಟ್ ಅಕಾಡೆಮಿ ನಡುವಿನ ಪಂದ್ಯವು ಕುತೂಹಲದ ಘಟ್ಟ ತಲುಪಿದೆ. ಎರಡನೇ ದಿನದಂತ್ಯಕ್ಕೆ ಡಿ.ವೈ. ಪಾಟೀಲ ಅಕಾಡೆಮಿಯು 8 ವಿಕೆಟ್ ಉಳಿಸಿಕೊಂಡಿದ್ದು, ಗೆಲುವಿಗೆ ಇನ್ನೂ 156 ರನ್ ಬೇಕು.

ಸಂಕ್ಷಿಪ್ತ ಸ್ಕೋರು: ಮೊದಲ ಇನ್ನಿಂಗ್ಸ್: ಬರೋಡಾ ಕ್ರಿಕೆಟ್ ಸಂಸ್ಥೆ: 68.2 ಓವರ್‌ಗಳಲ್ಲಿ 181. **ಡಾ. ಡಿವೈ. ಪಾಟೀಲ ಕ್ರಿಕೆಟ್ ಅಕಾಡೆಮಿ:** 42.2 ಓವರ್‌ಗಳಲ್ಲಿ 156 (ಅಬ್ದುಲ್ ಸಮದ್ 31, ಪುನೀತ್ 31. ನಿನಾದ್ ರಥ್ವ 18ಕ್ಕೆ 2, ಪ್ರದೀಪ್ ಯಾದವ್ 33ಕ್ಕೆ 2); **ಎರಡನೇ ಇನ್ನಿಂಗ್ಸ್: ಬರೋಡಾ ಕ್ರಿಕೆಟ್ ಸಂಸ್ಥೆ:** 45.5 ಓವರ್‌ಗಳಲ್ಲಿ 166 (ಜ್ಯೋತ್ಸ್ನಿಲ್ ಸಿಂಗ್ 20, ಶಿವಲಿಕ್ ಶರ್ಮ 25, ಪ್ರಿನ್ಸ್ ಬದಿಯಾನಿ 25ಕ್ಕೆ 5, ಪಾರ್ಥ್ ಸಹಾನಿ 35ಕ್ಕೆ 4). **ಡಾ. ಡಿವೈ. ಪಾಟೀಲ ಕ್ರಿಕೆಟ್ ಅಕಾಡೆಮಿ:** 9 ಓವರ್‌ಗಳಲ್ಲಿ 2 ವಿಕೆಟ್‌ಗೆ 36 (ಪುನೀತ್ ಔಟಾಗದೇ 12, ಹರ್ಷಲ್ ಜಾದವ್ ಔಟಾಗದೇ 12. ಸೌರಿನ್ 6ಕ್ಕೆ 1).

ಬೆಂಗಳೂರಿಗೆ ಇಂದು ಮಹಿಳಾ ವಿಶ್ವಕಪ್

ದುಬೈ (ಪಿಟಿಐ): ಮುಂದಿನ ತಿಂಗಳು ನಡೆಯಲಿರುವ ಮಹಿಳೆಯರ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಟ್ರೋಫಿಯ ಯಾತ್ರೆಯು ಶುಕ್ರವಾರ ಬೆಂಗಳೂರಿಗೆ ಬರಲಿದೆ.

ಉದ್ಯಾನ ನಗರಿಯಲ್ಲಿ ಮಹಿಳೆಯರ ಕ್ರಿಕೆಟ್ ತರಬೇತಿಯ ಪ್ರಮುಖ ತಾಣವಾಗಿರುವ ಕರ್ನಾಟಕ ಇನ್ಸ್ಟಿಟ್ಯೂಟ್ ಆಫ್ ಕ್ರಿಕೆಟ್ (ಕೆಐಒಸಿ)ಯಲ್ಲಿ ಪ್ರದರ್ಶನಗೊಳ್ಳಲಿದೆ. ಸೆ. 7ರಂದು ನೆಕ್ಸಸ್ ಮಾಲ್ ಮತ್ತು 8ರಂದು ಇನ್ಫಿನಿಟಿ ಮಾಲ್‌ನಲ್ಲಿ ಸಾರ್ವಜನಿಕರ ಪ್ರದರ್ಶನ ನಡೆಯಲಿದೆ. ಸೆ 14 ಮತ್ತು 15ರಂದು ಮುಂಬೈನ ಮಲಾಡ್‌ನಲ್ಲಿ ಕೂಡ ಪ್ರದರ್ಶನಗೊಳ್ಳಲಿದೆ. ಅದರ ನಂತರ ಶ್ರೀಲಂಕಾ, ಬಾಂಗ್ಲಾದೇಶಗಳಿಗೆ ತೆರಳಲಿದೆ.

ಮಹಿತಾ ಸಂಧುಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ಮಹಿತಾ ಸಂಧು ಅವರು ಜರ್ಮನಿಯ ಹಾನೊವೆರ್‌ನಲ್ಲಿ ನಡೆಯುತ್ತಿರುವ ಶ್ರವಣದೋಷವುಳ್ಳವರ ವಿಶ್ವ ಶೂಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 50 ಮೀ ರೈಫಲ್ ಪ್ರಾನ್ ವಿಭಾಗದಲ್ಲಿ ಚಿನ್ನ ಗೆದ್ದರು.

ಪುರುಷರ 25 ಮೀ ಪಿಸ್ತೂಲ್ ಸ್ಪರ್ಧೆಯಲ್ಲಿ ಭಾರತದ ಅಭಿನವ್ ದೇಶ್ವಾಲ್ ಬೆಳ್ಳಿ ಗಳಿಸಿದರು.

ಈ ಎರಡು ಸಾಧನೆಗಳೊಂದಿಗೆ ಭಾರತವು ಇಲ್ಲಿ ಗೆದ್ದ ಪದಕಗಳ ಸಂಖ್ಯೆಯು 15ಕ್ಕೇರಿದೆ. ಇದರಲ್ಲಿ ನಾಲ್ಕು ಚಿನ್ನ, ಏಳು ಬೆಳ್ಳಿ ಮತ್ತು ನಾಲ್ಕು ಕಂಚಿನ ಪದಕಗಳಿವೆ.

ಅಥ್ಲೀಟ್ ಸಾವು

ನೈರೋಬಿ (ಎಎಫ್‌ಪಿ): ನಾಲ್ಕು ದಿನಗಳ ಹಿಂದೆ ಪ್ರಿಯತಮ ಪೆಟ್ರೋಲ್ ಸುರಿದು ಬೆಂಕಿಹಚ್ಚಿದ್ದರಿಂದ ಚಿಂತಾಜನಕ ಸ್ಥಿತಿ-ಯಲ್ಲಿದ್ದ ಯುಗಾಂಡದ ಒಲಿಂಪಿಯನ್ ರೆಬೆಕಾ ಚೆಪ್ಟೇಗಿ ಅವರು ಪಶ್ಚಿಮ ಕೆನ್ಯಾದ ಅಲ್ಡೊರೆಟ್‌ನ ಆಸ್ಪತ್ರೆಯಲ್ಲಿ ಗುರುವಾರ ಬೆಳಗಿನ ಜಾವ ಮೃತಪಟ್ಟರು.

ಆರೋಪಿ ಡಿಕ್ಸನ್ ಎನ್ಡೀಮಾ, ಯುಗಾಂಡ ಗಡಿಯಲ್ಲಿರುವ ಎಂಡೆಬಸ್ ನಗರದಲ್ಲಿರುವ ರೆಬೆಕಾ ಮನೆಗೆ ನುಗ್ಗಿ ಈ ಕೃತ್ಯ ಎಸಗಿದ್ದ. ಈಕೆಯ ಇಬ್ಬರು ಪುಟ್ಟ ಹೆಣ್ಣುಮಕ್ಕಳ ಎದುರೇ ಈ ಪಾಶವೀ ಕೃತ್ಯ ನಡೆಸಿದ್ದ.

ಪ್ಯಾರಾಲಿಂಪಿಕ್ಸ್: ಚಿನ್ನಕ್ಕೆ ಮುತ್ತಿಟ್ಟ ಧರಮ್‌ವೀರ್ • ಬೆಳ್ಳಿಗೆ ಕೊರಳೊಡ್ಡಿದ ಪ್ರಣವ್ ಸೂರ್ಮಾ

ಕ್ಲಬ್ ಥ್ರೋ: ಭಾರತಕ್ಕೆ ಡಬಲ್ ಪದಕ

ಪ್ಯಾರಿಸ್ (ಪಿಟಿಐ): ಭಾರತದ ಧರಮ್‌ವೀರ್ ಅವರು ಪ್ಯಾರಾಲಿಂಪಿಕ್ಸ್‌ನ ಪುರುಷರ ಕ್ಲಬ್ ಥ್ರೋ (ಎಫ್‌51) ಸ್ಪರ್ಧೆಯಲ್ಲಿ ಏಷ್ಯನ್ ದಾಖಲೆಯೊಂದಿಗೆ ಚಿನ್ನದ ಪದಕಕ್ಕೆ ಮುತ್ತಿಕ್ಕಿದ್ದಾರೆ. ಇದೇ ಸ್ಪರ್ಧೆಯಲ್ಲಿ ಸ್ವದೇಶದ ಪ್ರಣವ್ ಸೂರ್ಮಾ ಬೆಳ್ಳಿಗೆ ಕೊರಳೊಡ್ಡಿದ್ದಾರೆ.

ವಿಶ್ವ ಚಾಂಪಿಯನ್‌ಷಿಪ್‌ನ ಕಂಚಿನ ಪದಕ ವಿಜೇತ, ಸೋನಿಪತ್‌ನ 35 ವರ್ಷ ವಯಸ್ಸಿನ ಧರಮ್‌ವೀರ್ ಬುಧವಾರ ತಡರಾತ್ರಿ ನಡೆದ ಫೈನಲ್‌ನಲ್ಲಿ 35.92 ಮೀಟರ್ ಸಾಧನೆಯೊಂದಿಗೆ ಅಗ್ರಸ್ಥಾನ ಪಡೆದರು. ನಾಲ್ಕು ಫೌಲ್‌ಗಳ ನಂತರ ಐದನೇ ಪ್ರಯತ್ನದಲ್ಲಿ ಈ ಎಸೆತ ಬಂತು.

ಫರೀದಾಬಾದ್‌ನ 29 ವರ್ಷ ವಯಸ್ಸಿನ ಸೂರ್ಮಾ ಅವರು ಮೊದಲ ಪ್ರಯತ್ನದಲ್ಲಿಯೇ 34.59 ಮೀ. ಸಾಧನೆ ಮಾಡಿ ಪದಕ ಖಚಿತಗೊಳಿಸಿದರು. ಏಷ್ಯನ್ ಕ್ರೀಡಾಕೂಟದ ಚಾಂಪಿಯನ್ ಶೂರ್ಮಾ ಅವರಿಗೆ ಧರಮ್‌ವೀರ್ ಅವರನ್ನು ಮೀರಿಸಲು ಸಾಧ್ಯವಾಗಲಿಲ್ಲ. ಸರ್ಬಿಯಾದ ಫಿಲಿಪ್ ಗ್ರಾವೊಕ್ ಎರಡನೇ ಪ್ರಯತ್ನದಲ್ಲಿ 34.18 ಮೀ. ಎಸೆದು ಕಂಚಿನ ಪದಕ ಪಡೆದರು.

ಕಣದಲ್ಲಿದ್ದ ಭಾರತದ ಮತ್ತೊಬ್ಬ ಸ್ಪರ್ಧಿ, ಧರಮ್‌ವೀರ್ ಅವರ ಮೆಂಟರ್ ಅಮಿತ್ ಕುಮಾರ್ ಸರೋಹ ಅವರು 23.96 ಮೀಟರ್‌ಗಳ ಪ್ರಯತ್ನದೊಂದಿಗೆ ಕೊನೆಯ ಸ್ಥಾನವನ್ನು ಗಳಿಸಿದರು. ಅಮಿತ್ ಅವರು 2017ರ ವಿಶ್ವ ಚಾಂಪಿಯನ್‌ಷಿಪ್‌ನ ಬೆಳ್ಳಿ ಪದಕ ವಿಜೇತ.

ಕಾಲುವೆಯೊಂದಕ್ಕೆ ತಪ್ಪಾಗಿ ಡೈವ್ ಮಾಡಿದ್ದ ಪರಿಣಾಮ ಸೊಂಟದ ಕೆಳಭಾಗ ಪಾರ್ಶ್ವವಾಯುವಿಗೆ ತುತ್ತಾಗಿದ್ದ ಧರಮ್‌ವೀರ್ ಅವರು ಅಮಿತ್ ಕುಮಾರ್ ಸರೋಹ ಅವರಿಂದ ಪ್ರೇರಣೆ ಪಡೆದು, ಪ್ಯಾರಾ ಕ್ರೀಡೆಯತ್ತ ಆಸಕ್ತಿ ಬೆಳೆಸಿಕೊಂಡರು. ಅದಾಗಿ ಎರಡು ವರ್ಷದಲ್ಲಿ ಧರಂವೀರ್ 2016ರ ರಿಯೊ ಪ್ಯಾರಾಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದರು. ಅವರು 2022ರ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದರು.

ಕ್ರಿಕೆಟ್ ಮತ್ತು ರೋಲರ್ ಹಾಕಿ ಉತ್ಸಾಹಿಯಾಗಿದ್ದ ಸೂರ್ಮಾ 16 ವರ್ಷದವನಾಗಿದ್ದಾಗ ಸಿಮೆಂಟ್ ಶೀಟ್ ಅವರ ತಲೆಯ ಮೇಲೆ ಬಿದ್ದು, ಬೆನ್ನುಹುರಿಗೆ ಗಾಯಗೊಂಡು ಪಾರ್ಶ್ವವಾಯುವಿಗೆ ಒಳಗಾಗಿದ್ದಾರೆ. ಕುಟುಂಬದ ಬೆಂಬಲ ಮತ್ತು ಸಕಾರಾತ್ಮಕ ಮನೋಭಾವ ಈ ಸಾಧನೆಗೆ ಪ್ರೇರಣೆಯಾಯಿತು. ಅವರು ಬ್ಯಾಂಕ್ ಆಫ್ ಬರೋಡಾದಲ್ಲಿ ಸಹಾಯಕ ವ್ಯವಸ್ಥಾಪಕರಾಗಿದ್ದಾರೆ.

ಎಫ್‌51 ಕ್ಲಬ್ ಥ್ರೋ ವಿಭಾಗದಲ್ಲಿ ಅಥ್ಲೀಟ್‌ಗಳು ಕುಳಿತಿರುವ ಸ್ಥಾನದಿಂದಲೇ ಸ್ಪರ್ಧಿಸುತ್ತಾರೆ. ಅವರು ಭುಜಗಳು ಮತ್ತು ತೋಳನ್ನು ಅವಲಂಬಿಸಿ ಥ್ರೋ ಮಾಡುತ್ತಾರೆ.

ಕ್ಲಬ್ ಥ್ರೊ: ಇದು ಪ್ಯಾರಾಲಿಂಪಿಕ್ಸ್‌ನ ನಾಲ್ಕು ಥ್ರೊ ಸ್ಪರ್ಧೆಗಳಲ್ಲಿ ಒಂದಾಗಿದೆ. ಇತರ ಮೂರು- ಡಿಸ್ಕಸ್, ಜಾವೆಲಿನ್ ಮತ್ತು ಷಾಟ್‌ಪಟ್. ಕ್ಲಬ್ ಥ್ರೊನಲ್ಲಿ ಅಥ್ಲೀಟುಗಳು, ಕೆಲಮಟ್ಟಿಗೆ ಬೇಸ್‌ಬಾಲ್ ಬ್ಯಾಟ್ ಹೋಲುವ ಮರದ ಪರಿಕರ ಎಸೆಯಬೇಕಾಗುತ್ತದೆ.

ಇದು 397 ಗ್ರಾಮ್‌ನಷ್ಟಿದ್ದು ಒಂದು ತುದಿಯು ಉಕ್ಕಿನ ಕ್ಯಾಪ್ ಹೊಂದಿರುತ್ತದೆ. ಎಫ್‌31, ಎಫ್‌32 ಮತ್ತು ಎಫ್‌51 ವಿಭಾಗಗಳಲ್ಲಿ ಸ್ಪರ್ಧೆ ನಡೆಯುತ್ತದೆ. ಎಫ್ ಎಂಬುದು ಫೀಲ್ಡ್ (ಟ್ರ್ಯಾಕ್ ಅಂಡ್ ಫೀಲ್ಡ್‌ನ) ಪದದ ಮೊದಲ ಅಕ್ಷರ.

ಭಾರತದ ಪ್ರಣವ್ ಸೂರ್ಮಾ, ಅಮಿತ್ ಕುಮಾರ್ ಸರೋಹ ಮತ್ತು ಧರಮ್‌ವೀರ್ ಅವರ ಸಂಭ್ರಮ (ಗಾಲಿಕುರ್ಚಿಯಲ್ಲಿ ಕುಳಿತವರು) ಎಕ್ಸ್ ಚಿತ್ರ

ಸಿಮ್ರನ್‌ಗೆ ನಾಲ್ಕನೇ ಸ್ಥಾನ



ಪ್ಯಾರಿಸ್ (ಪಿಟಿಐ): ಭಾರತದ ಪ್ಯಾರಾ ಅಥ್ಲೀಟ್ ಸಿಮ್ರನ್ ಶರ್ಮಾ ಗುರುವಾರ ಮಹಿಳೆಯರ 100 ಮೀ. (ಟಿ12) ವಿಭಾಗದಲ್ಲಿ ನಾಲ್ಕನೇ ಸ್ಥಾನ ಪಡೆದರು.

ತನ್ನ ಮಾರ್ಗದರ್ಶಿ ಅಭಯ್ ಸಿಂಗ್ ಜೊತೆಗೂಡಿ 24 ವರ್ಷ ವಯಸ್ಸಿನ ಹಾಲಿ ವಿಶ್ವ ಚಾಂಪಿಯನ್ ಸಿಮ್ರನ್ ಅವರು ಫೈನಲ್‌ನಲ್ಲಿ 12.31 ಸೆಕೆಂಡ್‌ನಲ್ಲಿ ಗುರಿ ತಲುಪಿದರು.

ಕ್ಯೂಬಾದ ಒಮಾರಾ ಡ್ಯುರಾಂಡ್ ಎಲಿಯಾಸ್ (11.81 ಸೆಕೆಂಡ್) ಚಿನ್ನ ಗೆದ್ದರು. ಉಕ್ರೇನ್‌ನ ಒಕ್ಸಾನಾ ಬೊಟುರ್‌ಚುಕ್ (12.17) ಮತ್ತು ಜರ್ಮನಿಯ ಕ್ಯಾಟ್ರಿನ್ ಮುಲ್ಲರ್ (12.26) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು. ಟಿ12 ವಿಭಾಗದ ಸ್ಪರ್ಧೆ ದೃಷ್ಟಿಹೀನತೆ ಹೊಂದಿರುವ ಅಥ್ಲೀಟ್‌ಗಳಿಗೆ ಮೀಸಲಾಗಿದೆ.

ಜೂಡೊ: ಮೊದಲ ಪದಕ ಗೆದ್ದ ಭಾರತ

ಪ್ಯಾರಿಸ್ (ಪಿಟಿಐ): ಪ್ಯಾರಾಲಿಂಪಿಕ್ಸ್ ಜುಡೊ ಇತಿಹಾಸದಲ್ಲೇ ಭಾರತ ಮೊದಲ ಬಾರಿ ಪದಕ ಗೆದ್ದುಕೊಂಡಿದೆ. ಕಪಿಲ್ ಪರಮಾರ್ ಪುರುಷರ 60 ಕೆ.ಜಿ. (ಜೆ1) ವಿಭಾಗದಲ್ಲಿ ಬ್ರೆಜಿಲ್‌ನ ಎಲೀಲ್ಟನ್ ಡಿ ಒಲಿವಿಯರಾ ಅವರನ್ನು ಕಂಚಿನ ಪದಕಕ್ಕೆ ಗುರುವಾರ ನಡೆದ ಹೋರಾಟದಲ್ಲಿ 10–0 ಯಿಂದ ಮಣಿಸಿದರು.

ಪರಮಾರ್, ಇದಕ್ಕೆ ಮೊದಲು ನಡೆದ ಸೆಮಿಫೈನಲ್‌ನಲ್ಲಿ ಇರಾನ್‌ನ ಸೈಯ್ಯದ್ ಮೇಸನ್ ಬನಿತಾಬ ಖೊರ್ರಂ ಅಬದಿ ಎದುರು 0–10 ರಿಂದ ಸೋತಿದ್ದರು.

ಜೆ1 ವಿಭಾಗದ ಸ್ಪರ್ಧಿಗಳು ದೃಷ್ಟಿದೋಷ ಹೊಂದಿರುತ್ತಾರೆ. ಅವರಿಗೆ ಸ್ಪರ್ಧೆಯ ವೇಳೆ ಮಾರ್ಗದರ್ಶಕರ ಬೆಂಬಲ ಅಗತ್ಯವಿರುತ್ತದೆ. ಪರಮಾರ್ 2022ರ ಏಷ್ಯನ್ ಕ್ರೀಡೆಗಳಲ್ಲಿ ಇದೇ ವಿಭಾಗದಲ್ಲಿ ಬೆಳ್ಳಿ ಗೆದ್ದಿದ್ದರು.

ಹರ್ವಿಂದರ್, ಪೂಜಾಗೆ ಕೈತಪ್ಪಿದ ಕಂಚು

ಭಾರತದ ಬಿಲ್ಗಾರರಾದ ಹರ್ವಿಂದರ್ ಸಿಂಗ್ ಮತ್ತು ಪೂಜಾ ಜತ್ಯಾನ್ ಅವರನ್ನು ಒಳಗೊಂಡ ರಿಕರ್ವ್ ಮಿಶ್ರ ತಂಡಕ್ಕೆ ಮುಕ್ತ ವಿಭಾಗದಲ್ಲಿ ಕೂದಲೆಳೆಯ ಅಂತರದಲ್ಲಿ ಕಂಚು ಕೈತಪ್ಪಿತು. ಗುರುವಾರ ನಡೆದ ಸ್ಪರ್ಧೆಯಲ್ಲಿ ಭಾರತದ ಜೋಡಿಯು 5–4ರಿಂದ ಸ್ಲೋವೆನಿಯಾದ ಲ್ಯಾವ್ರಿಂಕ್ ಝಿವಾ ಮತ್ತು ಫ್ಯಾನ್ಸಿಕ್ ಡೆಜನ್ ಅವರಿಗೆ ಶರಣಾಯಿತು.

ಹರ್ವಿಂದರ್ ಸಿಂಗ್ ಅವರು ಪುರುಷರ ರಿಕರ್ವ್ ವೈಯಕ್ತಿಕ ವಿಭಾಗದಲ್ಲಿ ಬುಧವಾರ ಐತಿಹಾಸಿಕ ಚಿನ್ನದ ಪದಕ ಗೆದ್ದಿದ್ದರು. ಇದು ಪ್ಯಾರಾಲಿಂಪಿಕ್ಸ್‌ನಲ್ಲಿ ಆರ್ಚರಿಯಲ್ಲಿ ಭಾರತಕ್ಕೆ ದಕ್ಕಿದ ಮೊದಲ ಪದಕವಾಗಿತ್ತು. ಆದರೆ, ಮಿಶ್ರ ತಂಡದಲ್ಲಿ ಅವರಿಗೆ ನಿರಾಸೆಯಾಯಿತು.

ಶ್ವಾಂಟೆಕ್‌ಗೆ ಪೆಗುಲಾ ಆಘಾತ

ಅಮೆರಿಕ ಓಪನ್ ಟೆನಿಸ್: ನಾಲ್ಕರ ಘಟ್ಟಕ್ಕೆ ಸಿನ್ನರ್, ಡ್ರೇಪರ್

ಇಗಾ ಶ್ವಾಂಟೆಕ್ ವಿರುದ್ಧ ಸರ್ವ್ ಪೂರ್ಣಗೊಳಿಸಿದ ಅಮೆರಿಕದ ಜೆಸಿಕಾ ಪೆಗುಲಾ ಎಎಫ್‌ಪಿ ಚಿತ್ರ

ನ್ಯೂಯಾರ್ಕ್ (ಎಎಫ್‌ಪಿ): ವಿಶ್ವದ ಅಗ್ರಮಾನ್ಯ ಆಟಗಾರ್ತಿ ಇಗಾ ಶ್ವಾಂಟೆಕ್ ಅವರಿಗೆ ಆಘಾತ ನೀಡಿದ ಜೆಸ್ಸಿಕಾ ಪೆಗುಲಾ ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಮಹಿಳಾ ಸಿಂಗಲ್ಸ್ ಸೆಮಿಫೈನಲ್ ತಲುಪಿದರು. ಇನ್ನೊಂದೆಡೆ ಪುರುಷರ ಸಿಂಗಲ್ಸ್‌ನಲ್ಲಿ ಬ್ರಿಟನ್‌ನ ಜಾಕ್ ಡ್ರೇಪರ್ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿ ನಾಲ್ಕರ ಘಟ್ಟ ಪ್ರವೇಶಿಸಿದರು.

30 ವರ್ಷ ವಯಸ್ಸಿನ ಪೆಗುಲಾ ಫ್ಲಷಿಂಗ್ ಮಿಡೋಸ್‌ನಲ್ಲಿ 2022ರ ಚಾಂಪಿಯನ್ ಹಾಗೂ ನಾಲ್ಕು ಬಾರಿಯ ಫ್ರೆಂಚ್ ಓಪನ್ ವಿಜೇತೆ ಶ್ವಾಂಟೆಕ್ ಅವರನ್ನು 6–2, 6–4 ನೇರ ಸೆಟ್‌ಗಳಿಂದ ಮಣಿಸಿ ಮೊದಲ ಬಾರಿ ಪ್ರಮುಖ ಟೂರ್ನಿಯ ಸೆಮಿಫೈನಲ್‌ಗೆ ಕಾಲಿಟ್ಟರು. ಈ ಹಿಂದೆ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಆರು ಬಾರಿ ಕ್ವಾರ್ಟರ್‌ಫೈನಲ್ ಹಂತದಲ್ಲಿ ಎಡವಿದ್ದರು.

ಅವರ ಮುಂದಿನ ಎದುರಾಳಿ ಝೆಕ್ ರಿಪಬ್ಲಿಕ್‌ನ ಕರೊಲಿನಾ ಮುಚೋವಾ. ಪೆಗುಲಾ ಈ ಪಂದ್ಯದಲ್ಲೂ ಗೆದ್ದಲ್ಲಿ ಅಮೆರಿಕದ ಇಬ್ಬರು ಫೈನಲ್‌ನಲ್ಲಿ ಎದುರಾಗುವ ಅವಕಾಶವಿದೆ. ಇದಕ್ಕಾಗಿ ಇನ್ನೊಂದು ಸೆಮಿಫೈನಲ್‌ನಲ್ಲಿ ಎಮ್ಮಾ ನವಾರೊ ಅವರು, ವಿಶ್ವದ ಎರಡನೇ ಕ್ರಮಾಂಕದ ಆಟಗಾರ್ತಿ ಅರಿನಾ ಸಬಲೆಂಕಾ ಅವರನ್ನು ಸೋಲಿಸಬೇಕಿದೆ.

ಡ್ರೇಪರ್ ಮುನ್ನಡೆ: ಜಾಕ್ ಡ್ರೇಪರ್ ಪುರುಷ ಸಿಂಗಲ್ಸ್ ಕ್ವಾರ್ಟರ್‌ಫೈನಲ್‌ನಲ್ಲಿ, ವಿಶ್ವ ಕ್ರಮಾಂಕದಲ್ಲಿ ಹತ್ತನೇ ಸ್ಥಾನದಲ್ಲಿರುವ ಆಸ್ಟ್ರೇಲಿಯಾದ ಅಲೆಕ್ಸ್ ಡಿ ಮಿನೊರ್ ಅವರನ್ನು 6–3, 7–5 ರಿಂದ ಸೋಲಿಸಿ, 12 ವರ್ಷಗಳ ನಂತರ ಸೆಮಿಫೈನಲ್ ತಲುಪಿದ ಮೊದಲ ಬ್ರಿಟಿಷ್ ಆಟಗಾರ ಎನಿಸಿದರು. 2012ರಲ್ಲಿ ಆ್ಯಂಡಿ ಮರ್ರೆ ಇಲ್ಲಿ ಚಾಂಪಿಯನ್ ಆಗಿದ್ದರು.

ಡ್ರೇಪರ್ ಈ ಮೊದಲು ಮೂರು ಬಾರಿ ಅಲೆಕ್ಸ್ ವಿರುದ್ಧ ಆಡಿದ್ದು, ಮೂರೂ ಸಲ ಸೋತಿದ್ದರು. ಈ ಸಲ ಒಂದೂ ಸೆಟ್ ಕಳೆದುಕೊಳ್ಳದೇ ಅವರು ಈ ಹಂತಕ್ಕೆ ಮುನ್ನಡೆದಿದ್ದಾರೆ.

25ನೇ ಶ್ರೆಯಾಂಕದ ಡ್ರೇಪರ್, ಸೆಮಿಫೈನಲ್‌ನಲ್ಲಿ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಅವರನ್ನು ಎದುರಿಸಲಿದ್ದಾರೆ. ಇಟಲಿಯ ಆಟಗಾರ ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ6–2, 1–6, 6–1, 6–4 ರಿಂದ ಮೆಡ್ವೆಡೇವ್ ಅವರ ಸವಾಲನ್ನು ಬದಿಗೊತ್ತಿ ಮೊದಲ ಬಾರಿ ಈ ಟೂರ್ನಿಯ ಸೆಮಿಫೈನಲ್ ತಲುಪಿದರು.

ಈ ಬೇಸಗೆಯಲ್ಲಿ ಆರನೇ ಶ್ರೇಯಾಂಕದ ಪೆಗುಲಾ ಅಮೆರಿಕದ ಹಾರ್ಡ್‌ಕೋರ್ಟ್‌ಗಳಲ್ಲಿ ಆಡಿದ 15 ಪಂದ್ಯಗಳಲ್ಲಿ 14 ಗೆದ್ದು ಬೀಗಿದ್ದಾರೆ. ಇದು ಪೆಗುಲಾಗೆ, ವೃತ್ತಿಜೀವನದಲ್ಲಿ ಪೋಲೆಂಡ್‌ನ ಆಟಗಾರ್ತಿ ವಿರುದ್ಧ ನಾಲ್ಕನೇ ಗೆಲುವು. ಶ್ವಾಂಟೆಕ್ ಒಟ್ಟು 41 ತಪ್ಪುಗಳನ್ನು ಎಸಗಿದರು.

ಸ್ಟಟ್‌ಗಾರ್ಟ್‌ನಲ್ಲಿ ಅವರು ತಮ್ಮ ಮೊದಲ ಪ್ರಶಸ್ತಿ ಗೆಲ್ಲುವ ಮೂಲಕ ಡ್ರೇಪರ್ ಈ ಋತುವಿನಲ್ಲಿ ಉತ್ತಮ ಲಯದಲ್ಲಿದ್ದಾರೆ. ವಿಂಬಲ್ಡನ್‌ಗೆ ಮೊದಲು ನಡೆಯುವ ಕ್ವೀನ್ಸ್ ಕ್ಲಬ್ ಟೂರ್ನಿಯಲ್ಲಿ ಅಲ್ಕರಾಜ್‌ಗೆ ಸೋಲುಣಿಸಿದ್ದರು.

ಬುಧವಾರದ ಪಂದ್ಯದಲ್ಲಿ ಅವರು 11 ಏಸ್‌ಗಳನ್ನು 40 ಗೆಲುವಿನ ಹೊಡೆತಗಳನ್ನು ಆಡಿದರು.

ಪುರುಷರ ವಿಭಾಗದ ಮೊದಲರ್ಧದಲ್ಲಿ ಸಿನ್ನರ್ ಮಾತ್ರ ಕಣದಲ್ಲಿ ಉಳಿದಿರುವ ಅಗ್ರ ಆಟಗಾರ ಎನಿಸಿದ್ದಾರೆ. ನೊವಾಕ್ ಜೊಕೊವಿಚ್, ಅಲ್ಕರಾಜ್, ಅಲೆಕ್ಸಾಂಡರ್ ಜ್ವರೇವ್ ವಿವಿಧ ಹಂತಗಳಲ್ಲಿ ಹೊರಬಿದಿದ್ದಾರೆ.

ಪ್ಯಾರಾಲಿಂಪಿಕ್ಸ್ ಪದಕ ಪಟ್ಟಿ

ಸ್ಥಾನ	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಚೀನಾ	71	55	37	163
2	ಬ್ರಿಟನ್	35	28	19	82
3	ಅಮೆರಿಕ	27	33	17	77
4	ನೆದರ್ಲೆಂಡ್ಸ್	20	9	5	34
16	ಭಾರತ	5	9	11	25

29ರಂದು ಬಿಸಿಸಿಐ ಮಹಾಸಭೆ

ಬೆಂಗಳೂರು: ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ 93ನೇ ವಾರ್ಷಿಕ ಮಹಾಸಭೆ ಇದೇ ತಿಂಗಳ 29ರಂದು ನಗರದಲ್ಲಿ ನಡೆಯಲಿದೆ. ಆದರೆ ಈ ಸಭೆಯಲ್ಲಿ ಮಂಡಳಿಯ ನೂತನ ಕಾರ್ಯದರ್ಶಿ ಆಯ್ಕೆಯ ಸಾಧ್ಯತೆ ದೂರವಾಗಿದೆ.

ಆದರೆ ಇದೇ ಸಂದರ್ಭದಲ್ಲಿ ನಗರದಲ್ಲಿ ಹೊರವಲಯದ ಜಕ್ಕೂರಿನಲ್ಲಿ ಅತ್ಯಾಧುನಿಕವಾಗಿ ನಿರ್ಮಿಸಲಾಗಿರುವ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ) ಉದ್ಘಾಟಿಸಲಾಗುವುದು. ಎರಡು ದಶಕಗಳ ಹಿಂದೆ ಆರಂಭವಾದ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯು ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿದೆ. ಸಭೆಯಲ್ಲಿ ಬಿಸಿಸಿಐಗೆ ಹೊಸ ಕಾರ್ಯದರ್ಶಿ ಆಯ್ಕೆ ನಡೆಯುವುದಿಲ್ಲ. ಆದರೆ ಈ ಉದ್ದೇಶಕ್ಕಾಗಿ ವಿಶೇಷ ಮಹಾಸಭೆಯ ದಿನಾಂಕವನ್ನು 29ರ ಸಭೆಯಲ್ಲಿ ನಿರ್ಧರಿಸಲಾಗುವುದು. ಜಯ್ ಶಾ ಅವರು ಐಸಿಸಿ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿರುವ ಕಾರಣ, ಬಿಸಿಸಿಐ ಕಾರ್ಯದರ್ಶಿ ಹುದ್ದೆ ತೆರವಾಗಿದೆ. ಡಿಸೆಂಬರ್ 1ರಂದು ಶಾ ಹೊಸ ಹುದ್ದೆ ವಹಿಸಿಕೊಳ್ಳಲಿದ್ದಾರೆ. ಅಲ್ಲಿಯವರೆಗೆ ಅಧಿಕಾರಾವಧಿ ಇರುವ ಕಾರಣ ಅವರು ಈಗಿನ ಹುದ್ದೆಯಲ್ಲಿರಲಿದ್ದಾರೆ.

ಐಸಿಸಿ ಸಭೆಗೆ ಬಿಸಿಸಿಐ ಪ್ರತಿನಿಧಿಯನ್ನು ನೇಮಕ ಮಾಡುವ ವಿಷಯವೂ 18 ಅಂಶಗಳ ಕಾರ್ಯಸೂಚಿಯಲ್ಲಿ ಒಳಗೊಂಡಿದೆ. ಈ ಸಂಬಂಧ ಎಲ್ಲ ರಾಜ್ಯ ಸಂಸ್ಥೆಗಳಿಗೆ ಪತ್ರ ಬರೆಯಲಾಗಿದೆ. ಈ ಹಿಂದೆ ಶಾ ಅವರೇ ಪ್ರತಿನಿಧಿಯಾಗಿದ್ದರು.

ಪ್ರತಿನಿಧಿಯಾಗಿ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಅವರನ್ನು ನೇಮಕ ಮಾಡುವ ಚರ್ಚೆ ನಡೆಯಬಹುದು. ಅಥವಾ ನೂತನ ಕಾರ್ಯದರ್ಶಿಗೆ ಈ ಹೊಣೆ ವಹಿಸಲೂಬಹುದು. ಬಿನ್ನಿ ಅವರ ವಯಸ್ಸು ಈಗ 69 ವರ್ಷಗಳಾಗಿರುವ ಕಾರಣ ಆ ಸಾಧ್ಯತೆ ಕಡಿಮೆ. ಆಡಳಿತದಲ್ಲಿ ಭಾಗವಹಿಲು ಗರಿಷ್ಠ ವಯೋಮಿತ 70 ವರ್ಷ.

ಐಪಿಎಲ್‌ನ ಆಡಳಿತ ಮಂಡಳಿಯ ಮಹಾಸಭೆಗೆ ಇಬ್ಬರು ಪ್ರತಿನಿಧಿ ಗಳನ್ನೂ ಮಹಾಸಭೆಯು ಆಯ್ಕೆ ಮಾಡಲಿದೆ. ಒಂಬುಡ್ಸ್‌ಮನ್ ಮತ್ತು ಎಥಿಕ್ಸ್ ಅಧಿಕಾರಿಯ ನೇಮಕವೂ ನಡೆಯಲಿದೆ.

7 ವರ್ಷದ ಒಳಗಿನವರ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನ ಮುಕ್ತ ವಿಭಾಗದ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಬಾಲಕಿಯರಾದ ಸಾಯಿ Aಸ್ಥಾ ಸಿಂಗ್ (ಮೂರನೇ ಸ್ಥಾನ), ಅರ್ಪಿತಾಂಗ್ನಿ ಭಟ್ಟಾಚಾರ್ಯ (ಎರಡನೇ ಸ್ಥಾನ) ಆರ್. ಆರಣ್ಯಾ (ಮೊದಲನೇ ಸ್ಥಾನ), ಬಾಲಕರಾದ ಆರಾಧ್ಯೊ ಗುಯಿನ್ (ಮೂರನೇ ಸ್ಥಾನ), ಪ್ರಯಂಕ್ ಗಾಂವಕರ್ (ಎರಡನೇ ಸ್ಥಾನ) ಹಾಗೂ ದೇವನಾರಾಯಣನ್ (ಮೊದಲ ಸ್ಥಾನ) ಪ್ರಜಾವಾಣಿ ಚಿತ್ರ

ಚೆಸ್: ದೇವನಾರಾಯಣನ್‌ಗೆ ಪ್ರಶಸ್ತಿ

ಮೈಸೂರು: ಕೇರಳದ ಪಾಲಕ್ಕಾಡ್‌ನ ಬಾಲಕ ದೇವನಾರಾಯಣನ್ ಕಲ್ಲಿಯತ್ ಅಜೇಯ ಸಾಧನೆಯೊಡನೆ ರಾಷ್ಟ್ರೀಯ 7 ವರ್ಷದೊಳಗಿನವರ ಚೆಸ್ ಚಾಂಪಿಯನ್‌ಷಿಪ್ ಓಪನ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡ. ಒಂದು ಸುತ್ತು ಇರುವಾಗಲೇ ಅಗ್ರಪಟ್ಟ ಖಚಿತಪಡಿಸಿಕೊಂಡಿದ್ದ ಐದನೇ ಶ್ರೇಯಾಂಕದ ಈ ಆಟಗಾರ 9 ಸುತ್ತುಗಳಿಂದ 9 ಪಾಯಿಂಟ್ಸ್ ಗಳಿಸಿ ಈ ಕೂಟವನ್ನು ಸ್ಮರಣೀಯವಾಗಿಸಿಕೊಂಡ.

ವಿಜಯನಗರದ ಸಂಭ್ರಮ ಕನ್ವೆನ್ಷನ್ ಹಾಲ್‌ನಲ್ಲಿ ಗುರುವಾರ ಮುಕ್ತಾಯಗೊಂಡ ಈ ಕೂಟದಲ್ಲಿ ಗೋವಾದ ಪ್ರಯಂಕ್ ಗಾಂವಕರ್ (8) ಎರಡನೇ ಸ್ಥಾನ ಗಳಿಸಿದ. ಪಶ್ಚಿಮ ಬಂಗಾಳದ ಆರಾಧ್ಯೊ ಗುಯಿನ್ (7.5), ತಮಿಳುನಾಡಿನ ತಕ್ಷಂತ್ ಆನಂದ್ (7.5), ಉತ್ತರಾಖಂಡದ ತೇಜಸ್ ತಿವಾರಿ (7.5) ಕ್ರಮವಾಗಿ ಮೂರರಿಂದ ಐದವರೆಗಿನ ಸ್ಥಾನಗಳನ್ನು ಪಡೆದರು.

ಟ್ರೋಫಿ ಜೊತೆಗೆ ದೇವನಾರಾಯಣನ್ ₹50,000 ಬಹುಮಾನ ಪಡೆದರೆ, ಪ್ರಯಂಕ್ ₹36,000 ಮತ್ತು ಆರಾಧ್ಯೊ ₹30,000 ಬಹುಮಾನ ಪಡೆದ. ದೇವನಾರಾಯಣನ್ ಕೊನೆಯ ಸುತ್ತಿನಲ್ಲಿ ತಮಿಳುನಾಡಿನ ಇನ್ಬಾ ರಮೇಶ್‌ಬಾಬು (7) ಅವರನ್ನು ಸೋಲಿಸಿದ. ಪ್ರಯಂಕ್, ಕವಿನ್ ವೆಳವನ್ ಮೇಲೆ ಜಯಸಾಧಿಸಿದ.

ಬಾಲಕಿಯರ ವಿಭಾಗದಲ್ಲಿ ತಮಿಳುನಾಡಿನ ಆರಣ್ಯಾ ಆರ್. ಮತ್ತು ಪಶ್ಚಿಮ ಬಂಗಾಳದ ಅರ್ಪಿತಾಂಗ್ನಿ ಭಟ್ಟಾಚಾರ್ಯ ತಲಾ ಎಂಟು ಪಾಯಿಂಟ್ಸ್ ಪಡೆದರೂ ಟೈಬ್ರೇಕ್ ಆಧಾರದಲ್ಲಿ ಕ್ರಮವಾಗಿ ಮೊದಲ, ಎರಡನೇ ಸ್ಥಾನ ಪಡೆದರು. ಪಶ್ಚಿಮ ಬಂಗಾಳದ ಸಾಯಿ ಆಸ್ತಾ ಸಿಂಗ್ (7.5) ಮೂರನೇ ಸ್ಥಾನ ಪಡೆದರು.

HONDA

Super Savetember

Scooter ಅಂದ್ರೆ ACTIVA With H-Smart Technology

Low ROI @ 7.99%**

1st YEAR FREE SERVICE MAINTENANCE PACKAGE^ ^Hurry! Valid until 30th Sept'24

Cashback of 5% up to ₹5000##

3 Years Standard + 3 Years Free Extended Warranty#

ವೀಡಿಯೋ ಆನಂದಿಸಲು, QR ಕೋಡ್ ಸ್ಕ್ಯಾನ್ ಮಾಡಿ.

IDFC FIRST Bank Bank** / Credit Card## | HDFC BANK Credit Card## | TATA CAPITAL Two Wheeler Loans** | L&T Finance**

For more information give a missed call on 7230032200

BOOK ONLINE NOW! www.honda2wheelersindia.com

##Cashback Offer available on all Honda two-wheeler models for EMI transactions made using HDFC Bank credit cards & IDFC FIRST Bank credit cards through Pine Labs machines only. ##Customers can avail 5% Instant cashback, up to a maximum of Rs. 5000. ##Valid on one transaction per card/order during the offer period. ##Cashback offer valid until 30th September 2024. ##The scheme is available in select outlets only. **Approval of the loan is at the sole discretion of the financiers, and additional documentation may be required. **The interest rates, down payment, and tenure options are based on the financier's assessment of the applicant's credit profile. **The offers/features may be modified or withdrawn at any time without prior intimation. Product shown in the picture may vary from actual product available in the market. Accessories shown in the picture are not part of standard equipment. #3 years of standard plus 3 years of free extended warranty only on Activa 110cc. #This scheme is offered by authorised main dealers and Associate Dealers. *Source: Cumulative Sales figure of Brand Activa from June 2001 to June 2024 as per HMSI internal data. ^For detailed Terms and Condition of 1st Year Free Service Maintenance Package, kindly contact Authorised Main Dealers and Associate Dealers. ^Above scheme can be withdrawn at any time without prior intimation.

For dealer details scan the QR Code

ACTIVA OVER 3.25 CRORE* HAPPY CUSTOMERS

CLICK BOOK RELAX

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; Website: www.honda2wheelersindia.com; Customer Care: customercare@honda.hmsi.in

Honda Exclusive Authorised Dealerships: Ananda Honda - BOMMANAHALLI: 9738074162; HEBBAGODI: 9738074162; SARJAPUR RD: 9738074162; JIGANI: 9738066600; HOSA ROAD: 9738066600; Anekal Honda - ANEKAL: 080-27830234, 9880417779; City Honda - ST. JOHNS ROAD: 08025139199, 9480812350; H.R.B.R: 41614777, 9845941305; FRAZER TOWN: 9480812353; LALBAGH: 9480812397, 080-43333330; Haiku Honda - DOMLUR: 49656565, 9342432156; INDIRANAGAR: 9342432157; Dhruvdesh Honda - MEKHRI CIRCLE: 40500700, 9343968413; THANISANDRA (NAGAWARA): 7353030333; YELAHANKA: 40551122, 9343968407; VIDYARANYAPURA: 8150866333, 8152866333; Planet Honda - RAJAJINAGAR: 08068898888, 9980927735; PEENYA: 08068898888, 9980927730; SUNKADAKATTE: 08068898888, 9980927728; BASAWESHWAR NAGAR: 08068898888, 9980927726; Raja Honda - KORAMANGALA: 08067329000,9035310055; Prime Honda - VIJAYNAGAR: : 080 - 23010300, 8050503111; NAGARBHAVI: 080-23010700, 8095778000; KAMAKSHIPALYA: 080-23019700, 7829900444; Silicon Honda - RV ROAD: 9844502222, 9844726973; BANSHANKARI: 9844502444, 8722279009; R.R. NAGAR: 9964388333, 9071175200; MONOTYPE: 7353744400, JAYANAGAR: 8722801626; Saphire Honda - JP NAGAR: 7026000002; BG ROAD: 8553004004; KKP ROAD: 8553004002; PUTTENHALLI: 7353251007; GOTTIGERE: 8553004009; BTM: 7353252007; VFM Honda - KR PURAM: 9071858885, 9071858881; HENNUR ROAD: 9108989817, 9108989818; Tansi Honda - HOODI: 7259030091, 9741410101; MARTHAHALLI: 7259030100, 7259030093; VARTHUR RD: 8105597877, 9686573013; GUNJUR: 9606450642, 9606450643; Turbo Honda - DODDABALLAPURA: 7022620885; NELAMANAGALA: 080-27722333, 7022008894; Wings Honda - HOSKOTE: 7676907272; MALUR: 7676155600; TC PALYA: 9590815959; Sri Kausthub Honda - KOLAR: 9900018515, 9606567111; KGF: 9900092115; MULBAGAL: 9008941044; SRINIVASAPUR: 8495956515; BANGARPET - 9980607661; Namma Honda - CHIKKABALLAPUR: 9606060610, 9611996114; CHINTAMANI: 9606060620, 9611996115; BAGEPALLI: 9611596112, 9611596110; Shankar Honda - GOWRIBIDANUR: 9900007422/33; SIDLAGHATTA: 9611596113; Century Honda - TUMKUR: 08162261939, 9620263388; SIRA: 9620267057, 9538392767; GUBBI: 9620267051; Shantinath Honda - TUMKUR: 08162279969, 9449334359; KUNIGAL: 7022276603; KUNIGAL ROAD: 9844351599, 9844351399; KORATAGERE: 9606955149; Honey Honda - PAVAGADA: 9535941215; Annapoorna Honda - MADHUGIRI: 9886627429; Vignesh Honda - TIPTUR: 9886711161; TURUVEKERE: 9448214014; Sri Srinivasa Honda - CHIKKANAYAKANAHALLI: 8722522221; Prestige Honda - RAMNAGARA: 9606490030, 9606036040; KANAKAPURA: 9606036053, 9606036054; CHANNAPATNA: 9606490034, 9035717953; ART Honda - BIDADI: 9945966771, 9164871007; Springs Honda - KENGERI: 9513771114; Nideesh Honda - DEVANAHALLI: 9108871999, 9686608579; VIJAYAPURA: 9108871999, 7899870207.

For Bulk/Institutional enquiries, please write us at: institutionalsales@honda2wheelersindia.com